ಕನ್ನಡ ಭಾಷಾ ಪಠ್ಯ

# ಕಲಾ ಸೌರಭ–3

(ರಾಷ್ಟ್ರೀಯ ಶಿಕ್ಷಣ ನೀತಿ)

ಬಿ.ಎ. ಮೂರನೆಯ ಸೆಮಿಸ್ಟರ್ (2022–23)


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಅಶ್ವತ್ತಮ್ಮ ಕೆ.

ರಂಗಸ್ವಾಮಿ ಹೆಚ್.ಟಿ.

ಶೈಲಜಾ ಎ.ಎನ್.



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**Kannada Bhasha Patya - KALA SOURABHA-3 (NEP)**
B.A. Third Semister (2022-23)

Chief Editor :
**Prof. Prashanth G. Nayak**
Professor of Kannada & Director,
Kannada Bharathi, Kuvempu University,
Shankaraghatta, B.R. Project, Shimoga Dist.

Editer by :

| | |
|---|---|
| **Dr. Ashwathamma K.** | **ಡಾ. ಅಶ್ವತ್ತಮ್ಮ ಕೆ.** |
| **Rangaswamy H.T.** | **ರಂಗಸ್ವಾಮಿ ಹೆಚ್.ಟಿ.** |
| **Shylaja A.N.** | **ಶೈಲಜಾ ಎ.ಎನ್.** |

Published by : Bengaluru City University, BENGALURU
Pp : viii+132

© : Bengaluru City University,
First Print : 2022

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ
**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ : ರೂ.

ಪ್ರಕಾಶಕರು
**ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು

ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**– ಪ್ರೊ. ಲಿಂಗರಾಜಗಾಂಧಿ**

ಕುಲಪತಿಗಳು

ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯುಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರೀಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**– ಡಾ. ಪ್ರಶಾಂತ ಜಿ. ನಾಯಕ**

ಪ್ರಾಧ್ಯಾಪಕರು

# ಪರಿವಿಡಿ


೧. **ರಾಷ್ಟ್ರೀಯತೆ**

**ಆಶಯ :** ಪಾಂಚಜನ್ಯ (ಆಯ್ದಭಾಗ) **ಕುವೆಂಪು** ೧

೧.೧ ವಿಶ್ವಭಾರತಿಗೆ ಕನ್ನಡದಾರತಿ **ಚೆನ್ನವೀರ ಕಣವಿ** ೨

೧.೨ ಬಲಿದಾನ **ಕುವೆಂಪು** ೪

೧.೩ ಮತೀಯವಾದಿ ರಾಷ್ಟ್ರೀಯತೆಯ ಸಂಕಷ್ಟಗಳು **ಡಾ. ರಹಮತ್ ತರೀಕೆರೆ** ೧೭

**ಓದು ಪಠ್ಯ :** ರಾಷ್ಟ್ರೀಯತೆಯ ಪರಿಕಲ್ಪನೆ : ಕೆಲವು ಟಿಪ್ಪಣಿಗಳು **ಡಾ. ಡಿ.ಆರ್. ನಾಗರಾಜ್** ೩೦

೨. **ಕೃಷಿ**

**ಆಶಯ :** ಇಬ್ಬರು ರೈತರು (ಆಯ್ದಭಾಗ) **ಸು.ರಂ. ಎಕ್ಕುಂಡಿ** ೩೬

೨.೧ ಇಳೆಯಾಂಡ ಗುಡಿಮಾರನ ರಗಳೆ **ಹರಿಹರ** ೩೭

೨.೨ ಸಹಜ ಕೃಷಿ **ಪೂರ್ಣಚಂದ್ರ ತೇಜಸ್ವಿ** ೪೩

೨.೩ ಬಯಲು ಆಲಯದೆಡೆಗೆ **ಅಮರೇಶ ನುಗುಡೋಣಿ** ೫೧

**ಓದು ಪಠ್ಯ :** ಸುಗ್ಗಿಯ ಸಂಪ್ರದಾಯ **ಡಾ. ಬಿ.ಎನ್. ಗದ್ದಗಿಮಠ** ೫೯

೩. **ಆಟ**

**ಆಶಯ :** ಜೋಕಾಲಿ ಆಡೋಣ ಬನ್ನಿರೋ **ಜಿ.ಎಸ್. ಶಿವರುದ್ರಪ್ಪ** ೬೭

೩.೧ ದ್ಯೂತದ ಪ್ರಸಂಗ **ಕುಮಾರವ್ಯಾಸ** ೬೮

೩.೨ ಮೀಯುವ ಆಟ **ಡಾ. ಎಚ್. ನಾಗವೇಣಿ** ೭೩

೩.೩ ಪೆಲೆ – ಸಾಕರ್ ಆಗಸದ ಧ್ರುವತಾರೆ **ಡಾ. ಕೆ. ಪುಟ್ಟಸ್ವಾಮಿ** ೮೯

**ಓದು ಪಠ್ಯ :** ಕರಡಿಯ ಕುಣಿತ **ದ.ರಾ. ಬೇಂದ್ರೆ** ೧೦೨

## ೪. ಸಂಕೀರ್ಣ

**ಆಶಯ :** ಪೆರಿಯಾರ್ ಸಮಾಜ ವಿಜ್ಞಾನಿಯ ಮಾತುಗಳು ೧೦೪
ತಮಿಳು ಮೂಲ : **ಡಾ. ಎನ್. ವೇಲುಸಾಮಿ**
ಕನ್ನಡಕ್ಕೆ : **ಡಾ. ಶ್ರೀಕೃಷ್ಣಭಟ್ ಅರ್ತಿಕಜೆ**
೪.೧ ಕೋಕೋ ಕೋಲ **ಆಶೀಸ್ ನಂದಿ** ೧೦೫
೪.೨ ರೇಡಿಯಂ ಮಹಾಮಾತೆ – ಮೇರಿಕ್ಯೂರಿ
**ಡಾ. ನೇಮಿಚಂದ್ರ** ೧೧೩
೪.೩ ಒಥೆಲೊ ಮತ್ತು ಅಮೃತಮತಿ **ಲಕ್ಷ್ಮೀಪತಿ ಕೋಲಾರ** ೧೧೯
**ಓದು ಪಠ್ಯ :** ಪತ್ರಿಕೆಗಳು – ಸಾಮಾಜಿಕ ಹೊಣೆಗಾರಿಕೆ
**ಡಾ. ಎಚ್. ನರಸಿಂಹಯ್ಯ** ೧೨೩
**ಮಾದರಿ ಪ್ರಶ್ನೆಪತ್ರಿಕೆ** ೧೩೧

* * *

# ೧. ರಾಷ್ಟ್ರೀಯತೆ

**ಆಶಯ**

## ಪಾಂಚಜನ್ಯ (ಆಯ್ದ ಭಾಗ)

– **ಕುವೆಂಪು**

ಭರತಖಂಡದ ಹಿತವೆ
    ನನ್ನ ಹಿತ ಎಂದು,
ಭರತಮಾತೆಯ ಮತವೆ
    ನನ್ನ ಮತ ಎಂದು.
ಭಾರತಾಂಬೆಯ ಸುತರೆ
    ಸೋದರರು ಎಂದು
ಭಾರತಾಂಬೆಯ ಮುಕ್ತಿ
    ಮುಕ್ತಿ ನನಗೆಂದು,
ನುಗ್ಗು ಮುಂದಕೆ, ಧೀರ,
    ಕಾಳೆಗದ ಕೊಲೆಗೆ!
ನುಗ್ಗು ಮರಣಕೆ, ವೀರ,
    ಸಗ್ಗದಾ ನೆಲೆಗೆ!

❑

# ೧.೧ ವಿಶ್ವಭಾರತಿಗೆ ಕನ್ನಡದಾರತಿ

**– ಚೆನ್ನವೀರ ಕಣವಿ**

ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯ ಸಂಸ್ಕಾರಿ
ಜಯ ಭಾರತಿ, ಕರುನಾಡ ಸರಸ್ವತಿ
ಗುಡಿಗೋಪುರ ಸುರಶಿಲ್ಪ ಕಲಾಕೃತಿ
ಕೃಷ್ಣೆ, ತುಂಗೆ, ಕಾವೇರಿ ಪವಿತ್ರಿತ ಕ್ಷೇತ್ರ ಮನೋಹಾರಿ
ವಿಶ್ವವಿನೂತನ... ॥೧॥

ಗಂಗ ಕದಂಬ ರಾಷ್ಟ್ರಕೂಟಬಲ
ಚಾಲುಕ್ಯ, ಹೊಯ್ಸಳ, ಬಲ್ಲಾಳ
ಹಕ್ಕ–ಬುಕ್ಕ, ಪುಲಕೇಶಿ ವಿಕ್ರಮರ, ಚೆನ್ನಮ್ಮಾಜಿಯ ವೀರಶ್ರೀ
ವಿಶ್ವವಿನೂತನ... ॥೨॥

ಆಚಾರ್ಯತ್ರಯ ಮತ ಸಂಸ್ಥಾಪನ
ಬಸವಾಲ್ಲಮ ಅನುಭಾವ ನಿಕೇತನ
ಶರಣ ದಾಸ ತೀರ್ಥಂಕರ ನಡೆ ನುಡಿ ವಿಶ್ವತಮೋಹರಿ
ವಿಶ್ವವಿನೂತನ... ॥೩॥

ಪಂಪ, ರನ್ನ, ನೃಪತುಂಗ, ಹರೀಶ್ವರ
ರಾಘವಾಂಕ, ಸರ್ವಜ್ಞ, ಪುರಂದರ
ಕುಮಾರವ್ಯಾಸ, ರತ್ನಾಕರ, ಜನಪದ ಕಾವ್ಯ ಸಮುದ್ರ ವಿಹಾರಿ
ವಿಶ್ವವಿನೂತನ... ॥೪॥

ಸಾಯಣ, ವಿದ್ಯಾರಣ್ಯ, ಭಾಸ್ಕರ
ಮಹಾದೇವಿ, ಮುಕ್ತಾಯಿ, ಮಹಂತರ
ಕಂತಿ, ಹಂಪ, ಸುಮನೋರಮೆ, ಮುದ್ದಣ: ಸರಸಹೃದಯ ಸಂಚಾರಿ
ವಿಶ್ವವಿನೂತನ... ॥೫॥

ತ್ಯಾಗ–ಭೋಗ–ಸಮಯೋಗದ ದೃಷ್ಟಿ
ಬೆಳುವೊಲ, ಮಲೆ, ಕರೆ, ಸುಂದರ ಸೃಷ್ಟಿ
ಜ್ಞಾನದ, ವಿಜ್ಞಾನದ, ಕಲೆಯೈಸಿರಿ, ಸಾರೋದಯ, ಧಾರಾನಗರಿ
ವಿಶ್ವವಿನೂತನ... ॥೬॥

ಅರಿವೇ ಗುರು, ನುಡಿ ಜ್ಯೋತಿರ್ಲಿಂಗ,
ದಯವೇ ಧರ್ಮದ ಮೂಲತರಂಗ
ವಿಶ್ವಭಾರತಿಗೆ ಕನ್ನಡದಾರತಿ ಮೊಳಗಲಿ ಮಂಗಲ ಜಯಭೇರಿ!
ವಿಶ್ವವಿನೂತನ... ॥೭॥

❑

# ೧.೨ ಬಲಿದಾನ

**– ಕುವೆಂಪು**

## ದೃಶ್ಯ ೨

(ಪಾಳು ಬಿದ್ದಿರುವ ಕಾಳಿಕಾ ದೇವಾಲಯ. ಕಗ್ಗತ್ತಲೆಗೆ ಬದಲಾಗಿ ಮಬ್ಬು ಕತ್ತಲೆ ಕವಿದಿದೆ. ಕಾಳಿಕಾ ವಿಗ್ರಹಕ್ಕೆ ತುಸು ದೂರದಲ್ಲಿ ಭಾರತಾಂಬೆ ಯಾತನಾ ಕ್ಲಿಷ್ಟವೂ ವಿಷಣ್ಣದೀನವೂ ಆಗಿರುವ ಮುಖ ಮುದ್ರೆಯಿಂದ ನಿಲ್ಲಲಾರದೆ ಎಂಬಂತೆ ನಸುಬಾಗಿ ನಿಂತಿದ್ದಾಳೆ. ಕೈಕಾಲುಗಳಲ್ಲಿ ಕಬ್ಬಿಣದ ಸಂಕೋಲೆಗಳಿವೆ. ಒಂದು ಸರಪಳಿ ಭುಜದ ಮೇಲಿಂದ ಕಾಳೋರಗದಂತೆ ನೇತುಬಿದ್ದು ವಕ್ಷಮಧ್ಯೆ ಹರಿದಿಳಿದಿದೆ. ಆಕೆಯ ಬಟ್ಟೆ ಮಾಸಲು, ಚಿಂದಿ ಚಿಂದಿ. ಕಿರೀಟ ಮುತ್ತು ರತ್ನಗಳೆಲ್ಲ ಉದುರಿ ಶಿಥಿಲವಾಗಿದೆ. ಕೂದಲು ಬಾಚದೆ ಹಿಕ್ಕದೆ ಗಂಟು ಗಂಟಾಗಿ ಕೆದರಿದೆ. ಕಣ್ಣುಗಳಿಂದ ತೋರ ಹನಿಗಳು ಉದುರಿದ ಗುರುತು ಕಾಣಿಸುತ್ತಿದೆ. ನಡು ನಡುವೆ ಸುಯ್ಯುತ್ತಾಳೆ. ಕಷ್ಟದಿಂದ ಕತ್ತೆತ್ತಿ ಭರತಸುತನು ಹೋದತ್ತ ಕಡೆ ನಿರೀಕ್ಷಣಾದೃಷ್ಟಿಯಾಗುತ್ತಾಳೆ. ಬಿಮ್ಮೆನ್ನುವ ಆ ಪಾಳು ಮೌನದಲ್ಲಿ ಶೃಂಖಲೆಗಳ ಖಣಿ ಖಣಿಲು ವಿಕಟವಾಗಿ ಕೇಳಿಸುತ್ತದೆ.)

ಭಾರತಾಂಬೆ– ಓ ಎಂದಿಗೈತಹೆ, ಮಗೂ, ಮಗೂ, ಮಗೂ?
ಎಂದಿಗೀ ಶೃಂಖಲಾ ಸಂಕಟದಿನೆನ್ನಂ
ವಿಮುಕ್ತೆಯಂ ಮಾಳ್ಪೆ? ಎಂದಿಗೀ ಕವಿದಿರ್ಪ
ತಮೋಭಾರಮಂ ತವಿಪಮ್, ಜ್ಯೋತಿಯಿಂದೀ ದೇಗುಲಂ
ಬೆಳಗುವೋಲ್? ಎಂದಿಗೀ ದೈನ್ಯ ದಾರಿದ್ರ್ಯಮಂ
ಛೇದಿಸಿ, ಹೃದಂಬುಜದಿ ಗೌರವಶ್ರೀಯಂ
ಪ್ರಯೋದಿಸುವೆ? ಓ ಎಂದಿಗೈತಹೆ, ಮಗೂ? ಮಗೂ!

(ಗೂಬೆಯೊಂದು ಗೂ ಗೂ ಗೂ ಎಂದೂಳ್ಡು ಹಾರಿ ಹೋಗುತ್ತದೆ. ಭಾರತಾಂಬೆ ಆ ಕಡೆ ನೋಡಿ)

ಬಹನೊ ಬಾರನೊ? ಶಕುನಮಾವುದಂ ಸೂಚಿಸಿತೊ
ಆ ಇರುಳ್‌ಗಣ್‌ವಕ್ಕಿ! (ಕಾಳಿಕಾ ವಿಗ್ರಹದ ಕಡೆ ತಿರುಗಿ)

ಮಹೇಶ್ವರಿ, ಮಹಾಕಾಳಿ,
ಮಹಾಲಕ್ಷ್ಮಿ ಮೇಣ್ ಮಹಾಸರಸ್ವತಿ ಸರ್ವಮುಂ
ನೀನಾಗಿಯುಂ, ತಾಯಿ, ಲೀಲಾಮಯೀ, ಜಗನ್ಮಾತೆ,
ಇಂದಾವ ಕ್ರೀಡಾವಿನೋದಕೀ ವೇಷಮಂ
ತಳೆದಿರ್ಪೆ? ಸರ್ವಶಕ್ತಳ್ ನೀನ್ ಅಶಕ್ತೆಯೋಲ್
ಕೆಮ್ಮನಿಹೆ! ಸರ್ವಭುವನಶ್ರೀ ನೀನ್ ದರಿದ್ರೆಯೋಲ್
ಬಿನ್ನಗಿಹೆ! ನನ್ನ ಕಂದಂಗಿನಿತು ಕೃಪೆದೋರ್;
ಅನುಗ್ರಹಿಸು ನನ್ನನುಂ.

(ಗೂಬೆ ಹಾರಿಹೋದ ಕಂಡಿಯಿಂದ ಒಂದು ಕಿರಣ ಪ್ರವೇಶಿಸಿ ನೇರವಾಗಿ ಭಾರತಾಂಬೆಯ ಮೇಲೆ ಬೀಳುತ್ತದೆ.)

ಅರಿತೆನೀಗಳ್. ಬರ್ಪ
ಈ ಬೆಳಕಿಗಳ್ಕಿ ಪಾರ್ದೋಡಿದತ್ತಾ ನಿಶಾಪ್ರೇಮಿ!
ಅವುದೀ ಕಿರಣಮಾಶಾಹಸ್ತಮೆಂಬಂತೆ
ಬಂದುದೀ ತಾಯಿಯಾಶೀರ್ವಾದ ದೂತನೋಲ್?

(ದೂರದಿಂದ ಜನಘೋಷವನ್ನು ಮೀರಿ 'ವಂದೇ ಮಾತರಂ' ಗೀತೆ ಬರಬರುತ್ತ ಸ್ಪಷ್ಟತರವಾಗಿ ಕೇಳಬರುತ್ತದೆ. ಭಾರತಾಂಬೆ ಹರ್ಷ ಚಕಿತೆಯಾಗಿ ಆಲಿಸುತ್ತ ನಿಲ್ಲುತ್ತಾಳೆ.)

ವಾಣಿ– ವಂದೇ ಮಾತರಂ!
ಸುಜಲಾಂ ಸುಫಲಾಂ ಮಲಯಜಶೀತಲಾಂ
ಸಸ್ಯಶ್ಯಾಮಲಾಂ ಮಾತರಂ,
ವಂದೇ ಮಾತರಂ!

ಭಾರತಾಂಬೆ– ಆವುದೀ ದಿವ್ಯ ಗೇಯಂ, ಮಾಧುರ್ಯಸ್ವರ್ಧುನಿಯವೋಲ್
ತೆರೆತೆರೆಯೆ ತಾನುಕ್ಕಿ ಪೊನಲ್ವರಿದು ಬಂದಪುದು?
ಮಂತ್ರಶಕ್ತಿಯೆ ಮೂಡಿ ಗಾನರೂಪವನಾಂತು
ಬಂದಂತೆ ಬರ್ಪುದೆನ್ನೀ ಹೃದಯ ಗಹ್ವರದಿ
ಶಕ್ತಿ ತಾಂ ಸಂಚರಿಸೆ!–
ಕೀಲಿಕೈಯಂ ತರಲ್ ಪೋದ ಕಂದನ ಕೊರಳೊ?
ಮೇಣ್ ಬಾನ್‌ಬಟ್ಟೆಯನ್ ಅಲೆವ ಆವನಾದರದೊರ್ವ
ಸಗ್ಗಿಗನ ಕಂಠದಿಂ ಬುಗ್ಗೆಯುಕ್ಕುವ ಉಲಿಯೊ?
ಅಃ ಏನಿಂಚರಂ? – ತೇಲಿ ಬಂದಪುದು
ನಿರಾಶಾ ತಮಂಧಮಂ ತವಿಪ ರವಿಯುದಯದೋಲ್!

ವಾಣಿ– ಶುಭ್ರಜ್ಯೋತ್ಸ್ನಾ ಪುಲಕಿತಯಾಮಿನೀಮ್
ಫುಲ್ಲಕುಸುಮಿತ ದ್ರುಮದಲ ಶೋಭಿನೀಮ್
ಸುಹಾಸಿನೀಮ್ ಸುಮಧುರ ಭಾಷಿಣೀಮ್
ಸುಖದಾಂ ವರದಾಂ ಮಾತರಂ!
ವಂದೇ ಮಾತರಂ!

ಭಾರತಾಂಬೆ– ಬೆಳ್ದಿಂಗಳ್! ಬೆಳ್ದಿಂಗಳಂ ಮಿಂದಿರುಳ್!
ಅರಳಿದರಲಂ ಮೆರೆವ ಬಾನೆತ್ತರದ
ಕಾಡುಮಲೆ ಕೋಡುಗಳ್!
ಏನ್ ಪಯಿರ್‌ನಗೆಯೊ! ಏನ್ ಪಕ್ಕಿಯಿಂಚರಮೊ!
ಕೋಗಿಲೆಯ ನಿಡುಸರಮೊ? ಗಿಳಿಗಳುಲಿಯೊ? –
ಆಃ ಈ ಕತ್ತಲೆಯ ಸೆರೆಯ ಒಬ್ಬೊಂಟಿಗಳ್ ನನಗೆ
ಮಾತುಗಳೆ ತೂಂತಿಟ್ಟವೋಲ್ ಮೆರೆಯುತಿವೆ ಬಗೆಗಣ್ಗೆ
ಚೆಲ್ವು ಚಿತ್ರಂಗಳ್ ಮೇಣ್ ಇಂಚರಂಗಳ್.
ನಾನಾಗುವಾಸೆಗೊಡ್ಡಿರ್ಪ ಕನ್ನಡಿಯ ತೆರದಿ
ನನ್ನಿರ್ಪ ದುಸ್ಥಿತಿಯ ಮೂದಲಿಸುತಿಹುದಲ್ತೆ!–
ನಮೆಯುತಿರೆ ನಾನಿಂತು – ಅಯ್ಯೋ –
ಎಂದಿಗಾಗುವೆನಂತು?

ವಾಣಿ– ಕೋಟಿ ಕೋಟಿ ಕಂಠ ಕಲಕಲನಿನಾದ ಕರಾಲೇ
ಅನೇಕ ಕೋಟಿ ಭುಜೈರ್‌ಧೃತ ಖರ ಕರವಾಲೇ!

ಭಾರತಾಂಬೆ– ದಿಟಂ ನಾನಬಲೆಯಲ್ತು.
ನಾನಬಲೆಯೆಂಬರಾರ್?

ವಾಣಿ– ಬಹುಬಲ ಧಾರಿಣೀಂ ನಮಾಮಿ ತಾರಿಣೀಂ
ರಿಪುಬಲ ವಾರಿಣೀಂ ಮಾತರಂ
ವಂದೇ ಮಾತರಂ!

ಭಾರತಾಂಬೆ– ಧೈರ್ಯಮಂ ತುಂಬುತಿದೆ ಧೀರ ಗೀತಂ:
ಋಷಿಯಲ್ಲದನ್ಯರ್ಗೆ ಸಾಧ್ಯಮಲ್ತೀ ಸಾಹಸಂ!

ವಾಣಿ– ತುಮಿ ವಿದ್ಯಾ ತುಮಿ ಧರ್ಮ,
ತುಮಿ ಹೃದಿ ತುಮಿ ಮರ್ಮ,
ತ್ವಂ ಹಿ ಪ್ರಾಣಾಃ ಶರೀರೇ!
ಬಾಹು ತೇ ತುಮಿ ಮಾ ಶಕ್ತಿ

ಹೃದಯೇ ತುಮಿ ಮಾ ಭಕ್ತಿ
ತೋಮಾರಯ್ ಪ್ರತಿಮಾ ಗಡಿ ಮಂದಿರೇ ಮಂದಿರೇ!

ಭಾರತಾಂಬೆ– (ಕಾಳಿಕಾಮೂರ್ತಿಯ ಕಡೆ ಕೈಮುಗಿದು)
ನೀನೆ ವಿದ್ಯೆ, ನೀನೆ ಧರ್ಮ,
ನೀನೆ ಸತ್ತ್ವ, ನೀನೆ ಮರ್ಮ,
ತೋಳ್ಗಳಲ್ಲಿ ನೀನೆ ಶಕ್ತಿ
ಹೃದಯದಲ್ಲಿ ನೀನೆ ಭಕ್ತಿ.
ಗುಡಿಗುಡಿಯೊಳೂ ನೀನೆ ಮೂರ್ತಿ
ಸರ್ವ ಹೃದಯ ತಪಃಸ್ಫೂರ್ತಿ,
ಹೇ ಜಗದ್ಧಾತ್ರಿ!

ವಾಣಿ– ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ
ಕಮಲಾ ಕಮಲದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀ ನಮಾಮಿ ತ್ವಾಂ
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ,
ವಂದೇ ಮಾತರಂ!
ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ
ವಂದೇ ಮಾತರಂ!

ಭಾರತಾಂಬೆ– (ಕಾಳಿಕಾ ವಿಗ್ರಹವನ್ನು ದೃಷ್ಟಿಸಿ ಸುಸ್ಮಿತೆಯಾಗಿ ಧೀರ ಭಾವದಿಂದ ಒಂದೊಂದು ನುಡಿಯನ್ನೂ ಬಿಡಿಬಿಡಿಯಾಗಿ ಹೇಳಿಕೊಂಡು ರಸಾಸ್ವಾದನೆ ಮಾಡುತ್ತಾಳೆ.)
ದುರ್ಗೇಃ ದಶಪ್ರಹರಣ ಧಾರಿಣೀ! ಕೊಲ್ವವಳ್!
ಕಮಲೇಃ ಕಮಲದಲ ವಿಹಾರಿಣೀ! ಚೆಲ್ವಿಗೆ ನೆಲೆ ನೀ ಲಕ್ಷ್ಮಿ!
ವಾಣೀಃ ಜ್ಞಾನ್ಮೆಯ ಕಣಿ– ಸರಸ್ವತೀ! ನಮೋ!
ನೀನಮಲೆ, ನೀನತುಲೆ, ಸುಜಲೆ, ಸುಫಲೆ!
ಶ್ಯಾಮಲೆ! ಸರಲೆ! ಸುಸ್ಮಿತೆ! ಭೂಷಿತೆ!
ಧರಣೀಂ ಭರಣೀಂ ಮಾತರಂ
ವಂದೇ ಮಾತರಂ!
ಎಂತಪ್ಪ ಮಂತ್ರಗಾನಂ! ನನ್ನೊಣಗು ಮೆಯ್ಯೊಳುಂ
ಚೋದಿಸಿತು ದಿವ್ಯ ಚೈತನ್ಯಮಂಃ ಆಲಿಸಿರೆ,

ಆಲಿಸುತ್ತಾಲಿಸುತ್ತೆನ್ನನೇ ನಾ ಮರೆತು
ನಾನೆ ಆ ಬಣ್ಣನೆಯ ದೇವಿಯಾಗಿರ್ದೆನಲ್ತೆ!

(ಕಂಡಿಯಿಂದ ಬರುತ್ತಿದ್ದ ಕಿರಣ ಕಾಂತಿ ಒಯ್ಯನೆ ಮೋಡ ಕವಿದಂತೆ ಮರೆಯಾಗುತ್ತದೆ. ತನ್ನ ದುಃಸ್ಥಿತಿಯನ್ನು ನೋಡಿಕೊಳ್ಳುವ ಮತ್ತೆ)

ಅಯ್ಯೊ ಆ ದೇವಿಯಾರ್? ನಾನಾರ್?
ಅವಳ್ ಸರ್ವಸ್ವತಂತ್ರೆ, ನಾನೊ ಪೂರ್ಣ ಪರತಂತ್ರೆ.–
ಇನ್ನೆಂದೊ ನನಗೆ ಆ ಮುಕ್ತಿ? –
ಪಿಂತಿರುಗಿ ಬಂದಪನೊ ಆ ನನ್ನ ಕಂದನ್,
ತಂದಪನೊ ಕೀಲಿಕಯ್ಯನ್
ಮೇಣ್ ಇತರರಂದದೊಳ್ ಬಲಿವೋದಪನೊ ಪಗೆಗೆ?
ಆವ ಸೆರೆಯೊಳ್ ಕೊರಗುತಿರ್ಪನೊ?
ಆರ ಹಿಂಸೆಗೆ ನರಳುತಿರ್ಪನೊ?
ಮೇಣ್ ಗಾಯಗೊಂಡಿನ್ನೆಲ್ಲಿ ಕೊಳೆಯುತಿರ್ಪನೊ?
ಏನಿತೊ ಬರಿಸಗಳಾಯ್ತು; ಇನ್ನೆಲ್ಲಿ ಬಂದಪನ್?

(ಮತ್ತೆ ಮೋಡ ಸರಿದಂತಾಗಿ ಕಿರಣಕಾಂತಿ ಹೆಚ್ಚಿ ಮೊದಲಿನಂತೆ ಸ್ಪಷ್ಟವಾಗುತ್ತದೆ. ಮತ್ತೆ ಜನಘೋಷ ಕೇಳಿಬರುತ್ತದೆ. 'ನಡೆ ಮುಂದೆ' ಎಂಬ ರಣಗೀತೆ ಕೇಳಿ ಬರುತ್ತದೆ.)

ವಾಣಿ– ನಡೆ ಮುಂದೆ! ನಡೆ ಮುಂದೆ!
ನುಗ್ಗಿ ನಡೆ ಮುಂದೆ!
ಜಗ್ಗದೆಯೆ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ!

(ಢಂ ಢಂ ಎಂದು ಗುಂಡುಗಳ ಸದ್ದು ಕೇಳಿಸುತ್ತದೆ. ಒಡನೆಯೆ ರಣಗೀತೆ.)

ಬೆಚ್ಚ ಬಿಡು, ನೆಚ್ಚ ನೆಡು,
ಕೆಚ್ಚೆದೆಯ ಗುಡಿಯಲ್ಲಿ;
ಸೆರೆಯ ಹರಿ, ಅರಿಯನಿರಿ,
ಹುಟ್ಟಳಿಸು ಹುಡಿಯಲ್ಲಿ!
(ಸತ್ತೆನಯ್ಯೋ–ನೀರು, ನೀರು, ನೀರು ಎಂಬ ಕೂಗು ಕೇಳಿಸುತ್ತದೆ.)
ಅಳಿವೆ ನಾನ್, ಅಳಿವೆ ನೀನ್,
ನಮ್ಮೆಲುಬುಗಳ ಮೇಲೆ
ಮೂಡುವುದು ನೋಡು ಅದೊ
ನವಭಾರತದ ಲೀಲೆ!...
ಆತ್ಮ ಅಚ್ಯುತವೆಂದು

(ಮತ್ತೆ ಗುಂಡಿನ ಶಬ್ದ. ಖಡ್ಗಗಳ ಝಣತ್ಕಾರ – ವೀರಘೋಷ.)

ಮೃತ್ಯು ನಶ್ವರವೆಂದು
ಭಾರತಿಗೆ ಜಯ ಎಂದು
ನಡೆ ಮುಂದೆ! ನಡೆ ಮುಂದೆ!
ನುಗ್ಗಿ ನಡೆ ಮುಂದೆ...!

(ಇದ್ದಕ್ಕಿದ್ದ ಹಾಗೆ ಕಿರಣಕಾಂತಿ ಕೆಂಪಾಗಿ ರಕ್ತವರ್ಣ ಗುಡಿಯ ತುಂಬ ಹಬ್ಬುತ್ತದೆ. ಭಾರತಾಂಬೆಯ ಮುಖಮ್ಲಾನತೆ ಮಣ್ದು ವೀರಶ್ರೀ ಉಗ್ರವಾಗಿ ಶೋಭಿಸತೊಡಗುತ್ತದೆ. ಶೃಂಖಲೆಯ ಲೋಹನಾದ ಸ್ಪಂದಿಸುತ್ತದೆ. ಆಕೆಯ ಕಣ್ಣು ಭಯಂಕರ ದೀಪ್ತಿಯಿಂದ ಬೆಳಗುತ್ತದೆ.)

ಭಾರತಾಂಬೆ– ಮಗೂ, ನನ್ನ ಬಿಡುಗಡೆಯ ಜನ್ನಕ್ಕೆ ನೀಂ
ಪೊತ್ತಿಸಿದ ಬೆಂಕೆಯಿದು ಈ ಕ್ರಾಂತಿ!
ಹರಕೆಯಿದೊ: ಉರಿಗೆ ನೀನೊಳಗಾಗದಿರು!

(ಜನಘೋಷದ ರೌದ್ರತೆ ಹೆಚ್ಚುತ್ತದೆ. 'ವಂದೇ ಮಾತರಂ', 'ಮಹಾತ್ಮಾ ಗಾಂಧಿಕೀ ಜಯ್' ಮೊದಲಾದ ಘೋಷಗಳು ಹಾಹಾಕಾರವನ್ನು ಮೀರಿ ಕೇಳಿ ಬರುತ್ತವೆ. ದೊಡ್ಡದೊಂದು ಅಗ್ನಿಜ್ವಾಲೆಯ ದೀಪ್ತಿ ದೇವಸ್ಥಾನವನ್ನೆಲ್ಲಾ ಕೆಂಪಗೆ ಬೆಳಗಿ ಭೀಕರವಾಗುತ್ತದೆ.)

ಭಾರತಾಂಬೆ– ಏನಿದೀ ಬೆಂಕೆ?
ಗೋಪುರೋಪಮಮೆದ್ದು ಗಗನಮಂ ತಿವಿಯುತಿದೆ!
ವಸ್ತ್ರ ದಹನದ ಧೂಮವಾಸನೆಯೊ?
ಮನೆಮನೆಗಳುರಿವ ಕೌರಿನ ಹೊಗೆಯೊ?–
ಮಗೂ, ಸರ್ವ ದೇವರುಗಳೂ ನಿನಗಕ್ಕೆ ರಕ್ಷೆ!
(ಭಾರತಾಂಬೆ ಕಿವಿಗೊಡುತ್ತಾಳೆ.)

ವಾಣಿ– ವೇದಋಷಿ ಭೂಮಿಯಲಿ ನಾಕನರಕಗಳಿಂದು
ಸಾವು ಬದುಕಿನ ಕಟ್ಟಕಡೆಯ ಹೋರಾಟದಲಿ
ಅಮೃತವನೆ ಹಾರೈಸಿ, ಬಲಿರಕ್ತದಲಿ ಮಿಂದು,
ಕಾದಿಹೆವು ಕಣ್ಣೀರು ತುಂಬಿ, ನಾಗರೀಕತೆಯ
ನಾಗಿನಿಯು ಪ್ರಗತಿನಾಮಕ ಫಣೆಯ ಮೇಲೆತ್ತಿ
ಚುಂಬಿಸಿಯೆ ಕೊಲ್ಲಲೆಳಸುತಿದೆ : – ಹಿಂದಿನ ಬುತ್ತಿ
ಸಮೆಯುತಿದೆ. ಇಂದಿನ ಮಹಾ ತಪಸ್ಸಿನ ಚಿತೆಯ
ರಕ್ತಿಮ ವಿಭೂತಿಯೊಳೆ ಮುಂದಿನ ನವೋದಯದ
ಧವಳಿಮ ಪಿನಾಕಧರನ್ನೈತಹನು: ಮತ್ತೊಮ್ಮೆ
ಭಾರತಾಂಬೆಯು ಜಗದ ಬೆಳಕಾಗುವಳು; ಹೆಮ್ಮೆ
ಗೌರವಗಳಿಂದ ಜನಗಣದ ಕಟು ನಿರ್ದಯದ

ಲೋಭ ಬುದ್ಧಿಯ ಹೀನ ಕುಟಿಲತೆಯನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ!

ಭಾರತಾಂಬೆ– ನನ್ನ ಮಂಗಳ ಗತಿಯನಿಂತುಲಿವ ನಿನಗೆ
ಕೋಟಿ ಮಂಗಳಮಕ್ಕೆ, ಕವಿಕುಮಾರ.
ನಿನ್ನ ಶುಭದಾದೇಶಮದು ಶೀಘ್ರದಿಂ ಸಲ್ಗೆ!
ನಿನ್ನ ಜನನಿಯ ಕೀರ್ತಿ ಲೋಕತ್ರಯದಿ ನಿಲ್ಗೆ!
ಪುಣ್ಯ ಸಂಸ್ಕೃತಿ ಗೆಲ್ಗೆ! ಶಾಂತಿ ಬಾಳ್ಗೆ!

(ಮತ್ತೆ ರಕ್ತಕಾಂತಿ ಮಾಣ್ದು ಶ್ವೇತವರ್ಣದ ದೀಪ್ತಿ ದೇವಾಲಯವನ್ನು ವ್ಯಾಪಿಸುತ್ತದೆ.)

ಮತ್ತಿದೇನ್? ಮಾಣ್ದುದಾ ಶೋಣಿತ ಜ್ವಾಲೆ!
ಶಾಂತಿಯಂ ಪಸರಿಸಿಹುದೀ ಧವಳಾಗ್ನಿ ಲೀಲೆ!
(ನೋಡುತ್ತಾ ಕಿವಿಗೊಡುತ್ತಾಳೆ.)

ವಾಣಿ– ಈ ಮಹಾ ಸ್ವಾತಂತ್ರ್ಯರಣಯಾಗಧೂಮದಲಿ
ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ; ನಿಶ್ಚಲಂ
ರಂಜಿಸುತ್ತಿದೆ – ಶಾಂತಿಯಲಿ ಹಿಮಮಹಾಚಲಂ
ರಾರಾಜಿಪಂತೆ ನೀಲಮ ನಭೋಧಾಮದಲಿ.
ಲೋಕಲೋಚನದಂತರಾಳದಾರಾಮದಲಿ
ವಿಶ್ವಕಂಪನಕಾರಿಯಾದ ಧರ್ಮದ ಬಲಂ
ಮೂರ್ತಿಗೊಳೆ ಮೂಡಿದೀತನು ಮಹಾತ್ಮನೆ ವಲಂ!
ಬಾಳು ಪಾವನಮಾದುದೀತನಿಂ ಭೂಮಿಯಲಿ!
ಓ ಮಹಾತ್ಮನೆ, ನಿನ್ನ ಸಾನ್ನಿಧ್ಯ ತೀರ್ಥದಲಿ
ಮಾನವನ ಮೋಹ ಮದ ಮಾತ್ಸರ್ಯಗಳು ಮಿಂದು
ಪ್ರೇಮದಿ ಪುನೀತವಾಗಿಹವು! ಸುಮುಹೂರ್ತದಲಿ
ಭಾರತಾಂಬೆಯ ಸಿರಿವಸಿರಿನಿಂದಲ್ರೈತಂದು
ಧರ್ಮದಲಿ ನೆಚ್ಚುಗೆಡುತಿದ್ದೆಮಗೆ ನೀನಿತ್ತೆ,
ಪ್ರಚ್ಛನ್ನ ಕಲ್ಕಿ ಓ, ದೃಢಭಕ್ತಿಯನು ಮತ್ತೆ!

ಭಾರತಾಂಬೆ– ಧನ್ಯೆ ನಾನಾತನಂ ಪಡೆದು!–
ಇಂದು ಭುವನಕೆ ಮಾನ್ಯೆ ನಾನಾತನಿಂ!
ಬಹುಯುಗ ತಪಸ್ಯೆಯಿಂ ಪಡೆದಿರ್ಪೆನಾತನಂ,
ಲೋಕಕ್ಕೆ ಶಾಂತಿದೂತನಂ!
ಕಂದರೊಳ್ ಕಂದನಂ
ನನ್ನ ಹೃದಯಾನಂದನಂ!

(ಮತ್ತೆ ಮಬ್ಬು ಮುಸುಗುತ್ತದೆ. ನ್ನಿಶಬ್ದವಾಗಿ ಕತ್ತಲೆ ಹೆಚ್ಚುತ್ತಾ ಹೋಗಿ ಕಗ್ಗತ್ತಲೆ ಕವಿಯುತ್ತದೆ. ದೂರದಲ್ಲಿ ಸಿಡಿಮದ್ದಿನ ಸದ್ದು ಕೇಳಿಸುತ್ತದೆ. ಜನರ ರಣಘೋಷ ವಿಮಾನಗಳ ಝೇಂಕಾರ ಇತ್ಯಾದಿ ತಾಯಿಯ ಅಳು, ಹಸುಳೆಯ ನರಳು ಇತ್ಯಾದಿ. ಭಾರತಾಂಬೆ ಸುಯ್ದು ಸಂತಪಿಸುತ್ತಾಳೆ.)

ಭಾರತಾಂಬೆ– ಇರುಳ್, ಪಗಲ್; ಪಗಲ್, ಇರುಳ್.
ಯುದ್ಧ ಭೂತಂ ತೊಳಲುತಿದೆ ಬರಿಬತ್ತಲೆ!

ವಾಣಿ– ಸುತ್ತಿದನು ಪೃಥ್ವಿಯಂ ಸಮರ ಶೇಷಂ, ತನ್ನ
ನಾನಾ ರಣದ ಫಣೆಗಳಂ ನಿಮಿರಿ, ಮೃತ್ಯುಮಯ
ಗರಳದಿಂ ದೇಶದೇಶದ ಬಾಳ್ಗೆ ಕಷ್ಟ ಭಯ
ಶೋಕ ರುಜೆ ದಾಸ್ಯಗಳನಡಕಿ. ಕೊಲ್ಲುವ ಮುನ್ನ
ಕಾಳಕೂಟವ ಕುಡಿವ ಕೈಲಾಸಪತಿಯೆಲ್ಲಿ?...

ಭಾರತಾಂಬೆ– ಎಂದಿಗಿದು ಮುಗಿಯುವುದೊ ಆ ದೇವನೆಯೆ ಬಲ್ಲ.
ಕತ್ತಲೆಯೆ ನುಂಗುತಿದೆ ಲೋಕ ಲೋಕವನೆಲ್ಲ.
ಸಹಿಪೆನೆಂತೀ ಕ್ರೂರ ದಾಸ್ಯಮಂ?
(ಕತ್ತಲಲ್ಲಿ ಕಾಣಿಸದೆ ಒಂದು ಧ್ವನಿ ಮಾತ್ರ ಕೇಳಿಸುತ್ತದೆ.)

ಧ್ವನಿ– ಸತ್ತವರ ಕರೆಯು, ಓ ಕೂಗುತಿದೆ, ಅದೊ ಕೇಳು,
ಭೂತಕಾಲದ ಗರ್ಭಗೋರಿಯಿಂದ;
ಆಲಿಸಿಯು ಅದನು ನೀ ಸುಮ್ಮನಿರುವೆಯ ಹೇಳು,
ದೇಶಮಾತೆಯು ಹಡೆದ ವೀರಕಂದಾ?
ಏಳಿರೈ ಸೋದರರಿರ, ನಿಮಗಾಗಿ ಮಡಿದೆಮ್ಮ
ಮರೆಯದಿರಿ, ನಿಮ್ಮಣ್ಣತಮ್ಮದಿರನು...
ಇರಲಿ ಹೂವಿನ ಮಾಲೆ, ಇರಲಿ ರೇಶ್ಮೆಯ ವಸನ,
ಇರಲಿ ಮುತ್ತಿನ ಹಾರ! ಕೈಗೆತ್ತಿ ಬರಲಿ!
ಇರಲಿ ಹೊಸ ಹೆಣ್ಣು ಮದುವೆಯ ಸೊಗಸು ಶೃಂಗಾರ;
ಬರಲಿ ಕಾರಾಗಾರ! ಮೃತ್ಯುವೈತರಲಿ!
ರಕ್ತಹೃದಯದ ಬಿಸಿಯ ರಕ್ತತರ್ಪಣವಿತ್ತು
ತಣಿಸಿರೈ ಸತ್ತರಾ ಬಯಕೆ ತೆತ್ತು;
ಇಲ್ಲದಿರೆ ನಿಮಗಾಗಿ ಸತ್ತೆಮಗೆ ಸೊಗವಿಲ್ಲ,
ಬದುಕಿರುವ ನಿಮಗುಮಾ ಬದುಕೆ ಮಿತ್ತು!
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು!
ಎಂದು ಸಾಹಸಕೇಳಿ, ಹಿಂಜರಿಯ ಬೇಡಿ!
(ಒಬ್ಬ ಬಾಲಕನ ಛಾಯೆ ಸುಳಿಯುತ್ತದೆ.)

ಭಾರತಾಂಬೆ– ನೀನಾರು, ಮಗೂ?
ಆವ ತಾಯಿಯ ಕರುಳ್ಗೆ ಉರಿಯಿಕ್ಕಿ ಬಂದಿರುವೆ?

ಛಾಯಾಧ್ವನಿ– ಏಕಮ್ಮ ನಿನಗೀ ನಿರಾಶೆ?

ಭಾರತಾಂಬೆ– ಕತ್ತಲೊಳ್ ಕಾಣಿಸದೆ ಆರವರ್ ನುಡಿವವರ್–

ಛಾಯಾಧ್ವನಿ– ನಾನಮ್ಮ–ಛಾಯಾಧ್ವನಿ!

ಭಾರತಾಂಬೆ– ಛಾಯಾಧ್ವನಿ? ಆರ ಛಾಯಾಧ್ವನಿ?

ಛಾಯಾಧ್ವನಿ– ಆರೊಬ್ಬನದು ಅಲ್ತು. ತಾಯ ಬಿಡುಗಡೆಗಾಗಿ
ದುಡಿದು ಮಡಿದಾ ಕೋಟಿ ಜೀವಗಳ್ಗಾಂ ಪ್ರತಿಮೆ.
ತಂದಿಹೆನ್ ನಿನಗೊಂದು ವಾರ್ತೆಯನ್.

ಭಾರತಾಂಬೆ– ಮಂಗಳಮೊ? ಮೇಣ್...

ಛಾಯಾಧ್ವನಿ– ಮಂಗಳದ ಸಂದೇಶಮದು, ಜನನಿ.

ಭಾರತಾಂಬೆ– ಕೋಟಿ ಅಮಂಗಳಗಳಿಂ ಒಂದಲ್ತೆ
ಮೂಡಿತೀ ಮಂಗಳಧ್ವನಿ! (ಸುಯ್ವಳ್)

ಛಾಯಾಧ್ವನಿ– ಶೋಕಮಂ ಬಿಡು, ತಾಯಿಃ ಸ್ವಾತಂತ್ರ್ಯಸಂಗ್ರಾಮದೊಳ್
ಸಂತೋಷದಿಂ ಮಡಿದರೆಮ್.
ನೀನಳಲ್ ಕುಂದಪ್ಪುದೆಮ್ಮಾ ಸಂತಸಕೆ.–
ನಟ್ಟನಡು ರಾತ್ರಿಯೊಳ್ ದಟ್ಟಯ್ಸುತಿರೆ ಇರುಳ್
ನಿನಗೆ ಬಿಡುಗಡೆಯಪ್ಪುದಾ ಭರತಸುತನಿಂ!–
ಬೀಳ್ಕೊಳ್ಳುವೆನ್ – ಪರಸೆಮ್ಮನಮ್ಮಾ.

ಭಾರತಾಂಬೆ– ನಿಮಗೆಲ್ಲರ್ಗಂ ಸುಗತಿಯಕ್ಕೆ
ಜನ್ಮ ಜನ್ಮದೊಳುಂ ನನಗೆ ನೀಮನಿಬರುಂ
ಮಕ್ಕಳಕ್ಕೆ! – (ತನ್ನೊಳ್ ತಾನೆ)
ಎನಿತು ಮಕ್ಕಳ್ ನನ್ನ ಸಲುವಾಗಿ
ತಂದೆ ತಾಯಂದಿರನ್ ತೊರೆದಗಲಿದರ್?
ಎನಿತು ಪೆಂಡಿರ್ ತಮ್ಮ ಗಂಡಂದಿರನ್
ಮೀರಿ ಮಡಿದರ್?
ಎನಿತು ಸತಿಯರ್ ತಮ್ಮ ಮಾಂಗಲ್ಯಮಂ
ಸ್ವಾತಂತ್ರ್ಯ ದೇವತೆಗೆ ಬಲಿದಾನವಿತ್ತು
ಕಣ್ಬನಿಯ ಕಡಲೊಳಳ್ದಿಹರ್!

ಎನಿತು ಮನೆಗಳ್ ಮುರಿದುವೆನಿತು ಸಂಸಾರಗಳ್
ಸಿರಿಯಳಿದು ಗತಿಗೆಟ್ಟುವಡವಿಪಾಲಾಗಿ:
ಬಲಿಪರಂಪರೆವೇಳ್ಕುಮೀ ಸ್ವಾತಂತ್ರ್ಯ ಸಾಧನೆಗೆ.
ಪಡೆಯೆ ಬಲಿದಾನಂ;
ಪಡೆದುದಂ ಪಿಡಿಯೆ ಬಲಿದಾನಂ;
ಪಿಡಿದುದಂ ನಡೆಯೆ ಬಲಿದಾನಂ!
ಬಲಿದಾನಕುಂಟೆ ಕೊನೆ?
ಬಲಿಪರಂಪರೆಯಲ್ತೆ ಸ್ವಾತಂತ್ರ್ಯಜೀವನಂ!

(ದೂರದಿಂದ ಒಂದು ಗಾನವಾಣಿ ಕೇಳಿಸುತ್ತದೆ. ಬರುಬರುತ್ತಾ ಹತ್ತಿರ ಹತ್ತಿರವಾಗಿ ಸುಸ್ಪಷ್ಟವಾಗುತ್ತದೆ.)

ವಾಣಿ– ಭಾರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು, ದೇವಿಯೆ;
ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ.
ನಿನ್ನ ಕಂಗಳ ಪುಣ್ಯಕಾಂತಿಯೊಳೆನ್ನ ಕಂಗಳ ತೆರೆದೆನು;
ನಿನ್ನ ಅಂಕದ ಮಂಗಳಾಂಗಣದಲ್ಲಿ ನಲಿಯುತ ಮೆರೆದೆನು;
ನಿನ್ನ ಮೈಮೆಯ ಬರೆವೆನು; ನಿನ್ನ ಹೆಸರನೆ ಕರೆವೆನು;
ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು.

ಭಾರತಾಂಬೆ– ಆರ ದನಿಯಿದು? ಮನಕ್ಕಿನಿತು ಆಹ್ಲಾದಮಂ
ತರುತಿಹದು! ಸುಪರಿಚಿತಮೆಂಬಂತೆ ಸೊಗಸುತಿದೆ.
ಸ್ವಾತಂತ್ರ್ಯ ಸಂತೋಷ ಸುಖಗಳಂ ಮೊಗಸುತಿದೆ!
ಭರತಸುತನೈತರ್ಪನೆಂಬ ಸಂದೇಶಮನ್
ಆಲಿಸಿದ ಕಿವಿಗೆ ತನಿ ಜೇನಿಂಪನುಣಿಸುತಿದೆ.
(ತೆಕ್ಕನೆ ಕಣ್‌ನಟ್ಟು)
ಇದೇನ್ ಬೆಳಕು! ಮಿಂಚಿ ಕೋರೈಸುತಿದೆ!
ಕತ್ತಲೆಯ ಗಬ್ಬದಿಂ ಕೇಸುರಿಯ ಆಸೆವೂ
ಮಲರಿ ಬರುವಂತೆ ಬಳಿಸಾರುತಿಹುದು!
ಓವೋ, ಪೊಂಜು ಪಿಡಿದೈತರ್ಪನೆನ್ನ ಕಂದಂ!
ಕಯ್ಯೊಳೇನ್ ಬಾವುಟಂ!
ಕತ್ತರಿಸಿ ತುಂಡಾದ ಸಂಕೋಲೆಗಳ್
ನೇಲುತಿವೆ ಕೈ ಕಾಲ್ಗಳಿಂ!
ತಲೆಗೆದರಿ ತೋರ್ಪನುನ್ಮತ್ತನೋಲ್,
ಮತ್ತದೇನ್ ನೆತ್ತರ್! ಪರಿದುಡುಗೆ!

(ಓಡಿಹೋಗಿ ಅವನನ್ನು ಆಲಿಂಗಿಸಲು ಪ್ರಯತ್ನಿಸುತ್ತಾಳೆ. ಆದರೆ ಕೈಕಾಲುಗಳ ನಿಗಳ ಬಂಧನದ ದೆಸೆಯಿಂದ ಹತಾಶಳಾಗಿ)

ಅಯ್ಯೊ ಮರೆತಿದ್ದೆ ನಾನ್
ಅಸ್ವತಂತ್ರೆ ಎಂಬುದನ್!

(ಭರತಸುತನು ಬರುತ್ತಾನೆ. ಅವನ ಎಡದ ಕೈಲಿದ್ದ ಮಿಂಚುಂಪೊಂಜಿನ ಬೆಳಕಿನಿಂದ ದೇಗುಲ ಬೆಳಗುತ್ತದೆ. ಅವನ ತಲೆ ಕೆದರಿದೆ. ಕೈಕಾಲುಗಳಲ್ಲಿ ಕತ್ತರಿಸಿದ ಸಂಕೋಲೆಯ ತುಂಡುಗಳಿವೆ. ರಕ್ತದ ಕಲೆ ತುಂಬಿದ ಉಡುಗೆ ಹರಿದು ಹೋಗಿದೆ. ಮುಖದ ಗಾಯಗಳು ಭಯಾನಕವಾಗಿವೆ. ಬಲಗೈಯಲ್ಲಿ ಹಿಡಿದು ಹೆಗಲಮೇಲೆ ಆತುಕೊಂಡಿದ್ದ ಧ್ವಜಕಾಷ್ಠದ ತುದಿಯಲ್ಲಿ ಚರಕ ಚಿಹ್ನೆಯ ತ್ರಿವರ್ಣ ಧ್ವಜ ತೂಗುತ್ತಿದೆ. ದೊಡ್ಡದೊಂದು ಕೀಲಿಕೈ ರಕ್ತಮಯವಾಗಿ ವಕ್ಷದ ಮೇಲೆ ನೇತಾಡುತ್ತಿದೆ. 'ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು' ಎಂಬ ಚರಣ ಮುಗಿಯುತ್ತಿರುವಾಗ ಪ್ರವೇಶಿಸುತ್ತಾನೆ. ಹೊರಗೆ ದೂರದಲ್ಲಿ ವಾದ್ಯ ಸಂಭ್ರಮ ಮೊದಲಾಗುತ್ತದೆ.)

ಭರತಸುತ– (ಧ್ವಜವೆತ್ತಿ ಉತ್ತಾಲ ಧ್ವನಿಯಿಂದ)
ಗೆಲ್, ತಾಯ್, ಗೆಲ್!

ಭಾರತಾಂಬೆ– (ಬಂಧಿತವಾದ ಕೈಗಳನ್ನು ಎತ್ತಲೆಳಸಿ ಗದ್ಗದದಿಂದ)
ಬಾಳ್, ಮಗುವೆ, ಬಾಳ್.

ಭರತಸುತ–(ಕೊರಳೆತ್ತಿ) ಆಳ್! ಜಗವನಾಳ್!

(ಮಿಂಚುಂಪೊಂಜನ್ನು ಒಂದೆಡೆ ಇಟ್ಟು, ಧ್ವಜವನ್ನು ಒಂದು ಕಡೆ ನೆಟ್ಟು 'ವಂದೇ ಮಾತರಂ!' ಎಂದು ಅಘೋಷಿಸುತ್ತಾ ಸಾಷ್ಟಾಂಗ ಪ್ರಣಾಮ ಮಾಡಿ ಎದ್ದು ನಿಂತು ಗುಡಿ ಗುಡುಗುವಂತೆ ಅಘೋಷಿಸುತ್ತಾನೆ.)

ಗೆಲ್, ತಾಯೆ, ಗೆಲ್!
ಬಾಳ್, ತಾಯೆ, ಬಾಳ್!
ಆಳ್, ಜಗವನಾಳ್!

ಭಾರತಾಂಬೆ– (ಹರ್ಷಧಿಕ್ಯದಿಂದ ಸಗದ್ಗದೆಯಾಗಿ)
ಬಂದೆಯಾ, ಮಗೂ.

ಭರತಸುತ– (ಉಲ್ಲಸಿತನಾಗಿ)
ಬಂದೆನ್! ತಂದೆನ್! ಇದೆಕೊ ಕಾಣ್!
(ವಕ್ಷದ ಮೇಲೆ ನೇಲುತ್ತಿದ್ದ ಕೀಲಿಕೈಯನ್ನು ನಿರ್ದೇಶಿಸುತ್ತಾನೆ)

ಭಾರತಾಂಬೆ– ವತ್ಸ, ಇದೇನ್ ಕೆನ್ನೀರ್!

ಭರತಸುತ– ನೆತ್ತರೊಳ್ ಮುಳುಗಿರ್ದುದನ್ ಎತ್ತಿ ತಂದೆನ್, ತಾಯಿ.

ಭಾರತಾಂಬೆ– ಪರಕೀಯ ವೈರಿಗಳ್ ಚೆಲ್ಲಿದುದೆ?

ಭರತಸುತ– ಅಲ್ತಲ್ತು,–ನಮ್ಮವರ್ ಚೆಲ್ಲಿದುದೆ!
ಪರಕೀಯ ವೈರಿಗಳ್ ಚೆಲ್ಲಿದಾ ಶೋಣಿತಮ್
ಹಸುಗೊರಸು ನೀರ್, ನಮ್ಮವರ್ ಚೆಲ್ಲಿದಾ
ಕಡಲದಿರ್! ಈ ನಿನ್ನ ಶೃಂಖಲೆಗಳಂ ಬಿಗಿದ
ಬೀಗಮಂ ತೆಗೆವ ಕೀಲಿಕೈ ಮುಳುಗಿರ್ದುದಾ
ಸೋದರರ್ ಸೋದರರ ಮೆಯ್ಯಿಂದೆ ಚೆಲ್ಲಿದಾ
ಮತವೈರ ಸಂಜಾತ ರುಧಿರ ಪ್ರವಾಹದೊಳ್!

ಭಾರತಾಂಬೆ– ಅಯ್ಯೊ ಇಲ್ಲಿಯುಂ, ಬಿಡುಗಡೆಯ ಪಡೆವಲ್ಲಿಯುಂ,
ನಾನೆಂತಪ್ಪ ದುರ್ಭಾಗ್ಯೆಯೆನ್!
ಅನ್ಯರಿಂ ಪಡೆವೆಡೆಯೊಳಂದು ಬಲಿದಾನಂ!
ನನ್ನವರೆ ಕೊಡುವೆಡೆಯೊಳಿಂದು ಬಲಿದಾನಂ!
ಇನ್ನುಮೆನಿತಿರ್ಕುಮೋ ಮುನ್ ಬಲಿಯ ದಾನಂ!

ಭರತಸುತ– ಅಳಲದಿರ್, ತಾಯೆ, ಅಳಲ್ಕಿದು ಪೊಳ್ತಳ್ತು.
ನಿನ್ನಂ ಮೊದಲ್ ಸ್ವತಂತ್ರೆಯಂ ಮಾಳ್ಪೆನ್.
ಅನಂತಂ ನೋಳ್ಪಮೀ ನಿನ್ನ ಸ್ವಾತಂತ್ರ್ಯದಿಂ
ಸಂಭವಿಪ ಸದ್ಬುದ್ಧಿಯಂ, ಸಂತೃಪ್ತಿಯಂ, ಶಾಂತಿಯಂ!

(ದೂರದಿಂದ 'ವಂದೇ ಮಾತರಂ' ಗೀತೆ ಕೇಳುತ್ತಿರಲು ಕೀಲಿಕೈಯಿಂದ ಬೀಗವನ್ನು ಕಳಚುತ್ತಾನೆ. ಸರಪಣಿಗಳು ಖಣಿ ಖಣಿಲ್ ಕಳಚಿ ಬೀಳುತ್ತವೆ. ಹೂಮಳೆ ಸುರಿಯುತ್ತದೆ. ಮಂಗಳವಾದ್ಯ ಮೊಳಗುತ್ತವೆ. ಭರತಸುತನು ಸ್ವತಂತ್ರೆಯಾದ ಭರತಮಾತೆಯನ್ನು ಕಣ್ಣರಳಿಸಿ ನೋಡುತ್ತ ಬಹು ಕಂಠಗಳಿಗೆ ತನ್ನ ಕಂಠವನ್ನೂ ಸೇರಿಸಿ ಹಾಡುತ್ತಾನೆ.)

## ಸರ್ವಗೀತೆ

ಲೋಕ ಮಲಗಿದಂದು ನೀ ನಟ್ಟನಡೂ ರಾತ್ರಿ
ಎಚ್ಚರಾಂತೆ, ಅವಿಶ್ರಾಂತೆ; ಆದೆ ಪುನರ್‌ಯಾತ್ರಿ.
ಸರ್ವಕಾಲ ಸರ್ವದೇಶ ಸರ್ವಮೋಕ್ಷ ಮಂತ್ರೇ,
ಅಸ್ವತಂತ್ರತ್ರೆ ಸುಸ್ವತಂತ್ರೆಯಾದ ವಿಶ್ವತಂತ್ರೇ.
ಏಳು ತಾಯಿ, ಬಾಳು ತಾಯಿ, ಜಗತ್ ಕಲ್ಯಾಣಿ;
ಯುಗಯುಗಾಯು ಜಗವನಾಳು, ಧರ್ಮಚಕ್ರಪಾಣಿ;
ದಿಗ್‌ದಿಗಂತ ರಣಿತಮಕ್ಕೆ ನಿನ್ನ ದಿವ್ಯವಾಣಿ.
ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ರಾಣಿ!
ಶಾಂತಿ ಸತ್ಯ ಮುಕ್ತಿ ಧರ್ಮ ತತ್ತ್ವ ಮಹೋದಾತ್ತೆ,

ಕಾವ್ಯ ಶಿಲ್ಪ ನೃತ್ಯ ಗಾನ ಸಕಲ ಕಲಾವೇತ್ತೆ,
ಶ್ರದ್ಧೆಯಾಗಿ ಬುದ್ಧಿಯಾಗಿ ತಪಸ್ ಶಕ್ತಿಯಾಗಿ
ನಡಸು ನಮ್ಮನೆಲ್ಲ, ಅಮ್ಮ, ಪೂರ್ಣಸಿದ್ಧಿಗಾಗಿ!
ನಮೋ ದೇವಿ! ನಮೋ ತಾಯಿ! ನಮೋ ಭರತಮಾತೆ!
ನಮಸ್ ಸತ್ಯೆ! ನಮೋ ನಿತ್ಯೆ! ನಮೋ ಜಗನ್ಮಾತೆ!

❑

# ೧.೩ ಮತೀಯವಾದಿ ರಾಷ್ಟ್ರೀಯತೆಯ ಸಂಕಷ್ಟಗಳು

**– ಡಾ. ರಹಮತ್ ತರೀಕೆರೆ**

೧

ಪ್ರಸಿದ್ಧ ಉರ್ದು ಲೇಖಕ ಸಾದತ್ ಹಸನ್ ........... ಎಂಬ ಕಿರುಗತೆಯೊಂದು ಹೀಗಿದೆ :

"ಜನಸಮೂಹದ ದಿಕ್ಕು ಬದಲಾಯಿತು. ಜನ ಗಂಗಾರಾಮನ ಪುತ್ಥಳಿ ಮೇಲೆ ಹಠಾತ್ತನೇ ಎರಗಿದರು. ದೊಣ್ಣೆ ಬೀಸಿದರು. ಕಲ್ಲು ಇಟ್ಟಿಗೆಗಳನ್ನು ತೂರಿದರು. ಒಬ್ಬ ಮುಖಕ್ಕೆ ಡಾಂಬರ್ ಬಳಿದ. ಇನ್ನೊಬ್ಬ ಚಪ್ಪಲಿಗಳ ಹಾರ ಮಾಡಿ ಪುತ್ಥಳಿಯ ಕೊರಳಿಗೆ ಹಾಕಲು ಮುನ್ನುಗ್ಗಿದ. ಅಷ್ಟರಲ್ಲಿ ಪೊಲೀಸರು ಬಂದರು. ಗೋಲಿಬಾರ್ ಆಯಿತು. ಚಪ್ಪಲಿ ಹಾರ ಹಾಕಬೇಕೆಂದವನು ಗಾಯಗೊಂಡ. ಚಿಕಿತ್ಸೆಗಾಗಿ ಅವರನ್ನು ಸರ್ ಗಂಗಾರಾಮ್ ಆಸ್ಪತ್ರೆಗೆ ಸಾಗಿಸಲಾಯಿತು."

ಕತೆಯ ವಸ್ತು ಲಾಹೋರಿನಲ್ಲಿ ದೇಶವಿಭಜನೆಯ ಬಳಿಕ ಎದ್ದ ದಂಗೆಗಳಲ್ಲಿ ನಡೆದ ಘಟನೆ. ವರ್ಷಗಳಿಂದ ಸಹಜ ಸಾಮಾನ್ಯ ಬದುಕು ನಡೆಸುತ್ತಿದ್ದ, ವಿಭಿನ್ನ ಧಾರ್ಮಿಕ ಸಮುದಾಯಗಳಿಗೆ ಸೇರಿದ ಜನರ ಸಂಬಂಧ ಇದ್ದಕ್ಕಿದ್ದಂತೆ ಬಿಗಡಾಯಿಸಿದೆ. ಹೊಸದೇಶ ಕಟ್ಟುವ ತವಕದಲ್ಲಿರುವ ಮತೀಯವಾದಿ ಪುಂಡರಿಗೆ 'ಅನ್ಯ' ಧರ್ಮಕ್ಕೆ ಸೇರಿದ ಸಮಸ್ತ ಕುರುಹುಗಳನ್ನು ಒರೆಸಿಹಾಕಬೇಕೆಂಬ ಅಸಹನೆ. ಗಂಗಾರಾಮ್ ಹೆಸರಲ್ಲಿರುವ ಗಂಗೆ ಮತ್ತು ರಾಮರ ಉಲ್ಲೇಖದ ಹಿಂದಿರುವ ಧಾರ್ಮಿಕ ಸಂಕೇತಗಳು ಇದಕ್ಕೆ ಪ್ರಚೋದಕವಾಗಿವೆ. ಆದರೆ ಸದರಿ ಪುಂಡರು ಗಾಯಗೊಂಡಾಗ ನೆರವಿಗೆ ಬರುತ್ತಿರುವುದು ಅವರ ಧರ್ಮವಲ್ಲ; ಅವರು ದ್ವೇಷಿಸುತ್ತಿರುವ ವ್ಯಕ್ತಿಯೇ ಕಟ್ಟಿಸಿದ ಆಸ್ಪತ್ರೆ. ಇದೊಂದು ಚಾರಿತ್ರಿಕ ವ್ಯಂಗ್ಯ.

ಚರಿತ್ರೆಯ ಮಾಹಿತಿ ಕೊಡುವುದಾದರೆ, ಶ್ರೀ ಗಂಗಾರಾಮ್, ಬ್ರಿಟಿಷ್ ಭಾರತದಲ್ಲಿ ಪ್ರಸಿದ್ಧ ಸಿವಿಲ್ ಇಂಜಿನಿಯರ್ ಆಗಿದ್ದವರು; ಸಿರಿವಂತರೂ ದಾನಿಯೂ ಆಗಿದ್ದ

ಅವರು ಲಾಹೋರಿನಲ್ಲಿ ಸಾರ್ವಜನಿಕ ಆಸ್ಪತ್ರೆ ಕಟ್ಟಿಸಿದವರು; ಭಾರತೀಯರ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದವರಲ್ಲ. ಅವರಿಗೆ 'ಸರ್' ಬಿರುದು ಸಿಕ್ಕಿದ್ದೇ ಬ್ರಿಟಿಷ್ ಸಾಮ್ರಾಜ್ಯದ ಸೇವೆಗಾಗಿ. ಸಮಸ್ಯೆ ಇರುವುದು ಪ್ರತಿಮೆಯಲ್ಲಲ್ಲ. ಧಾರ್ಮಿಕ ಭಿನ್ನತೆಗಳನ್ನು ಬದಿಗಿಟ್ಟು ಹೋರಾಡಿ ಗಳಿಸಿದ ಸ್ವಾತಂತ್ರ್ಯದ ಫಲವನ್ನು, ಹಂಚಿಕೊಂಡು ಉಣ್ಣಲು ಬೇಕಾದ ವಿವೇಕ ಕಳೆದುಕೊಂಡಿರುವ ದಾಯಾದಿಗಳಲ್ಲಿ. ಇಲ್ಲಿ ಪ್ರಕಟವಾಗುತ್ತಿರುವ ದ್ವೇಷಕ್ಕೆ ಕಾರಣ, ಧರ್ಮವೊ ಅಥವಾ ಹಲವು ಧರ್ಮದ ಜನ ಕೂಡಿ ಜೀವಿಸಲು ಸಾಧ್ಯವಿಲ್ಲವೆಂಬ ಸಿದ್ಧಾಂತವೊ? ದ್ವೇಷಕ್ಕೆ ಧರ್ಮವೇ ಕಾರಣವಾಗಿದ್ದರೆ, ಆಯಾ ಧರ್ಮದ ಎಲ್ಲರೂ ಪಶುಗಳಾಗಬೇಕಿತ್ತು; ಆದರೆ ಧರ್ಮದ ಹೆಸರಿನಲ್ಲಿ ಜರುಗುವ ಹಿಂಸೆಯನ್ನು ಒಪ್ಪದ ಧಾರ್ಮಿಕರಿದ್ದಾರೆ. ಹೀಗಾಗಿ ದ್ವೇಷದ ಹಿಂದಿರುವುದು ಧರ್ಮವಲ್ಲ. ಧರ್ಮಮಂಥನದಲ್ಲಿ ಹುಟ್ಟುವ ನಂಜಾದ ಮತೀಯವಾದ. ವ್ಯಂಗ್ಯವೆಂದರೆ, ವಸಾಹತುಶಾಹಿ ರಾಜಕಾರಣದ ಹೊಟ್ಟೆಯೊಳಗಿಂದಲೇ ದೇಶವಿಭಜನೆಯ ಹುನ್ನಾರವೂ ಮತೀಯವಾದಿ ತತ್ವವೂ ಗಾಯಾಳುವಿನ ಧಾರ್ಮಿಕ ಹಿನ್ನೆಲೆ ನೋಡದೆ ಮಿಡಿಯುತ್ತಿರುವ ಆಸ್ಪತ್ರೆಯೂ ಹುಟ್ಟಿರುವುದು. ಪುಟ್ಟಕತೆಯೊಂದು ಧರ್ಮ–ಮತೀಯವಾದ, ರಾಷ್ಟ್ರೀಯತೆ–ದ್ವೇಷಗಳ ನಡುವಿನ ನಂಟಿನ ಹಲವು ಸ್ತರಗಳನ್ನು ಹೀಗೆ ತಣ್ಣಗೆ ತೆರೆದಿಡುತ್ತಿದೆ. ರಾಷ್ಟ್ರವಾದಿಗಳೆಂದು ಕರೆದುಕೊಳ್ಳುವವರು, ತಮ್ಮ ಸಿದ್ಧಾಂತ–ರಾಜಕಾರಣವನ್ನೊಪ್ಪದ ಸಮಸ್ತರನ್ನೂ ರಾಷ್ಟ್ರವಿರೋಧಿಗಳೆಂದು ಘೋಷಿಸುತ್ತಿರುವ; ದೇಶ ತ್ಯಜಿಸಬೇಕೆಂದು ಹೇಳುತ್ತಿರುವ, ಅವರ ಕೊಲೆಯನ್ನು ಪರೋಕ್ಷವಾಗಿ ಸಮರ್ಥಿಸುತ್ತಿರುವ ಸನ್ನಿವೇಶ ಭಾರತದಲ್ಲಿದೆ. ನೆರೆ ದೇಶಗಳಲ್ಲೂ ಇದೆ. ಇಂತಹ ಸನ್ನಿವೇಶದಲ್ಲಿ ಮಂಟೂ ಕತೆ, ಧರ್ಮ ಮತ್ತು ರಾಷ್ಟ್ರಗಳ ಹೆಸರಲ್ಲಿ ಹುಟ್ಟುವ ಎಲ್ಲ ಬಗೆಯ ಹಿಂಸೆಗಳನ್ನು ಕುರಿತು ಚಿಂತಿಸಲು ಪ್ರೇರೇಪಿಸುತ್ತಿದೆ.

## ೨

'ರಾಷ್ಟ್ರ'ದ ಪರಿಕಲ್ಪನೆ ಮೂಲತಃ ಭಾರತದ್ದಲ್ಲ; ನಮ್ಮಲ್ಲಿ ಭರತಖಂಡ, ಜಂಬೂದ್ವೀಪ, ಕರ್ಣಾಟದೇಶ, ಮೈಸೂರು ರಾಜ್ಯದ ಕಲ್ಪನೆಗಳಿದ್ದವು; ಕಾವೇರಿಯಿಂದ ಗೋದಾವರಿ ತನಕ ಹರಡಿದ್ದ ಮತ್ತು ಚದುರರೂ ಕಾವ್ಯಪ್ರಯೋಗ ಪರಿಣತಮತಿಗಳೂ ಆದ ನಾಡವರಿದ್ದ 'ನಾಡು'ಗಳಿದ್ದವು; ರಾಷ್ಟ್ರಗೀತೆಯಲ್ಲಿ ಉಲ್ಲೇಖಗೊಳ್ಳುವ 'ಪಂಜಾಬ ಸಿಂಧು ಗುಜರಾತ ಮರಾಠ ದ್ರಾವಿಡ ಉತ್ಕಲ ವಂಗ'ಗಳೂ ನಾಡುಗಳೇ. ಮಹಾರಾಷ್ಟ್ರ ಸೌರಾಷ್ಟ್ರ ಇತ್ಯಾದಿ ಪ್ರಾಂತ್ಯವಾಚಕಗಳಲ್ಲಿ 'ರಾಷ್ಟ್ರ' ಶಬ್ದವಿದ್ದರೂ, ಇದು ಆಧುನಿಕ ಪರಿಕಲ್ಪನೆಯ ರಾಷ್ಟ್ರವನ್ನು ಸೂಚಿಸುವುದಿಲ್ಲ. ರಾಜಕೀಯವಾದ ಈ ರಾಷ್ಟ್ರ ಪರಿಕಲ್ಪನೆ ಯೂರೋಪಿನಿಂದ ಬಂದಿದ್ದು. ಎಂತಲೇ 'ರಾಷ್ಟ್ರೀಯವಾದಿ'ಗಳು ಎಂದು ಕರೆದುಕೊಳ್ಳುವ ಸಂಘಟನೆಗಳ ಸಿದ್ಧಾಂತ ಹಾಗೂ ಕಾರ್ಯವಿಧಾನದಲ್ಲಿ, ಇಟಲಿ ಹಾಗೂ ಜರ್ಮನಿಗಳಲ್ಲಿ ಕಾಣಿಸಿಕೊಂಡ ರಾಷ್ಟ್ರವಾದದ ಚಹರೆಗಳಿರುವುದು.

'ರಾಷ್ಟ್ರೀಯತೆ' ಎಂದರೆ ರಾಷ್ಟ್ರವನ್ನು ಕುರಿತು ಪ್ರಜೆಗಳು ಅಧಿಕೃತವಾಗಿಯೂ ಭಾವನಾತ್ಮಕವಾಗಿಯೂ ತೋರಬೇಕೆಂದು ನಿರೀಕ್ಷಿಸಲಾಗುವ ಭಾವನೆ ಮತ್ತು ಆಚರಣೆ ಎಂದು ಸರಳವಾಗಿ ಹೇಳಬಹುದು. ರಾಷ್ಟ್ರದ ಪರಿಕಲ್ಪನೆಯನ್ನು ಸಾಮಾನ್ಯವಾಗಿ ಭೂಪ್ರದೇಶ ಜನ ಜನಾಂಗ ಭಾಷೆ ಸಂಸ್ಕೃತಿ ಧರ್ಮ ಮುಂತಾದ ಸಂಗತಿಗಳ ಮೇಲೆ ಕಟ್ಟಲಾಗುವುದು. ದೇಶಭಕ್ತಿ ಧರ್ಮನಿಷ್ಠೆ ಸಂಸ್ಕೃತಿ ರಾಷ್ಟ್ರೀಯತೆ ಇತ್ಯಾದಿ ಪರಿಕಲ್ಪನೆಗಳನ್ನು, ಅವಕ್ಕೆ ಸರ್ವಸಮ್ಮತ ಅರ್ಥವಿದೆ ಎಂಬಂತೆ ಬಳಸುವ ವಾಡಿಕೆಯಿದೆ. ವಾಸ್ತವವಾಗಿ ಅವು ವ್ಯಾಖ್ಯಾನಿಸುವವರ ಹಿತಾಸಕ್ತಿಗೆ ಅನುಸಾರ ಅರ್ಥ ಪಡೆದುಕೊಳ್ಳುವ ಬಹುರೂಪಿ ಕಲ್ಪನೆಗಳು. ಎಂತಲೇ ರಾಷ್ಟ್ರೀಯತೆಯ ಪರಿಕಲ್ಪನೆ ಒಳಿತಿಗಿಂತ ಮಿಗಿಲಾಗಿ ಕೇಡೆಸಗಿರುವುದನ್ನು ಚರಿತ್ರೆ ದಾಖಲಿಸಿದೆ. ಭಾರತವು ಆಂಗ್ಲರ ರಾಜಕೀಯ ದಾಸ್ಯದಿಂದ ಬಿಡುಗಡೆಗೊಳ್ಳಲು; ಕ್ಯೂಬಾ–ಇರಾನ್‌ಗಳು ದಿಗ್ಬಂಧನಗಳ ನಡುವೆಯೂ ಬದುಕುಳಿಯಲು; ಪುಟ್ಟ ವಿಯೆಟ್ನಾಂ ಬಲಿಷ್ಠ ಅಮೆರಿಕೆಯನ್ನು ಮಣಿಸಲು, ರಾಷ್ಟ್ರೀಯತೆಯ ಅಂಶಗಳು ಪಾತ್ರವಹಿಸಿವೆ ನಿಜ; ಇಲ್ಲಿ ರಾಷ್ಟ್ರೀಯತೆಯು ದೇಶವೊಂದು ತನ್ನ ನ್ಯಾಯಬದ್ಧ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಉಳಿಸಿಕೊಂಡು ಬದುಕುವ ಹಕ್ಕು. ಇದನ್ನು ವಿಮೋಚಕ ರಾಷ್ಟ್ರೀಯತೆ ಎನ್ನಬಹುದು. ಇಲ್ಲಿ 'ಧರ್ಮ'ದ ಅಂಶಗಳಿದ್ದರೂ ಅವು ವಿಭಜಕ ಕತ್ತರಿಗಳಲ್ಲ; ಬಿಡಿಯಾದವನ್ನು ಒಗ್ಗೂಡಿಸುವ ಕಟ್ಟುಗಳು. ತಮ್ಮನ್ನು ಶ್ರದ್ಧಾವಂತ ಹಿಂದೂ ಎಂದು ಕರೆದುಕೊಳ್ಳುತ್ತಿದ್ದ ಗಾಂಧೀಜಿಯನ್ನು ಗಮನಿಸಬೇಕು. ಅವರು ರಾಷ್ಟ್ರೀಯ ಚಳುವಳಿಯಲ್ಲಿ ಧರ್ಮದ ಸಂಕೇತಗಳನ್ನು ಬಳಸಿದರು; ಅವರ ಪ್ರಾರ್ಥನಾ ಸಭೆಯಲ್ಲಿ ವೈಷ್ಣವ ಭಜನೆಗಳಿರುತ್ತಿದ್ದವು; ಅವರು ತುರ್ಕಿಯ ಪದಚ್ಯುತ ಚಕ್ರವರ್ತಿಯ ಪರವಾಗಿ ಹುಟ್ಟಿದ ಬ್ರಿಟಿಶ್ ವಿರೋಧಿ 'ಖಿಲಾಫತ್' ಚಳುವಳಿಯ ಧಾರೆಯನ್ನು ಕಾಂಗ್ರೆಸ್ ಹೋರಾಟದಲ್ಲಿ ಮಿಳಿತಗೊಳಿಸಿದರು. ಹಿಂದಿ–ಉರ್ದುಗಳು ಮತೀಯ ಧ್ರುವೀಕರಣ ಪಡೆದುಕೊಳ್ಳುವುದನ್ನು ಗಮನಿಸಿ, ಅವೆರಡೂ ಸಮನ್ವಯಗೊಳ್ಳುವ ಹಿಂದೂಸ್ತಾನಿ ಭಾರತದ ಸಂಪರ್ಕ ಭಾಷೆಯಾಗಬೇಕೆಂದು ಸೂಚಿಸಿದರು; ಗೋರಕ್ಷಣೆಯ ಪ್ರತಿಪಾದಕರಾಗಿದ್ದರೂ ಬೀಫ್ ತಿನ್ನುವವರನ್ನು ದ್ವೇಷಿಸಲಿಲ್ಲ. ಹೀಗಾಗಿಯೇ ಅವರ ಸುತ್ತಮುತ್ತಲಿದ್ದ ಕ್ರೈಸ್ತ ಮುಸ್ಲಿಂ ಜೈನ ಬೌದ್ಧ ಅನುಯಾಯಿಗಳು ಯುದ್ಧತಂತ್ರದ ಭಾಗವಾಗಿ ಮಾತ್ರವಲ್ಲ; ಧಾರ್ಮಿಕ ಶ್ರದ್ಧೆಯ ಭಾಗವಾಗಿಯೂ ಇದ್ದರು. ದಕ್ಷಿಣ ಆಫ್ರಿಕಾದಲ್ಲೂ ಬುಡಕಟ್ಟು ಜನ, ಕ್ರೈಸ್ತರು ಹಾಗೂ ಮುಸ್ಲಿಮರು ಒಗ್ಗೂಡಿ ವರ್ಣಭೇದ ಆಳ್ವಿಕೆಯ ವಿರುದ್ಧ ಕಾದು ದೇಶವನ್ನು ಮುಕ್ತಗೊಳಿಸಿಕೊಂಡರು. ಎಎನ್‌ಸಿಯಲ್ಲಿ ಅಹಮದ್ ಕಥ್ರಡಾ ಹಾಗೂ ಬಿಳಿಯರಾದ ಡೆನಿಸ್ ಗೋಲ್ಡ್‌ಬರ್ಗ್, ಮಂಡೇಲಾರ ಆಪ್ತ ಸಂಗಾತಿಗಳಾಗಿದ್ದರು.

ಮೇಲ್ಕಾಣಿಸಿದ ವಿದ್ಯಮಾನಗಳಿಗೆ ವ್ಯತಿರಿಕ್ತವಾಗಿ ಒಂದೇ ಧರ್ಮವು ಏಕರಾಷ್ಟ್ರದ ಚೌಕಟ್ಟಿನಲ್ಲಿ ಜನರನ್ನು ಹಿಡಿದಿಡಲು ಸೋತಿರುವ ನಿದರ್ಶನಗಳಿವೆ. ಪೂರ್ವಪಾಕಿಸ್ತಾನ

ಎನಿಸಿದ್ದ ಬಾಂಗ್ಲಾದೇಶ–ಪಾಕಿಸ್ತಾನಗಳ ಬಹುತೇಕರ ಧರ್ಮ ಒಂದೇ ಆಗಿತ್ತು. ಆದರೆ ಎರಡೂ ಪ್ರಾಂತ್ಯಗಳ ಭಾಷೆ–ಸಂಸ್ಕೃತಿ ಬೇರೆಯಾಗಿದ್ದವು. ಟಾಗೂರರನ್ನು ಸಾಂಸ್ಕೃತಿಕ ನಾಯಕರೆಂದು ಭಾವಿಸಿದ್ದ ಬಾಂಗ್ಲಾದೇಶೀಯರು 'ನಮ್ಮ ಮೇಲೆ ಉರ್ದು ಹೇರಲಾಗುತ್ತಿದೆ, ಬಂಗಾಳಿಯನ್ನು ದಮನಿಸಲಾಗುತ್ತಿದೆ' ಎಂದು ಪ್ರತಿರೋಧಿಸಿದರು. ಪಾಕಿಸ್ತಾನದ ರಾಜಕೀಯ–ಆರ್ಥಿಕ–ಸಾಂಸ್ಕೃತಿಕ ಯಜಮಾನಿಕೆಯಿಂದ ಸ್ವತಂತ್ರಗೊಳ್ಳುವುದು ಅವರ ನಿಜವಾದ ಆಶಯವಾಗಿತ್ತು. ಅವರು ಟಾಗೂರರ 'ಆಮಾರ್ ಶೋನಾರ್ ಬಾಂಗ್ಲಾ ಆಮಿ ತೋಮೆ ಭಾಲುಬಸಿ' (ನನ್ನ ಚಿನ್ನದಂತಹ ಬಾಂಗ್ಲಾ, ನಿನ್ನನ್ನು ನಾನು ಪ್ರೀತಿಸುವೆ) ಹಾಡನ್ನು ರಾಷ್ಟ್ರಗೀತೆಯನ್ನಾಗಿ ಸ್ವೀಕರಿಸಿದರು. ಅದನ್ನು ರಚಿಸಿದ ಕವಿಯ ಧಾರ್ಮಿಕ ಹಿನ್ನೆಲೆ ಅವರಿಗೆ ತೊಡಕೆನಿಸಲಿಲ್ಲ.

## ೩

ಸಮಸ್ಯೆ ಇರುವುದು, ರಾಷ್ಟ್ರೀಯತೆಯ ಅಂಶಗಳಾದ ಭಾಷೆ ಜನಾಂಗ ಧರ್ಮ ಸಂಸ್ಕೃತಿಗಳು ಬಿಡುಗಡೆಗೆ ಬದಲಾಗಿ, ವಿಭಜನೆ, ತಾರತಮ್ಯ, ಯಜಮಾನಿಕೆ ಹಾಗೂ ಹಿಂಸೆಗಳಿಗೆ ಕಾರಣವಾಗುವುದು; ಅಸಹನೆ ಮತ್ತು ಹಿಂಸಾ ಸೃಷ್ಟಿಯಲ್ಲಿ ಮಧ್ಯಕಾಲೀನ ರಾಜಕೀಯ ವಿಸ್ತರಣಾ ಯುದ್ಧಗಳಿಗಿಂತ ಹೆಚ್ಚಿನ ಅನಾಹುತ ಎಸಗಿರುವುದು. ನಾಝಿ ರಾಷ್ಟ್ರೀಯತೆಯು ಜರ್ಮನಿಯಲ್ಲಿ ಯಹೂದಿಯರ ಸಾಮೂಹಿಕ ಹತ್ಯೆಗೆ ಕಾರಣವಾಯಿತು. ಆರ್ಯನ್ ಜನಾಂಗದ ಹೆಮ್ಮೆಯ ಆಯಾಮ ಪಡೆದಿದ್ದ ಈ ಹತ್ಯಾಕಾಂಡಕ್ಕೆ, ವಾಸ್ತವದಲ್ಲಿ ಜರ್ಮನಿಯ ಆರ್ಥಿಕ ವ್ಯವಸ್ಥೆಯಲ್ಲಿ ಯಹೂದಿಗಳು ಸಾಧಿಸಿದ್ದ ಹಿಡಿತ ಮುರಿವ ಉದ್ದೇಶವಿತ್ತು. ಚರಿತ್ರೆಯ ವ್ಯಂಗ್ಯವೆಂದರೆ, ಜನಾಂಗವಾದಿ / ಮತೀಯ ರಾಷ್ಟ್ರೀಯತೆಯ ಬಲಿಪಸುಗಳಾದ ಯಹೂದಿಗಳು, ಯಹೂದಿವಾದದ (ಝಿಯೊನಿಸಂ) ಆಧಾರದಲ್ಲಿ ಇಸ್ರೇಲ್ ರಾಷ್ಟ್ರ ಕಟ್ಟುತ್ತ, ಅದೇ ನೆಲದ ಮಕ್ಕಳಾದ ಅರಬರನ್ನು ಹತ್ತಿಕ್ಕುತ್ತಿರುವುದು.

ಮ್ಯಾನ್ಮಾರ್ ಹಾಗೂ ಶ್ರೀಲಂಕೆಯ ಮತೀಯ ರಾಷ್ಟ್ರೀಯವಾದಗಳಲ್ಲೂ ಇದೇ ವೈರುಧ್ಯವಿದೆ. ಹಿಂಸಾವಿರೋಧಿಯಾದ ಮತ್ತು ಕರುಣೆಯೇ ಜೀವಾಳವಾದ ಬೌದ್ಧ ಧರ್ಮವು, ಇಲ್ಲಿ ಬಹುಸಂಖ್ಯಾತರ ಮತೀಯವಾದವಾಗಿ ರೂಪಾಂತರಗೊಂಡಿದೆ. ಬೌದ್ಧಸನ್ಯಾಸಿಗಳು ಶ್ರೀಲಂಕೆಯಲ್ಲಿ ಹಿಂದೂ ಧಾರ್ಮಿಕ ಹಿನ್ನೆಲೆಯ ತಮಿಳರ ರಾಜಕೀಯ ಸ್ವಾಯತ್ತತೆಯನ್ನು ಹೊಸಕಿಹಾಕಲು ತಮ್ಮ ಸೈನಿಕರ ಜತೆಗೂಡಿದರು. ಮ್ಯಾನ್ಮಾರಿಯಲ್ಲಿ ರೊಹಿಂಗ್ಯಾ ಮುಸ್ಲಿಮರನ್ನು ಹೊರಹಾಕಲು ಬೌದ್ಧಭಿಕ್ಕುಗಳಲ್ಲಿ ಕೆಲವರು ಸೈನ್ಯಕ್ಕೆ ಕೈಜೋಡಿಸಿದರು. ಈ ಪ್ರಕರಣಗಳಲ್ಲಿ ತೋರಿಕೆಗೆ ಧರ್ಮಗಳು ಇರುವಂತೆ ಕಾಣುತ್ತದೆ. ನಿಜವಾಗಿ ಇರುವುದು, ಧರ್ಮವನ್ನು ರಾಷ್ಟ್ರೀಯತೆಗೆ ಜೋಡಿಸಿ ಅಧಿಕಾರ ಸಂಪತ್ತುಗಳ ಮೇಲೆ ಹಿಡಿತ ಸಾಧಿಸಬಯಸುವ ಬಹುಸಂಖ್ಯಾತವಾದ. ಮುಸ್ಲಿಂಲೀಗ್ ಮೂಲಕ

ಪ್ರತ್ಯೇಕ ರಾಷ್ಟ್ರವನ್ನು ಸಂಪಾದಿಸಿದ ಜಿನ್ನಾ, ಜದುನಾಥ ಮಂಡಲ್ ಅವರನ್ನು ಧಾರ್ಮಿಕ ವ್ಯವಹಾರಗಳುಳ್ಳ ಕಾನೂನು ಮಂತ್ರಿಯನ್ನಾಗಿ ಮಾಡಿದರು. ಆದರೂ ಧರ್ಮದ ಹೆಸರಿನ ಹಿಂಸೆಯನ್ನು ತಪ್ಪಿಸಲು ಅವರಿಗೆ ಸಾಧ್ಯವಾಗಲಿಲ್ಲ. ಭಾರತದಲ್ಲಿ ನೆಹರೂ ಹೊಸರಾಷ್ಟ್ರ ನಿರ್ಮಾಣದಲ್ಲಿ ಧರ್ಮಾತೀತ ನಿಲುವಿನ ಬುನಾದಿ ಹಾಕಿದರು. ಆದರೂ ಬಲಪಂಥೀಯ ರಾಷ್ಟ್ರೀಯವಾದವು ಭಾರತದ ಸಮಾಜ ಮತ್ತು ರಾಜಕಾರಣದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳುವುದು ತಪ್ಪಲಿಲ್ಲ. ಎಂತಲೇ ಈ ಎರಡೂ ದೇಶಗಳಲ್ಲಿ ತಮ್ಮನ್ನು ಧಾರ್ಮಿಕ ರಾಷ್ಟ್ರವಾದಿ ಎಂದು ಘೋಷಿಸಿಕೊಳ್ಳುವ ರಾಜಕಾರಣಿಗಳಿದ್ದಾರೆ. ವೈಚಾರಿಕತೆ ಕ್ಷೀಣವಾಗಿರುವ ಹಾಗೂ ಧರ್ಮವು ಭಾವಾವೇಶದ ಸಂಗತಿಯಾಗಿರುವ ಸಮಾಜಗಳಲ್ಲಿ, ಧರ್ಮವನ್ನು ರಾಷ್ಟ್ರೀಯತೆಯ ಜತೆ ಲಗತ್ತಿಸಿ ಜನಾಭಿಪ್ರಾಯ ರೂಪಿಸುವುದು, ಅಧಿಕಾರ ಹಿಡಿಯುವುದು ಸುಲಭ.

ಬಹುರೂಪಿಯೂ ಸಂಕೀರ್ಣವೂ ಆದ ಧರ್ಮಗಳಲ್ಲಿ ಎರಡು ಆಯಾಮಗಳಿರುತ್ತವೆ. ೧. ಅಲೌಕಿಕವಾದ ದೈವಿಕ ಶಕ್ತಿಯೊಂದರ ಜತೆ ಮಾನವ ಚೈತನ್ಯವನ್ನು ಕೂಡಿಸುವ ಆಯಾಮ. ಇಲ್ಲಿ ಧರ್ಮವು ತನ್ನ ಸಾಂಪ್ರದಾಯಿಕ ಸೀಮೆಗಳನ್ನು ಉಲ್ಲಂಘಿಸಿ ಇತರೆ ಧರ್ಮದ ಜನರನ್ನೂ ಒಳಗೊಳ್ಳುವ ಆಯಾಮ ಹೊಂದಿರುತ್ತದೆ. ಅದು ಆಧ್ಯಾತ್ಮವೂ ಆಗುತ್ತದೆ. ೨. ನಿರ್ದಿಷ್ಟ ಸಮುದಾಯದ ಅಥವಾ ವರ್ಗದ ಹಿತಾಸಕ್ತಿಗಾಗಿ ಬೇರೆ ಧರ್ಮದವರನ್ನು ಎದುರಾಳಿಯಾಗಿ ಭಾವಿಸುವ, ದ್ವೇಷಿಸುವ, ನಾಶಮಾಡುವ ಆಯಾಮ. ರಾಷ್ಟ್ರೀಯತೆಯ ಪರಿಕಲ್ಪನೆ ಇವೆರಡರಲ್ಲಿ ಯಾವುದನ್ನು ಬಳಸಿಕೊಳ್ಳುತ್ತದೆ ಎಂಬುದು ನಿರ್ಣಾಯಕ ಸಂಗತಿ. ನಾಝಿಗಳು ತಮ್ಮ ಜನಾಂಗವಾದಿ ರಾಷ್ಟ್ರೀಯವಾದಕ್ಕೆ ಕ್ರೈಸ್ತ ಧರ್ಮದ ಕರುಣೆಯ ತತ್ವವನ್ನು ಬಳಸಲಿಲ್ಲ. ಭಗವದ್ಗೀತೆಯಿಂದ ಪ್ರೇರಣೆ ಪಡೆಯುತ್ತಿದ್ದ ಗಾಂಧಿಯ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ, ಹಿಂದೂ ಧರ್ಮದ ಉದಾರವಾದಿ ಗುಣಗಳು ಹೆಚ್ಚಿದ್ದವು. ಇದು ಬಹುಧಾರ್ಮಿಕ ದೇಶವಾದ ಭಾರತದಲ್ಲಿ ಸೂಕ್ತವೂ ಅಗತ್ಯವೂ ಆಗಿತ್ತು. ಭಗವದ್ಗೀತೆಯಿಂದ ಪ್ರೇರಣೆ ಪಡೆದ ತಿಲಕರ ರಾಷ್ಟ್ರವಾದದಲ್ಲಿ ಗಣೇಶೋತ್ಸವದಂತಹ 'ಧಾರ್ಮಿಕ' ಅಂಶಗಳಿದ್ದವು. ಜಾತಿಪದ್ಧತಿ ಮತ್ತು ಬ್ರಾಹ್ಮಣವಾದಗಳ ಸಮರ್ಥಕರಾಗಿದ್ದ ಅವರಲ್ಲಿ, ಸ್ತ್ರೀಶಿಕ್ಷಣ ಹಾಗೂ ಅಸ್ಪೃಶ್ಯತಾ ನಿವಾರಣಾ ಬಗ್ಗೆ ಸಹಾನುಭೂತಿ ಇರಲಿಲ್ಲ. ಸಾಮಾಜಿಕ ಸಮಾನತೆಯ ಪರವಾಗಿದ್ದ ಎಲ್ಲ ಸುಧಾರಣ ಚಳುವಳಿಗಳನ್ನು ಅವರು ಖಂಡಿಸುತ್ತಿದ್ದರು.

ಇದೇ ಹೊತ್ತಲ್ಲಿ ಸಾವರ್ಕರ್ ಹಾಗೂ ಗೋಳ್ವಾಳ್ಕರ್, ಮೇಲ್ಜಾತಿಯ ಹಿತಾಸಕ್ತಿಯುಳ್ಳ ಹಿಂದುತ್ವದ ರಾಷ್ಟ್ರೀಯತೆಗೆ, ತಮ್ಮ ಪ್ರಖರ ಬುದ್ಧಿಮತ್ತೆ ಮತ್ತು ದೂರಾಲೋಚನೆಯಿಂದ ಭದ್ರವಾದ ಸೈದ್ಧಾಂತಿಕ ನೆಲೆ ಒದಗಿಸಿದರು. ಈ ರಾಷ್ಟ್ರೀಯತೆಯು ತನ್ನನ್ನು ಹಿಂದುಗಳ ಹಿತರಕ್ಷಕನೆಂದು ಕರೆದುಕೊಂಡಿತು. ಮಾತ್ರವಲ್ಲ, ಹೊಸರಾಷ್ಟ್ರ ನಿರ್ಮಾಣದಲ್ಲಿ ಕ್ರೈಸ್ತರನ್ನೂ ಮುಸ್ಲಿಮರನ್ನೂ ಒಳಶತ್ರುಗಳೆಂದು ಘೋಷಿಸಿತು. ಇಲ್ಲಿನ ಹಿಂದೂರಾಷ್ಟ್ರದ ಪರಿಕಲ್ಪನೆಗೆ

೧೯ನೇ ಶತಮಾನದೊಳಗೆ ಮಹಾರಾಷ್ಟ್ರ ಮತ್ತು ಬಂಗಾಳದಲ್ಲಿ ರೂಪುಗೊಂಡಿದ್ದ ಮತೀಯ ರಾಷ್ಟ್ರೀಯವಾದಿ ಚಿಂತನೆಗಳ ಪರಂಪರೆಯಿತ್ತು. ಇದರ ಎಳೆಗಳನ್ನು ಬಂಕಿಮಚಂದ್ರ ಹಾಗೂ ಹರಿನಾರಾಯಣ ಆಪ್ಟೆಯವರ ಕಾದಂಬರಿಗಳಲ್ಲಿ ಕಾಣಬಹುದು. ಬಂಕಿಮರ 'ಆನಂದಮಠ' ಕಾದಂಬರಿಯಲ್ಲಿರುವ 'ವಂದೇಮಾತರಂ' ಹಾಡು, ಮೂಲತಃ ಕಾಳೀಸ್ತುತಿ. ಇದು ರಾಷ್ಟ್ರೀಯ ಚಳುವಳಿಯಲ್ಲಿ ತನ್ನ ಮತೀಯ ನೆಲೆ ಮೀರಿಕೊಂಡು ಬಳಕೆಯಾಗಬಲ್ಲ ಹಾಡಾಗಿತ್ತು. ಆದರೆ ಜನರ ರಾಷ್ಟ್ರಪ್ರೇಮ ಅಳೆಯುವ ಮಾನದಂಡ ಮಾಡಿದಾಗೆಲ್ಲ, ಮತೀಯವಾದಿ ಗುಣವನ್ನು ಪಡೆದುಕೊಂಡಿತು. ಈಗಲೂ 'ವಂದೇಮಾತರಂ' ಒಪ್ಪುವ ಕೆಲವರು 'ಧಾರ್ಮಿಕ' ಅಂಶಗಳಿಲ್ಲದ ಟಾಗೂರರ 'ಜನಗಣಮನ'ವನ್ನು ಒಪ್ಪುವುದಿಲ್ಲ. ಸಮಕಾಲೀನರಾದ ಇಬ್ಬರು ಬಂಗಾಳಿ ಲೇಖಕರು ರಚಿಸಿದ ಈ ಗೀತೆಗಳು, ವಿರುದ್ಧ ನೆಲೆಯ ರಾಷ್ಟ್ರವಾದಗಳಿಗೆ ಕಾರಣವಾಗಿದ್ದು ವಿಚಿತ್ರ. ಹಿಂದುತ್ವದ ರಾಷ್ಟ್ರವಾದವು ಈಗ್ಲೂ ಆಳದಲ್ಲಿ ಭಾರತದ ರಾಷ್ಟ್ರಧ್ವಜ ರಾಷ್ಟ್ರಗೀತೆ ರಾಷ್ಟ್ರಪಿತ ಪರಿಕಲ್ಪನೆಗಳ ಬಗ್ಗೆ ತಕರಾರು ಹೊಂದಿದೆ. ಭಗವಾಧ್ವಜವು ರಾಷ್ಟ್ರಧ್ವಜ ಆಗಬೇಕೆಂದು ಆಶಿಸುವ ಅದು, ಚಾಲ್ತಿಯಲ್ಲಿರುವ ಧ್ವಜದಲ್ಲಿರುವ ತ್ರಿವರ್ಣ ಹಾಗೂ ಬೌದ್ಧಧರ್ಮದ ಸಂಕೇತವಾದ ಅಶೋಕಚಕ್ರಗಳನ್ನು ಒಪ್ಪಿಲ್ಲ. ಅದರ ರಾಷ್ಟ್ರೀಯತೆಯ ಧಾರ್ಮಿಕ ತಿರುಳಿನಲ್ಲಿ ದಲಿತ ಶೂದ್ರ ಬುಡಕಟ್ಟು 'ಧರ್ಮ'ಗಳ ಅಂಶಗಳಿಲ್ಲ. ಬ್ರಾಹ್ಮಣ ವಾದಿಯಾಗಿರುವ ಅದರ 'ಧರ್ಮ'ದ ತಿರುಳಿನಲ್ಲಿ ಮೇಲ್ವರ್ಗ ಮತ್ತು ಉಚ್ಚ ಜಾತಿಯ ಗುಪ್ತ ಹಿತಾಸಕ್ತಿಗಳಿವೆ.

ಮತೀಯ ರಾಷ್ಟ್ರವಾದವು ಧರ್ಮದಿಂದ ಪ್ರೇರಣೆ ಪಡೆಯುವಾಗ ಸಾಮಾನ್ಯವಾಗಿ ಅಲ್ಲಿರುವ ಸಂಕುಚಿತವಾದಿ ಧಾರೆಗಳಿಗೆ ಹೋಗುತ್ತದೆ. ಇಸ್ಲಾಮಿಕ್ ರಾಜ್ಯ ಕಟ್ಟುತ್ತೇವೆಂದು ತುಪಾಕಿ ಹಿಡಿದಿರುವ ಐಎಸ್ ಉಗ್ರಗಾಮಿಗಳು, ಪೈಗಂಬರರ ಹೆಸರನ್ನೂ ಕುರಾನಿನ ಮಂತ್ರಗಳನ್ನು ಬಳಸುತ್ತಿರಬಹುದು. ಆದರೆ ಅವರಲ್ಲಿ ಇಸ್ಲಾಮಿನ ಮಾನವೀಯ ಮತ್ತು ಉದಾರವಾದಿ ಧಾರೆಗಳಿಲ್ಲ. ಪ್ರೇಮತತ್ವದ ಸೂಫಿ ದರ್ಶನವಿಲ್ಲ. ತಾಲಿಬಾನಿಗಳು ಆಫಘಾನಿಸ್ಥಾನವನ್ನು ಧರ್ಮದ ಆಧಾರದಲ್ಲಿ ಕಟ್ಟಲು ಹೊರಟು, ಅಲ್ಲಿದ್ದ ಬೌದ್ಧ ಮತ್ತು ಸೂಫಿ ಕುರುಹುಗಳನ್ನೆಲ್ಲ ನಾಶಮಾಡಿದರು. ಭಾರತದಲ್ಲಿ ಮನುಧರ್ಮಶಾಸ್ತ್ರದ ಆಧಾರದಲ್ಲಿ ಸಂವಿಧಾನ ಪುನಾರಚನೆ ಆಗಬೇಕು ಎಂಬ ವಾದಗಳಲ್ಲೂ ಇದೇ ಸಮಸ್ಯೆಯಿದೆ. ತಿಲಕ್ ಮತ್ತು ಬಂಕಿಮರ ರಾಷ್ಟ್ರವಾದದ ಅನೇಕ ಎಳೆಗಳನ್ನು ಕನ್ನಡದಲ್ಲಿ ಮುಂದುವರೆಸಿದ ಲೇಖಕರಲ್ಲಿ ಗಳಗನಾಥ, ಡಿವಿಜಿ ಹಾಗೂ ಭೈರಪ್ಪನವರು ಮುಖ್ಯರು. ಮರಾಠಿ ಕಾದಂಬರಿಕಾರ ಹರಿನಾರಾಯಣ ಆಪ್ಟೆಯವರ ಪ್ರಭಾವದಿಂದ, ಚರಿತ್ರೆಯ ರಾಜಕೀಯ ಯುದ್ಧಗಳನ್ನು ಧಾರ್ಮಿಕ ಯುದ್ಧವೆಂದು ಗ್ರಹಿಸಿ ಕಾದಂಬರಿ ಬರೆದ ಗಳಗನಾಥರು, ಬ್ರಾಹ್ಮಣವಾದಿ ರಾಷ್ಟ್ರೀಯತೆಗೆ ಬುನಾದಿ ಹಾಕಿದರು; ಡಿವಿಜಿ ತಮ್ಮ ಭಗವದ್ಗೀತೆ ಹಾಗೂ ಸಂಸ್ಕೃತಿ ವ್ಯಾಖ್ಯಾನಗಳಲ್ಲಿ ಬ್ರಾಹ್ಮಣವಾದವನ್ನು ಸಾಂಸ್ಕೃತಿಕ

ರಾಷ್ಟ್ರೀಯತೆಗೆ ಜೋಡಿಸಿದರು. ಬಲಪಂಥೀಯ ರಾಜಕಾರಣವು ಉಪನಿಷತ್ತಿನ ಉದಾರವಾದಿ ವಿಶ್ವಾತ್ಮಕ ಚಿಂತನೆಗಳಿಗಿಂತ, ಮನುಸ್ಮೃತಿ ಮತ್ತು ಚಾಣಕ್ಯರಂತಹ ವರ್ಣಾಶ್ರಮಿಗಳಿಂದ ಪ್ರೇರಣೆ ಪಡೆಯಲಿಚ್ಛಿಸುತ್ತದೆ; ಶ್ರೇಷ್ಠ ಸಂತರು ಕವಿಗಳೂ ಆದ ಬಸವಣ್ಣ ಅಲ್ಲಮಪ್ರಭು ಕಬೀರ ಶಿಶುನಾಳ ಏಕನಾಥ ರಮಣ ರವಿದಾಸ್ ಕುವೆಂಪು ಪರಮಹಂಸರನ್ನು ನಿರ್ಲಕ್ಷಿಸುತ್ತದೆ. ವಿವೇಕಾನಂದರನ್ನು ಬಳಸಿದರೂ ಬಡವರ ಮತ್ತು ಪುರೋಹಿತಶಾಹಿಗಳ ಬಗ್ಗೆ ಅವರಾಡಿರುವ ಕ್ರಾಂತಿಕಾರಕ ವಿಚಾರಗಳನ್ನು ಮುಟ್ಟುವುದಿಲ್ಲ. ಉದಾರವಾದಿ ಧಾರ್ಮಿಕ ರಾಷ್ಟ್ರವಾದಿಯಾಗಿದ್ದ ಗಾಂಧೀ ಚಿಂತನೆ ಭಾರತವನ್ನು ಹಿಂದೂರಾಷ್ಟ್ರ ಕಟ್ಟುವ ಹಾದಿಯ ತೊಡರೆಂದು ಭಾವಿಸುತ್ತದೆ. ಧರ್ಮಾತೀತ ರಾಷ್ಟ್ರ ಕಲ್ಪನೆಯಿದ್ದ ನೆಹರೂರನ್ನು ಖಳನಾಯಕನೆಂದು ಚಿತ್ರಿಸುತ್ತದೆ. ಎಲ್ಲ ಮತೀಯ ರಾಷ್ಟ್ರೀಯವಾದಗಳು ಬಹುರೂಪಿ ಧರ್ಮದಲ್ಲಿರುವ ಸಂಕುಚಿತ ಧಾರೆಗಳನ್ನು ಆಶ್ರಯಿಸುತ್ತ, ಆ ಧರ್ಮಗಳನ್ನೇ ಲೋಕದ ಕಣ್ಣಲ್ಲಿ ಕುಬ್ಜಗೊಳಿಸುತ್ತವೆ.

ಮತೀಯ ರಾಷ್ಟ್ರವಾದಗಳ ಇನ್ನೊಂದು ವರ್ತನೆಯೆಂದರೆ, ನಿರ್ದಿಷ್ಟ ಸಂಕೇತ ಮತ್ತು ಆಚರಣೆಗಳನ್ನು ರಾಷ್ಟ್ರೀಯತೆಗೆ ಜೋಡಿಸಿ ಪವಿತ್ರೀಕರಿಸಿ ಪ್ರಶ್ನಾತೀತಗೊಳಿಸುವುದು; ಆಯಾ ಸಮಾಜದಲ್ಲಿರುವ ಉಚ್ಚವರ್ಗ ಮತ್ತು ಮೇಲ್ಜಾತಿ ಹಿಸಾತಕ್ತಿಗಳಿಗೆ ಪೂರಕವಾಗಿರುವ ಈ ಸಂಕೇತ ಮತ್ತು ಆಚರಣೆಗಳನ್ನು ಒಪ್ಪದವರನ್ನು ರಾಷ್ಟ್ರವಿರೋಧಿಗಳೆಂದು ಕರೆಯುವುದು; ಇಂತಹ 'ರಾಷ್ಟ್ರವಿರೋಧಿ'ಗಳನ್ನು ಗುರುತಿಸುವುದು, ಹಿಡಿಯುವುದು ಮತ್ತು ಶಿಕ್ಷಿಸುವುದು. ಇದೊಂದು ಬೇಟೆ. ರಾಜಕೀಯ ಪ್ರಭುತ್ವದ ಬೆಂಬಲ ಸಿಕ್ಕರೆ ಈ ಬೇಟೆ ಮತ್ತಷ್ಟು ಬಿರುಸನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಸ್ಥಳಗಳನ್ನು ಕೆಡಹುವ ಅಥವಾ ಕಟ್ಟುವ, ಪವಿತ್ರೀಕರಿಸಿದ ಸಂಕೇತಗಳನ್ನು ರಕ್ಷಿಸುವ ಕೆಲಸಗಳನ್ನು ಗಮನಿಸಬೇಕು; ಗೋರಕ್ಷಣೆಯ ಅಥವಾ ಪ್ರವಾದಿ–ಕುರಾನ್ ಪಾವಿತ್ರ್ಯ ಕಾಪಾಡುವ ಹೆಸರಲ್ಲಿ ನಡೆಯುತ್ತಿರುವ ಬೀದಿ ವಿಚಾರಣೆ–ಬೀದಿಶಿಕ್ಷೆಗಳನ್ನು ಗಮನಿಸಬೇಕು. ಹಲವು ಧರ್ಮ ಸಂಸ್ಕೃತಿ ಭಾಷೆಗಳಿರುವ ಸಮಾಜಗಳಲ್ಲಿ, ಅಧಿಕಾರಸ್ಥ ಸಮುದಾಯಕ್ಕೆ/ವರ್ಗಕ್ಕೆ ಸೇರಿದ ಸಂಕೇತ ಅಥವಾ ಸಿದ್ಧಾಂತವನ್ನು ರಾಷ್ಟ್ರನಿಷ್ಠೆ ಅಳೆವ ಒರೆಗಲ್ಲಾಗಿಸಿದರೆ, ಗೊಂದಲ ಹುಟ್ಟುತ್ತದೆ; ವಿಭಿನ್ನ ಪಂಗಡ ಮತ್ತು ಆಲೋಚನ ಕ್ರಮಗಳ ನಡುವೆ ದೈನಿಕ ಬದುಕಿನಲ್ಲಿ ಸಹಜವಾಗಿ ಹುಟ್ಟುವ ಭಿನ್ನಮತಗಳು ರಾಷ್ಟ್ರ ನಿರ್ಮಾಣದ ಅಡ್ಡಿಯಂತೆ ತೋರತೊಡಗುತ್ತವೆ. ಕೆಲವು ಇಸ್ಲಾಮಿಕ್ ದೇಶಗಳಲ್ಲಿ ಮುಸ್ಲಿಮೇತರ ಸಮುದಾಯಗಳನ್ನು ಮಾತ್ರವಲ್ಲ, ಮುಸ್ಲಿಮರಲ್ಲೇ ಇರುವ ಪಂಗಡಗಳನ್ನು ಮತೀಯ ರಾಷ್ಟ್ರೀಯತೆ ಚೌಕಟ್ಟಿನಿಂದ ಹೊರಗಿಡಲಾಗಿದೆ. ಸುನ್ನಿಗಳು ಪ್ರಬಲವಾಗಿರುವ ಪಾಕಿಸ್ತಾನದಲ್ಲಿ ಶಿಯಾ, ಅಹಮದಿಯಾ ಹಾಗೂ ಭಾರತದಿಂದ ವಲಸೆ ಹೋದ ಮೊಹಜಿರ್ ಮುಸ್ಲಿಮರ ರಾಷ್ಟ್ರನಿಷ್ಠೆಯನ್ನು ಅನುಮಾನಿಸಲಾಗುತ್ತದೆ. ಅನೇಕ ದೇಶಗಳಲ್ಲಿ ಕುರಾನ್ ಮತ್ತು ಪೈಗಂಬರ ಪಾವಿತ್ರ್ಯಕ್ಕೆ

ಚ್ಯುತಿ ತಂದವರಿಗೆ ಮೃತ್ಯುದಂಡ ವಿಧಿಸುವ ಕಾನೂನುಗಳಿವೆ. ಆದರೆ ಈ ಕಾನೂನುಗಳ ಮೂಲಕ ಮುಸ್ಲಿಮೇತರರನ್ನು ಮಾತ್ರವಲ್ಲ, ಮುಸ್ಲಿಮರಲ್ಲೇ ಇರುವ ಉದಾರವಾದಿಗಳನ್ನೂ ಮುಕ್ತಚಿಂತಕರನ್ನೂ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲಾಗುತ್ತದೆ.

ಪಕ್ಷ, ಪಕ್ಷನಾಯಕ ಹಾಗೂ ಸರ್ಕಾರಗಳಿಗೆ ಅತೀತವಾಗಿ ಯಾವ ಧಾರ್ಮಿಕ ವ್ಯವಸ್ಥೆಯೂ ಇರಬಾರದು ಎಂಬುದು ನಾಝಿಗಳ ನಿಲುವಾಗಿತ್ತು. ಅವರು ಹಿಟ್ಲರನನ್ನು ದೇವಕುಮಾರಿ ಎಂದು ಬಿಂಬಿಸಬಲ್ಲ ಪರ್ಯಾಯ ಕ್ರೈಸ್ತಧರ್ಮವನ್ನೇ ರೂಪಿಸಲು ಯತ್ನಿಸಿದರು. ಅವರಿಗೆ ಪ್ರಾಟೆಸ್ಟಂಟ್ ಚರ್ಚಿನ ಬಗ್ಗೆ ಮೃದುಧೋರಣೆಯಿತ್ತು. ಇದಕ್ಕೆ ಪೂರಕವಾಗಿ ಪ್ರಾಟೆಸ್ಟಂಟ್ ಚರ್ಚೊಂದು ಹಿಟ್ಲರನನ್ನು ದೇವದೂತನೆಂದೂ ಕರೆಯಿತು. ಉಳಿದಂತೆ ಕೆಥೋಲಿಕ್ ಇತ್ಯಾದಿ ಕ್ರೈಸ್ತಪಂಥಗಳು ಅವನ ಕಿರುಕುಳವನುಂಡವು. ಯುದ್ಧತಂತ್ರದ ಭಾಗವಾಗಿ ಧರ್ಮವನ್ನು ಉಪಕರಣವಾಗಿಸಿಕೊಳ್ಳುವ ಮತೀಯ ರಾಷ್ಟ್ರವಾದವು. ಧರ್ಮಗಳಲ್ಲಿರುವ ಮಾನವೀಯತೆ, ಕರುಣೆ, ಸಹಬಾಳ್ವೆ, ಪ್ರಭುತ್ವ ವಿರೋಧಿಯಂತಹ ಜೀವಪರ ಅಂಶಗಳನ್ನು ಕಳೆದುಹಾಕುತ್ತದೆ; ಧರ್ಮವನ್ನು ಅಧಿಕಾರಸ್ಥರಿಗೆ ಬೇಕಾದ ಕೈದುವನ್ನಾಗಿಸಿ ಕೊಡುತ್ತದೆ; ಸಾಂಸ್ಕೃತಿಕ ಬಹುತ್ವವಿರುವ ದೇಶಗಳಲ್ಲಿ ಸರಿಪಡಿಸಲಾಗದ ಗಾಯಗಳನ್ನು ಮಾಡುತ್ತದೆ.

ಧರ್ಮದ ಹೆಸರಲ್ಲಿ ರಾಷ್ಟ್ರವಾದ ಕಟ್ಟುವ ಸಿದ್ಧಾಂತಿಗಳು ಕೆಲವೊಮ್ಮೆ ವೈಯಕ್ತಿಕವಾಗಿ ಧಾರ್ಮಿಕರಾಗಿ ಇರುವುದಿಲ್ಲ. ಭಾರತದಲ್ಲಿ ಮತೀಯ ರಾಷ್ಟ್ರವಾದಕ್ಕೆ ಬುನಾದಿ ಹಾಕಿದ ಸಾವರ್ಕರ್ ಬುದ್ಧಿವಾದಿ ಚಿಂತಕರಾಗಿದ್ದರು. ಗೋವನ್ನು ದೈವವೆಂದು ಅವರು ಒಪ್ಪಲಿಲ್ಲ. ಹಿಂದೂ ಫಾರಸಿ ಶಿಯಾ ಪಂಥಗಳ ಮಿಶ್ರ ಹಿನ್ನೆಲೆಯಿಂದ ಬಂದ ಗುಜರಾತಿ ಜಿನ್ನಾ, ವೈಯಕ್ತಿಕವಾಗಿ ನಾಸ್ತಿಕರು. ಅವರಿಗೆ ಇಂಗ್ಲಿಶಿನಷ್ಟು ಉರ್ದು ಪ್ರಿಯವಾಗಿರಲಿಲ್ಲ. ಪಾಕಿಸ್ತಾನದ ಜನ ಅವರನ್ನು 'ಖ್ವಾಯದೇ ಆಜಂ' (ಮಹಾನಾಯಕ) ಎಂದು ಒಪ್ಪಿಕೊಂಡಿದ್ದರು. ಆದರೆ ಸುನ್ನಿ ಸಂಪ್ರದಾಯವಾದಿಗಳು ಅವರ ಧಾರ್ಮಿಕತೆಯನ್ನು ಸದಾ ಪ್ರಶ್ನಿಸುತ್ತಲಿದ್ದರು. ಜಿನ್ನಾರ ಸೆಕ್ಯುಲರಿಸಂ ಬಗ್ಗೆ ಹೇಳಿಕೆಕೊಟ್ಟು ರಾಜಕೀಯವಾಗಿ ದುಬಾರಿ ಬೆಲೆತ್ತೆತ್ತ ಅದ್ವಾನಿಯವರು, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮತೀಯ ರಾಷ್ಟ್ರವಾದಕ್ಕೆ ಒಂದು ಮೊನಚನ್ನೂ ಒದಗಿಸಿದವರು. ಜಿನ್ನಾರಂತೆಯೇ ಕರಾಚಿ ಮೂಲಿಗರಾದ ಅವರೂ ಧಾರ್ಮಿಕ ವ್ಯಕ್ತಿಯಲ್ಲ. ಆದರೆ ಮತೀಯ ರಾಷ್ಟ್ರೀಯತಾ ಪರಿಕಲ್ಪನೆಗೆ ಗುಡಿಕಟ್ಟುವ ಸಂಕಲ್ಪ ಜೋಡಿಸಿದರು; ರಾಷ್ಟ್ರೀಯವಾದಿ ಎಂದುಕೊಳ್ಳುವ ತಮ್ಮ ಪಕ್ಷಕ್ಕೆ ಸಾಮಾಜಿಕ ರಾಜಕೀಯ ವಿಸ್ತರಣೆ ನೀಡಿ ಅಧಿಕಾರ ದೊರಕಿಸಿಕೊಟ್ಟರು.

ಬಹುತೇಕ ಜನಾಂಗವಾದಿ/ಮತೀಯವಾದಿ ರಾಷ್ಟ್ರೀಯತೆಗಳು ನಿರ್ದಿಷ್ಟ ಹಗೆತನದ ಪರಿಕಲ್ಪನೆಯಲ್ಲಿ ರೂಪುಗೊಳ್ಳುತ್ತವೆ. ನಾಝಿಗಳು ರಾಜಕೀಯವಾಗಿ ಕಮ್ಯುನಿಸ್ಟರನ್ನು, ಧಾರ್ಮಿಕವಾಗಿ ಯಹೂದಿಗಳನ್ನು, ನೈತಿಕವಾಗಿ ಲೈಂಗಿಕ ಅಲ್ಪಸಂಖ್ಯಾತರನ್ನು,

ಸಮುದಾಯಗಳಾಗಿ ಅಲೆಮಾರಿಗಳನ್ನು ಹಗೆಗಳೆಂದು ಘೋಷಿಸಿದ್ದರು. ಇದರಂತೆ, ಭಾರತ–ಪಾಕಿಸ್ತಾನಗಳಲ್ಲೂ ನೆರೆದೇಶವನ್ನು ದ್ವೇಷಿಸುವ, ಅದರ ಮೇಲೆ ಯುದ್ಧ ಹೂಡುವ, ಅದನ್ನು ಧರ್ಮಯುದ್ಧವೆಂದು ಹೇಳುವ ಜನರಿದ್ದಾರೆ. ವಾಸ್ತವವಾಗಿ ಆಳುವವರ್ಗಗಳು ಜನರಲ್ಲಿ ಇಂತಹ ಪ್ರತೀಕಾರಿ ರಾಷ್ಟ್ರೀಯತಾ ಮನೋಭಾವವನ್ನು ವ್ಯವಸ್ಥಿತವಾಗಿ ಬಿತ್ತುತ್ತವೆ. ಅದರಲ್ಲೂ ಜನಪ್ರಿಯತೆ ಕುಸಿದಾಗೆಲ್ಲ ತಮ್ಮನ್ನು ರಾಷ್ಟ್ರೀಯನೆಂದೊ ಧರ್ಮರಕ್ಷಕನೆಂದೊ ಬಿಂಬಿಸಿಕೊಂಡು ಗಡಿಯುದ್ಧ ಆರಂಭಿಸುತ್ತವೆ. ಎಲ್ಲ ............ ರಾಷ್ಟ್ರ ಕಟ್ಟುವುದಕ್ಕೆ ಶಸ್ತ್ರಾಸ್ತ್ರ ಮತ್ತು ಆಕ್ರಮಣಶೀಲ ಸೈನಿಕ ಸಂಸ್ಕೃತಿ ಅನಿವಾರ್ಯವೆಂದು ನಂಬಿಸುತ್ತವೆ. ಜನರ ತೆರಿಗೆ ಹಣವನ್ನು ಶಸ್ತ್ರಖರೀದಿಯ ಹೆಸರಲ್ಲಿ ಶಸ್ತ್ರಾಸ್ತ್ರ ಉತ್ಪಾದಕ ದೇಶಗಳಿಗೆ ಸುರಿವುದಾಗಲಿ, ಒಂದೇ ದೇಶ ತನಗೂ ತನ್ನ ಎದುರಾಳಿ ದೇಶಕ್ಕೂ ಶಸ್ತ್ರ ಸರಬರಾಜು ಮಾಡುವುದಾಗಲಿ, ವೈರುಧ್ಯವೆಂದು ಅವಕ್ಕೆ ಅನಿಸುವುದಿಲ್ಲ. ರಾಷ್ಟ್ರವನ್ನು ಮುನ್ನಡೆಸಲು ಕಠಿಣ ನಿರ್ಧಾರ ತೆಗೆದುಕೊಳ್ಳಬಲ್ಲ ಬಲಿಷ್ಠ ಸೈನಿಕ ಸಂಸ್ಕೃತಿಯ ಸರ್ವಾಧಿಕಾರಿಗಳನ್ನು ಅವು ಸೃಷ್ಟಿಸಿಕೊಳ್ಳುತ್ತವೆ. ಇಂತಹ ಸರ್ವಾಧಿಕಾರಿಗಳ ಸೃಷ್ಟಿಯು ಏಕದೇವಾರಾಧಕ ಧರ್ಮ ಮತ್ತು ರಾಜಪ್ರಭುತ್ವಗಳು ಏಕೀಭವಿಸಿರುವ ದೇಶಗಳಲ್ಲಿ, ಮೌಢ್ಯ, ಅನಕ್ಷರತೆ ಜಾತಿಪದ್ಧತಿಯುಳ್ಳ ಸಮಾಜಗಳಲ್ಲಿ ಮತ್ತೂ ಸುಲಭ. ಇಂಥಲ್ಲಿ ರಾಷ್ಟ್ರೀಯವಾದವು ಆಡಳಿತ ಪಕ್ಷ, ಅದರ ಸಿದ್ಧಾಂತ, ಸರ್ಕಾರ ಮತ್ತು ನಾಯಕರನ್ನು ರಾಷ್ಟ್ರದ ಜತೆ ಏಕೀಕರಿಸುತ್ತದೆ. ರಾಷ್ಟ್ರವನ್ನು ದೈವೀಕರಿಸುತ್ತದೆ – 'ರಾಷ್ಟ್ರದೇವೋಭವ' ಎಂದು. ಆಗ ಸರ್ಕಾರದ ಅಥವಾ ಅದರ ನಾಯಕನ ವಿಮರ್ಶೆ ರಾಷ್ಟ್ರವಿರೋಧಿ ಕೃತ್ಯವಾಗುತ್ತದೆ; ಪ್ರಜಾಪ್ರಭುತ್ವದ ತಿರುಳಾದ ಭಿನ್ನಮತ–ಸಂವಾದಗಳು ಅಪರಾದವಾಗುತ್ತವೆ. ಅದರ ನಿಲುವನ್ನು ಒಪ್ಪದವರು – ವಿಮರ್ಶಿಸುವವರು 'ಅನ್ಯ' ಧರ್ಮೀಯರಿಗೆ ಹುಟ್ಟಿದವರು ಎನಿಸಿಕೊಳ್ಳುವರು. ಅವರಿಗೆ 'ಅನ್ಯ' ಧರ್ಮದ ಹೆಸರನ್ನು ಇಡಲಾಗುವುದು. ಆಗ ರಾಜಕೀಯ – ಸೈದ್ಧಾಂತಿಕ ಭಿನ್ನಮತ ಹೊಸಕಿ ಹಾಕುವುದು ಮತ್ತು ಕೊಲ್ಲುವುದು ರಾಷ್ಟ್ರದ ಹಿತಕ್ಕಾಗಿ ಕೈಗೊಂಡ ಕ್ರಮವೆನಿಸುವುದು. ಮತೀಯ ರಾಷ್ಟ್ರವಾದಗಳು ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಿದ್ದೂ ಅದರ ಮೌಲ್ಯಗಳನ್ನು ಕೊಲ್ಲುವುದು ಹೀಗೆ.

ಮತೀಯ – ಜನಾಂಗವಾದಿ ರಾಷ್ಟ್ರೀಯತೆ ಹುಟ್ಟಿಸುವ ಭೀತಿಪ್ರಜ್ಞೆಯು, ಕೆಲವು ಸಮುದಾಯಗಳಲ್ಲಿ ನಾಟಕೀಯ ವರ್ತನೆಗಳನ್ನು ಹುಟ್ಟುಹಾಕುತ್ತದೆ. ಭಾರತದಲ್ಲಿ ಮುಸ್ಲಿಮ್ ಒಡೆತನದಲ್ಲಿರುವ ಟ್ರಾವಲ್ಸು ಅಂಗಡಿ ಹೋಟೆಲ್ ಗರಾಜುಗಳು 'ನ್ಯಾಷನಲ್' 'ಜೈಹಿಂದ್' 'ಭಾರತ್' ಮುಂತಾದ ಹೆಸರು ಇಟ್ಟುಕೊಳ್ಳುವುದನ್ನು ಗಮನಿಸಬೇಕು. ಭಾರತದ ರಾಷ್ಟ್ರೀಯ ಹೋರಾಟಗಳಲ್ಲಿ ಮುಸ್ಲಿಮರ ಪಾತ್ರವನ್ನು ವಿವರಿಸುವ ಕೃತಿಗಳು ಪ್ರಕಟವಾಗುವುದೂ ಇದರ ಭಾಗವೇ. ರಾಮೇಶ್ವರಂನಲ್ಲಿ ಈಚೆಗೆ ನಿರ್ಮಿಸಲಾದ ಅಬ್ದುಲ್ ಕಲಾಮರ ಪ್ರತಿಮೆಯ ಕೈಯಲ್ಲಿ ಭಗವದ್ಗೀತೆ ಇಡಲಾಯಿತು. ಇಂತಹುದೇ

ಒತ್ತಡದಲ್ಲಿ ಪಾಕಿಸ್ತಾನ–ಬಾಂಗ್ಲಾದೇಶಗಳ ಹಿಂದೂಗಳು ಕ್ರೈಸ್ತರು, ಸಿಖ್ಖರು; ಇಸ್ರೇಲಿ ಮುಸ್ಲಿಮರು ಮತ್ತು ಕ್ರೈಸ್ತರು, ಶ್ರೀಲಂಕಾದ ತಮಿಳರು ವಿಚಿತ್ರವಾದ ಪ್ರತಿಕ್ರಿಯೆ ಪ್ರಕಟಿಸುತ್ತಿರಬಹುದು. ಟ್ರಂಪ್ ಅಧ್ಯಕ್ಷರಾದ ಬಳಿಕ ಭಾರತೀಯ ಅಮೆರಿಕನರೂ ಇಂತಹ ವರ್ತನೆ ತೋರಿಸುತ್ತಿರುವರು. ರಾಷ್ಟ್ರ ನಿಷ್ಠೆಯ ದೃಷ್ಟಿಯಿಂದ 'ಶಂಕಿತ'ಗೊಳ್ಳುವ ಸಮುದಾಯಗಳು ಪಡುವ ಕಷ್ಟವನ್ನು ನಿಸಾರರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನ ಮಾರ್ಮಿಕವಾಗಿ ಹಿಡಿದಿಡುತ್ತದೆ; "ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು ಸಂಶಯದ ಪಂಜವೆತ್ತಿ, ನನ್ನ ನಂಬಿಕೆ ನೀಯತ್ತು ಹಕ್ಕು ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ ನೋವಿಗೆ ಕಣ್ಣು ತುಂಬಿದ್ದರೂ, ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ ನನ್ನೆದುರಿನಲ್ಲೇ ತನಿಖೆ ಮಾಡುವ ಕ್ಷಣವನ್ನ ಹುಸಿನಗುತ್ತ ಎದುರಿಸುವುದಿದೆಯಲ್ಲ, ಅದು ಕಷ್ಟದ ಕೆಲಸ" ಎಂದು ಹೇಳುತ್ತದೆ. ಚೆಲ್ಲಿದ ರಕ್ತದಲ್ಲಿ ದೇಶಭಕ್ತಿಯ ಅಂಶಗಳನ್ನು ಹುಡುಕುವ ರೂಪಕ ದಾರುಣವಾಗಿದೆ.

ವ್ಯಂಗ್ಯವೆಂದರೆ, ಸೈದ್ಧಾಂತಿಕ ರಾಜಕೀಯ ಎದುರಾಳಿಗಳನ್ನು ರಾಷ್ಟ್ರವಿರೋಧಿಗಳೆಂದು ಘೋಷಿಸುತ್ತಿರುವ 'ರಾಷ್ಟ್ರವಾದಿ'ಗಳಲ್ಲಿ ಹೆಚ್ಚಿನವರು, ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಪಾಲುಗೊಂಡವರಲ್ಲ. ಇಸ್ರೇಲಿನಲ್ಲಿ ಯಹೂದಿಗಳು ಅರಬರನ್ನೂ ಮ್ಯಾನ್ಮಾರಿನಲ್ಲಿ ಬರ್ಮೀಯರು ರೊಹಿಂಗ್ಯಾಗಳನ್ನೂ ಹತ್ತಿಕ್ಕುವುದನ್ನು ಬೆಂಬಲಿಸುವವರು; ಅದೇ ಹೊತ್ತಲ್ಲಿ ಇಸ್ಲಾಮಿಕ್ ದೇಶಗಳಲ್ಲಿ ಅಲ್ಲಿನ ಮೂಲಭೂತವಾದಿಗಳು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆರಗುವುದನ್ನು ಖಂಡಿಸುವವರು. ಮುಸ್ಲಿಮರ ದ್ವೇಷಿಯೆಂಬ ಕಾರಣಕ್ಕೆ ಟ್ರಂಪ್ ಅವರನ್ನು ಬೆಂಬಲಿಸುವರು; ಆದರೆ ಅಮೆರಿಕದ ಜನಾಂಗವಾದಿ ಗುಂಪುಗಳು ವಲಸಿಗ ಮೂಲದವರ ಮೇಲೆ ಹಲ್ಲೆ ಮಾಡುತ್ತಿರುವುದನ್ನು ತಪ್ಪೆನ್ನುವರು. ರೊ ಹಿಂಗ್ಯಾಗಳ ಮೇಲಣ ಹಿಂಸೆಯನ್ನು ಖಂಡಿಸುತ್ತಿರುವ ಪಾಕಿಸ್ತಾನದ ಮೂಲಭೂತ ವಾದಿಗಳು, ತಮ್ಮದೇ ದೇಶದಲ್ಲಿ ಮುಸ್ಲಿಮೇತರ ಸಮುದಾಯಗಳ ಮೇಲೆ ನಡೆಯುವ ಹಿಂಸೆಯ ಕುರಿತು ಇಂತಹುದೇ ಇಬ್ಬಂದಿತನದ ಮೌನವಹಿಸುವರು. ಮತೀಯ ರಾಷ್ಟ್ರೀಯತೆಯು ತನ್ನೊಳಗೇ ಇರಿಸಿಕೊಂಡಿರುವ ವೈರುಧ್ಯಗಳಿವು.

ಮತೀಯ ರಾಷ್ಟ್ರೀಯತೆಗಳು ಸಾಮಾನ್ಯವಾಗಿ ದೊಡ್ಡ ಬಂಡವಾಳಿಗರ ಹಾಗೂ ಊಳಿಗಮಾನ್ಯ ಮೌಲ್ಯಗಳ ಪರವಾಗಿರುತ್ತವೆ; ಪುರುಷವಾದಿಯಾಗಿರುವ ಅವು ಬಲಿಷ್ಠ ರಾಷ್ಟ್ರವನ್ನು ಕಟ್ಟಲು ಮತ್ತು ಆಳಲು ಸದೃಢ ದೇಹದ ಪುರುಷರ ಅಗತ್ಯವನ್ನು ಪ್ರತಿಪಾದಿಸುತ್ತವೆ. ಎದೆಯ ಸುತ್ತಳತೆಯನ್ನು ದೃಢತೆಯ ಸಂಕೇತವಾಗಿಸುವ ಅಥವಾ ಕಠಿಣ ನಿರ್ಧಾರ ಕೈಗೊಳ್ಳುವ ರಾಷ್ಟ್ರನಾಯಕರ ಪ್ರತಿಮೆಯನ್ನು ಲೋಹದಿಂದ ಮಾಡುವ ಆಶಯಗಳೂ ಇದರ ವಿಸ್ತರಣೆಯೇ. ಪೌರುಷಕೇಂದ್ರಿತ ಪರಿಭಾಷೆಯು ಮಹಿಳೆಯನ್ನು ಹೇಡಿತನದ ಪ್ರತೀಕವಾಗಿಸುತ್ತದೆ; ಭಾವನಾತ್ಮಕ ವಿಷಯಗಳಿಗೆ ಹೋರಾಡುವಂತೆ ಜನರನ್ನು ಪ್ರಚೋದಿಸುತ್ತದೆ. ಮತೀಯ ರಾಷ್ಟ್ರೀಯತೆಗಳು ಬಿಸಿರಕ್ತದ ಯುವಕರಿಗೆ

ಶಿಕ್ಷಣ ಉದ್ಯೋಗ ಕೊಡುವ ಬದಲು ಅವರಿಗೆ ಧಾರ್ಮಿಕ ಎದುರಾಳಿಗಳನ್ನು ಕಟ್ಟಿ ಕೊಡುತ್ತವೆ; ದೇಶದ ಉರಿವ ಸಮಸ್ಯೆಗಳಾದ ಬಡತನ ಅಸ್ಪೃಶ್ಯತೆ ಲಿಂಗತಾರತಮ್ಯ, ಶಿಕ್ಷಣ ಮತ್ತು ಆರೋಗ್ಯದ ಹಿಂದುಳಿವಿಕೆಗಳು ಅವಕ್ಕೆ ಸಮಸ್ಯೆ ಎನಿಸುವುದಿಲ್ಲ.

ದಿಟವಾದ ರಾಷ್ಟ್ರೀಯತೆ ಅಥವಾ ದೇಶಭಕ್ತಿ ಎಂದರೆ, ನಿರ್ದಿಷ್ಟ ಸಂಕೇತಗಳನ್ನು ಇಕ್ಕುಳದ ಹಾಗೆ ಹಿಡಿದುಕೊಂಡು ಜನರ ರಾಷ್ಟ್ರಪ್ರೇಮವನ್ನು ಪರೀಕ್ಷಿಸುತ್ತ, ಘೋಷಿಸುತ್ತ ಮತ್ತು ಶಿಕ್ಷಿಸುತ್ತ ಹೋಗುವುದಲ್ಲ; ದೇಶದ ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು, ಚರ್ಚಿಸುವುದು, ದೇಶದ ಸಮಸ್ತರು ನೆಮ್ಮದಿಯಿಂದ ಬದುಕುವಂತೆ ಮಾಡುವುದು. ಮಹಿಳೆಯೊಬ್ಬಳು ರಸ್ತೆಪಕ್ಕ ಸಾಲುಮರ ಬೆಳೆಸುವುದು, ದಲಿತರಿಗೆ ಹಾಸ್ಟೆಲ್ ಕಟ್ಟಿಸಿ ಸ್ವಜಾತಿಗರಿಂದ ಬಹಿಷ್ಕಾರ ಹಾಕಿಸಿಕೊಳ್ಳುವುದು, ಕಿತ್ತಲೆ ಹಣ್ಣು ಮಾರಿ ವ್ಯಾಪಾರಿಯೊಬ್ಬ ತನ್ನೂರಲ್ಲಿ ಶಾಲೆ ಕಟ್ಟಿಸುವುದು, ಕೆರೆ–ಹೊಳೆಗಳನ್ನು ಉಳಿಸಲು ಹೋರಾಡುವುದು, ತಾರತಮ್ಯವಿಲ್ಲದೆ ವಿದ್ಯೆಕೊಡುವುದು, ತರುಣರಿಗೆ ದುಡಿಮೆಯ ಅವಕಾಶ ಕಲ್ಪಿಸುವುದು – ನಿಜವಾದ ದೇಶಕಟ್ಟುವ ಕೆಲಸಗಳು. 'ವಂದೇಮಾತರಂ' 'ಜನಗಣಮನ' ಹಾಡಲು ಬಾರದ ಕೋಟ್ಯಾಂತರ ಮಂದಿ, ದುಡಿಮೆಯಿಂದ ದೇಶದ ಸಂಪತ್ತನ್ನು ಸೃಷ್ಟಿಸುತ್ತಿರುವರು; ಜಾತಿ ಧರ್ಮಗಳ ಎಲ್ಲೆಮೀರಿ ಮಾನವೀಯತೆ ಪ್ರಕಟಿಸುತ್ತಿರುವರು. ಕವಿಯೊಬ್ಬ ಹೇಳಿದಂತೆ ದೇಶವೆಂದರೆ ಮಣ್ಣಲ್ಲ, ಭೂಪಟವಲ್ಲ, ಸಂಕೇತಗಳಲ್ಲ. ಸಹಮಾನವರು.

೪

ಧರ್ಮ ಭಾಷೆ ಸಂಸ್ಕೃತಿ ಜನಾಂಗ ದ್ವೇಷಗಳ ಬುನಾದಿಯ ಮೇಲೆ ರೂಪುಗೊಂಡ, ಆಂತರಿಕ ವೈರುಧ್ಯಗಳಿಂದ ಕೂಡಿದ ಮತೀಯವಾದಿ ಜನಾಂಗವಾದಿ ರಾಷ್ಟ್ರೀಯತೆಗಳು ಕೆಲವು ಕಾಲ ಮೆರೆಯಬಹುದು. ಆದರೆ ಒಮ್ಮೆ ಅವು ಕುಸಿಯುತ್ತವೆ. ನಾಝಿ ರಾಷ್ಟ್ರೀಯತೆಯು ಚರಿತ್ರೆಯ ಕಸದ ಬುಟ್ಟಿಗೆ ಸೇರಿದ್ದನ್ನು ಜಗತ್ತು ಕಂಡಿದೆ. ಆದರೆ ಅದರ ಅಂಶಗಳು ನಾನಾ ರೂಪದಲ್ಲಿ ಸಮಾಜದಲ್ಲಿ ಹುದುಗಿಕೊಂಡಿರುತ್ತವೆ. ಪೂರಕ ಅವಕಾಶ ನಿರ್ಮಾಣವಾದೊಡನೆ ಮುಖದೋರುತ್ತವೆ. ಮತೀಯ ರಾಷ್ಟ್ರವಾದಗಳು ಏಕಮುಖಿಯಲ್ಲ. ಅವು ಜನಪರ ವಿಮೋಚನ ರಾಷ್ಟ್ರೀಯತೆಯ ಚಾರಿತ್ರಿಕ ಶಕ್ತಿಗಳನ್ನೂ ಜಾಗೃತಗೊಳಿಸುತ್ತವೆ. ಲಾಹೋರಿನ ಮಂಟೂ, ಬಂಗಾಳದ ಟಾಗೂರು, ಇಂಗ್ಲೆಂಡಿನ ರಸೆಲ್, ಅಮೆರಿಕೆಯ ಚೋಮ್‌ಸ್ಕಿ, ಇಸ್ರೇಲಿನ ಶುಲ್ಮನ್, ಶ್ರೀಲಂಕಾದಲ್ಲಿ ಲಸಂತಾ ವಿಕ್ರಮತುಂಗೆ, ಕನ್ನಡದ ಜಿ. ರಾಜಶೇಖರ – ಇವರೆಲ್ಲ ತಮ್ಮ ದೇಶಗಳ ಮತೀಯ ರಾಷ್ಟ್ರವಾದಗಳ ವಿಮರ್ಶಕರು. ಟಾಗೂರರ 'ಗೋರಾ' ಕಾದಂಬರಿಯಲ್ಲಿ ಮತೀಯ ರಾಷ್ಟ್ರವಾದದ ಬಗ್ಗೆ ಮಂಟೂ ಕತೆಯಲ್ಲಿರುವ ವಿಡಂಬನೆಯಿಲ್ಲ. ಬದಲಿಗೆ ಕರುಣಾಪೂರಿತ ವ್ಯಂಗ್ಯವಿದೆ. ಕಾದಂಬರಿಯ ನಾಯಕ ಗೋರಾ, ಬ್ರಿಟಿಶರ ಮತ್ತು ಕ್ರೈಸ್ತಪಾದ್ರಿಗಳ

ವಿರುದ್ಧ ಮತೀಯ ಕದನ ಸಾರಿದವನು; ಇದಕ್ಕಾಗಿ ಮನೆಯಲ್ಲಿರುವ ಮಹಿಳೆಯರ ಕೈಯಿಂದ ನೀರನ್ನೂ ಕುಡಿಯದೆ ಮಡಿಮೈಲಿಗೆ ಆಚರಿಸಿದವನು. ಕಾದಂಬರಿಯಲ್ಲಿ ಅವನು ತನ್ನನ್ನು ರಾಷ್ಟ್ರ ಮತ್ತು ಧರ್ಮರಕ್ಷಕ ಕಾರ್ಯಗಳಿಗೆ ಸಮರ್ಪಿಸಿಕೊಳ್ಳುವ ಕಾರ್ಯಕ್ರಮವೊಂದು ಗಂಗಾತಟದಲ್ಲಿ ಏರ್ಪಾಟಾಗುವ ಸನ್ನಿವೇಶವಿದೆ. ಆಗ ಆಕಸ್ಮಿಕವಾಗಿ ಅವನಿಗೆ ತಾನು ಪಾಶ್ಚಿಮಾತ್ಯ ತಂದೆ ತಾಯಿಗಳಿಗೆ ಹುಟ್ಟಿದಮ ಎಂದು ತಿಳಿಯುತ್ತದೆ. ಕೂಡಲೇ ಅವನು ಕಟ್ಟಿಕೊಂಡಿದ್ದ ರಾಷ್ಟ್ರನಿರ್ಮಾಣ ಕಲ್ಪನೆಯ ಬುನಾದಿಯೇ ಕುಸಿಯುತ್ತದೆ. ಈ ಆಘಾತ ಅವನಲ್ಲಿ ಹೊಸ ತಿಳಿವನ್ನೂ ಮನುಷ್ಯತ್ವವನ್ನೂ ಪುಟಿಸುತ್ತದೆ. ಅವನು ತನ್ನ ಸಾಕುತಾಯಿ ಆನಂದಮಯಿಯನ್ನು ಭೇಟಿ ಮಾಡುವ ಪ್ರಸಂಗದೊಂದಿಗೆ ಕಾದಂಬರಿ ಮುಗಿಯುತ್ತದೆ :

"ಗೋರ ಸಾಯಂಕಾಲ ಮನೆಗೆ ಹಿಂದಿರುಗಿದಾಗ ಆನಂದಮಯಿ ತನ್ನ ಕೋಣೆಯ ಮುಂದಿನ ಪಡಸಾಲೆಯಲ್ಲಿ ಸುಮ್ಮನೆ ಕುಳಿತಿದ್ದಳು. ಆಕೆಯ ಬಳಿಗೆ ಹೋಗಿ ಎದುರಿಗೆ ಕುಳಿತು ಗೋರ ತನ್ನ ತಲೆಯನ್ನು ಆಕೆಯ ಪಾದದ ಮೇಲಿಟ್ಟನು. ಆನಂದಮಯಿ ಅವನನ್ನೆತ್ತಿ ಮುದ್ದಿಸಿದಳು. ಗೋರ 'ಅಮ್ಮಾ! ನೀನು ನನ್ನ ತಾಯಿ. ಇಷ್ಟುದಿನ ಹುಡುಕಿಕೊಂಡು ಅಲೆದೆ. ತಾಯಿ ಮನೆಯಲ್ಲಿ ನನ್ನ ಕೋಣೆಯಲ್ಲೇ ಇದ್ದಾಳೆ. ನಿನಗೆ ಜಾತಿಯಿಲ್ಲ; ಭೇದವಿಲ್ಲ, ದ್ವೇಷವಿಲ್ಲ. ನೀನೇ ನಮ್ಮ ಯೋಗಕ್ಷೇಮದ ಮೂರ್ತಿ! ನೀನೇ ಇಂಡಿಯಾ!' ಎಂದನು. ಮುಂದಿನವರೆಸಿ 'ಅಮ್ಮಾ, ಲಕ್ಷ್ಮಿಯನ್ನು ಕರೆದು ನನಗೊಂದು ಲೋಟ ನೀರು ತರುವಂತೆ ಹೇಳುವೆಯಾ' ಎಂದನು."

ಲಕ್ಷ್ಮಿ ಗೋರನು ಅಸ್ಪೃಶ್ಯವಾಗಿ ನೋಡುತ್ತಿದ್ದ ಕೆಳಜಾತಿಯ ಮನೆಗೆಲಸದಾಳು, ಅವಳ ಕೈಯಿಂದ ನೀರು ಕುಡಿದು ರಾಷ್ಟ್ರಕಟ್ಟುವ ಹೆಸರಲ್ಲಿ ಆಚರಿಸಿದ ಹುಸಿ ಮಡಿವಂತಿಕೆಗೆ ಗೋರ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ಆಸುಪಾಸಿನ ಜನರನ್ನು ಪ್ರೀತಿಸುವುದೇ ನಿಜವಾದ ದೇಶಪ್ರೇಮ, ಧರ್ಮದ ಹೆಸರಲ್ಲಿ ಜನರನ್ನು ವಿಭಜಿಸಿ ದ್ವೇಷಿಸುವುದಲ್ಲ ಎಂಬ ವಿವೇಕ ಗಳಿಸುತ್ತಾನೆ. ಅವನ ಈ ಅವಸ್ಥೆ ಗಂಗಾರಾಮರ ವಿಗ್ರಹ ಕೆಡಿಸಲು ಹೋಗಿ ಗಂಗಾರಾಮ್ ಆಸ್ಪತ್ರೆಗೆ ಹೋದವನನ್ನೇ ನೆನಪಿಸುತ್ತದೆ. ಸ್ವಾರಸ್ಯವೆಂದರೆ, ಗೋರನಿಗೆ ಅವನ ಸಾಕುತಂದೆ ಜನ್ಮರಹಸ್ಯ ಹೇಳುವ ಮುನ್ನ, ಒಬ್ಬ ಆಂಗ್ಲವೈದ್ಯ ಉಪಚರಿಸುವ ಸನ್ನಿವೇಶವಿರುವುದು. ದೇಹದ ಕಾಯಿಲೆ ಗುಣಪಡಿಸುವ ಈ ಆಸ್ಪತ್ರೆ – ವೈದ್ಯರು, ನಿಜವಾಗಿ ಗುಣಪಡಿಸುವುದು ಮನಸ್ಸಿನ ರೋಗವನ್ನು.

ಭಾರತದ ಪೂರ್ವ ಪಶ್ಚಿಮದ ಎರಡು ತುದಿಗಳಲ್ಲಿ ಜೀವಿಸಿದ್ಧ, ವಿಭಿನ್ನ ಕಾಲ ಮತ್ತು ಧರ್ಮಗಳಿಗೆ ಸೇರಿದ ಲೇಖಕರಿಬ್ಬರು, ತಮ್ಮ ಕಥನಗಳ ಮೂಲಕ ಕೊಟ್ಟಿರುವ ಈ ಕಾಣ್ಕೆ ಅಪೂರ್ವ. ಇದನ್ನು ಕೊಡಲು ಸಾಧ್ಯವಾಗಿದ್ದು ಅವರು ಅಮಾನುಷಗೊಂಡ ಧರ್ಮ ಮತ್ತು ರಾಷ್ಟ್ರೀಯತೆಗಳ ವಿಮರ್ಶಕರಾಗಿದ್ದರಿಂದ; ಧರ್ಮ ಜಾತಿ ಬಣ್ಣಗಳ ಆಧಾರದಲ್ಲಿ ತರತಮಿಸದ ಮಾನವೀಯ ಸಮಾಜದ ಕಣಸನ್ನು ಕಂಡದ್ದರಿಂದ.

ಸಂಕುಚಿತವಾದಿ ರಾಷ್ಟ್ರೀಯತೆಯ ಬೇನೆಯಿಂದ ಬಳಲುವ ಎಲ್ಲ ಸಮಾಜಗಳಿಗೂ ಸ್ವವಿಮರ್ಶೆ ಮತ್ತು ಕನಸುಗಾರಿಕೆಯ ಜರೂರತಿದೆ. ನಾವಿರುವ ಸಮಾಜವನ್ನು ಈಗಿರುವುದಕ್ಕಿಂತಲೂ ಸುಂದರಗೊಳಿಸಲಾಗದ ಯಾವುದೇ ರಾಷ್ಟ್ರೀಯತೆ – ದೇಶಭಕ್ತಿ – ಧರ್ಮಗಳಿಗೆ ಬೆಲೆಯಾದರೂ ಏನು? ತೇಜಸ್ವಿ ಒಮ್ಮೆ ಕೇಳಿದ್ದರು : 'ಮತ್ತೊಬ್ಬರನ್ನು ಕೊಂದು ಉಳಿಸಿಕೊಳ್ಳಬೇಕಾದ ಧರ್ಮವೊಂದು ಇರುವುದಾದರೆ, ಅದನ್ನು ಧರ್ಮವೆಂದು ಕರೆಯಬೇಕೇ?' ಈ ಪ್ರಶ್ನೆಯನ್ನು ದ್ವೇಷದ ಬಲದಿಂದ ರಾಷ್ಟ್ರ ಕಟ್ಟುತ್ತೇವೆಂದು ತಿಳಿದವರೆಲ್ಲ ತಮಗೆ ತಾವೇ ಕೇಳಿಕೊಳ್ಳಬೇಕಿದೆ.

❑

ಓದು ಪತ್ಯ :

## ರಾಷ್ಟ್ರೀಯತೆಯ ಪರಿಕಲ್ಪನೆ : ಕೆಲವು ಟಿಪ್ಪಣಿಗಳು

– ಡಾ. ಡಿ.ಆರ್. ನಾಗರಾಜ್

೧

ನಾಲ್ಕೈದು ದಶಕಗಳ ಹಿಂದೆ ಭಾರತದಲ್ಲಿ ಈ ವಿಷಯದ ಬಗ್ಗೆ ಮಾತನಾಡಿದ್ದರೆ ಅದು ಸಹಜವಾಗಿ ವೀರಾವೇಶದ ದನಿಯಲ್ಲಿ ಇರುತ್ತಿತ್ತು. ಹಾಗೆಯೇ ಅದು ಪಶ್ಚಿಮದಲ್ಲಾಗಿದ್ದರೆ ವಿಷಾದ, ನಾಚಿಕೆಗಳಿಗೆ ದಾರಿಯಾಗುತ್ತಿತ್ತು. ಎರಡೂ ಕಡೆಯ ಸಾಹಿತ್ಯಗಳಲ್ಲಿ ಇದು ಪ್ರತಿಫಲಿಸಿದ ಕ್ರಮವೂ ಹಾಗೆಯೇ. ಭಾರತದಲ್ಲಿ ರಾಷ್ಟ್ರೀಯತೆ ಸಾಹಿತ್ಯದ ನರನಾಡಿಗಳಲ್ಲಿ ಬೆರೆತು ಹೋಗಿದ್ದರೆ, ಪಶ್ಚಿಮದಲ್ಲಿ ರಾಷ್ಟ್ರೀಯತೆಯನ್ನು ಕಂಡು ಬೆದರಿದವರೇ ಹೆಚ್ಚು. ಇಂಥವರಲ್ಲಿ ಈ ಗಳಿಗೆಯಲ್ಲಿ ನನಗೆ ತಕ್ಷಣ ನೆನಪಾಗುವವರು ಆರ್ವೆಲ್ ಮತ್ತು ಬರ್ನಾಡ್ ಶಾ. ಇನ್ನು ತತ್ತ್ವಜ್ಞಾನಿಗಳಲ್ಲಿ ರಸೆಲ್ ಅಂತೂ ರಾಷ್ಟ್ರೀಯತೆಯ ಬಗ್ಗೆ ಅತ್ಯಂತ ಉತ್ಕಟವಾಗಿ ವಿರೋಧಿಸಿದ್ದು ಇವತ್ತಿಗೂ ಅನೇಕ ವಿಷಯಗಳಲ್ಲಿ ಪ್ರಸ್ತುತ. ಆತ ವ್ಯಂಗ್ಯವಾಗಿ ರಾಷ್ಟ್ರೀಯತೆಯ ಪರಿಕಲ್ಪನೆಯ ಹಿಂದಿರುವ ಗೋಸುಂಬೆತನವನ್ನು ಚುಚ್ಚುತ್ತಾ ಹೇಳಿದ : ದೇಶಭಕ್ತರು ನಾಡಿಗಾಗಿ ಬಲಿದಾನದ ಮಾತನಾಡುತ್ತಾರೆ, ಆದರೆ ಕೊಲ್ಲುವ ಮಾತನ್ನಲ್ಲ. (ಎರಡೂ ಒಂದೇ ತಾನೆ?)

ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆ ಆಧುನಿಕ ಜಗತ್ತಿನಲ್ಲಿ ಎತ್ತರದ 'ತ್ಯಾಗ ಬಲಿದಾನಗಳಿಗೆ', ಹಾಗೆಯೇ ಹಿಂದೆಂದೂ ಕಾಣದಿದ್ದ ರಕ್ತಪಾತ, ನರ ಹತ್ಯಾಕಾಂಡಕ್ಕೆ ಕಾರಣವಾಗಿದೆ. ಹೀಗಾಗಿ, ಇದರ ಬಗ್ಗೆ ಮಾತನಾಡುವಾಗ ಅತ್ಯಂತ ಎಚ್ಚರಿಕೆಯಿಂದಲೇ ಮುಂದುವರಿಯಬೇಕಾಗಿದೆ. ರಾಷ್ಟ್ರೀಯತೆ ಅಂತಿಮವಾಗಿ ಅಪ್ರಸ್ತುತ ಹಾಗೂ ಹಾನಿಕಾರ; ಅಂತರರಾಷ್ಟ್ರೀಯವಾದ, ವಿಶ್ವೈಕ್ಯವೇ ಮನುಕುಲದ ಮಹತ್ವದ ಆದರ್ಶ ಎಂಬುದನ್ನು ಬೇರೆ ಬೇರೆ ರೂಪಗಳಲ್ಲಿ ಇಡೀ ಜಗತ್ತು ಈ ಶತಮಾನದಲ್ಲಿ ಒಪ್ಪಿಕೊಂಡಿತ್ತು.

ಆದರೆ, ಭಾರತದಲ್ಲಿ ಅಂತರರಾಷ್ಟ್ರೀಯತೆ, ವಿಶ್ವನಾಗರಿಕತೆಯ ಮೌಲ್ಯಗಳೇ ಅನಾಕರ್ಷಕವಾಗಿಬಿಟ್ಟಿವೆ ಎಂಬ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಬಗ್ಗೆ ಮಾತನಾಡುವುದು ತಾತ್ವಿಕವಾಗಿ ಇನ್ನಷ್ಟು ಜಟಿಲವಾದ ಸಮಸ್ಯೆ.

## ೨

ಈ ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆಯನ್ನು ಮಾರ್ಕ್ಸ್‌ವಾದ ಗ್ರಹಿಸುವ, ವಿವರಿಸುವ ಕ್ರಮ ಬೇರೆ, ಮಾರ್ಕ್ಸಿಸ್ಟೇತರ ಚಿಂತನಾ ಕ್ರಮಗಳು ವಿವರಿಸುವ ನೆಲೆ ಬೇರೆ. ರಾಷ್ಟ್ರೀಯತೆಯ ಶಕ್ತಿ ಮತ್ತು ಮಿತಿಗಳನ್ನು ಮಾರ್ಕ್ಸ್‌ವಾದ ಸಮರ್ಥವಾಗಿ ವಿವರಿಸುತ್ತದೆಯಾದ್ದರಿಂದ, ಆ ಗ್ರಹಿಕೆಯ ವಿಧಾನವನ್ನು ಅಳವಡಿಸಿಕೊಂಡು ಇಲ್ಲಿ ಮುಂದುವರೆಯುವುದು ಸೂಕ್ತವಾಗಿ ನನಗೆ ಕಂಡಿದೆ.

ರಾಷ್ಟ್ರೀಯತೆ ಎನ್ನುವುದು ಮುಖ್ಯವಾಗಿ ಬಂಡವಾಳಶಾಹಿ ಚಾರಿತ್ರಿಕ ಘಟ್ಟದ ಸೃಷ್ಟಿ. ಲೆನಿನ್ ಇದನ್ನು 'ಪೌರ್ವಾತ್ಯ ನಾಡುಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ' ಎಂಬ ಬರಹಗಳಲ್ಲಿ ವಿವರವಾಗಿ ಚರ್ಚಿಸುತ್ತಾನೆ. ಅದರಲ್ಲಿಯೂ ಫ್ಯೂಡಲ್ ಶಕ್ತಿಗಳ ಆ ಚಾರಿತ್ರಿಕ ಘಟ್ಟದ ವಿರುದ್ಧ ಸಂಪೂರ್ಣ ಜಯವನ್ನು ಬಂಡವಾಳಶಾಹಿ ಸಾಧಿಸುವುದು ಈ ಸೈದ್ಧಾಂತಿಕ ನೆಲೆಗಟ್ಟಿನಲ್ಲಿಯೇ. ಮಾರ್ಕ್ಸ್ ಕೂಡಾ ಈ ರಾಷ್ಟ್ರೀಯ ಪ್ರಶ್ನೆಯನ್ನು ತನ್ನ ಕೃತಿಗಳಲ್ಲಿ ಚರ್ಚಿಸಿದ್ದರೂ ಅದು ತನ್ನ ತಾತ್ವಿಕ, ರಾಜಕೀಯ ಪರಿಣತಿಯನ್ನು ಸಾಧಿಸಿದ್ದು ಲೆನಿನ್‌ನಲ್ಲಿಯೇ.

ರಾಷ್ಟ್ರೀಯತೆಯ ಪ್ರಮುಖ ಲಕ್ಷಣವಾಗಿ ಈ ಕೆಳಗಿನವುಗಳನ್ನು ಪಟ್ಟಿ ಮಾಡಬಹುದು. ಈ ಲಕ್ಷಣಗಳು ವಾಸ್ತವದ ರೂಪದಲ್ಲೇ ಇರಬೇಕೆಂದೇನಿಲ್ಲ. ಸೈದ್ಧಾಂತಿಕ ಆದರ್ಶದ ರೂಪಗಳಲ್ಲೇ ಇವು ವಾಸ್ತವವಾಗುವ ಚಾರಿತ್ರಿಕ ಪ್ರಕ್ರಿಯೆ ಪ್ರಾರಂಭವಾಗುವುದು.

೧. ಸಮಾನ ಪ್ರಾದೇಶಿಕತೆ (ಕಾಮನ್ ಟೆರಿಟೆರಿ)

೨. ಸಮಾನ ಮಾರುಕಟ್ಟೆ

೩. ಸಮಾನ ಭಾಷೆ (ಹಲವಾರು ಭಾಷೆಗಳಿದ್ದರೂ ಸರಿ ಎಂಬ ನಿಲುವು ಕೂಡಾ ಸಮರ್ಥನೀಯವೇ, ಉದಾ : ಭಾರತ, ರಷ್ಯಾ ಮುಂತಾದೆಡೆಗಳಲ್ಲಿ)

೪. ರಾಷ್ಟ್ರೀಯ ಪ್ರಭುತ್ವ (ನೇಷನ್ ಸ್ಟೇಟ್ ಎಂದರ್ಥದಲ್ಲಿ)

೫. ಸಮಾನ ಮಾನಸಿಕ ಸ್ವರೂಪ (ಇದನ್ನೇ ಕೆಲವರು ಹಿಗ್ಗಿಸಿ ಸಂಸ್ಕೃತಿ ಎಂಬರ್ಥದಲ್ಲಿ ಬಳಸುವುದುಂಟು.)

ಸಾಹಿತ್ಯ ಚರ್ಚೆಯಲ್ಲಿ ನಮಗೆ ಅತ್ಯಂತ ಹೆಚ್ಚು ಪ್ರಸ್ತುತವಾದ ಕ್ಷೇತ್ರ, ಲಕ್ಷಣ ಎಂದರೆ ಪಟ್ಟಿಯಲ್ಲಿರುವ ಕಡೆಯ ಸಂಗತಿ.

## ೩

ವಸಾಹತುಗಳ ಸನ್ನಿವೇಶದಲ್ಲಿ ಈ ರಾಷ್ಟ್ರೀಯತೆಯ ಉಗಮಕ್ಕೆ ಅನೇಕ ಸಂಕೀರ್ಣ ಮುಖಗಳಿವೆ. ಭಾರತದಲ್ಲಂತೂ ರಾಷ್ಟ್ರೀಯತೆಯ ಉಗಮದ ಹಿಂದಿನ ಪ್ರಧಾನ ಪ್ರೇರಣೆ ಪಾಶ್ಚಾತ್ಯ ಸಂಸ್ಕೃತಿಯ, ರಾಷ್ಟ್ರೀಯ ಪ್ರಭುತ್ವದ ಸಂಪರ್ಕ. ಹೀಗಾಗಿ, ಶತ್ರುವಿನ ಜತೆಗೆ ಹೋರಾಡುವಾಗ ಕೂಡಾ ಅವರಿಂದಲೇ ಕಲಿತ, ಅಂತರಂಗೀಕರಿಸಿಕೊಂಡ ಪರಿಕಲ್ಪನೆಗಳ, ಗ್ರಹಿಕೆಗಳ ಬಳಕೆಯಾಗುತ್ತದೆ. ಈ ಅಂಶದ ಬಗ್ಗೆ ಇನ್ನೂ ಹೆಚ್ಚು ಸೂಕ್ಷ್ಮವಾದ, ಸಂಕೀರ್ಣವಾದ ಚರ್ಚೆ ನಡೆಯಬೇಕಾಗಿದೆ. ಏಕೆಂದರೆ, ಭಾರತೀಯ ನವೋದಯದ ಸನ್ನಿವೇಶದಲ್ಲಿ ನಾವು ಕಲ್ಪಿಸಿಕೊಂಡ ರಾಷ್ಟ್ರದ ಪರಿಕಲ್ಪನೆಯಲ್ಲಿ ದೇಸೀಸತ್ವ, ದೇಸೀರೂಪಗಳಷ್ಟು, ನಮ್ಮ ಶತ್ರುವಿನ ವಿಚಾರಗಳಷ್ಟು ಎಂದು ವಿಂಗಡಿಸಿದಾಗ ಬಹುಶಃ ಗಾಬರಿಯಾಗುವಷ್ಟು ಪರಕೀಯ ಆದರ್ಶಗಳು ಮತ್ತು ಮೌಲ್ಯಗಳು ಇವೆ. ಈ ಹಿನ್ನೆಲೆಯಿಂದ ಭಾರತೀಯ ನವೋದಯದಲ್ಲಿ ರೂಪುಗೊಂಡ ಭಾರತ ರಾಷ್ಟ್ರದ ಪರಿಕಲ್ಪನೆಯಲ್ಲಿ ಅನೇಕ ಮಹತ್ವದ ವ್ಯತ್ಯಾಸಗಳು ಇವೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಗಾಂಧಿ ಚಿಂತಿಸಿದ, ಕಲ್ಪಿಸಿದ ಭಾರತದ ಸತ್ವ ಮತ್ತು ರೂಪ ಬೇರೆ; ಹಿಂದೂ ರಾಷ್ಟ್ರೀಯವಾದಿಗಳು ಕಲ್ಪಿಸಿದ ರಾಷ್ಟ್ರದ ಸತ್ವ ಮತ್ತು ರೂಪ ಬೇರೆ. ಈ ಎರಡೂ ರಾಷ್ಟ್ರದರ್ಶನಗಳು ಹೊರಡುವ ನೆಲೆಗಳೂ ಬೇರೆ, ತಲುಪಬಯಸುವ ಗುರಿಗಳೂ ಬೇರೆ. ಒಂದೇ ಚಾರಿತ್ರಿಕ ಘಟ್ಟದಲ್ಲಿ ಹೀಗೆ ಭಿನ್ನ ರೀತಿಯ, ಪರಸ್ಪರ ವಿರುದ್ಧ ನೆಲೆಗಳ ರಾಷ್ಟ್ರೀಯತೆಯ ಪರಿಕಲ್ಪನೆಗಳು ಹುಟ್ಟಿದವು ಎಂಬುದು ತುಂಬ ಕುತೂಹಲಕಾರಿ ಸಂಗತಿ. ಮೇಲೆ ಸೂಚಿಸಿದ ಎರಡು ರೀತಿಗಳ ರಾಷ್ಟ್ರಕಲ್ಪನೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಬಹುದು.

ಮೊದಲಿಗೆ ಹಿಂದೂ ರಾಷ್ಟ್ರೀಯವಾದಿಗಳ ರಾಷ್ಟ್ರದ ಪರಿಕಲ್ಪನೆಯನ್ನು ನೋಡಬಹುದು. ಇವರೊಳಗೆ ಆಂತರಿಕ ವ್ಯತ್ಯಾಸಗಳು ಅಲ್ಲಲ್ಲಿ ಇದ್ದರೂ ಒಟ್ಟು ಒತ್ತಾಯದಲ್ಲಿ ಮಾತ್ರ ಸಾಮ್ಯವಿದೆ. ವಿವೇಕಾನಂದ, ತಿಲಕ್ ಮುಂತಾದವರು ಮೂಲಪುರುಷರಾಗಿರುವ ಈ ಆಲೋಚನಾಕ್ರಮ ಭಾರತೀಯ ಬದುಕಿನಲ್ಲಿ ಕ್ಲೈಬ್ಯ ಅಥವಾ ಕ್ಲೀಬತ್ವ ಆಳವಾಗಿ ಬೇರೂರಿದೆ ಎಂದು ನಂಬುತ್ತದೆ. ಇವರಿಗೆ ಅದನ್ನು ಕಂಡರೆ ಭಯ, ತಿರಸ್ಕಾರ. 'ವೀರ್ಯವತ್ತಾದ' ಭಾರತವನ್ನು ಅದು ಪೂರ್ಣವಾಗಿ ನಿರಾಕರಿಸುತ್ತದೆ ಎಂಬ ಕಾರಣಕ್ಕೆ ಅವರಿಗೆ ಭಯ. ಅನೇಕ ಪಾಶ್ಚಾತ್ಯರಿಗೂ ಭಾರತದ ಬಗ್ಗೆ ಇದೇ ಬಗೆಯ ಭಯ ಇತ್ತು ಎಂಬುದು ಇನ್ನಷ್ಟು ಹೊಸ ಪ್ರಶ್ನೆಗಳನ್ನು ತೆರೆಯುತ್ತದೆ. ಆಗಿನ ಪಶ್ಚಿಮಕ್ಕೆ ಅರ್ಥವಾಗುತ್ತಿದ್ದದ್ದು 'ವೀರ್ಯವತ್ತಾದ' ರಾಜಕಾರಣದ, ಶೌರ್ಯಾಧಾರಿತ ರಾಜಕಾರಣದ ಪರಿಭಾಷೆ. ರಕ್ತ ಚೆಲ್ಲುವುದು, ಕೊಲ್ಲುವುದು, ಕೊಲ್ಲಿಸಿಕೊಳ್ಳುವುದು ಸಾಮ್ರಾಜ್ಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಅನಿವಾರ್ಯ ಎಂದು ಅವರು ನಂಬಿದ್ದರು. ಈ ಬಗೆಯ ಕ್ಷಾತ್ರ ಭಾರತವನ್ನು ಕಂಡರೆ ಅವರಿಗೆ ಭಯವಿಲ್ಲ.

ಕ್ಷಾತ್ರವನ್ನು ಕಂಡು ಹೆದರದ ಅವರು ಬೆಚ್ಚಿದ್ದು 'ಹೆಣ್ಣಿಗೆ' ಭಾರತ ಕಂಡು. ಜಡತ್ವದ ಸಾರರೂಪೀ ಭಾರತ ಕಂಡು ಅವರು ವಿವಂಚನೆಗೊಳಗಾದರು. ಗೆಲ್ಲಲಾಗದ ಅಸಾಧ್ಯ ಶಕ್ತಿಯಾಗಿ ಅವರಿಗೆ 'ಕ್ಲೀಬತ್ವ' ಕಂಡಿತ್ತು. ಇವರಿಗೆ ಬೇಕಾದದ್ದು ಆಧುನಿಕವಾದ ಬಲಿಷ್ಠ ಪ್ರಭುತ್ವ.

ಭಾರತದ ಸಮಕಾಲೀನ ಸ್ಥಿತಿಯ ಬಗೆಗೆ ವಿವೇಕಾನಂದ, ತಿಲಕ್ ಮುಂತಾದವರಿಗೆ ಇರುವ ಅಪಾರ ತಿರಸ್ಕಾರದ ಮೂಲ ಇದೇ. ಮುಂದೆ ಹಿಂದೂ ರಾಷ್ಟ್ರೀಯವಾದಿ ರಾಜಕಾರಣದಲ್ಲಿ ಇದಕ್ಕೆ ಬೇರೆ ಬೇರೆ ಆಯಾಮಗಳು ಕೂಡಿಕೊಂಡವು. ಅಹಿಂಸೆ ಭಾರತೀಯ ಸಂಸ್ಕೃತಿಯ ಪರಮ ಮೌಲ್ಯ ಎನ್ನುವುದನ್ನು ಈ ಧಾರೆ ಒಪ್ಪುವುದಿಲ್ಲ. (ಆರ್.ಎಸ್.ಎಸ್., ಹಿಂದೂ ಮಹಾಸಭೆ ಈ ಧಾರೆಯ ನಂತರದ ರೂಪಗಳು.)

ಆದರೆ, ಗಾಂಧಿಯ ರಾಷ್ಟ್ರಕಲ್ಪನೆ ಮೇಲಿನದಕ್ಕಿಂತ ಪೂರ್ಣ ವಿರುದ್ಧ ದಿಕ್ಕಿನಿಂದ ಹೊರಟಿದೆ. ಗಾಂಧಿ ತನ್ನನ್ನು ಅರ್ಧನಾರೀಶ್ವರ ತತ್ವ – ಪ್ರತೀಕದ ಜತೆಗೆ ಗುರುತಿಸಿಕೊಂಡದ್ದು ಒಟ್ಟು ಜೀವನ ಕ್ರಮಕ್ಕೆ, ನಾಗರಿಕತೆಯ ನಿರ್ಮಿತಿಗೂ ಹಬ್ಬುವಷ್ಟು ಸಾಂಕೇತಿಕತೆ ಪಡೆದಿದೆ. ಇಲ್ಲಿ 'ಹೆಣ್ಣಿಗತನ' ಎನ್ನುವುದು ಅಪಮಾನಕಾರೀ ಸಂಗತಿಯಲ್ಲ. ಬದಲಾಗಿ, ಮಾನವತೆಯ ಸಾರರೂಪ ಅದು. ಹಾಗೆಯೇ, ಅಹಿಂಸೆ ಎನ್ನುವುದು ಇಲ್ಲಿ ಶ್ರೇಷ್ಠಮೌಲ್ಯ. ಈ ನಾಡನ್ನು ಮತೀಯ ಹಿಂಸೆಯಿಂದ ನಾಶವಾಗದಂತೆ ಕಾಪಾಡಿರುವುದು ಈ ಮೌಲ್ಯಗಳೇ ಎನ್ನುವುದು ತುಂಬ ಮುಖ್ಯ. ಬಲಿಷ್ಠ ಪ್ರಭುತ್ವವನ್ನು ಇದು ಒಪ್ಪುವುದಿಲ್ಲ.

ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡುವಾಗ ಕೂಡಾ ಈ ಎರಡು ರಾಷ್ಟ್ರಗಳ ಪರಿಕಲ್ಪನೆ – ಹಿಂದೂ ರಾಷ್ಟ್ರವಾದಿಗಳ ನಾಡು ಮತ್ತು ಗಾಂಧಿಯ ನಾಡು – ತುಂಬ ಸಹಾಯಕ. ಅದನ್ನು ಮುಂದೆ ನೋಡಬಹುದು. ಅದಕ್ಕೆ ಮುಂಚೆ ಚರ್ಚಿಸಬೇಕಾದ ಮೂಲಭೂತ ಸಂಗತಿಯೆಂದರೆ, ಕನ್ನಡ ಸಾಹಿತ್ಯದ ಮೇಲೆ ರಾಷ್ಟ್ರೀಯತೆಯ ಪರಿಕಲ್ಪನೆಯ ಪರಿಣಾಮ ಏನು ಎಂಬುದು. ಆಧುನಿಕ ಕನ್ನಡ ಸಾಹಿತ್ಯದ ಹಿಂದೆ ಇರುವ ಸೈದ್ಧಾಂತಿಕ ವಿಸ್ತಾರಗಳಲ್ಲಿ ರಾಷ್ಟ್ರೀಯತೆ ಕೂಡಾ ಒಂದು. ಅದು ನಿರ್ದಿಷ್ಟ ಸಾಹಿತ್ಯ ಸ್ವರೂಪದಲ್ಲಿ ಕ್ರಿಯಾಶೀಲವಾಗುವ ಬಗೆಗೆ ವಿಶಾಲವಾದ ಚರ್ಚೆ ಇಲ್ಲಿ ಸಾಧ್ಯವಿಲ್ಲವಾದರೂ, ಸ್ಥೂಲವಾಗಿ ಎರಡು ಅಂಶಗಳನ್ನು ಇಲ್ಲಿ ಗಮನಿಸಬಹುದು. ಇದನ್ನು ಬೇರೆ ಕಡೆಗೂ ಸಲ್ಲುವ ಹಾಗೆ ಸಾಮಾನ್ಯೀಕರಿಸಿ ಕೂಡಾ ಹೇಳಲು ಸಾಧ್ಯವಿದೆ ಅನ್ನಿಸುತ್ತದೆ. ಸಾಹಿತ್ಯದೊಳಗೆ ಅಥವಾ ಅದರ ಹಿನ್ನೆಲೆಯ ರೂಪಿಸುವಿಕೆಯ ಶಕ್ತಿಗಳಲ್ಲಿ ರಾಷ್ಟ್ರೀಯತೆ ಒಂದು ಆಯಾಮವಾದಾಗ ಸಾಹಿತ್ಯದಲ್ಲಿ ಈ ಎರಡು ಆಶಯಗಳು ಪ್ರಧಾನವಾಗುತ್ತದೆ.

೧. ಸಾಮಾಜಿಕ ವಿಧಿಯ ಗ್ರಹಿಕೆ (ಸೋಷಿಯಲ್ ಡೆಸ್ಟಿನಿ)

೨. ರಾಷ್ಟ್ರೀಯ ವ್ಯಕ್ತಿತ್ವದ ಗ್ರಹಿಕೆ ಮತ್ತು ಶೋಧನೆ.

ಇದನ್ನು ವಿವರಿಸುವುದಾದರೆ : ಆಧುನಿಕ ಘಟ್ಟಕ್ಕಿಂತ ಹಿಂದೆ ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಅನುಭವ ಎಂದರೆ ವ್ಯಕ್ತಿಯ ಆಧ್ಯಾತ್ಮಿಕ ವಿಧಿ ಅಥವಾ ಗತಿ. ಈ ಪರಿಭಾಷೆಯೊಳಗೇ ಉಳಿದ ವಲಯಗಳು – ಸಾಮಾಜಿಕ, ರಾಜಕೀಯ, ವೈಯಕ್ತಿಕ – ಬೆರೆತು ಹೋಗುತ್ತಿದ್ದವು. ಆದರೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಟ್ಟು ನಾಡಿನ ಗತಿಯ ಸಾಮಾಜಿಕತೆಯ ಪ್ರಶ್ನೆ ಅತ್ಯಂತ ದೊಡ್ಡ ಆಶಯವಾಗಿ ಬೆಳೆಯಿತು. ಇದರೊಳಗೆ ವ್ಯಕ್ತಿಯ ಗತಿಯ, ವಿಧಿಯ ಪ್ರಶ್ನೆಗಳೂ ಬೆರೆತು ಹೋದವು. 'ಕಾನೂರು ಹೆಗ್ಗಡಿತಿ' ಕಾದಂಬರಿಯನ್ನು ವಿಶ್ಲೇಷಿಸಿದರೆ ಈ ಮಾತಿಗೆ ಅಗತ್ಯವಾದ ಸಮರ್ಥನೆಗಳು ದೊರೆಯುತ್ತವೆ. ಈ ಸಾಮಾಜಿಕ ಗತಿಯ ವಸ್ತು ಪ್ರಕಟವಾಗುವುದು ಒಂದು ಸಂಸ್ಕೃತಿಯ ಅಂತರ್ ಶೋಧದಲ್ಲಿ. (ಯಾವುದೇ ರಾಷ್ಟ್ರದ, ರಾಷ್ಟ್ರೀಯತೆಯ ಪರಿಕಲ್ಪನೆಗಳ ಅಂತರ್ಗತ ಅಂಶ ಎಂದರೆ ಸಂಸ್ಕೃತಿಯ ಅಂತರ್ ಶೋಧದ ಆಯಾಮ.)

ಆಧುನಿಕ ಕನ್ನಡ ಸಾಹಿತ್ಯದಲ್ಲೂ ಈ ಕ್ಷಾತ್ರ – ಕ್ಲೀಬತ್ವಗಳ ಮುಖಾಮುಖಿ ಅನೇಕ ರೀತಿಗಳಲ್ಲಿ ಆಗಿದೆ. ವಿಶೇಷದ ಸಂಗತಿ ಎಂದರೆ, 'ಕ್ಷಾತ್ರ'ವನ್ನು ಎತ್ತಿ ಹಿಡಿಯುವ ಅಥವಾ ಆ ದೃಷ್ಟಿಕೋನದಲ್ಲಿ ಸಂಸ್ಕೃತಿಯ ಅಂತರ್‌ಶೋಧವನ್ನು ಮಾಡುವ ಕೃತಿಗಳು ಕನ್ನಡದಲ್ಲಿ ಅಂಥ ದೊಡ್ಡ ಯಶಸ್ಸನ್ನು ಕಂಡಿಲ್ಲ. ಆ ರೀತಿಯ ಪಾತ್ರಗಳಿಗೆ ಇರುವ ಮಹತ್ವ ಕೂಡಾ ಸಾಂದರ್ಭಿಕವಾದದ್ದೇ ಹೊರತು ಮೂಲಭೂತವಾದದ್ದಲ್ಲ. ಆದರೆ ಇದರರ್ಥ ರಾಷ್ಟ್ರೀಯತೆಯ ಈ ಧಾರೆಗೆ ಕನ್ನಡ ಸಾಹಿತ್ಯದಲ್ಲಿ ಪ್ರತಿಫಲನ ಇಲ್ಲವೇ ಇಲ್ಲ ಎಂದಲ್ಲ. ಆಧುನಿಕ ಕನ್ನಡ ಸಾಹಿತ್ಯದ ಅಧಿಕೃತತೆಗೆ ಮೂಲ ಕಾರಣವೇ ಮೇಲೆ ಸೂಚಿಸಿದ ಎರಡು ಭಿನ್ನಗ್ರಹಿಕೆಯ ಕ್ರಮಗಳ ಮುಖಾಮುಖಿ.

ಗಳಗನಾಥರ ಕೃತಿಗಳನ್ನು ಆಳವಾಗಿ ವಿಶ್ಲೇಷಿಸಿದರೆ ಹೊರಡುವುದು ಈ ಬಗೆಯ ಕ್ಷಾತ್ರಕೇಂದ್ರಿತ ರಾಷ್ಟ್ರದ ಕಲ್ಪನೆಯೇ. ಆಲೂರು ವೆಂಕಟರಾಯರ ಬಗ್ಗೆ ಈ ಮಾತು ಪೂರ್ಣವಾಗಿ ನಿಜ. ಆದರೆ, ಸಮಾಧಾನದ ಸಂಗತಿ ಎಂದರೆ, ಈ ಸಾಮ್ರಾಜ್ಯ ನಿರ್ಮಿತಿಯ, ಸಾಮ್ರಾಜ್ಯ ಧರ್ಮದ ಮಾದರಿಗಳನ್ನು ಅಲ್ಲಲ್ಲಿ ಮಾರ್ಮಿಕವಾಗಿ ಕೆಣಕಿದ ದಾಖಲೆಗಳು ಸಾಕಷ್ಟು ಸಿಗುತ್ತವೆ. ಇಲ್ಲಿ ನನಗೆ ತಕ್ಷಣ ನೆನಪಾಗುತ್ತಿರುವುದು ಪಂಡಿತ ತಾರಾನಾಥರ ಚಿಂತನೆಗಳು. ವಿಜಯನಗರ ವೈಭವವನ್ನು ಎಲ್ಲರೂ ಹಾಡಿ ಹೊಗಳುತ್ತಿದ್ದಾಗ ತಾರಾನಾಥರು ಅದರ ಮಾನವೀಯ ದಕ್ಷತೆಯ ಮೂಲಗಳನ್ನು ಪ್ರಶ್ನಿಸಿದರು. ಜನಸಾಮಾನ್ಯರ, ದೀನದಲಿತರ ಬದುಕನ್ನು ಹಸನುಮಾಡುವ ಎಷ್ಟು ಸಂಸ್ಥೆಗಳಿದ್ದವು, ಎಷ್ಟು ಆಸ್ಪತ್ರೆಗಳಿದ್ದವು ಎಂಬ ರೀತಿಯ ಪ್ರಶ್ನೆಗಳನ್ನು ಹಾಕಿ ಹೊಸ ಬಗೆಯ ಮೌಲ್ಯ ಪ್ರಜ್ಞೆಯನ್ನು ಪ್ರಕಟಿಸಿದರು.

ಈ ಹಿನ್ನೆಲೆಯಿಂದ ನೋಡಿದರೆ, ಕನ್ನಡ ನವೋದಯದ ಸನ್ನಿವೇಶದಲ್ಲಿ ರೂಪುಗೊಂಡ ಸಂಸ್ಕೃತಿಯನ್ನು ಕುರಿತ ಪರಿಕಲ್ಪನೆಗಳು ಒಂದೊಂದು ಬಗೆಯ ನಿರ್ದಿಷ್ಟ ರಾಜಕೀಯ ನಿಲುವುಗಳನ್ನು ಪ್ರಕಟಿಸುತ್ತವೆ. ಹಾಗೆಯೇ ರಾಜಕಾರಣದ ಪರಿಕಲ್ಪನೆಗಳು

ನಿರ್ದಿಷ್ಟ ಸಂಸ್ಕೃತಿಯ ಪರಿಕಲ್ಪನೆಗಳನ್ನು ಪ್ರತೀಕಗೊಳಿಸುತ್ತದೆ. ಡಿ.ವಿ.ಜಿ., ವೆಂಕಟಕೃಷ್ಣಯ್ಯ ಮತ್ತು ಅಲಕ್ಷ್ಯಕ್ಕೆ ಒಳಗಾದ ಅನೇಕ ಜನ ಪ್ರಭಾವಶಾಲೀ ಪತ್ರಕರ್ತರ, ಚಿಂತಕರ ವಿಚಾರಗಳನ್ನು ಈ ನೆಲೆಯಲ್ಲಿ ಪರೀಕ್ಷಿಸಬೇಕಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಈಗಾಗಲೇ ಗುರುತಿಸಲಾಗಿರುವ ಕೆಲವು ವೈಚಾರಿಕ ಆಕೃತಿಗಳು ಇಲ್ಲಿಯೂ ಕೆಲಸ ಮಾಡಿರುವುದನ್ನು ಗುರುತಿಸಬಹುದು. ಒಂದು, ರಾಜಕೀಯ ಪ್ರಗತಿಪರತೆ ಆಗಿನ ವಸಾಹತುಗಳ ಸನ್ನಿವೇಶದಲ್ಲಿ ಮತ್ತು ಸಾಮಾಜಿಕ ಸಂಪ್ರದಾಯ ಶರಣತೆಯ ಹೊಂದಾಣಿಕೆ. (ಅಖಿಲ ಭಾರತೀಯ ಮಟ್ಟದಲ್ಲಿ ತಿಲಕ್‌ವಾದದ ಪ್ರಮುಖ ಗುಣ ಇದು.) ಎರಡು, ಸಾಮಾಜಿಕ ಪ್ರಗತಿಪರತೆ ಮತ್ತು ವಸಾಹತುಶಾಹಿ ಬೆಂಬಲಿಗ ಧೋರಣೆ. ಈ ಎರಡನೆಯ ಧಾರೆಯ ವ್ಯಾಪಕತೆ ಮತ್ತು ಇದು ಒಳಗೊಳ್ಳುವ ಬ್ರಾಹ್ಮಣೇತರ ಚಳುವಳಿಗಳ ಸಾಮಾಜಿಕ ಮೌಲ್ಯಗಳ ಸ್ವರೂಪದ ಬಗ್ಗೆ ಇನ್ನಷ್ಟು ಸಂಶೋಧನೆ, ಚರ್ಚೆ ನಡೆಯಬೇಕಾಗಿದೆ. ಪ್ರಗತಿಪರತೆ ಸಾಮಾಜಿಕ, ರಾಜಕೀಯ ವಲಯಗಳೆರಡರಲ್ಲೂ ಪ್ರಖರವಾಗಿ ಹಬ್ಬಿರುವ ಪ್ರಕರಣಗಳು ಕನ್ನಡ ನವೋದಯದ ಸಾಹಿತ್ಯಕ ಸಂಸ್ಕೃತಿಯಲ್ಲಿ ಅಷ್ಟು ವ್ಯಾಪಕ ಸಂಖ್ಯೆಯಲ್ಲಿಲ್ಲ ಎಂದೇ ಹೇಳಬೇಕು. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಂತರಿಕ ಶ್ರೇಣೀಕರಣಗಳ ವಿರುದ್ಧದ ಮೌಲ್ಯ ಪ್ರಜ್ಞೆ ಇರದ ರಾಷ್ಟ್ರದ ಕಲ್ಪನೆ ಒಂದು. ಆಂತರಿಕ ಶ್ರೇಣೀಕರಣಗಳೇ ಅಂತಿಮ ವಾಸ್ತವ ಎಂದು ಭಾವಿಸಿ ಉಳಿದ ರಾಜಕೀಯ ಮೌಲ್ಯಗಳನ್ನು ನಿರಾಕರಿಸುವ ರಾಷ್ಟ್ರದ ಕಲ್ಪನೆ ಇನ್ನೊಂದು. ಮೊದಲನೆಯದು ಕನ್ನಡ ಸಾಹಿತ್ಯದಲ್ಲಿ ಆನಂದಕಂದ, ಗೊರೂರು ಮತ್ತು ಒಟ್ಟು ದೇಶಪ್ರೇಣಿ ಸಿದ್ಧಾಂತದ, ರಾಷ್ಟ್ರೀಯ ಆದರ್ಶಗಳನ್ನು ಪ್ರತಿಪಾದಿಸುವ ನವೋದಯ ಕಾದಂಬರಿಗಳಲ್ಲಿ ಪ್ರತಿಫಲನಗೊಂಡಿದೆ. ಕುತೂಹಲದ ಸಂಗತಿ ಎಂದರೆ, ಎರಡನೆಯ ದೃಷ್ಟಿಕೋನದ ಶುದ್ಧ ಶೂದ್ರವಾದೀ ಕೃತಿಗಳು ಕನ್ನಡದಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಇಲ್ಲ. ಆದರೆ ಈ ಎರಡೂ ದೃಷ್ಟಿಕೋನಗಳ ಶಕ್ತಿಗಳನ್ನು ಕನ್ನಡದ ವಾಸ್ತವವಾದೀ ಪರಂಪರೆ ಮೇಳವಿಸಿಕೊಂಡು ತನ್ನ ಅತ್ಯುತ್ತಮ ಕೃತಿಗಳನ್ನು ಸೃಷ್ಟಿಸಿದೆ. ಇದರ ಜೊತೆಗೆ ಕನ್ನಡ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ರಾಷ್ಟ್ರೀಯತೆಯ ಮಿತಿಗಳನ್ನು ದಾಟಿ ಅಂತರರಾಷ್ಟ್ರೀಯ ಮೌಲ್ಯ ಪ್ರಜ್ಞೆಯನ್ನು ಪ್ರಕಟಿಸಿದೆ. ಕುವೆಂಪುರವರ 'ಅನಿಕೇತನ' ಅದರ ಒಂದು ಮುಖ. ಬೇಂದ್ರೆಯವರ 'ನರಬಲಿ' ಇನ್ನೊಂದು ಮುಖ.

ಒಟ್ಟಾರೆಯಾಗಿ ಹೇಳುವುದಾದರೆ, ರಾಷ್ಟ್ರೀಯತೆ ಎನ್ನುವ ಹೊಸ ಸೈದ್ಧಾಂತಿಕ ವಿಸ್ತಾರ ಸಾಹಿತ್ಯ ಸಂಸ್ಕೃತಿಯೊಂದರಲ್ಲಿ ಸೃಷ್ಟಿಸುವ ವೈವಿಧ್ಯಮಯ ಗ್ರಹಿಕೆಗಳ, ವೈರುಧ್ಯಗಳ ಅಧ್ಯಯನಕ್ಕೆ ಆಧುನಿಕ ಕನ್ನಡ ಸಾಹಿತ್ಯ ಫಲವತ್ತಾದ ಕ್ಷೇತ್ರವನ್ನು ಒದಗಿಸುತ್ತದೆ. ಆ ಪ್ರಯತ್ನದ ಕಡೆಗೆ ಇದೊಂದು ಚಿಕ್ಕ ಹಾಗೂ ಶಾಸ್ತ್ರೀಯ ಶಿಸ್ತು ಇರದ ಲಹರಿಯ ಬರವಣಿಗೆ.

(೧೯೮೮)

# ೨. ಕೃಷಿ

**ಆಶಯ :**

## ಇಬ್ಬರು ರೈತರು (ಆಯ್ದ ಭಾಗ)

**– ಸು.ರಂ. ಎಕ್ಕುಂಡಿ**

ಭೈರೊಸಿಂಹ ಅಂದರು, "ಹೌದು ಸ್ವಾಮಿ, ಹೌ
ದು. ನೀವು ಕಳಿಸಿದಿರಲ್ಲ ಒಂದು ಮೋಡ.
ರಾಮಗಿರಿಯಿಂದ ಅಲಕಾವತಿಯ ಯಕ್ಷಿ
ಣಿಗೆ, ಆ ಕುರಿತೆ ಒಂದಷ್ಟು ತಮ್ಮ ಕೂಡ
ಬಿನ್ನವಿಸಲೆಂದು ಬಂದದ್ದು ನಾವಿಬ್ಬರೂ,
ಬಾಯೊಣಗಿ ನಿಂತಿಹುದು ನಮ್ಮ ಪಯರು
ಹನಿನೀರಿಲ್ಲದೆ, ಮೋಡಕ್ಕೆ ಹೇಳುವಿರೆ...?
"ದಾರಿಯಲ್ಲಿವರಿಗೂ, ನೀರು ಸುರಿಸು."

❑

# ೨.೧ ಇಳೆಯಾಂಡ ಗುಡಿಮಾರನ ರಗಳೆ

**– ಹರಿಹರ**

ಕಂದ ॥ ಇಂದುಧರ ನಿನ್ನ ಬೆರಸಿ ।
ರ್ದಂದಿನ ಇಳೆಯಾಂಡ ಗುಡಿಯಮಾರರ ಚರಿತೆಯ ॥
ಸಂದಣಿಪ ಮಧುರವಚನಗ ।
ಳಿಂದೊರೆವೆಂ ಕೇಳ ಹಂಪೆಯ ವಿರೂಪಾಕ್ಷಾ ॥

**ರಗಳೆ**

ಶ್ರೀಶಿವನ ಸೆಜ್ಜೆಯೆನಿಸುವ ಚೋಳ ದೇಶ್‌ದೊಳ್
ಭಾಸುರಮೆನಿಸಿ ಮೆರೆವುದೊಂದು ಪುರವೊಪ್ಪದೊಳ್
ಇಳೆಯಾಂಡ ಗುಡಿಯೆಂಬುದಹರೊಳನುರಾಗದಿಂ
ಇಳೆಯಾಂಡ ಗುಡಿಮಾರನಾರೆಂಬ ನಾಮದಿಂ
ಎಸೆದಿರ್ಪನೊರ್ವ ಭಕ್ತಂ ಶಿವನ ಕುಡಿಮಗಂ
ವಸುಧೆಗೊಪ್ಪುವ ಮಹಾದೇವನೊಕ್ಕಲಮಗಂ
ಇಂತಿರಲ್ಯಿವಭಕ್ತಿ ಚಿತ್ತದೊಳ್ನೆಳನಳಿಸೆ
ಸಂತತಂ ಹರನೊಲವು ಕರಣದೊಳ್ಪಲ್ಲವಿಸೆ
ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ
ಅರಿಷಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ

ಇಂತು ತೊಂಬತ್ತೈದು ಬರಿಸಂಬರಂ ಮಾಡಿ
ಚಿಂತಿಸಿದನೀಶ್ವರಂ ತನ್ನೊಳೊಂದಂ ನೋಡಿ

ಈ ಭಕ್ತನಾ ಮನಮನೊರೆದು ನೋಡುವೆನೆಂದು
ವೈಭವಂ ಮಿಗೆ ನೋಡಿಕೊಂಡು ಪೋಗುವೆನೆಂದು
ಅಳವಡಿಸಿಕೊಂಡನೊಲ್ದಂತೊಂದು ಚೋಹಮಂ
ಇಳೆಗೆ ಮಿಗೆ ಪೊಸತೆನಿಪ ಶತವೃದ್ಧಭಾವಮಂ
ಶಿರದ ನೆರೆ ಮೆಯ್ಯ ತೆರೆ ಕರದ ಕೋಲಿಂದೆಸೆದು
ಸುರುಳ್ದ ತನು ಕೂತ ಬೆನ್ನೊಲ್ದ ಪುರ್ಬಿಂದೆಸೆದು
ಚೋಳದೇಶಪ್ರಾಂತಮಂ ಹರ್ಷದಿಂ ಪೊಕ್ಕು
ಶೂಲಿ ಭಕ್ತನ ಮನವ ನೋಡಲ್ಮನಂ ಮಿಕ್ಕುಂ

ಇಳೆಯಾಂಡಗುಡಿಯ ಹತ್ತಿರ್ನಟ್ಟಿರುಳ್ಬಂದು
ಜಲದಂಗಳಂ ನೆನೆದನದ್ಭುತಂ ಮಿಗಿಲಂದು
ನೆನೆಯೆ ತುಂಬಿದುವು ನಭವಂ ಮೇಘಸಂಕುಳಂ
ತನತನಗೆ ತೀವಿ ತೀಡಿತ್ತು ನೀರದ ಬಳಂ
ಗಗನಂ ಘನೀಭೂತವಾದುದೆಂಬಂದದಿಂ
ಮಿಗೆ ತೀವಿ ಸೂಸಿತ್ತು ಸಲಿಲಮುತ್ಸಾಹದಿಂ
ಮಳೆಗರೆದುದಾಗಸಂ ಜಲವಾದುದೆಂಬಂತೆ
ಇಳೆ ಜಲದ ಮೇಲೆ ತೇಂಕಾಡಿದುದು ಎಂಬಂತೆ
ಬಂದ ಮಳೆಯೊಳ್ಕವಿದ ಕಳ್ತಲೆ ಕರಂ ಪೆಚ್ಚೆ
ಸಂದಣಿಸಿ ದಿಙ್ಮುಖಂಗೆಡಿಸಿ ಜಗಮಂ ಮುಚ್ಚೆ
ಮಿಂಚುವೆಳಗುಚ್ಚಳಿಸಿದಂತೆ ದಟ್ಟಯಿಸಿ ಬರೆ
ಸಂಚಳಿಪ ಮನಮನಿಕ್ಕಲ್ತೆರಪನೀಯದಿರೆ

ಇಂತಿಡಿದ ಕಳ್ತಲೆಯೊಳಭವನೂರಂ ಪೊಕ್ಕು
ಕಂತುಹರ ತುಂತುರೊಳ್ನಡುಗುತೂರಂ ಪೊಕ್ಕು
ಇಳೆಯಾಂಡಗುಡಿಯಮಾರನ ಮನೆಗೆ ನಡೆತಂದು
ಚಳಿ ಹತ್ತಿ ಮಳೆಯೊಳಗೆ ಘಾಸಿಯಾಗುತೆ ಬಂದು
ನಡುಗಿ ಪಲ್ಪರೆಗುಟ್ಟ ಬಾಗಿಲೊಳ್ನಿಂದಿರಲ್
ಕಡು ಸೀತದಿಂದಳ್ಕಿ ಬಳ್ಕುತುಂ ಬಂದಿರಲ್

ಒಳಗೆ ಚಳಿ ಹತ್ತಿಯಿಳೆಯಾಂಡ ಗುಡಿಮಾರನಿರೆ
ಬಳಲುತುಂ ಮೂರುನಾಲ್ಕುಪವಾಸದಿಂದಲಿರೆ
ಹಾಸಲುಂ ಹೊದೆಯಲುಂ ಹರನ ನಾಮಂ ತನಗೆ
ಆಸುರದ ಚಳಿಗೆ ಮರೆ ಈಶನಾಮವೆ ತನಗೆ

ಒಳಗೆ ಭಾಳೇಕ್ಷಣನ ನಾಮ ತೀವಿರೆ ಕರಂ
ಇರಲವರ ಮನೆಯ ಬಾಗಿಲ ಹತ್ತೆ ಸಾರುತುಂ

ಹರಿಹರನಮಃಶಿವಾಯೆಂಬ ದನಿದೋರುತುಂ
ಇರೆ ಕೇಳುತಿಳೆಯಾಂಡಗುಡಿಮಾರನಾರೆಂದು
ಕರ ಬಳಲ್ದಲೆಲೆ ಎನ್ನಾಳ್ದರ ಧ್ವನಿಯೆಂದು
ಕೆಟ್ಟ ಕಳ್ತಲೆಯೊಳೆಯ್ತಪ್ಪರೇ ಎಲೆ ದೇವ
ನಟ್ಟರುಳ್ಮಳೆಯೊಳೆಯ್ತಪ್ಪರೇ ಎಲೆ ದೇವ
ಬಂದು ಗಳಗಳನೆ ಕದವಂ ತೆರೆದು ಕಾಣುತುಂ
ಬಂದು ಚರಣದ ಮೇಲೆ ಬೀಳ್ದು ಭಯವೇರುತುಂ
ಇರೆ ಕರಂ ನಡುನಡುಗಿ ಚಳಿ ಹೊಡೆದುದೆಲೆ ಮಗನೆ
ಹರಣಮಂ ಹತ್ತಿತ್ತು ಶೀತ ಹೂ ಹೂ ಮಗನೆ
ನಿಲಲಾರೆನಿನ್ನೆಂತು ಕೈಕಾಲ್ಸುರುಳ್ದಪವು
ಹಲವು ಮಾತೇನವಯವಂಗಳೆಲ್ಲರಳ್ದಪವು
ತನುವೊಡೆದುಪುದು ಚಳಿಗೆ ಮನ ಸೀಳ್ದಪುದು ಚಳಿಗೆ

ಎನೆ ಕೇಳ್ದು ಭಯಭಕ್ತಿಯಿಂ ನಡುಗಿ ಬಂದೊಳಗೆ
ಇರ್ಬರಿಪ್ಪೆಡೆಯ ಮಾಳಿಗೆಯ ಜಂತೆಯನುರ್ಚಿ
ಒರ್ಬನಂ ಕುಳ್ಳಿರಿಸಲಭವ ತಾಂ ಮೈಯ್ವೆರ್ಚಿ
ಪುಟುಮಾಡಿದಂ ಬೆಂಕಿಯಂ ಶಿವನ ಚಳಿಗೆಂದು
ನಟಿಸುತಿರ್ಪಂ ಪರಮನತುಳ ಶೀತಮನಂದು
ತೊಡೆಗಳಂ ತೋಳ್ಗಳಂ ಚರಣದ್ವಯಂಗಳಂ
ನಡು ಬೆನ್ನುರಸ್ಮಳಂ ವದನವಿರ್ಬದಿಗಳಂ
ಶೀತಮಿರದಂತೆ ಮೆಲ್ಲನೆ ಕಾಸಿಯೊತ್ತುತಿರೆ
ಭೂತೇಶ್ವರಂ ನೋಡಿ ಕೌತುಕಂಬಡುತುಮಿರೆ
ಎನಿತೆನಿತು ಚಳಿ ಹೋಗಲನಿತನಿತು ಪಸಿವಡಸೆ
ಅನುಮಿಸುತೆ ಪಸಿದೆ ಪಸಿದೆಂ ಎಂದು ಲವಲವಿಸೆ

ಕೇಳುತಿಳೆಯಾಂಡಗುಡಿಮಾರನಾರುಮ್ಮಳಿಸಿ
ಬೇಳಾಗಿ ಮೂರುಪಾಸದೊಳಿರ್ದು ಬೆಬ್ಬಳಿಸಿ
ಇಂತು ತಮ್ಮರಸಿಯರ ಮೊಗವ ನೋಡುತ್ತಲಿರೆ
ಚಿಂತಿಸಿದಳೊಂದು ತೆರನಂ ಶಿವಂ ಮೆಚ್ಚುತಿರೆ
ಮೊನ್ನೆ ಬಿತ್ತಿರ್ದ ಮೊಳೆವಿತ್ತನೆತ್ತಿಯೆ ತಂದು

ಪನ್ನಗಾಭರಣಂಗೆ ಪಸಿವನಾರಿಪುದೆಂದು
ಅರುಪೆ ಹರುಷಂದಳೆದು ಪರಮಭಕ್ತಂ ಮೆಚ್ಚಿ
ಪೊರಮಟ್ಟನೊಲ್ದು ಮಧ್ಯಮರಾತ್ರಿಯೊಳ್ಪೆಚ್ಚಿ

ಮತ್ತೆ ಮಳೆ ಸಿರಿದಾಗೆ ಮತ್ತೆ ಚಳಿ ಸಿರಿದಾಗೆ
ಮತ್ತೆ ಕಳ್ತಲೆ ಸುತ್ತಿಮುತ್ತಿಯನ್ನತವಾಗೆ
ಬರುತಿರ್ದನಪ್ರತಿಮ ಶಿವಭಕ್ತ ನುರವಣಿಸಿ
ಪುರದ ಹೊಲಗಳ ದಾಂಟ ಕಳ್ತಲೆಯನುತ್ತರಿಸಿ
ಹಳ್ಳಂಗಳಂ ಕೆರೆಗಳಂ ತೊರೆಗಳಂ ದಾಂಟ
ಕೊಳ್ಳಂಗಳಂ ಕೊಳಗಳಂ ಲಂಘಿಸುತೆ ದಾಂಟ
ಹೋಗಿ ಗರ್ದ್ವೆಯೊಳಿರ್ದ ಮೊಳೆವಿತ್ತನೆತ್ತಿದಂ
ರಾಗದಿಂ ತಂದವಂ ಗೂಡೆಯೊಳಗಿಕ್ಕಿದಂ
ತಿರುಗಿ ಬರುತಿರ್ದಂ ಹರಂ ಹಸಿದನೆಂದೆನುತೆ
ಉರವಣಿಸಿ ಬರುತುಂ ಬಳಲ್ದನೀಶ್ವರನೆನುತೆ

ಬಂದು ತಮ್ಮರಸಿಯರ ಮುಂದಿಳುಪಿ ನಲಿನಲಿದು
ತಂದ ಮೊಳೆವಿತ್ತನಾನಂದದಿಂದಂ ಹುರಿದು
ಅಮೃತಾನ್ನವೆನಿಪವೋಗರವ ನಲವಿಂ ಮಾಡಿ
ಸಮೆದ ಕೀರೆಯ ತಂದು ಮೇಲೋಗರಂ ಮಾಡಿ
ಅನುಮಿಸುತೆ ಭಕ್ತನಾರೋಗಣೆಗೆ ಎಡೆಮಾಡಿ
ತನಯನಂ ಕದಳೀದಳಕ್ಕೆ ಕಳುಪಲ್ನೋಡಿ
ನಿಂದಿರ್ದು ಬಾಳೆಯೆಲೆಯಂ ಕೊಯ್ದು ತರಲಲ್ಲಿ
ಇಂದುಧರನಾಜ್ಞೆಯಿಂದುರಗಂ ಪಿಡಿಯಲಲ್ಲಿ
ಮರೆದೊರಗಿದಂತಲ್ಲಿ ದೀರ್ಘನಿದ್ರೆಯೊಳಿರಲ್
ಪೊರಗೆ ಶಶಿಧರನತ್ತ ಪಸಿದೆನೆಂದೆನುತಿರಲ್
ತಡೆದನೆಂದಿಳೆಯಾಂಡಗುಡಿಮಾರನೆಯ್ತಂದು
ಪಿಡಿದುರಗನಿಂ ಮಡಿದ ಮಗನನೀಕ್ಷಿಸುತಂದು

ಇದನರಿದೊಡೀತನುಣಲೊಲ್ಲನೇವೇಳುವೆಂ
ಇದನರುಪದುಣಲಿಕ್ಕಿ ಸಂತಸಂ ಮಾಡುವೆಂ
ಎಂದೆಲೆಗಳಂ ಕೊಯ್ದು ತಂದು ಭಕ್ತನ ಮುಂದೆ
ಚೆಂದಚೆಂದದೊಳು ಪಾಸುತ್ತೆ ಸಂತಸದಿಂದೆ
ತಿಳಿನೀರ್ಗಳಂ ತಳಿದು ತೊಳಪ ಓಗರವಿಕ್ಕಿ

ಎಳೆಯ ಕೀರೆಯ ಸಮೆದ ಮೇಲೋಗರವನಿಕ್ಕಿ
ಆರಯ್ಯುವುದು ಸದಾಶಿವ ಕರುಣದಿಂದೆನುತೆ
ಹಾರಯ್ಸುತುಂ ಶಂಭುವೇ ಕರುಣಿಸೆಂದೆನುತೆ
ಪುರಹರಂ ಬೆಸಸುತ್ತಲಾವೊರ್ಬರುಣ್ಣೆವೆನೆ
ಹರಭಕ್ತ ಸಹಪಜ್ತಿಯಲ್ಲುಣ್ಣವೇಳ್ಕುಮೆನೆ
ತಂದೆ [ತಾಯ್] ಮಕ್ಕಳೆಲ್ಲರ್ಕುಳಿಪುದೆನೆ ಕೇಳ್ದು

ನೊಂದು ಹರನುಣಲೊಲ್ಲನಿನ್ನೇವೆನೆನುತೆಳ್ದು
ಮಗನಳಿದುದಂ ಆರುಪಬಾರದೇವೇಂ ಶಿವನೆ
ಮಗನಿಲ್ಲದಿರ್ದೊಡುಣಲೊಲ್ಲನೇವೇಂ ಭವನೆ
ಕರೆದು ನೋಡುವೆನೇಳದಿರ್ದೊಡಿಂದಭವಂಗೆ
ಶಿರವನೊಬ್ಬಿಸುವೆನುಣಲೊಲ್ಲದ ಮಹೇಶಂಗೆ
ಎನುತೆ ನಡೆತಂದು ತತ್ಸುತನ ಹತ್ತಿರೆ ನಿಂದು
ತನುಜನೇಳ್ಮಗನೆ ಹರನುಣಲೊಲ್ಲನೇಳೆಂದು
ಕರೆಯಲಾಗಳೆ ನಿದ್ರೆ ತಿಳಿದೇಳ್ವರಂದದಿಂ
ಚರಿತದಿಂದೆಳ್ದ ಮಗನಂ ಕೊಂಡು ರಾಗದಿಂ
ಬರೆ ಜಗಜ್ಜ್ಯೋತಿರ್ಮಯಂ ಬೆಳಗುತಿರಲೊಳಗೆ
ಪುರಹರಂ ವೃದ್ಧವೇಷವನಿಳಿಪಿ ತೊಳತೊಳಗೆ
ಜಡೆ ಚಂದ್ರಕಳೆ ನೊಸಲಕಣ್ನಾಗಕುಂಡಲಂ
ತೊಡಿಗೆಯಹಿ ಕರೆಗೊರಲ್ಮಿಸುಪ ಮುಖಮಂಡಲಂ
ದಶಭುಜಂ ಡಮರುಗ ತ್ರಿಶೂಲಂ ಗಜಾಜಿನಂ
ದಿಸವೆಸೆಯೆ ಬೆಳಪ ಪುಲಿದೊವಲು ಪಂಚಾನನಂ
ತಾನೊಪ್ಪಿ ರವಿಕೋಟಿತೇಜಮಂ ಮಸುಳಿಸುತೆ
ನಾನಾ ಸುಧಾಕರಪ್ರಭೆಗಳಂ ರಂಜಿಸುತೆ

ಇರೆ ಕಾಣುತಿಳೆಯಾಂಡಗುಡಿಮಾರರೆಯ್ತಂದು
ಚರಣತಳದೊಳ್ಬಿದ್ದು ನೆರೆ ಪುಳಕಿಸುತ್ತಂದು
ದೇವಾ ಜರಾಜೀರ್ಣ ವೇಷಮಂ ಕೆಯ್ಕೊಂಡು
ದೇವ ಮಳೆಯೊಳ್ಚಳಿಯೊಳೆನ್ನಂ ಮನಂಗೊಂಡು
ಬಪ್ಪುದೇ ಇಂತಿರುಳು ಕರುಣಿ ಕರುಣಿಗಳರಸ
ಒಪ್ಪವಾಯ್ತೆನ್ನ ಮಾಟಂ ಹೈಮವತಿಯರಸ
ಚಳಿ ಹತ್ತಿತೇ ಹತ್ತಿತೇ ತಂದೆ ಹೇಳಯ್ಯ
ಮಳೆಯೊಳಗೆ ತನು ನನೆದು ಕೊರಗಿತೇ ಹೇಳಯ್ಯ

ಎನುತಿರೆ ಗಣೇಶ್ವರರ್‌ನಡೆತಂದರುರವಣಿಸಿ
ತನತನಗೆ ಶಿವನನರಸುತ್ತಲ್ಲಿ ಸಂದಣಿಸಿ
ನಂದೀಶ ವೀರಭದ್ರಾದಿ ಗಣಸಂಕುಳಂ
ಬಂದು ರುದ್ರಂಗೆರಗಿ ನಿಂದಿರೆ ನಿರಾಕುಳಂ
ಕಂಡು ಶಿವನೆಂದನೆಲೆ ನಂದೀಶ ಕೇಳಯ್ಯ
ಕಂಡೆನಿಲ್ಲಿಂತಪ್ಪ ನೇಹಮಂ ಪೊಸತಯ್ಯ
ಈ ಮಳೆಯೊಳೀ ಚಳಿಯೊಳಿಂತು ಪೋದವರುಂಟೆ
ಏಮಾತೊ ಮೊಳೆವಿತ್ತನೆತ್ತಿ ತಂದವರುಂಟೆ
ಮಗನ ಸಾವಂ ನೋಡದುಣಲಿಕ್ಕಿದವರುಂಟೆ
ಜಗದೊಳಗೆ ವಾಂಛಿತವನುಳಿದು ಮಾಳ್ಪವರುಂಟೆ
ಎಂದು ಕೊಂಡಾಡುತಿರೆ ಪೂಮಳೆಗಳೆರಗಿದುವು

❑

# ೨.೨ ಸಹಜ ಕೃಷಿ

– ಪೂರ್ಣಚಂದ್ರ ತೇಜಸ್ವಿ

## ೧. ಮತ್ತೆ ಪ್ರಕೃತಿಯ ತೆಕ್ಕೆಗೆ!

ಕುರೋಸೋವಾ ಹೆಸರು ಕೃಷಿ ವಿಜ್ಞಾನದಲ್ಲಿ ಅತ್ಯಂತ ಪ್ರಮುಖವಾದ ಹೆಸರು. ಸಸ್ಯಗಳ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಹಾರ್ಮೋನುಗಳಲ್ಲಿ ಒಂದಾದ ಜಿಬ್ರಾಲಿಕ್ ಹಾರ್ಮೋನನ್ನು ಸಂಶೋಧಿಸಿದವರು ಕುರೋಸೋವಾ. ಈ ಸಂಶೋಧನೆ ಅನಂತರ ಹೈಬ್ರಿಡ್ ತಳಿಗಳ ಉತ್ಪಾದನೆಯಲ್ಲಿ ಕೃಷಿರಂಗದಲ್ಲಿ ಅಗಾಧ ಕ್ರಾಂತಿ ಉಂಟುಮಾಡಿತು. ಈ ಮಹಾನ್ ವಿಜ್ಞಾನಿ ಕುರೋಸೋವಾರ ಅಚ್ಚುಮೆಚ್ಚಿನ ಶಿಷ್ಯನೇ ಮಸಾನಬು ಫುಕೋಕಾ.

ಇಂಥ ಗುರು ಪರಂಪರೆಯ ಹಿನ್ನೆಲೆಯಿಂದ ಬಂದ ಫುಕೋಕಾ ಎಲ್ಲರಿಗೂ ಅಚ್ಚರಿಯಾಗುವಂತೆ ಸಂಪೂರ್ಣ ದಿಕ್ಕು ಬದಲಿಸಿ ಬೇರೆ ದಾರಿಯನ್ನೆ ಹಿಡಿದ, ಫುಕೋಕಾ ಕಂಡುಹಿಡಿದಿದ್ದು ಹೊಸ ತಳಿಗಳನ್ನಲ್ಲ, ಹೊಸ ರಾಸಾಯನಿಕ ಗೊಬ್ಬರಗಳನ್ನಲ್ಲ, ಆತ ಹೊಸದೇ ಆದ ಕೃಷಿ, ಪದ್ಧತಿಯೊಂದಕ್ಕೆ ಕಾರಣನಾದ. ಇದನ್ನೇ ಇವತ್ತು ನೈಸರ್ಗಿಕ ಕೃಷಿ ಅಥವಾ ಸ್ವಾಭಾವಿಕ ವ್ಯವಸಾಯ ಎಂದು ಕರೆಯುತ್ತಾರೆ. ಇದನ್ನೆ Do nothing ಕೃಷಿ ಅಥವ ಏನೂ ಮಾಡದ ಬೇಸಾಯ ಎಂದು ಫುಕೋಕಾ ಕರೆದ. ಆದರೆ ಏನೂ ಮಾಡದ ಈತನ ಬೇಸಾಯವನ್ನು ನಾವೂ ಆರಂಭಿಸುವ ಮೊದಲು ತುಂಬಾ ಮಾಡುವುದಿದೆ. ಅದನ್ನು ಯೋಚಿಸುವುದೇ ನನ್ನ ಉದ್ದೇಶ.

ಕೆಲವು ತಿಂಗಳುಗಳಿಂದ ನನಗೆ ಫುಕೋಕಾ ಯೋಚನೆಗಳು, ಮಾತುಗಳೇ ತಲೆಯಲ್ಲಿ ಗುಂಗಾಡುತ್ತಾ ಇದೆ. ಕಳೆದ ಇಪ್ಪತ್ತೈದು ವರ್ಷದ ನನ್ನ ಬೇಸಾಯದ ಬದುಕಿನಲ್ಲಿ ನಾನೇಕೆ ಫುಕೋಕಾ ರೀತಿ ಯೋಚಿಸಲಿಲ್ಲ ಎಂದು ನನಗೇ ಆಶ್ಚರ್ಯವಾಗುತ್ತದೆ. ಸೈದ್ಧಾಂತಿಕವಾಗಿ, ತಾತ್ವಿಕವಾಗಿ ನಾನು ಫುಕೋಕಾ ಚಿಂತನೆಗೆ ತೀರಾ ಹತ್ತಿರದಲ್ಲೇ ನಡೆದು ಬಂದಿದ್ದೆ. ಆದರೂ ಯಾಕೆ ಫುಕೋಕಾಗೆ ಹೊಳೆದದ್ದು ನನಗೆ ಹೊಳೆಯಲಿಲ್ಲ ಎಂದು ಆಶ್ಚರ್ಯವಾಗುತ್ತೆ. ನಾನೆಲ್ಲಿ ದಾರಿ ತಪ್ಪಿದೆ? ಎಲ್ಲಿ ಎಡವಿದೆ? ಇದನ್ನೇ ಆಲೋಚಿಸುತ್ತಿದ್ದೇನೆ.

ಫುಕೋಕಾಗೆ ಇದು ಹೊಳೆದುದಾದರೂ ಒಂದು ವಿಚಿತ್ರ. ಫುಕೋಕಾ ಅನಾರೋಗ್ಯ ಪೀಡಿತನಾಗಿ ಆಸ್ಪತ್ರೆಯಲ್ಲಿದ್ದ. ಇದ್ದಕ್ಕಿದ್ದಂತೆ ಕೊರೆಯುವ ಚಳಿಯಲ್ಲಿ ಆತನನ್ನು ಒಂದು ಬಗೆಯ ಏಕಾಂಗಿತನ, ಖಿನ್ನತೆ ಆವರಿಸತೊಡಗಿತು. ಯಾವುದೋ ಒಂದು ಬಗೆಯ ಆಳವಾದ ಸಾವಿನ ಭೀತಿ ಆಕ್ರಮಿಸತೊಡಗಿತು.

ಆತ ಗುಣಮುಖನಾಗಿ ಆಸ್ಪತ್ರೆಯಿಂದ ಹೊರ ಬಂದ. ಆದರೆ ಖಿನ್ನತೆಯಿಂದ, ಭೀತಿಯಿಂದ ಹೊರ ಬರಲಾಗಲಿಲ್ಲ. ನಿದ್ದೆ ಬರುತ್ತಿರಲಿಲ್ಲ. ಯಾವ ಕೆಲಸ ಮಾಡಲೂ ಏಕಾಗ್ರತೆ ಇರುತ್ತಿರಲಿಲ್ಲ. ಇಡೀ ಬದುಕಿನ ಬಗ್ಗೆ ಸಂದೇಹ, ಸಂಶಯ ಉದ್ಭವವಾಗತೊಡಗಿತು. ಹೀಗೇ ಈ ಸ್ಥಿತಿಯಲ್ಲೇ ಅಡ್ಡಾಡುತ್ತಿರಬೇಕಾದರೆ ಸಮುದ್ರತೀರದ ಎದುರಿದ್ದ ಗುಡ್ಡ ಒಂದರ ಮೇಲೆ ನಿತ್ರಾಣನಾಗಿ ಆತ ಕುಸಿದು ಬಿದ್ದೇಬಿಟ್ಟ. ನಿದ್ರೆಯೂ ಅಲ್ಲದ, ಎಚ್ಚರವೂ ಅಲ್ಲದ ಸ್ಥಿತಿ.

ರಾತ್ರಿ ಎಲ್ಲಾ ಫುಕೋಕಾ ಹಾಗೇ ಬಿದ್ದಿದ್ದ. ಬೆಳಗಾಗತೊಡಗಿತು. ರಾತ್ರಿಯ ಮಂಜು ಇದ್ದಕ್ಕಿದ್ದ ಹಾಗೆ ಅಂತರ್ಧಾನವಾಯ್ತು. ಮೆಲ್ಲಗೆ ತಂಗಾಳಿ ಬೀಸತೊಡಗಿತು. ಎಲ್ಲಿಂದಲೋ ಒಂದು ಕೊಕ್ಕರೆ ಕೂಗಿಕೊಂಡು ಆಕಾಶಕ್ಕೆದುರು ಹಾರಿತು. ಸಮುದ್ರದ ಅಲೆಗಳಿಂದ ಪ್ರಾತಃ ಸೂರ್ಯನ ಕಿರಣಗಳು ಫಳಫಳ ಪ್ರತಿಫಲಿತವಾಗತೊಡಗಿತು. ಫುಕೋಕಾನ ದೇಹದಾದ್ಯಂತ ಅನಿರ್ವಚನೀಯ ಆನಂದದ ಅಲೆಗಳು ಏಳತೊಡಗಿದವು. ಬ್ರಹ್ಮಾಂಡದ ಸರ್ವಶೂನ್ಯತೆ ಅವನಿಗೆ ಅರಿವಾಗತೊಡಗಿತು. ತನ್ನ ಜ್ಞಾನ, ವಿದ್ಯೆ, ತಿಳುವಳಿಕೆಗಳೆಲ್ಲದರ ನಿರರ್ಥಕತೆ ಸೃಷ್ಟಿಯ ಜೀವ ಸ್ರೋತದ ಎದುರು ಅರ್ಥವಾಗತೊಡಗಿತು. ಈ ಅನುಭವದ ಅನಂತರ ಫುಕೋಕಾ ಮನಸ್ಸಿನಲ್ಲಿದ್ದ ದುಗುಡ, ಖಿನ್ನತೆಗಳೆಲ್ಲ ದೂರಾದವು. ಆತ್ಮ ಹಗುರಾಯ್ತು, ತನ್ನ ವಿದ್ಯೆ, ತಿಳುವಳಿಕೆ, ಪೂರ್ವಗ್ರಹಗಳಿಂದ ಆತ ಹಠಾತ್ತಾಗಿ ಮುಕ್ತನಾದ.

ಫುಕೋಕಾನಿಗೆ ಇದ್ದಕ್ಕಿದ್ದಂತೆ ಸ್ಫುರಿಸಿದ ಈ ದರ್ಶನಕ್ಕೂ ಮುಂದೆ ಆತ ಕೃಷಿ ವಿಧಾನದಲ್ಲಿ ಕಂಡುಕೊಂಡ ಕ್ರಾಂತಿಕಾರಿ ವಿಧಾನಗಳಿಗೂ ಮೇಲು ನೋಟಕ್ಕೆ ಯಾವುದೇ ಸಂಬಂಧವೂ ಕಾಣುವುದಿಲ್ಲ. ಸೃಷ್ಟಿಯ ರಹಸ್ಯತಮ ಕಾರ್ಯ ವಿಧಾನಗಳನ್ನು ಅರಿತುಕೊಂಡ ಆತನ ತಿಳುವಳಿಕೆಗೆ ಈ ಕಾಣ್ಕೆ ಒಂದು ಬಗೆಯ ಪ್ರೇರಣೆಯನ್ನೂ ಮನಸ್ಸಿನ ಭಿತ್ತಿಯನ್ನೂ ನಿರ್ಮಿಸಿತಷ್ಟೆ.

ಏಕೆಂದರೆ ಆತನೇ ಹೇಳುತ್ತಾನೆ, “ಈ ಮಹತ್ತಾದ ಅನುಭವದ ಅನಂತರ ನನ್ನ ಮನಸ್ಸಿನ ದುಗುಡ ದುಮ್ಮಾನಗಳು ತೊಲಗಿತಷ್ಟೇ ಹೊರತು ನಾನೊಬ್ಬ ಎಲ್ಲರಂಥ ಸರಳ ಸಾಮಾನ್ಯ ಪೆದ್ದ ಕೃಷಿಕನಾಗೇ ಮಿಕ್ಕೆಲ್ಲಾ ವಿಷಯಗಳಲ್ಲೂ ಇದ್ದೆ. ಆದರೆ ಆಗ ಆ ಘಳಿಗೆಯಲ್ಲಿ ನನಗನ್ನಿಸಿದ ಕೆಲವು ಸತ್ಯಗಳನ್ನು ಸುಮಾರು ಮೂವತ್ತು ವರ್ಷಗಳ ಪರ್ಯಂತ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಒರೆ ಹಚ್ಚಿ ನೋಡುತ್ತಾ ಬಂದಿದ್ದೇನೆ.

ಅಂದಿನಿಂದ ಇಂದಿನವರೆಗೆ ನನಗೆ ಆಗ ಅನ್ನಿಸಿದ್ದಕ್ಕೆ ವ್ಯತಿರಿಕ್ತವಾದುದು ಗೋಚರವಾಗಿಲ್ಲ."

ಹಾಗಾದರೆ ಫುಕೋಕಾನಿಗೆ ಆವಾಗ ಅನ್ನಿಸಿದ್ದೇನು? ಅದನ್ನು ಆತ ಎಲ್ಲಿಯೂ ಹೇಳುವುದೇ ಇಲ್ಲ. ಏಕೆಂದರೆ ಅದನ್ನು ಭಾಷೆಯಲ್ಲಿ ಹೇಳಿದ ಕೂಡಲೆ ಅದು ಸಂಪೂರ್ಣ ವಿಕೃತವಾದ ಹೇಳಿಕೆಯಾಗುತ್ತದೆಯೇ ಹೊರತು ಅನುಭವವಾಗುವುದಿಲ್ಲ ಎಂದು ಆತನ ಅನ್ನಿಸಿಕೆ. ಫುಕೋಕಾನದು ಒಂದು ಬಗೆಯ ಪ್ರಶ್ನೋತ್ತರಗಳ ಪರಿಧಿಯನ್ನು ಮೀರಿದೆ ನಿರುತ್ತರ ವ್ಯಕ್ತಿತ್ವ, ಎಲ್ಲಾ ಪ್ರಶ್ನೆಗಳಿಗೂ ಆತ ಕೇವಲ ಬದುಕಿಯೇ ಉತ್ತರ ಕಂಡುಕೊಂಡವ.

ಇಲ್ಲಿಂದ ಮುಂದೆ ಸುಮಾರು ಮೂವತ್ತು ವರ್ಷಗಳ ಕಾಲ ಸೃಷ್ಟಿಯ ಛಂದಸ್ಸನ್ನು ತಿಳಿಯಲು, ಅದರ ಸಹಜ ಗತಿಯನ್ನು ಅನುಸರಿಸಿ ಕೃಷಿಯನ್ನು ರೂಪಿಸಲು ಫುಕೋಕಾ ಹೆಜ್ಜೆಹೆಜ್ಜೆಯಾಗಿ ನಡೆಸಿದ ಪ್ರಯೋಗಗಳೇ ಮುಂದೆ 'ಸಹಜ ಕೃಷಿ' ಎಂದು ಪ್ರಪಂಚದಾದ್ಯಂತ ಪ್ರಖ್ಯಾತವಾಯ್ತು. ಕೃಷಿ ಕ್ಷೇತ್ರದ ಅತ್ಯುನ್ನತ ಮನ್ನಣೆಯನ್ನು ಫುಕೋಕಾಗೆ ತಂದುಕೊಟ್ಟಿತು.

ನಮಗೆ, ಅದೂ ಭಾರತೀಯ ರೈತರಿಗೆ, ಇಂದು ಮುಖ್ಯವಾಗಿ ತಿಳಿಯಬೇಕಾಗಿರುವುದು ಫುಕೋಕಾ ಕೃಷಿಯ ಉಪಯುಕ್ತತೆ, ಬಡತನ, ರೋಗರುಜಿನ, ಪರಿಸರದ ವಿನಾಶಗಳಲ್ಲಿ ಪ್ರತ್ಯಕ್ಷ ನರಕದಲ್ಲಿ ಬಿದ್ದಿರುವ ನಮ್ಮ ಗ್ರಾಮಗಳ ಶಾಪ ವಿಮುಕ್ತಿಗೆ ಫುಕೋಕಾರಿಂದ ಮಾರ್ಗದರ್ಶನ ದೊರೆತೀತೆ ಎನ್ನುವುದು ಬಹುಮುಖ್ಯ. ನಾನೀಗ ಫುಕೋಕಾ ಬಗ್ಗೆ ಬರೆಯ ಹೊರಟಿರುವುದು ನಿಮ್ಮ ಯಾವ ರೀತಿಯ ಮನರಂಜನೆಗೂ ಅಲ್ಲ. ನಮ್ಮ ಗ್ರಾಮೀಣ ಯುವಕರು ಹೊಸದೊಂದು ಬಾಳಿಗೆ ಪಾದಾರ್ಪಣ ಮಾಡುವ ದಿಟ್ಟ ಹೆಜ್ಜೆಗಳನ್ನಿಡಲಿ ಎಂದು ಮಾತ್ರ.

ರಾಸಾಯನಿಕ ಔಷಧಿಗಳಿಲ್ಲ, ರಸಗೊಬ್ಬರಗಳಿಲ್ಲ, ಉತ್ತುಬಿತ್ತುವ ಬೇಸಾಯದ ಅಗತ್ಯ ಇಲ್ಲ! ಹಾಗಾದರೆ ಇದೊಂದು ಸುಖ ಸೋಪಾನವೇ ಸರಿ ಎಂದು ಜನ್ಮತಃ ಮಾನಸಿಕ ಸೋಮಾರಿಗಳೂ ಸಂಪ್ರದಾಯ ಶೂರರೂ ಆದ ನಮ್ಮ ರೈತರು ತಪ್ಪು ದಾರಿ ಹಿಡಿಯಬಾರದೆಂದೇ ನಾನು ವಿವರವಾಗಿ ಫುಕೋಕಾ ಬಗ್ಗೆ ರೈತರಿಗೆ ತಿಳಿಸಲಿಚ್ಛಿಸುತ್ತೇನೆ, ಅಷ್ಟೇ ಅಲ್ಲ, ಫುಕೋಕಾನನ್ನ ಸಂಪೂರ್ಣ ಅರ್ಥಮಾಡಿಕೊಂಡೆವೆಂಬ ನಂಬಿಕೆ ಬಿಂದ ಹೊರತೂ ಸ್ವಾಭಾವಿಕ ಬೇಸಾಯಕ್ಕೆ ಕೈಹಾಕುವುದು ಅಪಾಯಕರವೆಂದೆ ರೈತ ಮಿತ್ರರಿಗೆ ಎಚ್ಚರಿಕೆ ಕೊಡಬಯಸುತ್ತೇನೆ. ಇದಕ್ಕೆ ಉದಾಹರಣೆ ಇನ್ನ್ಯಾರೂ ಅಲ್ಲ, ಸಾಕ್ಷಾತ್ ಫುಕೋಕಾನೇ!

ಮತ್ತೆ ಫುಕೋಕಾ ಸುಮಾರು ಎಂಟು ವರ್ಷ ಕೃಷಿ ಬಿಟ್ಟು ಕೆಲಸಕ್ಕೆ ಸೇರಿದ. ಈ ಎಂಟು ವರ್ಷಗಳ ಅವಧಿಯಲ್ಲಿ ಫುಕೋಕಾ ತನ್ನ ಸ್ವಾಭಾವಿಕ ಕೃಷಿ ಯಾಕೆ ಮೊದಲ

ಹಂತದಲ್ಲೇ ಮಣ್ಣು ಮುಕ್ಕಿತು, ಹಾಗಾದರೆ ತನ್ನ ನಂಬಿಕೆ ತಪ್ಪೆ, ತಾನು ಎಲ್ಲಿ ಎಡವಿದೆ ಎನ್ನುವುದನ್ನೇ ಚಿಂತಿಸಿದ.

ನಿಧಾನವಾಗಿ ಪ್ರಕೃತಿಯ ಗುಟ್ಟುಗಳು ಗೊತ್ತಾಗತೊಡಗಿದವು. ತನ್ನ ಕೃಷಿಯಿಂದ ಯಾಕೆ ಕಿತ್ತಳೆ ತೋಟ ಹಾಳಾಯ್ತು ಎಂದು ಅರಿವಾಗತೊಡಗಿತು.

ಸ್ವಾಭಾವಿಕ ಕೃಷಿಗೆ ನಾವು ರಾಸಾಯನಿಕ ಕೃಷಿಗಾಗಿ ಅಭಿವೃದ್ಧಿಪಡಿಸಿರುವ ಹೈಬ್ರಿಡ್ ತಳಿಗಳು ಆಗುವುದಿಲ್ಲ ಎನ್ನುವ ಮೊದಲನೆಯ ಸತ್ಯ ಫುಕೋಕಾಗೆ ಹೊಳೆಯಿತು. ಫುಕೋಕಾನ ಕಿತ್ತಳೆ ತೋಟದ ತಳಿಗಳು ರಾಸಾಯನಿಕ ಕೃಷಿಗೆ ಒಗ್ಗಿಕೊಂಡ ತಳಿಗಳು. ಅವನ್ನು ಹಠಾತ್ತಾಗಿ ಸ್ವಾಭಾವಿಕ ಕೃಷಿಗೆ ಒಳಪಡಿಸಿದರೆ ಅವು ಬದುಕಲಾರವು.

ಎರಡನೆಯದಾಗಿ, ಕೃತಕ ರಾಸಾಯನಿಕ ಕೃಷಿ ವಿಧಾನ ಅನುಸರಿಸುತ್ತಾ ಇದ್ದವ ಇದ್ದಕ್ಕಿದ್ದಂತೆ ಸ್ವಾಭಾವಿಕ ಕೃಷಿ ಮಾಡಲು ಹೊರಟರೆ ಕಸಿ ಮಾಡಿ ಗಿಡಗಳ ಸ್ವಾಭಾವಿಕ ರಚನೆಯನ್ನು ವಿಕೃತಗೊಳಿಸಿ ಕುಗ್ಗಿಸಿದ್ದರಿಂದ ಅವುಗಳಲ್ಲಿ ಯದ್ವಾತದ್ವಾ ಚಿಗುರು ಕೊಂಬೆರೆಂಬೆಗಳು ಮೂಡಿ ಗಿಡದ ಸಹಜ ಸ್ವರೂಪ ಹಾಳಾಗಿ ಕ್ರಿಮಿಕೀಟಗಳಿಗೆ ಅದು ಒಳ್ಳೆ ಆವಾಸಸ್ಥಾನವಾಯ್ತು. ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಮೂಲ ತಳಿಯನ್ನೇ ತಂದು ಅದನ್ನೂ ಸ್ವಾಭಾವಿಕವಾಗೇ ಬೆಳೆಯಲು ಬಿಡಬೇಕೇ ಹೊರತು ಅಭಿವೃದ್ಧಿಪಡಿಸಿದ ಹೈಬ್ರಿಡ್ ತಳಿಯನ್ನು ಕಸಿಮಾಡಿ ರೂಪಿಸಿದ ಹಂತದಲ್ಲಿ ಸ್ವಾಭಾವಿಕ ಕೃಷಿಗೆ ಅಳವಡಿಸಿದರೆ ಅದು ಅನಾಹುತಕ್ಕೆ ನಾಂದಿ ಎಂದು ಫೋಕೋಕಾ ತೀರ್ಮಾನಿಸಿದ.

ಎಂಟು ವರ್ಷದ ತರುವಾಯ ತಪ್ಪುಗಳ ತಿಳುವಳಿಕೆಯೊಂದಿಗೆ ಮತ್ತೆ ಫುಕೋಕಾ ತನ್ನ ಹಳ್ಳಿಗೆ ಹಿಂದಿರುಗಿದ.

## ೨. ಅತ್ಯಂತ ಸರಳ ಸತ್ಯಗಳು

ಸುಮಾರು ಎಂಟು ವರ್ಷಗಳವರೆಗೆ ಕೃಷಿಯಿಂದ ದೂರ ಹೋದ ಫುಕೋಕಾ ಅನಂತರ ಮತ್ತೆ ಊರಿಗೆ ಹಿಂದಿರುಗಿದ. ಎಂಟು ವರ್ಷಗಳ ನಿರಂತರ ಧ್ಯಾನದಿಂದ ಅವನಿಗೆ ಆಗಲೇ ಕೆಲವಾರು ನಿಸರ್ಗದ ಸತ್ಯಗಳ ಅರಿವಾಗಿದ್ದಿತು. ಮತ್ತೊಮ್ಮೆ ತಾನು ಕಂಡುಕೊಂಡ ಸತ್ಯಗಳನ್ನು ಸಾಕ್ಷಾತ್ತಾಗಿ ಜಮೀನಿನಲ್ಲಿ ಒರೆಹಚ್ಚಿ ನೋಡಲು ಫುಕೋಕಾ ಹಿಂದಿರುಗಿದ್ದ. ಆಗತಾನೆ ಎರಡನೇ ಮಹಾಯುದ್ಧ ಮುಗಿದು ಜಪಾನ್ ಜರ್ಝರಿತವಾಗಿತ್ತು. ಫುಕೋಕಾ ಹಳ್ಳಿಗೆ ಹಿಂದಿರುಗಿದವನು ಮತ್ತೆ ಹೊರ ಜಗತ್ತಿನತ್ತ ಕಣ್ಣಹಾಯಿಸದೆ ಏನೂ ಮಾಡದ, ಕನಿಷ್ಠ ಕೆಲಸದ ಕೃಷಿ ಪದ್ಧತಿಯೊಂದನ್ನು ರೂಪಿಸಲು ಸುಮಾರು ಮೂವತ್ತು ವರುಷ ನಿಸರ್ಗದೊಡನೆ ಪ್ರಯೋಗ ಮತ್ತು ಸಂಶೋಧನೆಗಳಲ್ಲಿ ತೊಡಗಿದ.

ನಾವು ಸಾಧಾರಣವಾಗಿ ಕೃಷಿಯುನ್ನು ಅಭಿವೃದ್ಧಿಪಡಿಸಿ ಉತ್ಪಾದನೆ ಹೆಚ್ಚಿಸಬೇಕೆಂದಿದ್ದರೆ ಏನು ಮಾಡುತ್ತೇವೆ? ಹೊಸಹೊಸ ಕ್ರಮಗಳನ್ನು ಆಲೋಚಿಸಿ,

"ಹೀಗೆ ಮಾಡಿದರೆ ಹೇಗೆ, ಹಾಗೆ ಮಾಡಿದರೆ ಹೇಗೆ?" ಎಂದು ಚಿಂತಿಸುತ್ತೇವಲ್ಲವೆ? ಆದರೆ ಫುಕೋಕಾ ಬೇರೆಯದೇ ದಾರಿಯನ್ನು ಹಿಡಿದ. ಪ್ರತಿಯೊಂದನ್ನೂ ಇದನ್ನೇಕೆ ಮಾಡಬೇಕು ಎಂದು ಚಿಂತಿಸಿದ. ಆತ, "ಇದನ್ನು ಮಾಡದಿದ್ದರೆ ಹೇಗೆ, ಅದನ್ನು ಮಾಡದಿದ್ದರೆ ಹೇಗೆ?" ಎಂದು ಚಿಂತಿಸತೊಡಗಿದ. ಹೀಗೆ ಮಾಡುತ್ತಾ ಮಾಡುತ್ತಾ ಕೊನೆಗೆ ಅವನು ಕೃಷಿಗೆ ಇಂದು ಪ್ರಧಾನವಾಗಿರುವ ಅನೇಕ ಕೆಲಸಗಳೆಲ್ಲಾ ಅತ್ಯಂತ ಅನಗತ್ಯವಾದುವು ಎನ್ನುವ ತೀರ್ಮಾನಕ್ಕೆ ಬಂದ.

"ಭೂಮಿಯನ್ನು ಉಳುವ ಅಗತ್ಯವೇ ಇಲ್ಲ; ರಾಸಾಯನಿಕ ಅಥವಾ ಕೊಟ್ಟಿಗೆ ಗೊಬ್ಬರಗಳನ್ನು ಹಾಕುವ ಅಗತ್ಯವೇ ಇಲ್ಲ; ಕ್ರಿಮಿನಾಶಕಗಳನ್ನು ಬಳಸುವ ಅಗತ್ಯವೇ ಇಲ್ಲ. ನಿಜಕ್ಕೂ ಉತ್ತಮ ಕೃಷಿಗೆ ಮತ್ತು ಅಧಿಕ ಉತ್ಪಾದನೆಗೆ ಅಗತ್ಯವಾಗಿರುವ ಬೇಸಾಯದ ಕೆಲಸ ಅತ್ಯಲ್ಪ" ಎನ್ನುವ ಸತ್ಯವನ್ನು ಮೂವ್ವತ್ತು ವರ್ಷಗಳ ಸತತ ಪರಿಶ್ರಮದಿಂದ ಫುಕೋಕಾ ಅರಿಯತೊಡಗಿದ. ಅನೇಕ ಬೇಸಾಯದ ಕೆಲಸಗಳು ಉತ್ತಮ ಕೃಷಿಗೆ ನಿಜಕ್ಕೂ ಮಾರಕವಾದುವೇ ಆಗಿದೆ ಎಂದು ಫುಕೋಕಾ ಅಭಿಪ್ರಾಯಪಡುತ್ತಾನೆ.

ಆಧುನಿಕ ಬೇಸಾಯಕ್ರಮ ಅಧಿಕ ಉತ್ಪಾದನೆಗೆ ಅಗತ್ಯ ಎಂದು ನಾವು ವಿಚಾರ ಮಾಡುತ್ತೇವೆ. ಆಧುನಿಕ ಬೇಸಾಯ ಕ್ರಮದಿಂದ ನಾವು ಭೂಮಿಯ ಅನುಷಾಂಗಿಕ ಚೈತನ್ಯವನ್ನು ನಾಶ ಮಾಡುತ್ತೆವೆ. ಒಮ್ಮೆ ನಾವು ಭೂಮಿಯ ಸ್ವಯಂ ಚೈತನ್ಯವನ್ನು ಹಾಳು ಮಾಡಿದೆವೋ ಅದರ ಪರಿಣಾಮವಾಗಿ ಭೂಮಿ ನಿರಂತರವಾಗಿ ಆಧುನಿಕ ಬೇಸಾಯ ಕ್ರಮಗಳನ್ನೇ ಅವಲಂಬಿಸತೊಡಗುತ್ತದೆ. ಸ್ವಯಂ ಜೀವೋತ್ಪತ್ತಿಯ ಮೂಲವಾದ ನೆಲ ತನ್ನ ಚೈತನ್ಯವನ್ನು ಕಳೆದುಕೊಳ್ಳುತ್ತಾ ಮಾನವನ ಕೃತಕ ಪರಿಶ್ರಮವನ್ನೇ ಅವಲಂಬಿಸಿಬಿಡುತ್ತದೆ.

ಅಂದರೆ ಭೂಮಿಯನ್ನು ಅಭಿವೃದ್ಧಿಪಡಿಸುವ ಪ್ರಯತ್ನದಲ್ಲೇ ನಾವು ಅದರ ಅವನತಿಯ ಗೋರಿ ತೋಡತೊಡಗಿದ್ದೇವೆ ಎನ್ನುತ್ತಾನೆ ಫುಕೋಕಾ. ಭೂಮಿ ಮಿಲಿಯಗಟ್ಟಲೆ ವರ್ಷಗಳಿಂದ ಜೀವಸೃಷ್ಟಿ ಮಾಡುತ್ತಾ ಬಂದ ಅದಮ್ಯ ಚೈತನ್ಯದ ಅಕ್ಷಯ ಪಾತ್ರೆ, ಆದರೆ ಭೂಮಿಗೆ ಇದ್ದಕ್ಕಿದ್ದಂತೆ ಉತ್ಪಾದನೆಗಾಗಿ ಮಾನವನ ಅಗತ್ಯ ಒದಗಿ ಬಂದಿರುವುದಕ್ಕೆ ಮಾನವನೇ ಕಾರಣ ಎಂದು ಫುಕೋಕಾ ಅಭಿಪ್ರಾಯ.

ಫುಕೋಕಾ ತನ್ನ ಹಳ್ಳಿಗೆ ಹಿಂದಿರುಗಿದವ ಮತ್ತೆ ಕೃಷಿ ಕೈಗೊಂಡು ತನ್ನ ಭೂಮಿಯನ್ನು ಮನುಷ್ಯನ ಅವಲಂಬನೆಯಿಂದ ತಪ್ಪಿಸುವ ಕೆಲಸದಲ್ಲಿ ತೊಡಗಿದ. ಅನೇಕರು ನಿಸರ್ಗ ಎನ್ನುವುದೊಂದು ಒಳ್ಳೆಯದೆಂದು ತಿಳಿದಿದ್ದಾರೆ. ಆದರೆ ಯಾವುದು ನೈಸರ್ಗಿಕ, ಯಾವುದು ಅನೈಸರ್ಗಿಕ ಎನ್ನುವುದನ್ನಾಗಲೀ, ತಿಳಿಯುವುದರಲ್ಲಿ ತಪ್ಪುತ್ತಾರೆ. ಫುಕೋಕಾನ ಹಿರಿಮೆ ಇರುವುದು ಯಾವುದು ಸ್ವಾಭಾವಿಕ, ಯಾವುದು ನೈಸರ್ಗಿಕ ಎಂದು ತಿಳಿಯುವುದರಲ್ಲಿ.

ಇದಕ್ಕೊಂದು ಚಿಕ್ಕ ಉದಾಹರಣೆ ಫುಕೋಕಾ ನೀಡುತ್ತಾರೆ. ಸ್ವಭಾವ ಸಹಜವಾಗಿ ಬೆಳೆಯುತ್ತಿರುವ ಗಿಡ ಒಂದನ್ನು ಕಸಿ ಮಾಡೋಣೆಂದು ನೀವು ಅದರ ಬೆಳೆಯುವ ಸುಳಿಯನ್ನ ಚಿವುಟದಿರೆಂದಿಟ್ಟುಕೊಳ್ಳಿ. ಇದೊಂದು ಸಣ್ಣ ಕೆಲಸದಿಂದ ಆ ಗಿಡದ ಮೇಲಾಗುವ ಪರಿಣಾಮವನ್ನು ನಾವು ಊಹಿಸುವುದಕ್ಕೂ ಅಸಾಧ್ಯವಾದುದು. ಏಕೆಂದರೆ ಒಂದೊಂದು ಗಿಡವೂ ತನ್ನ ಸ್ವಭಾವಾನುಗುಣವಾದ ಸಹಜ ಸ್ವರೂಪವನ್ನು ಆನುಷಾಂಗಿಕವಾಗಿ ಪಡೆದಿರುತ್ತದೆ. ಪ್ರತಿಯೊಂದು ಕೊಂಬೆ, ಕವಲು ರೆಕ್ಕೆ, ಎಲೆಗಳಿಗೆಲ್ಲಾ ಸಮತೋಲನದಲ್ಲಿ ಸೂರ್ಯ ಶಕ್ತಿಯನ್ನು ಹೀರಿ ತನಗೆ ಅಗತ್ಯವಾದ ಪೋಷಕಾಂಶಗಳನ್ನು ಉತ್ಪಾದಿಸಲು ತಕ್ಕ ವಿಶ್ವಾಸವನ್ನು ಪಡೆದಿರುತ್ತದೆ. ಒಮ್ಮೆ ಅದರ ಸುಳಿಯನ್ನು ಚಿವುಟಿದೆವೋ ಅದರ ಬೀಜದಿಂದಲೇ ಹೊಮ್ಮಿದ್ದ ಗಣಿತ ವಿನ್ಯಾಸ ಅಸ್ತವ್ಯಸ್ತವಾಗಿಬಿಡುತ್ತದೆ. ಅದರ ಜೀವ ಶಕ್ತಿ ಕವಲು ಗೊಂಬೆಗಳ ಸಂದುಗೊಂದುಗಳಿಂದೆಲ್ಲಾ ಚಿಗುರುಗಳು ಮರಿ ರೆಕ್ಕೆಗಳ ರೂಪದಲ್ಲಿ ಹೊಮ್ಮತೊಡಗುತ್ತವೆ. ಎಲೆಗಳು ಒಂದರ ಮೇಲೊಂದರಂತೆ ಕವಿದುಕೊಳ್ಳಲಾರಂಭಿಸುತ್ತವೆ. ಗಿಡದ ಜೀವಕ್ರಿಯೆಯಲ್ಲಿ ಸಮರ್ಪಕವಾಗಿ ಭಾಗವಹಿಸದೆ ಅನೇಕ ಎಲೆಗಳು, ಕೊಂಬೆಗಳು ಸೋರಗಲಾರಂಭಿಸುತ್ತವೆ.

ಸಸ್ಯದ ಈ ಬಲಹೀನತೆಯೇ ಕ್ರಿಮಿಕೀಟಗಳಿಗೂ ಬೂಷ್ಟು ಮುಂತಾದ ಶಿಲೀಂದ್ರ ರೋಗಗಲಿಗೂ ದಾರಿ ಮಾಡಿಕೊಡುತ್ತದೆ. ಅಲ್ಲಿಗೆ ಆ ಗಿಡ ಮಾನವನ ಅವಲಂಬನೆಗೆ ಸಿಕ್ಕಿಕೊಳ್ಳುತ್ತದೆ. ಆ ಗಿಡದೊಳಗೆ ಸರಿಯಾಗಿ ಗಾಳಿಯಾಡುವಂತೆ ಮನುಷ್ಯ ನಿರಂತರವಾಗಿ ಕಸಿ ಮಾಡುತ್ತಾ ಜಿಗ್ಗು ತೆಗೆಯುತ್ತಾ, ರೋಗಬಾಧೆಯಿಂದ ಗಿಡ ನಾಶವಾಗದಂತೆ ಅದಕ್ಕೆ ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಾ ವರ್ಷ ಪೂರ್ತಿ ಕೆಲಸ ಆರಂಭಿಸಬೇಕಾಗುತ್ತದೆ. ಒಂದು ಗಿಡದ ನೈಸರ್ಗಿಕತೆಗೆ ಅಡ್ಡಿ ಮಾಡಿದ ಒಂದೇ ಒಂದು ಚಿಕ್ಕ ತಪ್ಪಿನಿಂದಾಗಿ ಹೊಸ–ಹೊಸ ತಪ್ಪುಗಳ ನಿರಂತರ ಸುಳಿಯಲ್ಲಿ ರೈತನೂ ವಿಜ್ಞಾನಿಗಳೂ ಸಿಕ್ಕಿಕೊಳ್ಳುತ್ತಾರೆ. ಹೊಸ–ಹೊಸ ರೋಗ ರುಜಿನಗಳು! ಅವುಗಳ ನಿವಾರಣೆಗಾಗಿ ನಿತ್ಯ ಸಂಶೋಧನಾ ಪ್ರಯೋಗಗಳು! ಹೊಸ–ಹೊಸ ಔಷಧಿಗಳು! ಹೊಸ ರಸಗೊಬ್ಬರಗಳು! ಅದರಿಂದಾಗಿ ಕೃಷಿ ಹೆಚ್ಚು ಹೆಚ್ಚು ದುಬಾರಿ. ಈ ದುಬಾರಿ ಸರಿತೂಗಿಸಲು ಹೆಚ್ಚಿನ ಉತ್ಪಾದನೆಗಾಗಿ ಹೊಸ ಕೃಷಿ ವಿಧಾನಗಳು, ಮತ್ತೆ ಈ ವಿಧಾನಗಳ ದೆಸೆಯಿಂದ ಹೊಸ ತಲೆ ನೋವುಗಳು!

ಅಸಮರ್ಪಕತೆಯನ್ನು ತನ್ನೊಳಗೆ ಇಟ್ಟುಕೊಂಡಿರುವ ಈ ಆಧುನಿಕ ಕೃಷಿ ಪದ್ಧತಿ ಪರಿಪೂರ್ಣತೆಯ ಹಂತವನ್ನು ಎಂದೆಂದೂ ತಲುಪುವುದಿಲ್ಲವೆನ್ನುವದು ವಿಜ್ಞಾನ ತೋರುವ ಮರೀಚಿಕೆಗಳ ಹಿಂದೆ ಓಡುತ್ತಿರುವ ರೈತನಿಗೆ ಅರಿವಾಗಬೇಕಾಗಿದೆ. ತಮ್ಮ ಕೃಷಿ ಕ್ರಮಕ್ಕೆ ತಕ್ಕಂತೆ ಪಿಡುಗುಗಳೂ ಪೀಡೆಗಳೂ ಸಹ ದ್ವಿಗುಣಗೊಳ್ಳುತ್ತಾ ಹೋಗುತ್ತಿವೆ ಎನ್ನುವ ಅಂಶವನ್ನು ವಿಜ್ಞಾನಿಗಳೂ ಸಹ ಒಪ್ಪುತ್ತಾರಾದರೂ ಮತ್ತೂ ತಮ್ಮದೇ ದಾರಿಯಲ್ಲಿ ವಿಫಲ ಪ್ರಯತ್ನಗಳನ್ನು ಮುಂದುವರಿಸುತ್ತಲೇ ಹೋಗುತ್ತಾರೆ.

ಪರಿಪೂರ್ಣವಾದ ತಳಿಯೊಂದನ್ನು ಪರಿಪೂರ್ಣ ರಾಸಾಯನಿಕ ನೆರವಿನಿಂದ ಪರಿಪೂರ್ಣ ಕೃಷಿಕ್ರಮದಲ್ಲಿ ಬೆಳೆಯುವ ವಿಧಾನದ ಕನಸೊಂದನ್ನಿಟ್ಟುಕೊಂಡು ಅದಕ್ಕೆ ಸಂಪೂರ್ಣ ತದ್ವಿರುದ್ಧ ದಿಕ್ಕಿನಲ್ಲಿ ವಿಜ್ಞಾನಿಗಳು ಸಾಗುತ್ತಿದ್ದಾರೆ.

ಅನೇಕರು ಫುಕೋಕಾನ ಕನಿಷ್ಠ ಕೆಲಸದ ಕೃಷಿ ಪದ್ಧತಿಯನ್ನು ಆಧುನಿಕ ವಿಜ್ಞಾನ ಮತ್ತು ಕೈಗಾರಿಕೀಕರಣದ ಗೊಂದಲಗಳಿಗೆ ಉದ್ಭವಿಸಿದ ಪ್ರತಿಕ್ರಿಯೆ ಎಂದು ನೋಡುತ್ತಾರೆ. ಕೆಲವರು ಇದು ಪರಿಸರ ನೈರ್ಮಲ್ಯ ಮತ್ತು ಸಂರಕ್ಷಣೆಯ ಅಂಗವೆಂದು ಅರ್ಥಮಾಡಿಕೊಳ್ಳುತ್ತಾರೆ. ಕೆಲವರು ತಮ್ಮ ಪ್ರಾಚೀನ ಸಂಪ್ರದಾಯಗಳಿಗೆ ಹಿಂದಿರುಗುವ ಆಂದೋಲನವೆಂದು ತಿಳಿಯುತ್ತಾರೆ. ಆದರೆ ಫುಕೋಕಾ ಹೇಳುತ್ತಾರೆ, "ನನ್ನ ಕೃಷಿ ಇದ್ಯಾವುದೂ ಅಲ್ಲ. ಹೀಗೆ ಯೋಚಿಸುವವರೂ, ಅರ್ಥಮಾಡಿಕೊಳ್ಳುವವರೂ ಮತ್ತೆ ದಾರಿ ತಪ್ಪುತ್ತಿದ್ದಾರೆ. ನನ್ನದು ನಿಸರ್ಗವನ್ನು ಅರ್ಥಮಾಡಿಕೊಳ್ಳುವುದು. ಅದರ ತಾಳಕ್ಕೆ, ಹೆಜ್ಜೆಗೆ, ವಿನ್ಯಾಸಕ್ಕೆ ಹೊಂದಿಕೊಂಡು ಹೆಜ್ಜೆ ಇಡುತ್ತಲೇ ಅನ್ನಾಹಾರಗಳನ್ನೂ, ಆರೋಗ್ಯವನ್ನೂ, ನೆಮ್ಮದಿಯನ್ನೂ ಪಡೆದುಕೊಳ್ಳುವುದು."

ಆಧುನಿಕ ನಾಗರೀಕತೆಗೆ ಅತ್ಯಂತ ಸರಳವಾಗಿರುವ, ನೇರವಾಗಿರುವ ಫುಕೋಕಾನ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವುದು ಏಕೆ ಇಷ್ಟು ಕಷ್ಟವಾಗಿದೆ? ಇದಕ್ಕೆ ಮೂಲ ಕಾರಣ ಆಧುನಿಕ ವಿಜ್ಞಾನದ ವಿಶ್ಲೇಷಣಾತ್ಮಕ ಕ್ರಮಗಳು. ಇದರಿಂದಾಗಿ ಮನುಷ್ಯನ ಬುದ್ಧಿ ಯಾವುದನ್ನೂ ಅದರ ಪೂರ್ಣತೆಯಲ್ಲಿ ಇಡಿಯಾಗಿ ಗ್ರಹಿಸದಂತಾಗಿದೆ. ಕೋಫಿ ಸಂಶೋಧನ ಕೇಂದ್ರದಿಂದ ಬಂದಿದ್ದ ಪ್ರೊಫೆಸರೊಬ್ಬರ ಉದಾಹರಣೆ ಫುಕೋಕಾ ಕೊಡುತ್ತಾರೆ.

ಫುಕೋಕಾನ ಗದ್ದೆಗಳಲ್ಲಿ ಎಲೆ ತಿನ್ನುವ ತಿಗಣೆಗಳ ಮಿಕ್ಕ ಕಡೆಗಳಿಗಿಂತ ಏಕೆ ತೀರಾ ಕಡಿಮೆ ಪ್ರಮಾಣದಲ್ಲಿವೆ ಎನ್ನುವುದನ್ನು ವಿಶ್ಲೇಷಿಸಲು ಬರುತ್ತಾರೆ. ಆತ ಸಂಶೋಧಿಸುತ್ತಾ ಫುಕೋಕಾ ಗದ್ದೆಗಳಲ್ಲಿ ಎಲೆ ತಿನ್ನುವ ಹುಳುಗಳು ತೊಂದರೆ ಕೊಡದೆ ಇರುವುದಕ್ಕೆ ಕಾರಣ ಅಲ್ಲಿ ಅಸಂಖ್ಯಾತವಾಗಿದ್ದ ಚಿಕ್ಕ ಚಿಕ್ಕ ಜೇಡರ ಹುಳುಗಳು ಎಂಬುದನ್ನು ಅರಿತ, ಕ್ರಿಮಿನಾಶಕಗಳನ್ನು ಸಿಂಪಡಿಸಿದ ಜಮೀನುಗಳಲ್ಲಿ ಎಲೆಹುಳುಗಳೊಂದಿಗೆ ಜೇಡರ ಹುಳುಗಳೂ ನಾಶವಾಗುವುದರಿಂದ ಮತ್ತೆ ಉದ್ಭವಿಸುವ ಹುಳುಗಳಿಗೆ ಜೇಡರ ಹುಳುಗಳ ಬಾಧೆ ಇರುವುದಿಲ್ಲ. ಅದಕ್ಕೇ ಕ್ರಿಮಿನಾಶಕಗಳನ್ನು ಸಿಂಪಡಿಸದ ಫುಕೋಕಾ ಗದ್ದೆಗಳಿಗಿಂತ ಸಂಶೋಧನ ಕೇಂದ್ರಗಳ ಗದ್ದೆಗಳಲ್ಲಿ ಎಲೆಹುಳುಗಳು ಹೆಚ್ಚಿವೆ ಎನ್ನುವ ತೀರ್ಮಾನಕ್ಕೆ ಪ್ರೊಫೆಸರ್ ಬಂದರು. ಹಾಗಾದರೆ ಗದ್ದೆಗಳಲ್ಲಿ ಜೇಡರ ಹುಳುಗಳ ಸಂತತಿ ಅಭಿವೃದ್ಧಿಯಾಗುವಂತೆ ನೋಡಿಕೊಂಡರೆ ಎಲೆ ತಿಗಣೆಗಳನ್ನು ಹದ್ದುಬಸ್ತಿನಲ್ಲಿಡಬಹುದು ಎಂದು ತೀರ್ಮಾನಿಸಿ ಹೊರಟು ಹೋದರು.

ಫುಕೋಕಾ ಹೇಳುತ್ತಾರೆ, "ನಿಸರ್ಗದಲ್ಲಿ ಈ ಕ್ರಿಮಿಕೀಟಾದಿಗಳಿಗಿರುವ ಪರಸ್ಪರ ಸಂಬಂಧ ಇಷ್ಟೊಂದು ಸರಳವಾಗಿ ವಿಶ್ಲೇಷಣೆಗೆ ಸಿಕ್ಕುವಂಥದಲ್ಲ, ಮಳೆ ಸಾಧಾರಣವಾಗಿದ್ದಾಗ ಹಾಗೆ ಜೇಡರ ಹುಳುಗಳಿವೆ. ಕೆಲವೊಮ್ಮೆ ಮಳೆ ಜೋರಾಗಿದ್ದಾಗ ಸಹಸ್ರಾರು ಕಪ್ಪೆಗಳಿರುತ್ತವೆ. ಅವು ಎಲೆ ತಿಗಣೆಗಳನ್ನು ತಿನ್ನುತ್ತವೆ. ಜೇಡರ ಹುಳುಗಳನ್ನೂ ತಿನ್ನುತ್ತವೆ, ಇನ್ನೊಮ್ಮೆ ಚಿಕ್ಕ ಚಿಕ್ಕ ಏಡಿಗಳು ಈ ಕೆಲಸ ಮಾಡುತ್ತವೆ. ಒಮ್ಮೊಮ್ಮೆ ಮಳೆ ಕಡಿಮೆ ಬಿದ್ದಾಗ ಜೇಡರ ಹುಳುಗಳೂ ಇರುವುದಿಲ್ಲ, ಕಪ್ಪೆಗಳೂ ಇರುವುದಿಲ್ಲ. ಹಾಗೇ ಎಲೆ ತಿನ್ನುವ ತಿಗಣೆಗಳೂ ಇರುವುದಿಲ್ಲ. ಒಮ್ಮೊಮ್ಮೆ ಮಿಲಿಯ ಗಟ್ಟಲೆ ಜೇಡರ ಹುಳುಗಳು ಇಡೀ ಗದ್ದೆಗೆ ರೇಷ್ಮೆ ಬಟ್ಟೆ ಹೊದಿಸಿದಂತೆ ಬಲೆ ನೇಯ್ದಿರುತ್ತವೆ. ಈ ಅಪರಿಮಿತ ಸಂಖ್ಯೆಯ ಜೇಡರ ಹುಳುಗಳು ಎಲ್ಲಿದ್ದವು, ಹೇಗೆ ಬಂದವು. ಹೇಗೆ ಇದ್ದಕ್ಕಿದ್ದಂತೆ ಅಂತರ್ಧಾನವಾಗುತ್ತವೆ. ಈ ಆಶ್ಚರ್ಯಕಾರಕ ವಿದ್ಯಮಾನಗಳನ್ನು ಎಲ್ಲಾದರೂ ನಾವು ವಿಶ್ಲೇಷಣೆಯಿಂದ ಸಂಪೂರ್ಣ ತಿಳಿಯಲು ಸಾಧ್ಯವೆ?"

ಎಲ್ಲಿಂದೆಲ್ಲಿಗೆ ಸಂಬಂಧ ಇದೆ ನೋಡಿ. ಮಳೆ ಕಡಿಮೆಯಾದರೆ, ಮಳೆ ಸಾಧಾರಣ ಇದ್ದರೆ, ಮಳೆ ತುಂಬ ಇದ್ದರೆ, ಚಳಿಗಾಲ ಮೊದಲೇ ಬಂದರೆ, ಬೇಸಿಗೆ ಹೆಚ್ಚು ದಿನ ಇದ್ದರೆ ಭೂಮಿಯ ಒಳಗಿನ ಮೇಲಿನ ಕ್ರಿಮೀಕೀಟಗಳ ಸಾವಯವ ಸಂಬಂಧ ಮತ್ತು ಸ್ವರೂಪಗಳು ಬದಲಾಗುತ್ತಾ ಹೋಗುತ್ತವೆ. ಇವುಗಳನ್ನು ನಿಯಂತ್ರಿಸುವ ಋತುಮಾನಗಳಾದರೋ ಶೂನ್ಯದಲ್ಲಿ ತಿರುಗುವ ಭೂಮಿಯ ಮತ್ತು ಸೂರ್ಯನ ಸಂಬಂಧಗಳನ್ನಾಧರಿಸಿದೆ. ಈ ವಿದ್ಯಮಾನಗಳು ವಿಶ್ವದ ಮಹಾಶೂನ್ಯದಲ್ಲಿ ಪರಿಭ್ರಮಿಸುತ್ತಿರುವ ಗ್ರಹತಾರೆ, ನಿಹಾರಿಕೆಗಳ ಪರಸ್ಪರ ಗುರುತ್ವಾಕರ್ಷಣವನ್ನವಲಂಬಿಸಿದೆ. ಒಂದು ಗದ್ದೆಯ ಎಲೆ ತಿಗಣೆಗಳಿಗೂ, ಅವುಗಳನ್ನು ಆಹಾರವನ್ನಾಗಿ ಅವಲಂಬಿಸಿರುವ ಇತರ ಕ್ರಿಮಿಕೀಟಗಳಿಗೂ ಇರುವ ಸಂಬಂಧವನ್ನು ಅನ್ವೇಷಿಸುತ್ತಾ, ವಿಶ್ಲೇಷಿಸುತ್ತಾ ಹೋದರೆ ಎಷ್ಟು ಬೇಗ ಅದು ಪರಬ್ರಹ್ಮನ ಅನ್ವೇಷಣೆಯಂತೆ ವಿಶ್ವದ ಅಂಚಿಗೆ ನಮ್ಮನ್ನೊಯ್ಯುತ್ತದೆ.

ಹಾಗಾದರೆ ಇವುಗಳನ್ನರಿಯುವ ವೈಜ್ಞಾನಿಕ ವಿಧಾನ ತಪ್ಪೆ? ಫುಕೋಕಾ ಇವುಗಳನ್ನು ವಿಶ್ಲೇಷಿಸುವ ವೈಜ್ಞಾನಿಕ ಕ್ರಮ ತಪ್ಪೆಂದು ಹೇಳುವುದಿಲ್ಲ. ಆದರೆ ಈ ತರ್ಕ ಸೃಜಿಸುವ ಭ್ರಮೆಗಳಿಂದಾಗಿ ನಾವು ನಿಸರ್ಗದ ಬಗ್ಗೆಯ ಅರಿವಿನಿಂದ ದೂರಾಗುತ್ತೇವೆ. ಇವು ಅತ್ಯಂತ ಸರಳ ಸತ್ಯಗಳು. ನಮ್ಮ ನೆಮ್ಮದಿ, ಸುಖ-ಸಂತೋಷಗಳಿಗೆ ಅಗತ್ಯವಾದ ಇವುಗಳನ್ನಷ್ಟು ನಾವು ತಿಳಿದರೆ ಸಾಕು. ವೈಜ್ಞಾನಿಕ ತರ್ಕ ಮೂಡಿಸುವ ಭ್ರಮೆಗಲು ನಮ್ಮ ಸಾಂಪ್ರದಾಯಕ ಮೂಢನಂಬುಗೆಗಳಂತೆಯೇ ಅಪಾಯಕಾರಿಗಳು. ಈ ಹೊಸ ಮೂಢನಂಬಿಕೆಗಳ ದೆಸೆಯಿಂದಲೇ ನಾವು ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡುತ್ತಾ ಅಸುಖಿಗಳಾಗಿದ್ದೇವೆ.

❑

# ೨.೩ ಬಯಲು ಆಲಯದೆಡೆಗೆ

**– ಅಮರೇಶ ನುಗಡೋಣಿ**

**ಒಂದು**

ಆತ ನಿನ್ನೆ ಹಗಲೆಲ್ಲ ತೋಟದಲ್ಲಿ ಗಿಡಗಳಿಗೆ ನೀರು ಬಿಡುತ್ತಲೇ ಔಷಧ ಸಿಂಪಡಿಸಿದ್ದರಿಂದ ಕೆಲಸ ಹೆಚ್ಚಾಗಿ ದಣಿದಿದ್ದ. ಯಾವತ್ತೂ ಮುಂಬೆಳಗಿನ ಮುಂಚೆ ಎದ್ದು ತೋಟವೆಲ್ಲ ಸುತ್ತಾಡಿ, ನಿತ್ಯ ಕರ್ಮಗಳನ್ನು ಮುಗಿಸುತ್ತಿದ್ದ. ಇಂದು ಕಣ್ಣು ಬಿಟ್ಟು ಗುಡಿಸಲಿನಿಂದ ಎದ್ದು ಹೊರಬಂದಾಗ ಚುಮುಚುಮು ಬೆಳಕು ಹರಿಯುತ್ತಿತ್ತು. ಕವಿದ ಮಂಜು ಕರಗತೊಡಗಿತ್ತು. ಸುತ್ತಲ ಸಣ್ಣಪುಟ್ಟ ಬೆಟ್ಟಗಳು ಸೂರ್ಯನ ಹೊಂಗಿರಣಗಳನ್ನು ಹೊದ್ದು ಹೊಳೆಯುತ್ತಿದ್ದವು. ಹಕ್ಕಿ ಪಕ್ಷಿಗಳು ಆಗಲೇ ಬಾನಲ್ಲಿ ಈಸತೊಡಗಿದ್ದವು. ಆತ ನಿಂತ ಪಕ್ಕದ ಜಾಲಿ ಮರದಲ್ಲಿರುವ ಗುಬ್ಬಿಗಳೆಲ್ಲ ಒಂದೇ ಸಮನೇ ಕಬ್ಬಟ್ಟಿದ್ದವು. ಆ ಮರದ ತುಂಬ ಗುಬ್ಬಿಗಳೆಲ್ಲ ಗೂಡು ಕಟ್ಟಿಕೊಂಡಿದ್ದವು. ಏನಾದರೂ ಅಪಾಯ ಒದಗಿದರೆ ಮಾತ್ರ ಈ ರೀತಿ ಕವಕವ ನಡೆಸಿರುತ್ತವೆಂದು ಆತ ಗಾಬರಿಯಿಂದ ಬಂದು ನೋಡಿದ. ಗುಬ್ಬಿಗಳೆಲ್ಲ ಮರದಿಂದೆದ್ದು ಮರದ ಸುತ್ತಲೇ ಕಿವಿ ಗಡಚಿಕ್ಕುವಂತೆ ಚೀರುತ್ತ ಹಾರಾಡುತ್ತಿದ್ದವು. ಆತ ಮರದ ಸುತ್ತಲೂ ನೋಡಿದ. ಮರದ ಒಳಗೆ ಕಣ್ಣಾಡಿಸಿದ. ಹಾವೇನಾದರೂ ಬಂದಿದೆಯೋ ಎಂದು ಮನಸ್ಸಿನಲ್ಲಿ ಸುಳಿಯುವ ಹೊತ್ತಿಗೆ ಕಣ್ಣಿಗೆ ಬಿದ್ದೇಬಿಟ್ಟಿತು. ಹಾವೊಂದು ಗುಬ್ಬಿಯ ಗೂಡಿನ ಹತ್ತಿರ ಮೂತಿ ಇಟ್ಟುಕೊಂಡಿತು. ಇದರ ಹಾಳಾಗ ಎಂದು ಕಲ್ಲೊಂದನ್ನು ಕೈಗೆತ್ತಿಕೊಂಡು ಎಸೆದ. ಹಾವು ಅದರ ಸಪ್ಪಳಕ್ಕೆ ಚುರುಕಾಯಿತು. ಸರಸರ ಬೇರೆ ಕಡೆ ಹರಿಯತೊಡಗಿತು. ಅದರ ಹೊಟ್ಟೆಯ ಮಧ್ಯಭಾಗ ಉಬ್ಬಿಕೊಂಡಿತ್ತು. ಗುಬ್ಬಿಮರಿಗಳನ್ನು ನುಂಗಿ ಹಾಕಿದೆ. ರುಚಿಗೆ ಮತ್ತೆ ಮತ್ತೆ ಬರುತ್ತದೆಂದು, ಒಮ್ಮೆ ಮುಗಿಸಿದರೆ ಸರಿಯಾದಿತೆಂದು ಯೋಚಿಸಿದ. ಗುಬ್ಬಿಗಳ ಚೀರಾಟ ಮತ್ತಷ್ಟು ಹೆಚ್ಚಾಯಿತು. ಹಾವಿಗೆ ಮರಿಗಳನ್ನು ನುಂಗಿದ್ದರಿಂದ ವೇಗವಾಗಿ ಹರಿಯಲು ಬರುತ್ತಿರಲಿಲ್ಲ. ಕಲ್ಲೊಂದರಿಂದ ಮರದ ಬೊಡ್ಡೆಗುಂಟ ಇಳಿಯುವ ಹಾವಿಗೆ ಗುರಿಯಿಟ್ಟು ಹೊಡೆದ. ಏಟುತಗಿಲಿತೋ ಅದು ಕೆಳಗೆ ಬಿದ್ದಿತು.

ಇನ್ನೊಂದು ಕಲ್ಲು ಕೈಗೆತ್ತಿಕೊಂಡು ಜಜ್ಜಲು ಆತುರದಿಂದ ನೋಡುನೋಡುತ್ತಲೇ ಅದು ಪೊದೆಯಲ್ಲಿ ಹೊಕ್ಕು ಕಣ್ಮರೆಯಾಯಿತು. ಆ ಕಡೆ ಕಲ್ಲು ಎಸೆದು ನಿಂತ. ಅದು ಸಿಗುವುದಿಲ್ಲವೆಂದು ಖಾತ್ರಿಯಾಗಿ ನಿರಾಸೆಯಾಯಿತು. ಗಾಯವಾಗಿದೆ, ಗಾಯವಾದರೆ ಸಾಕು ಅದು ಬದುಕುವುದಿಲ್ಲ. ಇರುವೆಗಳು ಮುತ್ತಿಬಿಡುತ್ತವೆ ಎಂಬ ನಂಬಿಕೆಯಿಂದ ಸಮಾಧಾನ ಹೊಂದಿದ. ಈ ಕ್ರಿಯೆಯಲ್ಲಿ ಉದ್ವೇಗಗೊಂಡು ಬೆವರಿ ಹಾಗೆ ನಿಂತೇ ಇದ್ದ. ಗುಬ್ಬಿಗಳು ಮತ್ತೆ ಮರದಲ್ಲಿದ್ದ ತಮ್ಮ ತಮ್ಮ ಗೂಡುಗಳನ್ನು ಸೇರಿದರೂ ಅವುಗಳ ದನಿ ಕಮ್ಮಿಯಾಗಿರಲಿಲ್ಲ. ಮರದ ಕೆಳಗೆ ಗುಬ್ಬಚ್ಚಿಯ ಗೂಡೊಂದು ಕತ್ತರಿಸಿ ಬಿದ್ದಿತ್ತು. ಆತ ಅದನ್ನು ಕಂಡು ಭಯದಿಂದ ಎತ್ತಿ ನೋಡಿದ! ಒಳಗೆ ಮೂರು ಮರಿಗಳು ಬಾಯಿ ತೆರೆದು ಚೀರುತ್ತಿದ್ದವು. ರಕ್ತದಿಂದ ಒದ್ದೆಯಾದಂತೆ ಅವುಗಳ ಮೈ ಲೋಳೆಲೋಳೆಯಂತಿತ್ತು. ಅವುಗಳ ಸ್ಥಿತಿ ಕಂಡು ಆತನ ಕರುಳು ಚುರ್ ಎಂದವು! ತನ್ನ ಕಲ್ಲೇಟಿಗೆ ಸಿಕ್ಕ ಆ ಗೂಡು ಕತ್ತರಿಸಿ ಬಿದ್ದಿರಬೇಕೆಂದು ಮಿಡುಕಿದ.

ಅವಸರದಿಂದಲೇ ಮರ ಏರಿ ಕೊಲ್ಲೆಯ ತುದಿಯೊಂದಕ್ಕೆ ಅದನ್ನು ಕಟ್ಟಿ ತೂಗಹಾಕಿ ಕೆಳಗಿಳಿದು ಬಂದ. ಬಂದ ಮೇಲೆ ಹೊಳೆಯಿತು, ಮನುಷ್ಯರು ಮುಟ್ಟಿದ ಗೂಡಿನ ಬಳಿ ಮತ್ತೆ ತಾಯಿ, ತಂದೆ ಹಕ್ಕಿಗಳು ಸುಳಿಯುವುದಿಲ್ಲವೆಂದು. ಅದರಲ್ಲೂ ಅದು ಕತ್ತರಿಸಿ ಬಿದ್ದದ್ದನ್ನು ಜಾಗವಲ್ಲದ ಜಾಗದಲ್ಲಿ ಕಟ್ಟಿಬಂದಿದ್ದನ್ನು ಅವು ಗುರುತು ಹಿಡಿಯುವುದಾದರೂ ಹೇಗೆ? ಆತನ ಜೀವ ಮೆತ್ತಗಾಯಿತು. ಬೆಳಗ್ಗೆ ಬೆಳಗ್ಗೆ ಈ ಹಾವು ಯಾಕಾದರೂ ಬಂದು ಕಾಟ ಕೊಟ್ಟಿತೋ ಎಂದು ಅದು ಹೊಕ್ಕ ಪೊದೆಕಡೆ ನೋಡಿದ. ಆ ದಿಕ್ಕಿನಿಂದ ತುಡುಗ ದನಗಳ ಹಿಂಡು ಬರುತ್ತಿರುವುದು ಕಂಡು 'ಹೋಹ್ಹೋತ್' ಎಂದು ಕೂಗುಹಾಕಿ ಬಡಿಗೆ ಎತ್ತಿಕೊಂಡು ಓಡಿದ. ಆಗಲೇ ಮೂರು ನಾಲ್ಕು ದನಗಳು ತಂತಿಬೇಲಿಯಿಂದ ತೂರಿ ಒಳಗೆ ಬಂದಿದ್ದವು. ಉಳಿದವು ಅವುಗಳ ಬೆನ್ನುಹತ್ತಿದ್ದವು. ಬೆಳಗ್ಗೆನೇ ಒಂದು ಹಿಂಡೇ ಬಂದಿದೆಯಲ್ಲ ಎಂದು ಎಲ್ಲವುಗಳನ್ನು ಸಾಲುಗಟ್ಟಿ ಓಡಿಸಿ ಬೆಟ್ಟದ ಆ ಕಡೆಗೆ ಇಳಿಸಿ ಬಂದ. ಆಗಲೇ ಸೂರ್ಯ ಮಾರುದ್ದ ಏರಿದ್ದ. ಎತ್ತಿಂದಲೋ ವಲಸೆ ಬರುವ ದೊಡ್ಡ ದೊಡ್ಡ ಪಕ್ಷಿಗಳು ಈ ವರ್ಷ ಹೆಚ್ಚು ಬಂದಿವೆ ಎಂದುಕೊಂಡ. ಅವು ಬೆಳಕು ಹರಿಯುವ ಮುಂಚೆ ಹಾರಾಡುತ್ತ ಬಂದು ಈ ಬೆಟ್ಟಗಳ ಮೇಲೆ ಸುತ್ತುಹಾಕಿ ನಾಲ್ಕಾರು ಮೈಲಿ ದೂರದ ಹಳ್ಳದ ಕಡೆಗೆ ಹೋಗುತ್ತಿದ್ದವು. ಮುಸ್ಸಂಜೆಯ ನಂತರ ಇದೇ ಮಾರ್ಗವಾಗಿ ಎತ್ತಲೋ ಹೋಗುತ್ತಿದ್ದವು. ಆತ ಇವತ್ತು ಅವುಗಳನ್ನು ಕಾಣಲಿಲ್ಲ. ಅವು ಆಗಲೇ ಹೋಗಿದ್ದವು. ಬೆಳಗು-ಸಂಜೆ ಅವುಗಳ ಸಾಲು ಹಾರಾಟದ ಪಯಣ ನೋಡಿ ಆತ ಸಂತೋಷದಿಂದ ತಣಿಯುತ್ತಿದ್ದ!

ಚಳಿಗಾಲದ ನಂತರ ಅವುಗಳೆಲ್ಲ ಮಾಯವಾಗುತ್ತಿದ್ದವು. ಆರೇಳು ಚಳಿಗಾಲದಲ್ಲಿ ಆತ ಅವುಗಳನ್ನು ನೋಡುತ್ತ ಬಂದಿದ್ದ. ತೋಟದ ಒಳಗೆ ಬಂದ. ಒಂದೆರಡು ಗಿಡಗಳು ದನಗಳ ತುಳಿತಕ್ಕೆ ಸಿಕ್ಕು ಮುರಿದಿದ್ದವು. ಆರೇಳು ವರ್ಷದ ಹಿಂದೆ ಹಾಕಿದ್ದ ತಂತಿಬೇಲಿ ಅಲ್ಲಲ್ಲಿ ಸಡಿಲಾಗಿತ್ತು. ಒಂದೆರಡು ಕಂಬಗಳು ಕುಸಿದು ಬಿದ್ದಿದ್ದವು. ಮತ್ತೊಮ್ಮೆ

ದುರಸ್ತಿಯಾಗಬೇಕಿತ್ತು. ಆತ ತನ್ನ ಒಡೆಯ ಶ್ಯಾಮಪ್ಪನವರಿಗೆ ದಿನ ಹೇಳುತ್ತ ಬಂದಿದ್ದರೂ, ಖರ್ಚು ಬಹಳ ಬಂದಿದೆಯೆಂದು ಈಗ ಮಾಡಿಸೋಣ, ಆಗ ಮಾಡಿಸೋಣವೆಂದು ದಿನ ನೂಕುತ್ತಿದ್ದರು. ಈ ವರ್ಷ ತಂತಿಬೇಲಿ ದುರಸ್ತಿ ಮಾಡಿಸಿ, ಬಂದೋಬಸ್ತು ಮಾಡಿಸದಿದ್ದರೆ ತೋಟವಲ್ಲ ತುಡುಗು ದನಗಳ ತುಳಿತಕ್ಕೆ ಸಿಕ್ಕು ಹಾಳಾಗುವುದು ಖಾತ್ರಿಯೆಂದು ಆತ ಅಂದುಕೊಂಡ. ಹೋದ ವರ್ಷವೇ ಮಾವಿನ ಗಿಡಗಳು ಹೂವು ಬಿಟ್ಟಿದ್ದರೂ ಕಾಯಿಯಾಗುವ ಮೊದಲೇ ಉದುರಿದವು. ಮೊದಲ ವರ್ಷದ ಫಲ ಹೀಗೆ ಖಾಲಿಯಾಗುವುದು ಸಹಜ! ನಿಂಬೆ ಗಿಡಗಳು ಮುಂದಿನ ವರ್ಷದಿಂದ ಫಲ ಶುರುವಾಗುತ್ತವೆ. ತೆಂಗಿನ ಗಿಡಗಳಲ್ಲಿ ಹೋದ ವರ್ಷವೇ ಹೂವಿನ ಗೊನೆ ಇಳಿದರೂ ಕಾಯಿ ಬಲಿಯಲಿಲ್ಲ ಎಂದು ಯೋಚಿಸುತ್ತ ತೋಟ ಸುತ್ತುತ್ತಿದ್ದ. ಎತ್ತಿಂದಲೋ ಮನುಷ್ಯರ ದನಿಗಳು ಕೇಳಿಬಂದವು. ನಿಂತು ನೋಡುತ್ತ ಆಲಿಸಿದ. ಹತ್ತಿರದ ಹನುಮನ ಬೆಟ್ಟದ ಮೇಲೆ ಹನುಮನ ಗುಡಿಯ ಮುಂದೆ ಎರಡು ಚಿಕ್ಕ ಮಕ್ಕಳು ಕುಣಿದಾಡುತ್ತಿದ್ದವು. ಆತನಿಗೆ ಕುತೂಹಲ ಮೂಡಿತು. ಯಾರವರು, ಯಾಕೆ ಬಂದರೋ! ಮನುಷ್ಯರ ಸುಳಿವು ಕಂಡು ಆಕಡೆ ಹೆಜ್ಜೆ ಹಾಕಿ ತೋಟದ ಬಾವಿ ಸುತ್ತಿಕೊಂಡು, ತೋಟದಿಂದ ಹೊರಬಿದ್ದು ಹನುಮನ ಬೆಟ್ಟ ಹತ್ತಿ ಮೇಲೆ ಬಂದ. ಗುಡಿಯ ಮುಂದೆ ಆಡುವ ಆ ಮಕ್ಕಳು ಈತನನ್ನು ಕಂಡು ಒಳಗೆ ಓಡಿದವು. ಗುಡಿಯಿಂದ ಹೊರಗೊಬ್ಬ ಬಂದು ಈತನನ್ನು ಕಂಡು ಕೈಮುಗಿದು, "ನಾವು ಈ ಹನುಮಪ್ಪ ದೇವ್ರಿಗೆ ಸೇವಾ ಸಲ್ಲಿಸಾಕ ಬಂದೀವಿ" ಎಂದ. ಆತನ ಹೆಂಡತಿಯರಬೇಕು, ಆಕೆಯೂ ಬಂದು ನಿಂತಳು. ಅವರ ಮಕ್ಕಳು ಅವರ ಪಕ್ಕಕ್ಕಿದ್ದವು. ಅದೊಂದು ಸಂಸಾರ. ಈತ "ಹನುಮಪ್ಪನ್ನ ಕೇಳುವವರಿಲ್ಲ ಅಂದಿದ್ದೆ. ನೀವು ಸೇವಾ ಸಲ್ಲಿಸಲು ಬಂದಿದ್ದಿರೇನು?" ಎಂದು ಆ ಸಂಸಾರವನ್ನು ತುಂಬು ಗಣ್ಣಿನಿಂದ ನೋಡಿದ. ಯಾಕೋ ಸಂತೋಷವಾಯಿತು! ತಾನು ಇಲ್ಲೇ ತೋಟದಲ್ಲಿರುವುದಾಗಿ ಹೇಳಿ ಕುಳಿತ. ಕುಶಲ ಮಾತನಾಡಿದರು. ಆ ಸಂಸಾರ ದೂರದ ಹಳ್ಳಿಯಿಂದ ಬಂದಿತ್ತು. ಬದುಕಿನಲ್ಲಿ ಬಂದ ಯಾವುದೋ ಒಂದು ಕಷ್ಟ ಪರಿಹಾರಕ್ಕೆ ಯಾರೋ 'ಹೇಳಿಕೆ' ಹೇಳುವವರು ಈ ಬೆಟ್ಟದಲ್ಲಿರುವ ಹನುಮಪ್ಪನಿಗೆ ಮೂರು ದಿನ ಸೇವೆ ಮಾಡಿದರೆ ಬಂದ ಕಷ್ಟ ಪರಿಹಾರವಾಗುತ್ತದೆಂದು ಹೇಳಿದ್ದಕ್ಕಾಗಿ ಬಂದಿದ್ದರು. ಆ ಸಂಸಾರ ಮೂರು ದಿನ ಹನುಮನ ಗುಡಿಯಲ್ಲೇ ಇದ್ದು, ಅಲ್ಲೇ ಅಡಿಗೆ ಮಾಡಿಕೊಂಡು ಉಣ್ಣುವ ವ್ಯವಸ್ಥೆ ಮಾಡಿಕೊಂಡಿದ್ದರು. ಎಲ್ಲವನ್ನು ಕೇಳಿದ. ಈತನಿಗೆ ಹೆಚ್ಚು ಕಮ್ಮಿ ಮನುಷ್ಯರ ಸಂಪರ್ಕ ಕಮ್ಮಿಯಾಗಿತ್ತು. ಗಿಡಗಂಟೆ, ಕಾಡುಮೇಡು, ಹಕ್ಕಿ ಪಕ್ಷಿ, ಪಶುಗಳ ಜತೆ ಒಡನಾಟವೇ ಒಡನಾಟವಾಗಿತ್ತಲ್ಲ ಈಗ ಏನೋ ಖುಷಿ. ಯಾಕೋ ವ್ಯಸನ.

"ಶಿವಯ್ಯ" ಎಂದು ಕೂಗು ಬಂದಿತು. ಎದ್ದು ತೋಟಕ್ಕೆ ಬಂದಾಗ ಶ್ಯಾಮಪ್ಪನವರು ಬುತ್ತಿ ತಂದಿದ್ದರು. ಬೆಳಗ್ಗೆ ಬಂದಿದ್ದ ತುಡುಗು ದನಗಳ ಹಾವಳಿಯಿಂದ ಮುರಿದು ಬಿದ್ದ ಗಿಡಗಳನ್ನು ಮುಟ್ಟಿ ನೋಡಿದ ಶ್ಯಾಮಪ್ಪನವರ ಮುಖ ಸಣ್ಣದಾಯಿತು. ಆದರೂ

ತೋರಗೊಡದೆ, "ಮಾಗಿ ಕಳೆದ್ರಾಗ ಎಲ್ಲ ಗಿಡಗಳು ಹೂವು ಬಿಡ್ತಾವಲ್ಲ" ಎಂದು ತೋಟದಲ್ಲಿ ಸುತ್ತು ಹಾಕತೊಡಗಿದರು.

"ಎಳ್ಳಮಾಸಿ ದಾಟದ್ರಾಗ ಬಿಸುಲು ಜಾಸ್ತಿಯಾಗ್ತದ. ಮಾವಿನ ಗಿಡಗಳು ಹೂವು ಬಿಡ್ತಾವ. ಹೋದ ವರ್ಷದಂಗ ಆಗಂಗಿಲ್ಲ. ಈ ವರ್ಷ ಫಲ ನಿಲ್ತಾದ" ಶಿವಯ್ಯ ಹೇಳಿದ.

"ಹೌದೌದು, ಮೊದಮೊದಲ ವರ್ಷದ ಫಲ ಹೇಳಿಕೊಳ್ಳಂಗ ಬರಾದಿಲ್ಲ. ಈ ವರ್ಷದಿಂದ ತೆಂಗು, ನಿಂಬೆ, ಮಾವು ಎಲ್ಲ ಫಲ ನಿಲ್ತವ" ಎಂದು ಹೇಳುತ್ತ ಶ್ಯಾಮಪ್ಪನವರು ತೋಟದ ತುಂಬ ಸುತ್ತಿ ಗುಡಿಸಲಿಗೆ ಬಂದು ಕುಳಿತರು. "ಉಗಾದಿಗೆ ಊರು ಜನಕ್ಕ ಊಟ ಹಾಕಿಸಿ, ಫಲ ದಾನ ಮಾಡಿ, ಮುಂದಿನ ವರ್ಷದಿಂದ ಸಂತೆಗೆ ವ್ಯಾಪಾರಕ್ಕ ನಿಂದ್ರಬೇಕು" ಶ್ಯಾಮಪ್ಪ ಹೇಳಿದರು.

"ನಾವೇ ಸಂತಿಗೆ ಒಯ್ದು ಮಾರಬಹುದು. ಇಲ್ಲ ಗುತ್ತಿಗೆಗೆ ಕೊಡಬಹುದು" ಎಂದು ಶಿವಯ್ಯ ಹೇಳಿದ.

"ಶಿವಯ್ಯಾ, ನೀನು ಸಿಗಲಿಲ್ಲಂದ್ರ ಈ ತೋಟ ಹಿಂಗಿರ್ತಿತ್ತಾ?"

"ಯಪ್ಪ, ನನ್ನ ಕೈಯಾಗೇನದ. ಕರಕಂಡು ಬಂದ್ರಿ. ಕೂಳು ಹಾಕಿ ಇಲ್ಲೆ ಇರುವಂಗ ಮಾಡಿದ್ರಿ. ಕಾಯ್ಕೊಂಡು ಬಿದ್ದೀನಿ" ಅವರಿಬ್ಬರಲ್ಲಿ ತುಂಬ ಗಟ್ಟಿಯಾಗಿ ನಂಟು ಬೆಳೆದಿತ್ತು. ಆಳು–ಒಡೆಯ ಎಂಬ ತಾರತಮ್ಯವಿರಲಿಲ್ಲ.

ಮಧ್ಯವಯಸ್ಸು ಸಮೀಪಿಸಿದ ಶಿವಯ್ಯ ಪ್ರಸಿದ್ಧ ದೇವಸ್ಥಾನವೊಂದರಲ್ಲಿ ಪೂಜಾರಿಗಳ ಮಾತು ಕೇಳಿಕೊಂಡು, ಅವರು ಹಾಕಿದ ಊಟ ಉಂಡುಕೊಂಡು ಕಾಲ ನೂಕುತ್ತಿದ್ದ. ಕೆಲಸಮಯ ಯಾತ್ರೆಗೆಂದು ಬಂದ ಜನಕ್ಕೆ ಹಲವಾರು ರೀತಿಯಲ್ಲಿ ಸಹಾಯ ಮಾಡುತ್ತಿದ್ದ. ಯಾರಿಂದಲೂ ಕಾಡಿ ಬೇಡಿ ಹಣ ಸುಲಿಯುತ್ತಿರಲಿಲ್ಲ. ಎಷ್ಟೋ ಸಲ ಅವರ ಜತೆ ಊಟ ಮಾಡಿದರೆ ಸಾಕೆಂದು ಮತ್ತೇನೂ ಕೇಳುತ್ತಿರಲಿಲ್ಲ. ಶ್ಯಾಮಪ್ಪನವರು ಒಮ್ಮೆ ಆ ದೇವಸ್ಥಾನಕ್ಕೆ ಯಾತ್ರೆಗೆಂದು ಬಂದಾಗ ಸಹಜವಾಗಿ ಶಿವಯ್ಯ ಅವರಿಗೆ ರಾತ್ರಿ ಇಳಿದುಕೊಳ್ಳಲು ಸ್ಥಳ ತೋರಿಸಿದುದು ಅಲ್ಲದೆ ಬೆಳಗ್ಗೆ ಆ ಪ್ರದೇಶದ ಕೆಲವು ನೋಡುವ ಸ್ಥಳಗಳಿಗೂ ಕರೆದುಕೊಂಡು ತಿರುಗಿದ. ಅವರ ಜತೆಯಲ್ಲೇ ಊಟ ಮಾಡಿದ. ಆತನ ಸರಳ ಸ್ವಭಾವಕ್ಕೆ ಶ್ಯಾಮಪ್ಪನವರು ಮೆಚ್ಚಿಕೊಂಡು ಹತ್ತು ರೂಪಾಯಿ ಕೊಡಲು ಹೋದರು. ಶಿವಯ್ಯ ಬೇಡವೆಂದು, 'ನನ್ಗ ಹೊತ್ತಿಗೆ ಸರಿಯಾಗಿ ಉಣ್ಣಲು ನಿಮ್ಮಿಂದ ಸಿಕ್ಕಿದೆ ಸಾಕು' ಎಂದ. ಇಂಥ ಕಾಲದಲ್ಲಿ ಶಿವಯ್ಯನನ್ನು ನೋಡುವುದೆಂದರೆ ದೇವರನ್ನು ನೋಡಿದಂತೆಯೇ ಎಂದುಕೊಂಡರು! ಆತನ ಪ್ರಾಮಾಣಿಕ ಜೀವನ ರೀತಿ ನೋಡಿ ಸಂತೋಷಗೊಂಡು ಊರಿಗೆ ಹೋಗುವ ಮುನ್ನ, 'ನೀನು ನಮ್ಮೂರಿಗೆ ಬಾ. ನಮ್ಮದೇ ತೋಟ ಐತೆ. ಅಲ್ಲಿ ಕೆಲಸ ಮಾಡುತ್ತ ನೀನಿರುವಂತಿ. ಇರಲು ಎಲ್ಲ ಅನುಕೂಲ ಮಾಡಿಕೊಡ್ತೀನಿ.' ಶ್ಯಾಮಪ್ಪನವರು ಕೇಳಿಕೊಂಡರು. ಏನು ಬಂಧವೋ

ಋಣವೋ ಶಿವಯ್ಯ ಆ ಮಾತಿಗೆ ಸಮ್ಮತಿ ಇತ್ತು ಅವರ ಹಿಂದೆ ನಡೆದೇ ಬಿಟ್ಟು ಇಲ್ಲಿಗೆ ಬಂದಿದ್ದ.

ಶ್ಯಾಮಪ್ಪನವರ ಸಂಸಾರ ಚಿಕ್ಕದು. ಗಂಡ ಹೆಂಡತಿ, ಹದಿನೈದು ವರ್ಷದ ಒಬ್ಬ ಮಗ. ಅವರಿಗೆ ಅವರ ತಾತನ ತಲೆಯಿಂದ ಉಳಿದು ಬಂದದ್ದು ಮೂರೂವರೆ ಎಕರೆ ಹೊಲ. ಅದು ಹನುಮನ ಬೆಟ್ಟದ ಕೆಳಗಿತ್ತು. ಊರು ಮೊದಲು ಅಲ್ಲೇ ಇತ್ತು. ಶ್ಯಾಮಪ್ಪನವರು ಸರಕಾರಿ ನೌಕರಿ ಸಿಕ್ಕು ಊರು ಬಿಟ್ಟಿದ್ದರು. ಊರಿಗೆ ಮಾರಿಬೇನೆ (ಪ್ಲೇಗ್) ಬಂದು ಜನವೆಲ್ಲ ಊರು ಬಿಟ್ಟು ಬೇರೆಕಡೆ ನೆಲೆಸಿದರು. ನೆಲೆಸಿದವರು ಮತ್ತೆ ಮೊದಲಿನ ಸ್ಥಳಕ್ಕೆ ಹೋಗದೆ ಉಳಿದುಕೊಂಡರು. ನಿವೃತ್ತರಾದ ಶ್ಯಾಮಪ್ಪನರು ತಮ್ಮ ಉಳಿದ ಜೀವನ ಹಳ್ಳಿಯಲ್ಲೇ ಕಳೆಯಲು ಊರಿಗೆ ಬಂದರು. ತಮಗಿರುವ ಹೊಲವನ್ನೇ ಬೇಸಾಯ ಮಾಡಿಕೊಂಡಿರಬೇಕೆಂದು ಆಸೆಯಾಯಿತು. ಹೋಗಿ ನೋಡಿದರು. ಅಲ್ಲಿ ಹೊಲವಿದೆ ಎಂಬುದನ್ನಾಗಲೀ, ಊರಿತ್ತು ಎನ್ನುವುದನ್ನಾಗಲೀ ಕೂನ ಹಿಡಿಯುವುದೇ ಕಷ್ಟವಾಗಿತ್ತು. ಹನುಮನ ಬೆಟ್ಟದ ಸುತ್ತ ಓಡಾಡಿದರು. ಗಾಳಿ, ಮಳೆಗೆ ಸುತ್ತಲ ಗುಡ್ಡ ಬೆಟ್ಟಗಳ ಜತೆಗೆ ಆ ಹೊಲವು ಗಿಡಗಂಟೆ ಬೆಳೆದು ಕಾಡುಮೇಡವಾಗಿ ಹೋಗಿತ್ತು. ಊರ ಕೆಲ ಜನರ ಹೊಲಗಳೂ ಇದೇ ರೀತಿಯಾಗಿ ಹೋಗಿದ್ದವು. ಶ್ಯಾಮಪ್ಪನವರು ತಮ್ಮ ಹೊಲವನ್ನು ಸರಕಾರದಿಂದ ಪುನಃ ಅಳತೆ ಮಾಡಿಸಿಕೊಂಡು ಹೊಲದಲ್ಲೇ ಇದ್ದ ಹಾಳು ಬಾವಿಯನ್ನು ದುರಸ್ತಿ ಮಾಡಿಸಿ, ನೀರು ಹೊಲಕ್ಕೆ ಹರಿವಂತೆ ಮಾಡಿಕೊಂಡರು. ಹತ್ತಾರು ಆಳುಗಳಿಂದ ತಿಂಗಳುಗಟ್ಟಲೆ ಹೊಲವನ್ನು ಹದಮಾಡಿಸಿ, ತೋಟ ಮಾಡಿದರು. ಹೊಲದ ಸುತ್ತ ತಂತಿಬೇಲಿಯನ್ನು ಹಾಕಿಸಿದರು. ಲಿಂಬೆ, ಮಾವಿನ ಗಿಡ, ತೆಂಗಿನ ಸಸಿಯನ್ನು ನೆಡುವುದರ ಮೂಲಕ ಅದಕ್ಕೊಂದು ರೂಪಕೊಟ್ಟರು. ಆದರೆ ಶ್ಯಾಮಪ್ಪನವರಿಗೆ ಆದ ತೊಂದರೆಯೆಂದರೆ ತೋಟವನ್ನು ಕಾಯ್ದುಕೊಂಡಿರಲು ಒಂದು ಆಳೂ ಸಿಗಲಿಲ್ಲ. ಸಿಕ್ಕರೂ ತಿಂಗಳೊಪ್ಪತ್ತಿನಲ್ಲೇ ಬಿಟ್ಟು ಬಿಡುತ್ತಿದ್ದರು. ಕಾಡಿನಲ್ಲಿ ರಾತ್ರಿ ಯಾರಿರುತ್ತಾರೆಂದು ಎಲ್ಲರೂ ಹಿಂಜರಿದು ಬಿಡುತ್ತಿದ್ದರು. ಮೇಲಾಗಿ ಈಗಿರುವ ಊರು ದೂರವಿತ್ತು. ಅದೇ ಚಿಂತೆಯಲ್ಲಿ ಇರುವಾಗ ಶ್ಯಾಮಪ್ಪನವರಿಗೆ ಶಿವಯ್ಯ ಸಿಕ್ಕಿದ್ದ. ಶಿವಯ್ಯ ಬಂದು ನೋಡಿ ಪ್ರಶಾಂತ ಸ್ಥಳಕ್ಕೆ ಮೆಚ್ಚಿಕೊಂಡ. ಇರಲು ಒಪ್ಪಿ ತೋಟದಲ್ಲೇ ಗುಡಿಸಲು ಹಾಕಿಕೊಂಡ. ಶ್ಯಾಮಪ್ಪನವರಾಗಲಿ, ಮಗನಾಗಲಿ ದಿನಾಲು ಊಟ ತಂದು ಕೊಡುತ್ತಿದ್ದರು. ಶಿವಯ್ಯ ಬಂದಾಗ ತೋಟದಲ್ಲಿ ನಿಂಬೆ, ಮಾವು, ತೆಂಗುಗಳ ಸಸಿಗಳೆಲ್ಲ ಆರೇಳು ತಿಂಗಳದ ಬೆಳೆ. ಅವುಗಳ ರಕ್ಷಣೆ ಮಾಡುತ್ತ, ರೋಗ ಬಂದರೆ ಔಷಧ ಸಿಂಪಡಿಸುತ್ತಾ. ಗಾಳಿ ಮಳೆ ಬಿಸಿಲು ಎನ್ನದೆ ಆತ ತೋಟದಲ್ಲೇ ಕಾಲ ಕಳೆಯತೊಡಗಿದ. ಆರೇಳು ವರ್ಷಗಳಲ್ಲಿ ಶಿವಯ್ಯ ಪ್ರಕೃತಿಯಲ್ಲಿಯೇ ಒಂದಾಗಿ ಹೋದ! ಹಕ್ಕಿ ಪಕ್ಷಿಗಳಿಗೂ ಆತ ಪರಿಚಿತನಾದ! ಕಾಡು ಪ್ರಾಣಿಗಳು ಅಷ್ಟಾಗಿ ಇರಲಿಲ್ಲ! ಊರ ತುಡುಗು ದನಗಳ ಕಾಟ ಬಿಟ್ಟರೆ ತೋಟಕ್ಕೆ ಮತ್ತ್ಯಾವ ತೊಂದರೆ ಇರಲಿಲ್ಲ. ಹೀಗಾಗಿ ಆತ ಖುಷಿಯಾಗಿದ್ದ. ಶ್ಯಾಮಪ್ಪನವರು ಇದೆಲ್ಲವನ್ನು ನೆನೆಸಿಕೊಂಡರು.

ಶ್ಯಾಮಪ್ಪ ಮನೆಗೆ ಹೋದರು. ಹೋಗುವಾಗ ಶಿವಯ್ಯ ಈ ವರ್ಷ ತಂತಿಬೇಲಿ ದುರಸ್ತಿ ಮಾಡಲೇಬೇಕು ಎಂದು ಎಚ್ಚರಿಸಿದ. ಸಣ್ಣ ಪುಟ್ಟ ಕೆಲಸವನ್ನು ಮುಗಿಸಿದ ಮೇಲೆ ಗುಡಿಯಲ್ಲಿರುವ ಸಂಸಾರ ನೆನಪಾಯಿತು. ಯಾಕೋ ಅಲ್ಲಿಗೆ ಹೋಗಬೇಕೆನಿಸಿ ಪುನಃ ಬೆಟ್ಟಹತ್ತಿ ಹನುಮನ ಗುಡಿಗೆ ಬಂದ. ಅವರ ಮಕ್ಕಳನ್ನೂ ಎತ್ತಿ ಆಡಿಸಿದ. ಅವರ ಜತೆ ತನ್ನ ಬುತ್ತಿ ಸೇರಿಸಿ ಅವರು ಮಾಡಿದ ಅಡಿಗೆಯ ರುಚಿಯನ್ನು ಮೆಚ್ಚುತ್ತ ಉಂಡ. ಸಂಜೆಯಾಗುತ್ತಿದ್ದಂತೆ ತನ್ನ ಗುಡಿಸಲಿಗೆ ಒಲ್ಲದ ಮನಸ್ಸಿನಿಂದಲೇ ಬಂದ. ಆ ಸಂಸಾರ ಆತನಲ್ಲಿ ಎಂಥದೋ ಸೆಳೆತ ಮೂಡಿಸಿತು!

## ಎರಡು

ಸೂರ್ಯ ಮೂಡುವ ಮುನ್ನ ಶಿವಯ್ಯ ಎದ್ದು ತೋಟ ಸುತ್ತತೊಡಗಿದ್ದ. ಮಂಜು ಕವಿದು ಜಗವೆಲ್ಲ ತೋದಿತ್ತು. ಚಳಿಗೆ ಹಕ್ಕಿ ಪಕ್ಷಿಗಳನ್ನು ಗೂಡಿನಿಂದೆದ್ದು ಹೊರಬರಲು ಅಂಜುತ್ತಿದ್ದವು. ತುಡುಗು ದನಗಳು ಬಂದ ಲಕ್ಷಣ ಕಾಣಲಿಲ್ಲ. ನಿತ್ಯಕರ್ಮ ಮುಗಿಸಲು ತಯಾರಾಗಿ ಗುಡಿಸಲು ಕಡೆ ಬಂದ. ಬಾವಿಯಲ್ಲಿ ಏನೋ ಸಪ್ಪಳವಾಯಿತು. ಬಂದು ನೋಡಿ ಬೆಕ್ಕಸ ಬೆರಗಾಗಿ ನಿಂತುಬಿಟ್ಟ. ಆಕೆ ಬಾವಿಯಲ್ಲಿ ಕುಳಿತು ಮೈಯಿಗೆ ನೀರು ಹಾಕಿಕೊಳ್ಳುತ್ತಿದ್ದಾಳೆ. ಮೈಮೇಲೆ ಚೂರು ಬಟ್ಟೆಯಿಲ್ಲ. ಶಿವಯ್ಯ ನೋಡಿ ಭಯದಿಂದ ಸರಿದು ಮರೆಯಾಗಿ ನಿಂತ. ನೋಡು ನೋಡುತ್ತಿದ್ದಂತೆ ಆಕೆ ಮೇಲೇರಿ ಬಂದು ಹಾಗೆಯೇ ಬೆತ್ತಲೆ ಬೆಟ್ಟದ ಕಡೆ ನಡೆದಳು. ಬೆಟ್ಟ ಹತ್ತಿ ಹನುಮನ ಗುಡಿ ಸುತ್ತಿದ್ದಳು. ಚುಮು ಚುಮು ಬೆಳಕು ಹರಿಯುವ ಮುನ್ನಿನ ಸಮಯ. ಕಣ್ಣಾರೆ ಕಂಡ ಆತನ ಮನಸ್ಸು ಕದಡಿತು! ತನ್ನ ಹೆಂಡತಿ ನೆನಪಾದಳು! ಏನೇನೋ ಬಯಕೆಗಳು ಎದ್ದು ಕುಳಿತವು! ಎಷ್ಟು ಪ್ರಯತ್ನಿಸಿದರೂ ಮನಸ್ಸಿನ ಉದ್ವೇಗ ಕಮ್ಮಿಯಾಗಲಿಲ್ಲ. ತನ್ನ ಸಂಸಾರದಲ್ಲಿ ಯಾವುದೋ ತೊಂದರೆಗೆ ಹೆಂಡತಿಯ ಜೊತೆಗೆ ಒಂದು ದಿನ ಜಗಳವಾಯಿತು. ಅದೊಂದು ವಿಷಗಳಿಗೆ! ವಿಧಿಯ ಕೈವಾಡವೂ ಇರಬಹುದು! ಹತ್ತು ವರ್ಷದ ಒಬ್ಬ ಮಗನನ್ನು, ಹೆಂಡತಿಯನ್ನು ಬಿಟ್ಟುಬಂದ ಶಿವಯ್ಯ ಹದಿನೈದು ವರ್ಷಗಳಾದರೂ ಆ ಕಡೆ ಹೋಗಿರಲಿಲ್ಲ. ಅವರ ನೆನಪನ್ನು ಮಾಸಿಕೊಂಡಿದ್ದ. ಈಗ ಈ ಸಂಸಾರ ನೋಡಿ ತನ್ನ ಹೆಂಡತಿ, ಮಗನ ನೆನಪು ತೀವ್ರವಾಗಿ ಮರುಕಳಿಸಿತು. ಬೆಟ್ಟಕ್ಕೆ ಬಂದ. ದಿನವಿಡೀ ಆ ಸಂಸಾರದ ಜತೆ ಕುಳಿತು ಮಾತನಾಡಿದ. ಆಕೆಯನ್ನು ನೋಡಿ ನೋಡಿ ಅವ್ಯಕ್ತವಾದ ನೋವಿನಿಂದ ನರಳಿದ. ಆಗಿನಿಂದ ಆತ ಹುಚ್ಚನಾಗತೊಡಗಿದ. ತೋಟದ ಕಡೆ ಲಕ್ಷ್ಯ ಹರಿಯದೆ ನಿಗಾ ಕಮ್ಮಿಯಾಯಿತು. ಉಳಿದ ಎರಡು ದಿನ ಆಕೆ ಬೆತ್ತಲೆ ಬಾವಿಯಲ್ಲಿ ಮುಳುಗುವುದನ್ನು, ಹನುಮನ ಗುಡಿ ಸುತ್ತುವುದನ್ನು ಮರೆಯಲ್ಲಿ ನಿಂತು ನೋಡಿದ. ಮತ್ತಷ್ಟು ಉದ್ವೇಗ ಹೆಚ್ಚಾಯಿತು. ಹದಿನೈದು ವರ್ಷಗಳ ಕಾಲ ಮರೆತ ತನ್ನ ಸಾಂಸಾರಿಕ ಬದುಕು ಕಣ್ಣಮುಂದೆ ಮೂಡಿತು. ಈಗಲೇ ಹೆಂಡತಿಯನ್ನು ಹೋಗಿ ಅಪ್ಪಿಕೊಳ್ಳಲೇ ಎಂದು ತವಕಿಸಿದ.

ಪ್ರಕೃತಿಯಲ್ಲಿ ಒಂದಾಗಿ ಬೆಳೆಸಿಕೊಂಡ ಸಾತ್ವಿಕ ಶಕ್ತಿಯನ್ನು ಕಳೆದುಕೊಂಡ. ಸೋಲ ತೊಡಗಿದ! ಈ ಮೂರು ದಿನಗಳಲ್ಲಿ ನಾಲ್ಕಾರು ಸಲ ತುಡುಗು ದನಗಳು ಬಂದು ತೋಟ ಹೊಕ್ಕು ಹಾಳುಮಾಡುತ್ತಲೇ ಇದ್ದವು. ಶಿವಯ್ಯ ಬಂದು ಬಂದು ಓಡಿಸುತ್ತಲೇ ಇದ್ದ. ಶ್ಯಾಮಪ್ಪನವರು ಬಂದು ಕೋಪಿಸಿಕೊಂಡರು. ದಿನೇ ದಿನೇ ತೋಟ ಹಾಳಾಗುವುದು ಕಂಡು ಮರುಗಿದರು. ಶಿವಯ್ಯನಿಗೆ ಸಿಟ್ಟಿನಿಂದಲೇ ಎಚ್ಚರಿಸಿದರು. ಮೂರನೆ ದಿನ ಆ ಸಂಸಾರ ಹನುಮಪ್ಪನಿಗೆ ಸೇವೆ ಸಲ್ಲಿಸಿ ಹೊರಟು ಹೋಯಿತು. ಆ ದಿನವಂತೂ ಆತ ಗುಡಿಸಲು ಸೇರಿ ಚಿಂತೆಯಲ್ಲಿ ನರಳುತ್ತಲೇ ಇದ್ದ.

## ಮೂರು

ಶಿವಯ್ಯ ರಾತ್ರಿಯಿಡೀ ಮಾನಸಿಕವಾಗಿ ದಣಿದಿದ್ದ. ದುಗುಡ, ಆತಂಕದಿಂದ ಮನಸ್ಸು ಜಡವಾಗಿತ್ತು. ಇನ್ನೇನು ಕಣ್ಣು ಮುಚ್ಚಲಾರವು. ಎಂದುಕೊಂಡು ಸಂಕಟಪಡುತ್ತ ಗುಡಿಸಲಿನಿಂದ ಹೊರಗೆದ್ದು ಬಂದ. ಬೆಳಗಾಗುವ ಲಕ್ಷಣಗಳು ಕಂಡವು. ಬಯಲು ತುಂಬ ಮಂಜು ಕವಿದಿತ್ತು. ಮೈಯನ್ನು ಚಳಿ ಚುಚ್ಚತೊಡಗಿತು. ಗಿಡಮರಗಳಲ್ಲಿ ತಂಗಿದ್ದ ಹಕ್ಕಿ ಪಕ್ಷಿಗಳು ಹೊರಬರುವ ತವಕದಲ್ಲಿದ್ದವು. ನೋಡುನೋಡುತ್ತಲೇ ಸೂರ್ಯ ಹೊರಬಿದ್ದ. ನೆಲ, ಹುಲ್ಲು, ಗಿಡಗಂಟೆಗಳ ಮೇಲೆ ವಶಪಡಿಸಿದ್ದ ಮಂಜು ಹನಿಗಳು ಸೂರ್ಯನ ಕಿರಣಗಳಿಗೆ ಹೊಳೆಯತೊಡಗಿದವು. ಶಿವಯ್ಯ ಅದೆಲ್ಲವನ್ನು ನೋಡಿ ದೀರ್ಘವಾಗಿ ಮೈಮುರಿದು ಆಕಳಿಸಿದಾಗ ಏನೋ ಹಿತವೆನಿಸಿತು. ನಿನ್ನೆ ಹೋದ ಆ ಸಂಸಾರ ನೆನಪಾಯಿತು. ಆ ಸಂಸಾರ ತನ್ನಲ್ಲಿ ಬಿರುಗಾಳಿ ಎಬ್ಬಿಸಿತ್ತು. ತನಗರಿವಿಲ್ಲದೆ ಅದಕ್ಕೆ ಸಿಕ್ಕು ಹಗಲು ರಾತ್ರಿ ಬಳಲತೊಡಗಿದ್ದ. ರಾತ್ರಿ ಕಂಡ ಕನಸು ಭಯಂಕರವಾಗಿದ್ದರೂ ಅದರ ಚಿತ್ರ ಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡಲಿಲ್ಲ. ಅರೆ ಎಚ್ಚರ, ಅರೆ ನಿದ್ರೆಯಲ್ಲಿ ಕಂಡ ಆ ಕನಸು ಮಾತ್ರ ಕಾಡತೊಡಗಿತು.

ಅನತಿ ದೂರದಲ್ಲಿದ್ದ ತೆಂಗಿನ ಗರಿಯ ಮೇಲೆ ದೊಡ್ಡ ಬೆಳ್ಳಕ್ಕಿಯೊಂದು ಕೂಡಲು ಪ್ರಯತ್ನಿಸುತ್ತಿತ್ತು. ಅದು ರೆಕ್ಕೆ ಬಡಿಯುತ್ತಾ ನಿಧಾನವಾಗಿ ಆ ಗರಿಯ ಮೇಲೆ ಕೂಡುತ್ತಿದ್ದಂತೆ ಭಾರಕ್ಕೆ ಗರಿ ಬಾಗುತ್ತಾ ಬಾಗುತ್ತಾ ಕೆಳಗೆ ಬಗ್ಗುತ್ತಿತ್ತು. ಬೆಳ್ಳಕ್ಕಿ ಕೆಳಗೆ ಬೀಳುತ್ತದೋ ಎನ್ನುವಾಗಲೇ ಹಾರಿಬಿಡುತ್ತಿತ್ತು. ತೆಂಗಿನ ಗರಿ ಮತ್ತೆ ಮೊದಲಿನ ಸ್ಥಿತಿಗೆ ಬಂದು ನಿಲ್ಲುತ್ತಿತ್ತು. ತುಸು ಸಮಯದ ಮೇಲೆ ಆ ಪಕ್ಷಿ ಅದೇ ಗರಿಯನ್ನು ಸಮೀಪಿಸಿ ಕೂಡಲು ಯತ್ನಿಸಿದಾಗ ಅದು ಮೊದಲಿನಂತೆಯೇ ಆದಾಗ ಪಕ್ಷಿ ಮೇಲಕ್ಕೆ ಹಾರಿತು. ಆ ಕ್ರಿಯೆ ಹಾಗೆಯೇ ಮತ್ತೆ ಮತ್ತೆ ನಡೆದೇ ಇತ್ತು. ಶಿವಯ್ಯ ಅದನ್ನು ನೋಡುತ್ತಾ ನಿಂತ. ಮುಖದ ಮೇಲೆ ತಿಳಿ ನಗೆಯೊಮ್ಮೆ, ಗಂಭೀರ ಭಾವವೊಮ್ಮೆ, ವಿಷಾದದ ಛಾಯೆ ಮೂಡಿ ಮೂಡಿ ಮಾಯವಾದವು. ಅವ್ಯಕ್ತವಾದ ವಿಚಾರವೊಂದು ಆತನಲ್ಲಿ ಮಂಥನಗೊಳ್ಳುತ್ತಿತ್ತು. ಆ ಬಗ್ಗೆ ಅಭಿವ್ಯಕ್ತಿ ಸಾಲದೆ ನಿಟ್ಟುಸಿರುಬಿಟ್ಟ.

ದೃಷ್ಟಿ ತೋಟದ ಕಡೆ ಹರಿಯಿತು. ದುಗುಡ ತನ್ನಿಂದ ತಾನೇ ತುಂಬಿಕೊಂಡಿತು. ತೋಟದಲ್ಲಿರುವ ಮಾವಿನ ಗಿಡಗಳು, ನಿಂಬೆ ಗಿಡಗಳು, ತೆಂಗಿನ ಗಿಡಗಳು ಎಂದಿನಂತೆ ಕಾಣದೆ ಯಾಕೋ ಅಸ್ತವ್ಯಸ್ತವಾದಂತೆ ಕಂಡವು. ನಾಲ್ಕಾರು ಹೆಜ್ಜೆ ನಡೆದು ತೋಟದ ಒಳಗೆ ಕಾಲಿಟ್ಟು ನೋಡುತ್ತಾನೆ. ನಿಂಬೆಯ ಗಿಡದ ಕೊಲ್ಲೆಯೊಂದು ಮುರಿದು ಬಿದ್ದಿದೆ. ಮಾವಿನ ಗಿಡದ ಅರ್ಧ ಭಾಗವೇ ಮುರಿದು ಜೋತುಬಿದ್ದಿದೆ. ಪಕ್ಕದ ಸಾಲಿನ ತೆಂಗಿನ ಮರಗಳಲ್ಲಿ ಕೆಲವು ಎತ್ತೆತ್ತಲೋ ಬಗ್ಗಿ ಹೋಗಿವೆ. ಇಡಿ ತೋಟವೇ ದನಗಳ ತುಳಿತಕ್ಕೆ ಸಿಕ್ಕು ಹಾಳಾಗಿ ಹೋಗಿದೆ. ಕನಸ್ಸಿನಲ್ಲಿ ತೋಟದ ತುಂಬ ತುಡುಗು ದನಗಳು ತುಂಬಿ ಹಾಳು ಮಾಡುತ್ತಿದ್ದ ಚಿತ್ರ ಮನಸ್ಸಿಗೆ ಹೊಳೆಯಿತು. ಸಂಕಟವಾಗಿ ಮುಂದೆ ಬಿದ್ದ ಮಾವಿನ ಗಿಡದ ಕೊಲ್ಲೆಯನ್ನು ಎತ್ತಿ ಸರಿಯಾಗಿ ನಿಲ್ಲಿಸಲು ಪ್ರಯತ್ನಿಸಿದಾಗ ಅದು ಕಿತ್ತಿ ಕೈಗೆ ಬಂದುಬಿಟ್ಟಿತು. ತಾನೇ ಬೆಳಸಿದ ಆ ಗಿಡವನ್ನು ಎದೆಗೆ ಒತ್ತಿಕೊಂಡು ನಿಂತ. ತೋಟದ ಆ ಮೂಲೆಯಲ್ಲಿ ತನ್ನ ಒಡೆಯ ಕಾಣಿಸಿದ. ಆಗ ಶಿವಯ್ಯ ದಂಗಾಗಿ ಹೋದ. ಶ್ಯಾಮಪ್ಪನವರು ತೋಟದ ಗಿಡಗಳನ್ನೆಲ್ಲ ಒಂದೊಂದೇ ನೋಡುತ್ತ, ಬಿದ್ದುವುಗಳನ್ನು ಎತ್ತುತ್ತಾ ಹುಚ್ಚನಂತೆ ಅತ್ತಿತ್ತ ಅಡ್ಡಾಡಿ ಕೊನೆಗೆ, "ಶಿವಯ್ಯಾ?" ಎಂದು ಕೂಗು ಹಾಕಿದರು. ಬೆಳಗಿನ ಪ್ರಶಾಂತ ವಾತಾವರಣವನ್ನೇ ಕದಡಿದ ಆ ಕೂಗು ಗುಡ್ಡಕ್ಕೆ ಬಡಿದು ಪ್ರತಿಧ್ವನಿ ಮಾಡಿತು. ಶಿವಯ್ಯಾ ನಡುಗುತ್ತಾ ಒಡೋಡಿ ಬಂದ. ಬರುವಾಗ ಕಾಲಿಗೆ ಸಿಕ್ಕ ಹತ್ತಾರು ಗಿಡಗಳು ಪಟಪಟ ಮುರಿದುಹೋದವು. ಚಳಿಯಲ್ಲಿಯೂ ಮೈಬೆವರಿತು. ಮುಖ ಕಮರಿ ಹೋಯಿತು. ಶ್ಯಾಮಪ್ಪನವರು ತನ್ನ ಆಳನ್ನು ದಿಟ್ಟಿಸಿ ನೋಡಿದರು. ನೋಡಿಯೇ ನೋಡಿದರು! ಅದೆಷ್ಟು ಹೊತ್ತು ಹಾಗೆಯೇ ನೋಡುತ್ತಾ ನಿಂತು ಕೊನೆಗೆ, "ಶಿವಯ್ಯಾ, ನಿನ್ನ ಬಯ್ಯದ್ರಾಗ ಏನೂ ಅರ್ಥ ಇಲ್ಲ. ಆಳು ಎಷ್ಟಿದ್ದರೂ ಆಳು. ನಾವೇ ತೋಟದಾಗ ಮನೆ ಮಾಡಿಕೊಂಡಿರುತ್ತೇವೆ. ಇನ್ನು ಮೇಲೆ ನಿನ್ನ ದಾರಿ ನೀನು ನೋಡಿಕೋ. ಋಣ ಮುಗದಂಗ ಸರಿ" ಎಂದು ಹೇಳಿ ಅವರು ಊರ ಕಡೆ ನಡೆದೇ ಬಿಟ್ಟರು. ಶಿವಯ್ಯನಿಗೆ ವ್ಯಥೆಯಾಯಿತು. ಮಾಡುವುದೇನು? ನನ್ನನ್ನು ನಾನು ಗೆಲ್ಲಲಾಗಲಿಲ್ಲ. ನಾನು ಸೋತೆ ಎಂದುಕೊಂಡು ಗುಡಿಸಲಿಗೆ ಬಂದ. ಆ ಬೆಳ್ಳಕ್ಕಿ ಆ ತೆಂಗಿನ ಗರಿಯ ಮೇಲೆ ಕೂಡಲು ಪ್ರಯತ್ನ ನಡೆಸಿಯೇ ಇತ್ತು. ಆ ಎಳೆಗರಿ ಅದರ ಭಾರಕ್ಕೆ ತಡೆಯದೆ ಬಾಗಿದಾಗ ಬೆಳ್ಳಕ್ಕಿ ಆಕಾಶಕ್ಕೆ ಹಾರುತ್ತಿತ್ತೇ ಹೊರತು ಕೆಳಗೆ ಬೀಳುತ್ತಿರಲಿಲ್ಲ. ಶಿವಯ್ಯ ನೋಡಿದ. ನಗು ತನಗೆ ತಾನೇ ತೇಲಿಬಂತು. ಆ ಬೆಳ್ಳಕ್ಕಿ ಕೊಲ್ಲೆಯನ್ನು ನಂಬಿ ಕೂಡುವುದಿಲ್ಲ. ಅದು ತನ್ನ ರೆಕ್ಕೆಯನ್ನು ನಂಬಿಕೊಂಡು ಬದುಕುತ್ತದೆ ಅಂದುಕೊಂಡು ಸುತ್ತಲೂ ನೋಡಿದ. ಕಣ್ಣು ತುಂಬ ನೋಡಿ ತೋಟ ಬಿಟ್ಟು ಬಯಲಿಗೆ ಬಿದ್ದು ನಡೆಯತೊಡಗಿದ.

೧೯೮೮

**ಓದು ಪತ್ಯ :**

# ಸುಗ್ಗಿಯ ಸಂಪ್ರದಾಯ

**– ಡಾ. ಬಿ.ಎನ್. ಗದ್ದಗಿಮಠ**

ಸಂಪ್ರದಾಯಗಳು ಎಲ್ಲ ಜನಾಂಗಗಳಲ್ಲಿಯೂ ಕಂಡುಬರುವುವು. ಜನರ ನಡೆನುಡಿಗಳ ವಿಶಿಷ್ಟ ರೀತಿಗಳನ್ನೂ, ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನೊಳಗೊಂಡು ಎಲ್ಲ ದೇಶಗಳಲ್ಲಿ ಸಂಪ್ರದಾಯಗಲಿರುವುದಲ್ಲದೆ ಅವುಗಳಲ್ಲಿ ಜನಾಂಗದ ಸಂಸ್ಕೃತಿಯು ತುಂಬಾ ಬಿಂಬಿತವಾಗಿರುವುದು. ಸಂಪ್ರದಾಯವು (Tradition) ಸುಧಾರಣೆ (Reformation)ಯಲ್ಲ – ಅದೊಂದು ಜನರೂಢಿಯಲ್ಲಿರುವ ವಿಶಿಷ್ಟವಾದ ಆಚರಣೆ. ಅದು ಇಂದು ಹುಟ್ಟಿ ಇಂದೇ ಬೆಳೆದು ಜನಾಂಗದಲ್ಲಿ ಬಂದಿಲ್ಲ. ಅದಕ್ಕೆ ದೊಡ್ಡ ಪರಂಪರೆಯುಂಟು; ಬುನಾದಿಯಿಂದಲೂ ಅದು ಜನಾಂಗದಲ್ಲಿ ಬಂದಿದೆ. ಅದರ ಮಹತ್ವವನ್ನರಿತು ಜನಾಂಗವು ಅದನ್ನುಳಿಸಿಕೊಂಡು ಬಂದಿದೆ; ಆಚರಿಸುತ್ತ ಬಂದಿದೆ. ಅಂತೆಯೇ ಅದು ಹೇಗಿದ್ದರೂ ಜನರು ಅದನ್ನು ಆಚರಿಸುತ್ತಾರೆ; ಅದರ ಸಂಬಂಧ ಅಭಿಮಾನ ತಾಳುತ್ತಾರೆ. ಸಂಪ್ರದಾಯದ ಬೇರುಗಳು ಜನಾಂಗದ ರಕ್ತರಕ್ತದಲ್ಲಿ ದೂರ ಹೋಗಿವೆ. ಒಮ್ಮೊಮ್ಮೆ ಜನರು ಧರ್ಮವನ್ನು ಮರೆಯಬಹುದು; ಆದರೆ ಸಂಪ್ರದಾಯವನ್ನು ಮರೆಯುವುದು ಕಠಿಣವಾಗುತ್ತದೆ. ಹಲಕೆಲವು ಸಂಪ್ರದಾಯಗಳಿಗೆ ಪೌರಾಣಿಕ ಸಂದರ್ಭಗಳೂ ಬೇರೆ ಕೆಲವುಗಳನ್ನು ಧಾರ್ಮಿಕ ಭಾವನೆಯೂ ಕೆಲವುಗಳಿಗೆ ಐತಿಹಾಸಿಕ ಮಹತ್ವವೂ ಇನ್ನೂ ಕೆಲವುಗಳಿಗೆ ಸಾಮಾಜಿಕ ಅಸ್ತಿತ್ವವೂ ಉಳಿದ ಕೆಲವುಗಳಿಗೆ ಈ ಎಲ್ಲಾ ಸಂದರ್ಭಗಳಿದ್ದದ್ದೂ ನಿದರ್ಶನಕ್ಕೆ ಬರುವುದು.

ಒಕ್ಕಲುನಾಡಾದ ಕರ್ನಾಟಕವು ಇದಾವುದಕ್ಕೂ ಹೊರತಾಗಿರುವುದಿಲ್ಲ. ನಮ್ಮ ಜನಪದದಲ್ಲಿ ಅನೇಕ ಸಂಪ್ರದಾಯಗಳು ಕಂಡುಬರುವುವು. ಕಳೆದ ಹತ್ತು ವರುಷಗಳಿಂದ ಜಾನಪದಗೀತಗಳನ್ನು ಸಂಕಲನ ಮಾಡುತ್ತ ಅಲೆದಾಡುವಾಗ ಅನೇಕ ಸಂಪ್ರದಾಯಗಳು

ಈ ಹಾಡುಗಳಲ್ಲಿ ಅಡಕವಾಗಿದ್ದುದು ನಿದರ್ಶನಕ್ಕೆ ಬಂದಿದೆ. ಸೂಕ್ಷ್ಮವಾಗಿ ಇವುಗಳನ್ನು ಪರಿಶೀಲಿಸಿ ನೋಡಲು ಅವುಗಳ ಗೂಢಾರ್ಥಗಳು ತಿಳಿಯಹತ್ತಿದುವು. ಅವುಗಳನ್ನು ಬೆಳಕಿಗೆ ತರಬೇಕೆಂದು ಇಲ್ಲಿ ಪ್ರಯತ್ನ ಮಾಡಲಾಗಿದೆ.

ಸಂಪ್ರದಾಯಗಳಲ್ಲಿ ಎರಡು ದೊಡ್ಡ ಭಾಗಗಳನ್ನು ಮಾಡಬಹುದು:೧. ಸುಗ್ಗಿಯ ಸಂಪ್ರದಾಯಗಳು, ೨. ಜನಪದ ಸಂಪ್ರದಾಯಗಳು ಅಥವಾ ಹಳ್ಳಿಗರ ಹಬ್ಬಗಳು. ಕನ್ನಡನಾಡಿನ ಒಕ್ಕಲುತನಕ್ಕೆ ಸಂಬಂಧಿಸಿದ ಎಲ್ಲ ಸಂಪ್ರದಾಯಗಳನ್ನು ಒಂದೆಡೆಗೆ ಶೇಖರಿಸಿ 'ಸುಗ್ಗಿಯ ಸಂಪ್ರದಾಯಗಳು' ಎಂದು ಕರೆಯಲಾಗಿದೆ. ಇವು ಹೆಚ್ಚಾಗಿ ಶಿವಶರಣರ ಹಂತಿಯ ಹಾಡುಗಳಲ್ಲಿ ಹುದುಗಿಕೊಂಡಿರುವುವು.

ಕಾಡು ಬೀಡಾಗಿ, ನಾಡಾಗಿ, ಮಾನವನು ಮನೆಕಟ್ಟಿಕೊಂಡು ಇರಹತ್ತಿದ ಮೇಲೆ ಅವನಿಗೆ ಆಗಲೇ ಜನಾಂಗದ ಅರಿಕೆಯಾಗಿತ್ತು. ಕಾಡಸ್ಥಿತಿಯು ಕಣ್ಮರೆಯಾಗಿ ಊಳುವುದೊಕ್ಕುವುದನ್ನರಿತು. ಕೃಷಿಕರ್ಮವು ಮೂಲವೆಂಬ ದೊಡ್ಡ ತತ್ವವನ್ನು ತಿಳಿದುಕೊಂಡ ಮಾನವನು ದಿನದಿನಕ್ಕೆ ಅದರ ಪ್ರಗತಿಯ ಹಾದಿಯನ್ನೇ ಕಾಯುತ್ತಿದ್ದ. ಹೊಲಗೆಲಸವನ್ನು ಕೈಕೊಂಡ ಮೇಲೆ ಅವನಿಗೆ ಹೊಸ ಹೊಸ ಯೋಜನೆಗಳು ಹೊಳೆಯಹತ್ತಿದುವು. ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳನ್ನು ಉಪಕರಣಗಳನ್ನೂ ತಯಾರಿಸಿ ಭೂಸಾಗುವಳಿಯನ್ನು ಮುಂದುವರಿಸಿ ಅದರ ಹುಟ್ಟುವಳಿಯನ್ನು ಹೆಚ್ಚಿಸಿ ಜನಾಂಗದ ಜೀವನಕ್ಕೆ ಮೂಲಸಾಧನ ಮಾಡಿಕೊಂಡ. ಒಕ್ಕಲುತನವು ಮಾನವಜನಾಂಗಕ್ಕೆ ಮುಖ್ಯ ಬೇಸಾಯವಾಯಿತು.

ದ್ರಾವಿಡಭಾಷೆಗಳನ್ನಾಡುವ ಈಗಿನ ಭೂಪ್ರದೇಶವು ಫಲವತ್ತಾದ ಅನೇಕ ನದಿಗಳ ಕೊಳ್ಳವಾಗಿದೆ. ಮೊದಲಿನಿಂದಲೂ ಈ ಭಾಗದಲ್ಲಿಯ. ಮೂಲ ಬೇಸಾಯವು ಒಕ್ಕಲತನವು. ಕೃಷಿ–ಕರ್ಮಕ್ಕೆ ಸಂಬಂಧಿಸಿದ ಎಲ್ಲ ಶಬ್ದಗಳು ಎಲ್ಲ ದ್ರಾವಿಡ ಭಾಷೆಗಳಲ್ಲಿ ಕಂಡುಬರುವುವು. ದ್ರಾವಿಡರ ಅನೇಕ ಕಸಬುಗಳನ್ನು ಆರ್ಯರು ಕಲಿತುಕೊಂಡರೆಂದೂ, ಕೃಷಿಕರ್ಮವನ್ನು ದ್ರಾವಿಡರಿಂದಲೇ ಕಲಿತಿರ ಬಹುದೆಂದೂ 'ಮೊಹೆಂಜೊದಾರೊ' 'ಹರಪ್ಪ'ಗಳ ಸಂಶೋಧಕರು ನಿರ್ಧಾರಕ್ಕೆ ಬಂದಿದ್ದಾರೆ. ಕೃಷಿ–ಕರ್ಮಕ್ಕೆ ಬೇಕಾಗುವ ಅನೇಕ ದ್ರಾವಿಡ ಶಬ್ದಗಳು ಸಂಸ್ಕೃತದಲ್ಲಿ ಎಂದೋ ಬಳಸಲ್ಪಟ್ಟಿವೆ. ಮೇಳೆ, ಕುಂಟೆ, ಕೂರಿಗೆ, ಮಡಿಕೆ ಮೊದಲಾದ ಭೂಮಿಯನ್ನೊಳುವ ಸಲಕರಣೆಗಳೂ, ಅವಕ್ಕೆ ಜೋಡಾ ಬೇಕಾಗುವ ಕುಡ, ಮುಂಜ, ತಾಳ ಮೊದಲಾದ ಲೋಹದ ಸಾಮಾನುಗಳೂ, ಗುದ್ದಲಿ, ಸಲಿಕೆ ಮೊದಲಾದ ಆಗಿಯುವ ಹಾಗೂ ಕೊಯ್ತು, ಕುಡುಗೋಲು ಮೊದಲಾದ ಕೊಯ್ಯುವ, ಕೊರೆಯುವ ಉಪಕರಣಗಳು ಬೆಳಕಿಗೆ ಬಂದುವು. ಉತ್ತುವ, ಬಿತ್ತುವ, ಆಗಿಯುವ, ಹಸನಗೈಯುವ, ಕೊರೆಯುವ, ರಾಶಿಮಾಡುವ ಸಲಕರಣೆಗಳೇ ಬೇರೆ, ಇವೆಲ್ಲವುಗಳಿಗೂ ಎಲ್ಲ ದ್ರಾವಿಡ ಭಾಷೆಗಳಲ್ಲಿ ಅಚ್ಚಗನ್ನಡ ಶಬ್ದಗಳಿವೆ.

ಒಕ್ಕಲಿಗನು ತನ್ನ ಬೇಸಾಯದಲ್ಲಿ ಕಾಲಮಾನಕ್ಕೆ ತಕ್ಕಂತೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತ ಬಂದಿದ್ದಾನೆ. ವಿಶೇಷವಾಗಿ ಈ ಸಂಪ್ರದಾಯಗಳು ಕರ್ನಾಟಕದಲ್ಲಿ ಶತಶತಮಾನಗಳಲ್ಲಿ ಬದಲಾಗುತ್ತ ಬಂದು, ಮುಂದೆ ೧೨ನೆಯ ಶತಮಾನದಲ್ಲಿ ಶಿವಶರಣರ ಕಾಲಕ್ಕೆ ವಿಶಿಷ್ಟರೂಪಗಳನ್ನು ತಾಳಿ ಈಗಲೂ ಕರ್ನಾಟಕದ ಬಹುಭಾಗಗಳಲ್ಲಿ ಬಳಕೆಯಲ್ಲಿದ್ದುದು ಕಂಡುಬರುವುದು. ಹನ್ನೆರಡನೆಯ ಶತಮಾನ ಎಲ್ಲಾ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ. ಇದು ತನ್ನ ಪ್ರಭಾವವನ್ನು ಕೃಷಿ–ಕರ್ಮ ಕ್ಷೇತ್ರದಲ್ಲಿಯೂ ತೋರಿಸಿರುವುದು. ಆ ಕಾಲದಲ್ಲಿ ಹೊಸಮತವಾದ ಲಿಂಗಾಯತ ಮತವು ತನ್ನ ಭೇರಿಯನ್ನು ಹೊಡೆಯ ಹತ್ತಿತ್ತು. ದೇಶದೊಳಗಿನ ಅನೇಕ ಜನರು ಇದನ್ನು ಕೇಳಿ ಈ ಮತಕ್ಕೆ ಸೇರಿದರು. ಈ ಮತವು ಎಲ್ಲ ಕಸುಬುಗಳಿಗೆ ಸ್ಥಾನಕೊಟ್ಟು ಶಿವಾಚಾರವನ್ನು ಬೀರಿದ ಮೂಲಕ ಮಾನವನು ತನ್ನ ಕಾಯಕ ಮಾಡಿ ಬಿಡುವೇಳೆಯಲ್ಲಿ ಸಮಾಜದಲ್ಲಿ ಸಮಾನಸ್ಕಂಧನಾಗಿ, ಧಾರ್ಮಿಕ, ಶಾರೀರಿಕ ಸಂಪತ್ತುಗಳನ್ನು ಬೆಳೆಸಿ ಊರ್ಜಿತ ಸ್ಥಿತಿಗೆ ಬಂದನು. ಈ ಸಮಾಜವು ಉದ್ಯೋಗ ದೃಷ್ಟಿಯಿಂದ ಸ್ವಯಂಪೂರ್ಣವಾಯಿತು. ಆರ್ಥಿಕ ದೃಷ್ಟಿಯಿಂದ ಆಗಿನ ಕಾಲದಲ್ಲಿ ವ್ಯಾಪಾರಕ್ಕಿಂತಲೂ ಒಕ್ಕಲತನವು ಮಿಗಿಲೆಂದು ಹೇಳಬಹುದು. ಆಗ ಮಾನವನ ಭೌಗೋಲಿಕ ವಿಜ್ಞಾನವು ಅಷ್ಟೊಂದು ಬೆಳೆದಿದ್ದಿಲ್ಲ. ವಿಜ್ಞಾನ ಶಾಸ್ತ್ರವು ಪ್ರಗತಿಯನ್ನು ಹೊಂದಿದ್ದಿಲ್ಲ. ಪ್ರವಾಸವು ಪ್ರಾಣಸಂಕಟವಾಗಿತ್ತು. ಜನರು ಒಕ್ಕಲತನದಲ್ಲಿಯೇ ಅಭಿರುಚಿಯುಳ್ಳವರಾಗಿದ್ದರು.

ಒಕ್ಕಲತನದಲ್ಲಿ ಮೂರು ಕ್ರಮಗಳನ್ನು ಕಾಣಬಹುದು. ೧. ಉತ್ತುವುದು, ೨. ಬಿತ್ತುವುದು, ೩. ಒಕ್ಕುವದು; ಈ ಮೂರರಲ್ಲಿಯೂ ಒಕ್ಕಲಿಗನು ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ನೇಮ ನಿತ್ಯದಿಂದ ಪಾಲಿಸುವುದು ಕಂಡುಬರುವುದು. ಇವುಗಳಲ್ಲಿ ಸುಗ್ಗಿಯ ಕಾಲದ ಸಂಪ್ರದಾಯಗಳು ಸಂಶೋಧಕರ ಮನಸ್ಸನ್ನು ಸೆಳೆಯದೆ ಬಿಡವು. ಅವುಗಳನ್ನು ನೋಡಿ ಮನಸ್ಸು ಚಕಿತವಾಗಿ ಸಂಶೋಧನೆಗೆ ದುಮುಕುವುದು. ಅವುಗಳನ್ನರಿಯಬೇಕಾದರೆ ಅಗತ್ಯವಾದ ಸಹಾಯವು ಜಾನಪದಸಾಹಿತ್ಯ. ಇದು ನಿತ್ಯಜೀವನದ ವಾಸ್ತವ ಚಿತ್ರ. ಅಲ್ಲದೆ ಸರಳ ಸ್ವಭಾವದ ಹಳ್ಳಿಗರ ಹೃದಯದಿಂದ ಉಕ್ಕಿ ಬಂದುದು. ಬಹುತರವಾಗಿ ನಂಬಲರ್ಹವಾದುದು. ಮೇಲೆ ಕಾಣಿಸಿದ ಮೂರು ಸಮಯಗಳಲ್ಲಿ ದಣಿಪನ್ನಾರಿಸಲಿಕ್ಕಾಗಲಿ, ಮನೋಲಹರಿಗಾಗಲಿ, ಒಕ್ಕಲಿಗನು ಅನೇಕ ಹಾಡುಗಳನ್ನು ಹಾಡುವುದನ್ನು ಕೇಳಬಹುದು. ಇವುಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ನೋಡಿದರೆ ಈ ಸಂಪ್ರದಾಯಗಳು ಬೆಡಗಿನ ರೂಪದಿಂದ ಸೂಕ್ಷ್ಮವಾಗಿ ಹೇಳಲ್ಪಟ್ಟಿರುವುದು ಕಂಡುಬರುವದು. ಬಸವಾದಿ ಪ್ರಮಥರು ಹೊಸಮತವನ್ನು ಹಬ್ಬಿಸಿದರು. ಎಲ್ಲರೂ ಉದ್ಯೋಗಿಗಳಾಗಿ ಜೀವನ ಸಾಗಿಸುತ್ತ, ಧರ್ಮವಂತರಾಗಿ ಬಾಳುತ್ತಿದ್ದರು, ಈ ಮತದ ಘೋಷಣೆಗೂ, ಪೋಷಣೆಗೂ, ಎಲ್ಲ ಕಸಬುದಾರರು ಈ ಧರ್ಮವನ್ನು ಸ್ವೀಕರಿಸಿದ ಮೇಲೆ ತಮ್ಮ ಕಾಯಕದ ಮುಖಾಂತರ ನೆರವಾಗುತ್ತಿದ್ದರು.

ಅವರಲ್ಲಿ ಒಕ್ಕಲಿಗನು ಮಾತ್ರ ಎಲ್ಲರ ಸ್ತುತಿಗೆ ಪಾತ್ರನಾಗಿದ್ದಾನೆ. ಪ್ರಮಥರಲ್ಲಿ ಅನೇಕರು ಒಕ್ಕಲಿಗರಿದ್ದಾರೆ. ಇಳಿಹಾಳ ಬೊಮ್ಮಯ್ಯ, ಏಲೇಶ ಕೇತಯ್ಯ, ಮಾರಗೌಡ, ಮೊದಲಾದ ಶಿವಶರಣರು ಹೊಲಗೆಲಸವು ತಮ್ಮ ಕಾಯಕವೆಂದು ಮಾಡಿ ಅದರಲ್ಲಿಯೇ ಕೈಲಾಸ ಹೊಂದಿದ್ದಾರೆ.

೧) ಕಣ ಮಾಡುವುದು. ೨) ಮೇಟಿಯ ನಾಟುವುದು. ೩) ತೆನೆಮುರಿಸಿ ಹಂತಿಯ ಕಟ್ಟುವುದು. ೪) ಮೇದ ಕಂಕಿಗಳನ್ನು ಏಂಗಡಿಸುವುದು. ೫) ತೂರಿ ರಾಶಿಯನ್ನು ಮಾಡುವುದು. ೬) ಮೇಟಿಯ ರಾಶಿ: ಬುದ್ದಿವಂತ ಲಿಂಗನ (ಬೂದ) ರಾಶಿ. ೭) ಕರಿಬಂಟ; ಬಿಳಿಬಂಟಯ ೮) ಗೋಪಾಳ, ದಾನ ಧರ್ಮ ಮಾಡುವುದು–ಇವುಗಳಲ್ಲಿ ಅವನು ಕೆಲವೊಂದು ಸಂಪ್ರದಾಯಗಳನ್ನು ಪಾಲಿಸುತ್ತಾನೆ. ಆದರೆ ನಮ್ಮ ದುರ್ದೈವದ ಮೂಲಕ ಅವುಗಳ ಅರ್ಥವನ್ನು ಅವನು ಇಂದು ಬಿಡಿಸಿ ಹೇಳಲಾರ, ಜ್ಞಾನದ ತಿಳಿಬೆಳಕನ್ನರಿಯದ ಅವನು ಇದನ್ನರಿಯ, ಹೆಚ್ಚಿಗೆ ಕೇಳಹೋದರೆ ತಮ್ಮ ಹಿರಿಯರು ಮಾಡುತ್ತ ಬಂದ ಕಾರಣ ತಾನೂ ಮಾಡುವೆನೆಂದು ಹೇಳಿಬಿಡುವನು. ಶಿವಶರಣರ ಕಾಲದ ನಂತರ ಒಕ್ಕಲಿಗನ ಜೀವನವು ಪರತಂತ್ರವಾಗಿ ದಾಸ್ಯದಲ್ಲಿ ಉಳಿಯಿತು. ಜ್ಞಾನಭಂಡಾರವು ಅವನಿಗೆ ದೂರದಲ್ಲಿ ಕಾಣುವ ಕ್ಷಿತಿಜವೇ ಆಯಿತು. ಸರಳಸ್ವಭಾವಿಯಾಗಿ ತನ್ನ ಕಾಯಕ ಮಾಡುತ್ತ ಬಂದ, ವ್ಯವಹಾರದ ಅನುಭವವು ಅವನಿಗೆ ದೂರಾಯಿತು. ಆದುದರಿಂದ ಪ್ರಪಂಚದಲ್ಲಿ ಇಂದಿಗೂ ಅವನು ತೊಳಲಬೇಕಾಗಿದೆ.

ಒಕ್ಕಲಿಗನು ಶುಭದಿನದಲ್ಲಿ ಕಣ ಕೆತ್ತಿ ನೀರ್ಹೊಡೆದು 'ಕರೆಗಣ'* ಕಟ್ಟಿ ಮೇಟಿಯ ನಾಟಲು ಕುಣಿಯನ್ನು ತೆಗೆಯುತ್ತಾನೆ. ಆ ಕುಣಿಯ ಹಸಿಮಣ್ಣನ್ನೊಯ್ದು ಹೊಲದ ಸಮೀಪದ ಹಾದಿಯ ಮೇಲೆ ಹಾಕುವ ಸಂಪ್ರದಾಯವು ಈಗಲೂ ಕಣ್ಣಿಗೆ ಬೀಳುವುದು, ಸಂಪ್ರದಾಯಗಳ ಗೂಢಾರ್ಥಗಳು ಈಗ ಮರೆತುಹೋಗಿದೆ. ಆದರೆ ಅವು ಬಳಕೆಯಲ್ಲಿ ಉಳಿದು ಬಂದಿರುವದೇ ಕನ್ನಡಿಗರ ಸುದೈವವೆಂದು ಹೇಳಬೇಕಾಗಿದೆ. ಇವುಗಳನ್ನು ಆಳವಾದ ಅಭ್ಯಾಸದಿಂದ ಪರಿಶೀಲಿಸಿ ನೋಡಿದರೆ ಗೂಡಾರ್ಥವು ತಿಳಿದುಬರುವುದು. ಕಣದ ಮೇಟಿಯ ಕುಣಿಯ ಐದು ಬೊಗಸಿ ಹಸಿಮಣ್ಣನ್ನು ಹಾದಿಗೆ ಹಾಕುವುದೆಂದರೆ, ಹಾದಿಗೆ ಔತಣ ಕೊಟ್ಟಂತೆ. ಸುಗ್ಗಿಯು (ದಾಸೋಹ) ನಡೆದಿದೆ. ಕೊನೆಯ ರಾಶಿಯ (ಆರಾಧನೆ) ದಿನಗಳು ಸುರುವಾದುವು. ಜೋಗಿ, ಜಂಗಮ, ದಾಸ–ಬಡವರು, ಪರದೇಶಿಗಳು, ಭಿಕ್ಷುಕರು ಮೊದಲಾದವರು ಒಕ್ಕಲಿಗನ ಕಣಕ್ಕೆ ಬಂದು, ಅವನು ಕೊಡುವ ದಾನವನ್ನು ಒಯ್ಯ ಬೇಕೆಂದು ಹಾದಿಗೆ ಹಾಕಿದ ಈ ಹಸಿಮಣ್ಣು ಸೂಚಿಸುತ್ತದೆ. ಆ ಹಸಿಮಣ್ಣನ್ನು ಗುರುತಿಸಿ ಮೇಲೆ ಸೂಚಿಸಿದ ಎಲ್ಲ ಜನರೂ ಸುಗ್ಗಿಯ ಕಣಕ್ಕೆ

---

* ಕರೆಗಣ – ಬರೆಗಣವು ಎಂಬ ಅರ್ಥ. ಕಣವನ್ನು ಮಾಡುವಾಗ ನೀರುಗ್ಗಿ ಊಬೊಗೆದು ಮೇಟಿಯಿಲ್ಲದೆ ನೆಲವನ್ನು ತುಳಿಸುವುದಕ್ಕೆ 'ಕರೆಗಣ'ವೆಂದು ಕರೆಯುವರು.

ಭಿಕ್ಷಕ್ಕೆಂದು ಹೋಗುವದನ್ನು ಬೆಳುವಲದ ಎಲ್ಲ ಹಳ್ಳಿಗಳಲ್ಲಯೂ ಪ್ರತ್ಯಕ್ಷ ಕಾಣಬಹುದು. ಸಮಾಜದಲ್ಲಿ ಒಕ್ಕಲಿಗನು ತನ್ನ ಗಳಿಕೆಯನ್ನು ಹೇಗೆ ಬಳಸುತ್ತಿದ್ದನೆಂಬುದು, ಇಳಿಹಾಳ ಬೊಮ್ಮಯ್ಯನ ಹಂತಿಯ ಹಾಡಿನಲ್ಲಿ ಬಂದಿದೆ.

ಇಳಿಹಾಳ ಬೊಮ್ಮಯ್ಯಾ, ಹೊಲಗೆಲಸ ಕಾಯಕವ
ನಲುಮೆಯಲಿ ಸುಗ್ಗಿದಾಸೋಹ । ಹರಸೇವೆ
ಸಲಿಸಿ ಲಿಂಗದೊಳು ಬಯಲಾದ॥

ಒಕ್ಕಲಿಗನಿಗೆ ಹೊಲಗೆಲಸವೇ ಕಾಯಕ; ಸುಗ್ಗಿಯೇ ದಾಸೋಹ; ಹರಸೇವೆ. ಹಂಗಿಲ್ಲದ ಉದ್ಯೋಗವೆಂದರೆ ಒಕ್ಕಲತನ, ನಿಸರ್ಗವು ದಯೆಮಾಡಿದರೆ ಸಾಕು, ಒಕ್ಕಲಿಗನ ಹನ್ನೆರಡು ತಿಂಗಳ ಕಾಯಕ ದಾಸೋಹ. ಅವನು ಸದಾ ಕೊಡುಗೈಯು.

ಮೂತಾಳ ಕೂರಿಗಿಗೆ, ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ । ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡು ॥

ಕಡೆಯ ಬಲಕಿನ ತಾಳ, ವಿಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ । ಜೀವನಕೆ
ನಡುವಿನಾ ತಾಳ ರೈತನಿಗೆ ॥

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನೆ
ಮುಂದು ಕೊಡುಗೈಯು ಒಕ್ಕಲಿಗ । ನಾಡೊಳಗೆ
ಹೊಂದಿ ದಾಸೋಹ ಶಿವಮತರೆ ॥

ಹೀಗೆ ಒಕ್ಕಲಿಗನ ಗಳಿಕೆಯು ಎಲ್ಲರಿಗೂ ಹಂಚಿಹೋಗುವುದು. ಅವನು ಜಿಪುಣನಾದರೆ ಜೀವರಾಶಿಯು ಬದುಕುವ ಬಗೆ ಹೇಗೆ?

ಅವನಿಗೆ ಸುಗ್ಗಿಯ ಕಣವೇ ಮಂಟಪವು; ಮೇಟಿಯೇ ಚೆನ್ನಬಸವೇಶ; ಆರಾಧನೆಯ ಮಾಡಿಸುವವನೇ ಹೊಣೆಗಾರ ರೈತ–ಬಸವೇಶ. ಇದಕ್ಕೆ ಗಣಿಯಾದ ಗುರು. ಪ್ರಭುದೇವ. ಕಣದೊಳಗಿನ ಬುದ್ದಿವಂತಲಿಂಗ (ಬೂದ).

ಕಣವೆ ಮಂಟಪವಾತೊ, ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ । ಕಣಮೇಟ
ಗಣಿಗುರುವು ಕಣಕೆ ಪ್ರಭುಲಿಂಗೊ॥

ಮೂರು ಕಾಲಿನ 'ಮೆಟ್ಟು'* ತ್ರಿವಿಧ ಲಿಂಗಗಳು; ತೂರೂವ ಜೀವ, ಚಿತ್ಕಳೆ (ಪರಮಾತ್ಮಲಿಂಗ): ತೂರಿದ ರಾಶಿ ವಚನ ರಾಶಿ.

---

* 'ಮೆಟ್ಟು' : ರಾಶಿಯನ್ನು ಮಾಡುವಾಗ ಮೆದುವನ್ನು ತೂರಲು ಉಪಯೋಗಿಸುವ ಎತ್ತರವಾದ 'ತಿವುಟಿಗೆ' (Stand) ಅದಕ್ಕೆ ಮೂರು ಕಾಲುಗಳಿದ್ದು ಮೇಲೆ ನಿಲ್ಲಲು ಒಂದು ಹಲಗೆಯನ್ನು ಜೋಡಿಸುವರು.

ಮೂರು ಕಾಲಿನ ಮೆಟ್ಟು, ಮೂರು ಲಿಂಗಗಳೇನೂ
ತೂರುವನು ಜೀವಿ, ಚಿತ್ಕಳೆಯು । ವಚನಗಳು
ತೂರಿದಾ ರಾಶಿ ಶಿವಮತಕೆ ॥

ಮಹಾಶಿವಶರಣ 'ಡೋಹರ ಕಕ್ಕಯ್ಯ'ನೇ ಈ ವಚನರಾಶಿಗೆ 'ಸೆಳ್ಳಾ'ದ; ವಚನಗಳೇ ಚೊಕ್ಕ ಮುತ್ತಿನ ರಾಶಿ. ಎಂಟು ಕಟ್ಟಿನ ಇಕ್ಕಲಿಯೇ ಅಷ್ಟಾವರಣ ಬದ್ಧವಾದ ಲಿಂಗಾಯತ ಮತ. ಇದರಿಂದ ಹುಲುಸಾಗಿ ಉಕ್ಕಿದ ರಾಶಿಯೇ ವಚನ ಶಾಸ್ತ್ರವು.

ಕಕ್ಕಯ್ಯ ಸೆಳ್ಳಾಗಿ, ಚೊಕ್ಕ ಮುತ್ತಿನ ರಾಶಿ
ಇಕ್ಕಲಿಯ ಎಂಟು ಕಟ್ಟುಗಳು । ಹುಲುಸಾಗಿ
ಉಕ್ಕಿದವು ರಾಶಿ ವಚನಗಳು ॥

ಹಂತಿಗಣ್ಣಿಯು ಚಿನ್ನ, ಚಿಂತೆಯಿಲ್ಲದ ರಾಣಿ
ಬಂತು ಮಹಮನೆಗೆ ಬಸವಣ್ಣ । ಉಣಿಸಿದನು
ನಿಂತು ಶಿವಮತವ ಅಂಬಲಿಯ ॥

ಈ 'ಮಹಮನೆ'ಯು ಬಸವಣ್ಣನವರ ಪ್ರಸಾದನಿಲಯವಿರಬೇಕು. ಈ ಪ್ರಕಾರ ಅನೇಕ ಹಂತಿಯ ಪದ್ಯಗಳನ್ನು, ಹಂತಿಯ ಹಾಡುಗಬ್ಬಗಳಲ್ಲಿ ಕಾಣಬಹುದು.

ತೂರುವ ಮೆದಕ್ಕೆ 'ಬಿಳಿಬಂಟ'ನನ್ನೂ, ರಾಶಿಗೆ 'ಕರಿಬಂಟ' ಅಥವಾ ಬಳಿಬಂಟನನ್ನೂ ಕಟ್ಟುವ ಸಂಪ್ರದಾಯವು ಸುಗ್ಗಿಯ ಕಣದಲ್ಲಿ ಉಂಟು, ಈ 'ಕರಿಬಂಟ', 'ಬಿಳಿಬಂಟ'ರು ಯಾರು? ಎಂಬುದನ್ನು ವಿಚಾರ ಮಾಡಬೇಕಾಗಿದೆ. ಕಣದ ರಾಶಿಯನ್ನು ಕಾಯಲು ಉಗ್ರವೀರ 'ಬಂಟ', 'ವೀರಘಂಟೆಯ ಮಡಿವಾಳನಿಗೆ ಒಕ್ಕಲಿಗನು 'ಕರಿಬಂಟ' ನೆಂದೂ, ಮತ್ತು ಪಾವನ ಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ 'ಬಿಳಿಬಂಟ'ನೆಂದೂ ಕರೆದಿರುವನು. ಕರಿಬಂಟನೆಂದರೆ ಈಗಿನ ಒಕ್ಕಲಿಗನಿಗೆ ಕಂಕಿಯ ಸುಟ್ಟ ಕರುಕಾಗಿದೆ; ಬಿಳಿ ಬಂಟನೆಂದರೆ ಕಣದ ದಂಡೆಯ ಮೇಲಿರುವ 'ಒಲೆಯಲ್ಲಿಯ ಬೂದಿಯಾಗಿದೆ': ಅವನು ಈಗ ಈ ಬಂಟರ ಮಹತ್ವವನ್ನರಿಯ, ಬಂಟರನ್ನು ರಾಶಿಗೆ ಕಟ್ಟುವುದರಿಂದ ಸಂಕದೇವನ ಬಲವಾಗಿ ರಾಶಿಯು ಹುಲುಸಾಗುವದೆಂದು ಹೇಳುವನು.

ನೂರೊಂದು ಶರಣಾರು. ನೂರೊಂದು ಬಂಟಾರು.
ಸಾರಿ ಹೇಳ್ಯಾನೊ ಒಕ್ಕಲಿಗೊ । ಹೊಲಸುಗ್ಗಿ
ಧೀರ ಕಾಯದ ದಿನವೆಂದು ॥

ಶರಣ ಮಡಿವಾಳಾದ, ಕರಿಬಂಟ ಕಣದಾಗ
ಹರಳಾದ ಕಣಕ ಬಿಳಿಬಂಟ । ಪ್ರಭುಲಿಂಗ
ಗುರುಬುದ್ಧಿವಂತ ಲಿಂಗಾದ ॥

ಈ ಕಡೆಯ ಸಾಲು ಜನರಿಗೆ ಸುಗ್ಗಿಯ ಕಣದಲ್ಲಿಯ ಇನ್ನೊಂದು ಸಂಪ್ರದಾಯವನ್ನು ಸೂಚಿಸುವುದು. ಅಲ್ಲಮ ಪ್ರಭುದೇವರೇ ಕಣದಲ್ಲಿ ಪೂಜೆಗೊಳ್ಳುವ 'ಬುದ್ಧಿವಂತ ಲಿಂಗ'. ಈಗ ಅದು 'ಬೂದ' ಎಂದು ಕಣದಲ್ಲಿ ಕರೆಯಲ್ಪಡುತ್ತದೆ.

ಬಹುತರವಾಗಿ ಕರ್ನಾಟಕದ ಒಕ್ಕಲಿಗರು ಮೊದಲಿನಿಂದಲೂ ಶಿವೋಪಾಸಕರು. ಅವರು ತಮ್ಮ ಕಾಯಕದಲ್ಲಿ ಅನ್ಯದೇವತೆಗಳನ್ನು ಪೂಜಿಸದಿರುವುದೇ ಬಲವಾದ ದೃಷ್ಟಾಂತ. 'ರಾಶಿದೇವ'ನೇ'ಸಂಕದೇವ'ನು. ಈ ಸಂಕದೇವನಿಗೆ 'ಸಂಕಪ್ಪ'ನೆಂದು ಅನ್ನುತ್ತಾರೆ. 'ಸಂಕಪ್ಪ' ಇದು 'ಶಂಕಪ್ಪ' ಈ ಶಬ್ದದ ವಿಕೃತರೂಪ: ಶಂಕರ–ಶಂಕರಪ್ಪ–'ಸಂಕ್ರಪ್ಪ'–ಎಂದು ಆಗಿದೆ. ಕ್ರಿ.ಶ. ೧೨ನೆಯ ಶತಮಾನದಲ್ಲ ಶಿವಶರಣರ ಪ್ರಭಾವದಿಂದ ವೀರಶೈವಮತವು ಕರ್ನಾಟಕದ ತುಂಬೆಲ್ಲ ಹಬ್ಬಿತು. ಕಾಯಕದ ತಳಹದಿಯ ಮೇಲೆ ಕಟ್ಟಿದ ಈ ಮತಕ್ಕೆ ಎಲ್ಲ ಕಸಬುದಾರರು ಅನುಯಾಯಿಗಳಾದರು. ಅವುಗಳಲ್ಲಿ ಈಗಲೂ ಬಳಕೆಯಲ್ಲಿರುವ ಸುಗ್ಗಿಯ ಬೂದನು ಸಂಶೋಧಕರ ಮನಸ್ಸನ್ನು ಹಿಡಿಯದಿರನು. ಹಾಗಾದರೆ ಈ ಬೂದನು ಯಾರು?

"ಬುದ್ಧಿವಂತಯ್ಯ' 'ಬುದ್ದಯ್ಯ' 'ಬೂದಯ್ಯ' ಎಂಬ ಹೆಸರುಗಳು ವೀರಶೈವರಲ್ಲಿ ಹೆಚ್ಚಾಗಿ ಈಗಲೂ ಕಂಡುಬರುವುವು. ಈ ಹೆಸರುಗಳು ಅನ್ಯಮತಗಳಲ್ಲಿ ಕಡಿಮೆ; ಇಲ್ಲವೆಂದರೂ ಸಲ್ಲುವುದು. ಮಹಾಜ್ಞಾನಿಯಾದ ಅಲ್ಲಮ ಪ್ರಭುದೇವರು ವೀರಶೈವರಿಗೆ ಭೂಲೋಕದಲ್ಲಿ ಶಿವನ ಪರಮ ಚಿತ್ಕಳೆಯೆಂದು ಗ್ರಹಿಕೆಯುಂಟು. ಅದುದರಿಂದ ವೀರಶೈವರಲ್ಲಿ ಅಲ್ಲಮನಿಗೆ ಮೊದಲನೆಯ ಸ್ಥಾನವುಂಟು. ಒಕ್ಕಲಿಗರಾದ ವೀರಶೈವರು ಇದಾವುದಕ್ಕೂ ಹೊರತಾಗಿಲ್ಲ. ಅವರೂ ತಮ್ಮ ಕಾಯಕದಲ್ಲಿ ಅಲ್ಲಮ ಪ್ರಭುದೇವರಿಗೆ ಮುಖ್ಯಸ್ಥಾನವನ್ನಿತ್ತು. ಕಣದಲ್ಲಿ ಬುದ್ಧಿವಂತ ಲಿಂಗನೆಂದು ಪೂಜೆ ಮಾಡಿದ್ದಾರೆ. ಈ ಬುದ್ಧಿವಂತ ಲಿಂಗವೇ ಬೆಳವಲದ ಎರೆಯಲ್ಲಿ 'ಸುಗ್ಗಿಯ ಲಿಂಗಯ್ಯ 'ನಾಗಿದ್ದಾನೆ. ಬೆಳವಲದ ಮಸಾರಿಯಲ್ಲಿ ಒಕ್ಕಲಿಗರು ಈ ಬುದ್ಧಿವಂತಲಿಂಗನಿಗೆ 'ಬುದ್ದಯ್ಯ'ನೆಂದೂ, 'ಬೂದಯ್ಯ'ನೆಂದೂ ಕಣದಲ್ಲಿ ಪೂಜಿಸುವರು. ಇದೇ ಈಗ ಒಂಟಿ ಹೆಸರಾಗಿ ಕಣದಲ್ಲಿ ಬೂದನೆಂದೂ, ಉಳಿದಿದೆ. ಎಲ್ಲ ಒಕ್ಕಲಿಗರಲ್ಲಿ ಕುಲಜಾತಿಗಳ ಭಿನ್ನ ಭೇದವಿಡದೆ ಉತ್ತರ ಕರ್ನಾಟಕದಲ್ಲಿ ಬೂದನನ್ನು ಸುಗ್ಗಿಯ ಕಣದಲ್ಲಿ ಆದರದಿಂದ ಪೂಜಿಸುತ್ತಾರೆ.

ಬೂದನಿಗೆ ಬಾಸಿಂಗ ಭೂಮಿತಾಯಿಗೆ ದಂಡೆ
ಸಾಲಶರಣರಿಗೆ ಸರಮಾಲೆ । ಕಟಿಕೊಂಡು
ಮಾದಯ್ಯ ಗೆದ್ದ ಕೈಲಾಸ ॥

ಈ ಮಾದಯ್ಯನು ಶಿವಶರಣ ಮಾದಯ್ಯನು. ಜೀರರಿಗೂ (ಹೂಗಾರ) ಒಕ್ಕಲಿಗನ ಕಣದಲ್ಲಿ ರಾಶಿಗೆ ಪತ್ರಿ ಹೂದಂಡೆಗಳನ್ನು ಕೊಡುವ ಬಾಬಿದೆ, ಇಲ್ಲಿ ಬಾಸಿಂಗವೆಂದರೆ ಎಲೆಪತ್ರಿಗಳ ಮುಕುಟ. ಅದನ್ನು ಒಕ್ಕಲಿಗರು ರಾಶಿಯ. ದಿವಸ ಬೂದನ ರಾಶಿಗೆ ಏರಿಸುವರು. ಹೂದಂಡೆಯನ್ನು ಮೇಟಿಗೆ ಕಟ್ಟಿ, ಉಳಿದ ಉಪಕರಣಗಳಿಗೆ ಸಾಲುಶರಣರೆಂದು ಹೂಮಾಲೆಗಳನ್ನು ಹಾಕಿ ಪೂಜೆ ಮಾಡುವರು. ತುಂಬುವ ರಾಶಿಯಲ್ಲಿ ತಟ್ಟೆಯ ತುಂಬ ಜೋಳವನ್ನು ಒಕ್ಕಲಿಗನು ಹೂಗಾರನಿಗೆ 'ಬಾಬು' ಎಂದು ಕೊಡುವ ವಾಡಿಕೆಯು ಈಗಲೂ ಇರುವುದು. ಈ ಕಾಯಕವನ್ನು ಶಿವಶರಣರ

ಕಾಲದಲ್ಲಿ ಹೂಗಾರ ಮಾದಯ್ಯನು ಮಾಡುತ್ತಿದ್ದನೆಂದು ಅವನ ಚರಿತ್ರದಿಂದ ತಿಳಿದುಬರುವುದು.

ಬುದ್ಧಯ್ಯ, ಬೂದಯ್ಯ, ಎದ್ದು ತೂರಿದ ಮೆದವ
ಬಿದ್ದ ರಾಶೆಲ್ಲ ವಚನಗಳೊ । ಅಲ್ಲಮಗ
ಹುದ್ದೆ ಕಲ್ಯಾಣ ಗದ್ದುಗೆಯೊ ॥

ಇಲ್ಲಿ ಬುದ್ಧಯ್ಯನೇ ಬೂದಯ್ಯನು, ಅವನೇ ಅಲ್ಲಮನು. ಕಲ್ಯಾಣ 'ಗದ್ದಿಗೆ'ಯು ಶಿವಾನುಭವಮಂಟಪದ ಸಿಂಹಾಸನವನ್ನು ಸೂಚಿಸುವುದು. ಈ ಸಿಂಹಾಸನದ ಹುದ್ದೆಯನ್ನು ಪಡೆದವನೇ ಅಲ್ಲಮ ಪ್ರಭುದೇವರೆಂದು, ಐತಿಹಾಸಿಕ ಸಂಗತಿಯನ್ನು ಈ ಪದ್ಯ ಒಳಗೊಂಡಿದೆ –

ಸುಗ್ಗೀಯ ಲಿಂಗಯ್ಯ, ಸಗ್ಗದ ದೊರೆಯಾದ
ಬಗ್ಗಿ ಶಿವಗಣ ಕೈಮುಗಿದೊ । ಒಕ್ಕಲಿಗ
ಉಗ್ಗಡಿಸಿ ರಾಶಿ – ಒಕ್ಕ್ಯಾನೊ ॥

ಎಂಬೀ ಬಿಡಿಪದ್ಯಗಳು ಒಕ್ಕಲಿಗರು ಅಲ್ಲಮ ಪ್ರಭುದೇವರನ್ನು ತಮ್ಮ ಸುಗ್ಗಿಯ ಕಣದಲ್ಲಿ 'ಬುದ್ಧಿವಂತ ಲಿಂಗ' (ಬೂದ)ನೆಂದು ತಿಳಿದು ಪೂಜಿಸುವರೆಂದು ನಿರ್ಧರಿಸಿ ಹೇಳುವುವು.

❑

# ೩. ಆಟ

**ಆಶಯ :**

## ಜೋಕಾಲಿ ಆಡೋಣ ಬನ್ನಿರೋ

**– ಜಿ.ಎಸ್. ಶಿವರುದ್ರಪ್ಪ**

ಹತ್ತ ಬನ್ನಿರಣ್ಣ ನಮ್ಮ ಜೋಕಾಲಿ
ಮುರಿಯದ ಕೊಂಬೆಗೆ ಕಟ್ಟಿದ ಜೋಲಿ
ಬೇರೆಲ್ಲ ಹಾದಿಗು ಬರಿಯ ಒಗ್ಗಾಲಿ
ಇಲ್ಲೆಲ್ಲ ಮೈತುಂಬ ತಣ್ಣನೆ ಗಾಳಿ–
ಜೋಕಾಲಿ ಆಡೋಣ ಬನ್ನಿರೋ – ನಾವೆಲ್ಲ
ಜೋಕಾಲಿ ಆಡೋಣ ಬನ್ನಿರೋ.

ಹಕ್ಕಿಪಕ್ಕಿಗೆಲ್ಲ ಹಸುರಿನ ಜೋಲಿ
ಗುಡಿಯ ದೇವರ ಸುತ್ತ ದೀಪದ ಜೋಲಿ.
ಚಿಕ್ಕೆ ಚಂದ್ರಾಮಗೆ ನೀಲಿಯ ಜೋಲಿ
ನಮ್ಮ ಹಿಗ್ಗಿಗೆ ಜಗವೆಲ್ಲ ಜೋಲಿ–
ಜೋಕಾಲಿ ಆಡೋಣ ಬನ್ನಿರೋ – ನಾವೆಲ್ಲ
ಜೋಕಾಲಿ ಆಡೋಣ ಬನ್ನಿರೋ.

❑

# ೩.೧ ದ್ಯೂತದ ಪ್ರಸಂಗ

**– ಕುಮಾರವ್ಯಾಸ**

ಮರಳಲಹುದ್ದೈ ದೈವವಿಕ್ಕಿದ
ಕೊರಳುಗಣ್ಣಿಯ ಕುಣಿಕೆಯಾರಲಿ
ಹರಿವುದ್ದೈ ಮನ್ನಿಸಿದನೇ ಮೌಹೂರ್ತಿಕರ ನುಡಿಯ
ಕರೆಸುವನು ಧೃತರಾಷ್ಟ್ರ ನಮಗೀ
ನರಿ ಮೊಲಂಗಳ ಹಕ್ಕಿ ಹರಿಣೆಯ
ಕರಹವೇಗುವವೆಂದು ಜರೆದನು ಶಕುನ ಕೋವಿದರ

ಇಳಿದರಾನೆಯನಮಳ ರತ್ನಾ
ವಳಿಯ ಕಾಣಿಕೆಗಳನು ಸುರಿದರು
ಖಳ ಶಿರೋಮಣಿಗೆರಗಿದರು ಧೃತರಾಷ್ಟ್ರ ಭೂಪತಿಗೆ
ಕುಲತಿಲಕ ಬಾ ಕಂದ ಭರತಾ
ವಳಿ ವನದ ಮಾಕಂದ ಧರ್ಮ
ಸ್ಥಳ ಲತಾವಳಿ ಕಂದ ಬಾಯೆಂದಪ್ಪಿದನು ನೃಪನ

ಬಾ ಮಗನೆ ರಿಪುರಾಯ ಮನ್ಮಥ
ಬೀಮ ಬಾರೈ ಭೀಮ ರಣ ನಿ
ಸ್ಸೀಮ ಫಲುಗುಣ ಬಾ ನಕುಲ ಸಹದೇವ ಬಾಯೆನುತ
ಪ್ರೇಮ ರಸದಲಿ ಬೇರೆ ಬೇರು
ದ್ದಾಮ ಭುಜನಪ್ಪಿದನು ಚಿತ್ತದ
ತಾಮಸದ ತನಿ ಬೀಜ ಮುಸುಕಿತು ಹರ್ಷ ರಚನೆಯಲಿ

ಖಳರ ಹೃದಯದ ಕಾಳ ಕೂಟದ
ಹುಳುಕ ಬಲ್ಲರೆ ಮಾನ್ಯರವದಿರ
ಲಲಿತ ಮಧುರ ವಚೋವಿಳಾಸಕೆ ಮರುಳಗೊಂಡರಲ್ಲೈ
ಅಳುಪಿದರೆ ಮಧುಕರನ ಮರಿ ಬೊ
ಬ್ಬುಲಿಯ ವನದೊಳಗೇನಹುದು ನೃಪ
ತಿಲಕರಿದ್ದರು ಬೇರೆ ರಚಿಸಿದ ರಾಜಭವನದಲಿ

ಧರಣಿಪತಿ ಕೇಳೊಂದು ಹರಿಯಂ
ತರ ವಿಶಾಲ ಮಹಾಸಭಾ ವಿ
ಸ್ತರಣವದರಲಿ ತೆರಹ ಕಾಣೆನು ತೀವಿತವಿನಿಪರು
ಹೊರಗೆ ರಥಿಕರು ರಾಹುತರು ಜೋ
ಧರು ಪದಾತಿಗಳಿದ್ದುದಂದಿನ
ಸಿರಿ ಸುರೇಂದ್ರನ ಪಾಡಿಗೈಮಡಿ ಹತ್ತು ಮಡಿಯೆಂದ

ಒಂದು ಕಡೆಯಲಿ ಕವಡಿಕೆಯ ಜೂ
ಜೊಂದು ಕಡೆಯಲಿ ಗದ್ಯಪದ್ಯವ
ದೊಂದು ಕಡೆಯಲಿ ವಾರವಧುಗಳ ಸಾರಸಂಗೀತ
ಒಂದು ಕಡೆಯಲಿ ತರ್ಕ ಗೋಷ್ಠಿಯ
ದೊಂದು ಕಡೆಯಲಿ ಕೌರವೇಂದ್ರನ
ಮುಂದೆ ಜಡಿದುದು ರಭಸ ಹಾಸಂಗಿಗಳ ಸಾರಿಗಳ

ಆಡಲರಿವನು ಗಡ ಯುಧಿಷ್ಠಿರ
ನಾಡುವರೆ ಬರಹೇಳು ಮೇಣ್ತಾ
ನೋಡುತಿರಲಾವಾಡುವೆವು ಸಭೆಯಲಿ ವಿನೋದದಲಿ
ಖೋಡಿಯಿಲ್ಲದ ಸರಸ ನೆತ್ತವ
ನಾಡಲರಿಯದ ನೃಪತಿ ಮೃಗವೆಂ
ದಾಡುತಿಹರರಿದವರು ತಾವಲ್ಲೆಂದಾ ಶಕುನಿ

ಹಲವು ಮಾತಿನಲೇನು ಭೂಪತಿ
ಕೆಲಕೆ ಸಿಲುಕಿದನವದಿರೊಡ್ಡಿದ
ಬಲೆಗೆ ಬಂದನು ನೆತ್ತ ಸಾರಿಯ ಗುರಿಯ ಗದ್ದುಗೆಗೆ
ಕೆಲದಲನುಜರು ವಾಮದಲಿ ಮಣಿ
ವಳಯ ಮಂಚದಲಂಧನೃಪನಿದಿ
ರಲಿ ಸುಯೋಧನ ಕರ್ಣ ಶಕುನಿ ಜಯದ್ರಥಾದಿಗಳು

ಅರಸ ಕೇಳ್ ಕಾಳಗಕೆ ಜೂಜೆಗೆ
ಕರೆದಡೋಸರಿಸಿದೊಡೆ ಬಳಿಕವ
ಗರುವನೇ ಕ್ಷತ್ರಿಯರೊಳಗೆ ನೃಪಧರ್ಮ ನೀನರಿಯ
ಕರೆದೆವಾವ್ ಜೂಜಿಂಗೆ ಬೇಕೇ
ಧರಣಿಪತಿ ಬಾ ರಾಜಧರ್ಮವ
ನೊರಸುವರೆ ನಿಲ್ಲೆಂದುಪೇಕ್ಷಿಸಿ ನುಡಿದನಾ ಶಕುನಿ

ಆದಿದನು ನೃಪನಾ ಕ್ಷಣಕೆ ಹೋ
ಗಾಡಿದನು ಖೇಚರರ ಖಾಡಾ
ಖಾಡಿಯಲಿ ಝಾಡಿಸಿದ ಹಯವನು ಹತ್ತು ಸಾವಿರವ
ಹೂಡಿದನು ಸಾರಿಗಳ ಮರಳಿ
ನ್ನಾಡುವರೆ ಪಣವಾವುದೈ ಮಾ
ತಾಡಿಯೆನೆ ಮನದಲಿ ಮಹೀಪತಿ ಧನವ ಚಿಂತಿಸಿದ

ಅಗಣಿತದ ಧನವುಂಟು ಹಾಸಂ
ಗಿಗಳ ಹಾಯಿತಂ ಸೋತ ವಸ್ತುವ
ತೆಗೆವೆನೀಗಳೆ ಶಕುನಿ ನೋಡಾ ತನ್ನ ಕೌಶಲವ
ದುಗುಣ ಹಲಗೆಗೆ ಹತ್ತು ಮಡಿ ರೇ
ಖೆಗೆ ಗಜಾಶ್ವನಿಕಾಯ ರಥ ವಾ
ಜಿಗಳು ಸಹಿತಿದೆ ಸಕಲ ಸೈನಿಕವೆಂದನಾ ಭೂಪ

ಆಯಿತಿದು ಪಣವಹುದಲೇ ನೃಪ
ಹಾಯಿಕಾ ಹಾಸಂಗಿಗಳ ಸಾ
ಹಾಯ ಕುರುಪತಿಗಿಲ್ಲ ಕೃಷ್ಣಾದಿಗಳು ನಿನ್ನವರು
ದಾಯ ಕಂದೆರೆವರೆ ಸುಯೋಧನ
ರಾಯನುಪಚಿತಪುಣ್ಯವಕಟಾ
ದಾಯವೇ ಬಾಯೆಂದು ಮಿಗೆ ಬೊಬ್ಬಿರಿದನಾ ಶಕುನಿ

ಮತ್ತೆ ಹೇಳುವುದೇನ ಸೋಲವ
ಬಿತ್ತಿ ಬೆಳೆದನು ಭೂಪನವರಿಗೆ
ತೆತ್ತನೈ ಸರ್ವಸ್ವ ಧನವನು ಸಕಲ ಸೈನಿಕನ
ಮತ್ತೆ ಪಣವೇನೆನಲು ಬಳಿಕರು
ವತ್ತು ಸಾವಿರ ಕರಿಕಳಭವೆಂ

ಬತ್ತು ಸಾವಿರ ಕರಿಕಳಭವೆಂ
ಬತ್ತು ಸಾವಿರ ತುರಗ ಶಿಶುಗಳನೊಡ್ಡಿದನು ಭೂಪ

ತೀರಿತಿಂದ್ರಿಪ್ರಸ್ಥದುರು ಭಂ
ಡಾರ ತನ್ನರಮನೆಯ ಪೈಕದ
ವಾರಕದ ಭಂಗಾರವೊಡ್ಡಿತು ಕೋಟಿ ಸಂಖ್ಯೆಯಲಿ
ಸೇರಿತದು ಕುರುಪತಿಗೆ ರಾಯನ
ನಾರಿಯರ ವಿವಿಧಾಭರಣ ಸಿಂ
ಗಾರವೊಡ್ಡಿತು ಕೊಂಡು ಮುಳುಗಿತು ಖಡ್ಡತನ ನೃಪನ

ನಕುಲ ಸಹದೇವಾರ್ಜುನರ ಮಣಿ
ಮಕುಟ ಕರ್ಣಾಭರಣ ಪದಕಾ
ದಿಕ ಸಮಸ್ತಾಭರಣವೊಡ್ಡಿತಂ ಹಲಗೆಯೊಂದರಲಿ
ವಿಕಟ ಮಾಯಾ ವಿಷಮ ಕರ್ಮವ
ನಕಟ ಬಲ್ಲನೆ ಸಾಧಂಜನ ಸೇ
ವಕನು ಸೋತನು ಸಾಧ್ಯವಹುದೇ ವಿಧಿಯ ಮುಳಿಸಿನಲಿ

ಹೇಳಲೇನದನವರು ರಚಿಸಿದ
ಬೇಳುವೆಯನಾ ಶಕುನಿಯೊಡ್ಡಿದ
ಕಾಲು ಕುಣಿಕೆಯೊಳಾರು ಬೀಳರು ನೃಪತಿ ನಿಮಿಷದಲಿ
ಬೀಳುಗೊಟ್ಟನು ತನ್ನನಾ ಜನ
ಜಾಲವಿದ್ದುದು ಬಿಗಿದ ಬೆರಗಿನೊ
ಳಾಲಿಸುವಿರೇ ಜೀಯ ಪಣವೇನೆಂದನಾ ಶಕುನಿ

ಎಲವೊ ಸೌಬಲ ಸಾಕಿದೊಂದೇ
ಹಲಗೆ ಸರ್ವಸ್ವಾಪಹಾರವ
ನಿಳುಹುವೆನು ನೀಲಾಳಕಿಯನೊಡ್ಡುವೆನು ಬಾಲಕಿಯ
ಉಳಿದ ಧನವೆಮ್ಮೈವರಿಗೆ ನಿ
ಷ್ಪಲಿತವಿದು ಹೊಡೆನಲು ಹರುಷದ
ಲಳಿಯ ಚೌಪಟಮಲ್ಲ ಸಾರಿಯ ಸಾಲ ಜೋಡಿಸಿದ

ನ್ಯಾಯವೆಮ್ಮದು ಮುನ್ನ ಸೋತಿರಿ
ಜೀಯ ನಿಮ್ಮೊಡ ಹುಟ್ಟಿದರು ಸಹಿ

ತಾಯತಾಕ್ಷಿಯ ಬಳಿಕ ಸೋತಿರಿ ಬಲುಹ ಮಾಡೆವೆಲೆ
ರಾಯನೊಲಿದುದ ಮಾಡಲಾವ
ನ್ಯಾಯವರ್ತಿಗಳಲ್ಲಲೇ ಬೆಸ
ಸಾ ಯುಧಿಷ್ಠಿರಯೆನುತ ಕೈಗಳ ಮುಗಿದನಾ ಶಕುನಿ

ಗೆಲಿದು ಕೊಟ್ಟೆನು ಸಕಲ ಚಾತು
ರ್ಬಲವನಾ ಭಂಡಾರ ಸಹಿತ
ಗ್ಗಳೆಯರೈವರ ಕಮಲಮುಖಿಯನು ರಾಜ್ಯ ಸಿರಿಸಹಿತ
ಕಲಶವಿಟ್ಟೆನು ಕೊಟ್ಟ ಭಾಷೆಗೆ
ಎಲೆ ಸುಯೋಧನಯೆಂದು ನಯನಾಂ
ಗುಲಿಯ ಸಂಕೇತದಲಿ ಸನ್ನೆಯ ಮಾಡಿದನು ಶಕುನಿ

# ೩.೨ ಮೀಯುವ ಆಟ

**– ಎಚ್. ನಾಗವೇಣಿ**

ಮಳೆಯ ಜಿಟಿ ಜಿಟಿ ರಾಗ ಶುರುವಾಗಿ ಆಗಲೇ ಮೂರು ದಿನ ಕಳೆದಿದೆ. ಕಾರ್ತೆಲ್ ತಿಂಗಳ ನಡುವದು. ಬೆಳಗುವ ತೆಂಗಿನ ಮಡಲು – ಕೊತ್ತಳಿಗೆ, ಸೌದೆ, ತರಗೆಲೆಗಳೆಲ್ಲ ಆ ರೀತಿ ಜೀರಿಗಟ್ಟಿ ಸುರಿವ ಮಳೆಯ ಆಲಾಪನೆ, ಥಂಡಿಗೆ ಬೆದರಿ ಬಚ್ಚಲುಮನೆಯ ಕೋಡಿಮೂಲೆಯಲ್ಲಿ ಚಳಿ ಹಿಡಿದು ಹನಿದು ಕೂತಿವೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲೂ ಖಾದ್ರಿಬ್ಯಾರಿಯವರು ವೆಂಕಪ್ಪಶೆಟ್ಟರ ಬಚ್ಚಲುಮನೆಯ ಉರಿವ ಒಲೆಬಾಯಿಗೆದುರಾಗಿ ಕುಕ್ಕರುಗಾಲಲ್ಲಿ ಕೂತು, ಉರಿವ ತೆಂಗಿನ ಮಡಲ ಸೀಳನ್ನು ಒಲೆಗಂಟಲತ್ತ ತಳ್ಳುತ್ತಿದ್ದರು. ತಳ್ಳುವ ತೆಂಗಿನ ಗರಿಗಳೆಲ್ಲ ಬರಬರನೆ ಉರಿದುಬಿಟ್ಟು ಬರಿ ನಡುದಂಡು ಬಂದಾಗ ಉರಿಯ ಅಬ್ಬರವನ್ನೊಮ್ಮೆ ಕುಗ್ಗಿಸಿ ಒಂದಷ್ಟು ಹೊಗೆಯ ಕಾಣಿಕೆಯನ್ನು ಖಾದ್ರಿಬ್ಯಾರಿಯವರಿಗೆ ಕರುಣಿಸುವಾಗಲೆಲ್ಲ ಅವರು ಸುಕ್ಕು ಮುಖದಲ್ಲಿ ಕ್ಷೀಣವಾಗಿ ಬೆಳಗುತ್ತಿದ್ದ ಕಣ್ಣುಗಳಿಗೆ ನೀರು ತುಳುಕಿಸುವ ಅವಸರ!

ತೊಟ್ಟ ಹಸಿರು ರುಮಾಲಿನ ಅಂಚಿನಿಂದಲೆ ಕಣ್ಣ ನೀರನ್ನು ಇಂಗಿಸಿಕೊಂಡು ಒಲೆಬಾಯಿಗೆ ಮತ್ತಷ್ಟು ತೆಂಗಿನ ಗರಿ ತುರುಕಿಸುವಷ್ಟರಲ್ಲಿ ಆ ಮಳೆಗಾಳಿಯೊಂದಿಗೆ ಬೀಸಿ ಬಂತು–ವೆಂಕಪ್ಪಶೆಟ್ಟರ ಹಕ್ಕಿನ ಶೆಡ್ತಿ ಉಮ್ಮ ಕೈಯವರ ಮುಂದಿನ ಎಚ್ಚರಿಕೆ ಅವುಚಿದ ಹಿತವಚನ!

ನೀರು ಉಗುರು ಬಿಸಿ ಆದ್ರೆ ಸಾಕು, ಸ್ಯಾಬರೆ... ಇವತ್ತೇ ಎಲ್ಲ ಮರಮಟ್ಟನ್ನು ಆ ಒಲೆಗಂಟಲಿಗೆ ತುರುಕಿದರೆ ನಾಳೆ ಅದರ ಬಾಯಿಗೆ ನಮ್ಮ ಕೈಕಾಲನ್ನು ತುರುಕಿಸುವುದಾ ಹೇಗೆ...? ಆ ಒಲೆಯೇನೊ ಈ ಊರಲ್ಲಿರುವ ಸೌದೆ–ಸೌಟುಗಳೆಲ್ಲ ನನ್ನ ಬಾಯಿಗೇ ಬಂದು ಬೀಳಲಿ ಎಂದು ಕೇಳಬಹುದು... ಆದ್ರೆ ನಾವು ನಾಳೇನೂ ಬಾಣಂತಿ – ಮಗು ಮೀಯಿಸಬೇಕಲ್ಲ...'

ಎಂದಿನಂತೆ ಇಂದೂ ತೇಲಿಬಂದ, ಉಮ್ಮಕ್ಕೆ ಶೆಡ್ತಿಯವರ ಉರಿಮಾತು ಖಾದ್ರಿಬ್ಯಾರಿಯವರ ನೆಮ್ಮದಿಯನ್ನು ಕದಡುವಂತಿದ್ದರೂ ಅವರು ಅದನ್ನು ಆಲಿಸಿಯೂ ಆಲಿಸದವರಂತಿದ್ದು, ಇನ್ನೊಂದಷ್ಟು ತೆಂಗಿನ ಗರಿಗಳನ್ನು ಎಳೆದು ಒಲೆಗಂಟಲಿಗೆ ತುರುಕಿಸುವಷ್ಟರಲ್ಲಿ ಶೆಡ್ತಿಯವರು ಉರಿ ಮುಸುಡಿ ಮಾಡಿ ಬಂದೇಬಿಟ್ಟರು. ಕಾವಿಗೆ ಕೂತ ಹೇಂಟೆಯಂತೆ – ಅದ್ಯಾವುದೋ ಅಸಮಾಧಾನ, ಅಶಾಂತಿಯಿಂದ ಬೇಯುತ್ತಾ ಬಂದ ಶೆಟ್ಟರ ಮಡದಿಯ ದಿಢೀರ್ ಆಗಮನದಿಂದ ಒಲೆ ಮುಂದೆ ಕೂತಿದ್ದ ಖಾದ್ರಿಬ್ಯಾರಿಯವರ ಆಸೆಯ ಕಿಡಿಗೆ ತಣ್ಣೀರು ಎರಚಿದಂತಾಯ್ತು!

ಬಾಣಂತಿ ಮೀಯುವ ತಾಮ್ರದ ಹಂಡೆಗೆ ಕಂಠ ಮುಟ್ಟುವಷ್ಟು ನೀರು ತುಂಬಿ, ಒಲೆಗಂಟಲು ಬಿರಿವಷ್ಟು ಸೌದೆ ತುರುಕಿಸಿಟ್ಟು, ನೀರನ್ನು ಸಾಕಷ್ಟು ಜಾಸ್ತಿಯೇ ಕಾಯಿಸಿಟ್ಟು... ಇನ್ನೇನು ಆ ನೀರೊಳಗೆ ತನ್ನ ವಾತ ಹಿಡಿದ ಕೈಗಳೆರಡನ್ನು ಮೂರ್ನಾಕು ಗಳಿಗೆ ಅದ್ದಿಟ್ಟು... ನಾಕೇ ನಾಕು ಚೊಂಬು ನೀರನ್ನು ನೋವಿನಿಂದ ಮರಗಟ್ಟಿಹೋಗಿರುವ ತನ್ನ ಕಾಲ್ಗಂಟುಗಳಿಗೆ ಎರೆದುಕೊಳ್ಳಬೇಕು – ಎಂಬ ಆಸೆಯೆಳೆಯನ್ನು ಅದುವರೆಗೂ ಮೈಯಿಡೀ ಸುತ್ತಿಕೊಂಡು ಹೊಗೆಯ ದೆಸೆಯಿಂದ ಮುದಿ ಕಣ್ಣುಗಳನ್ನು ಕೆಂಪು ಕೇಪಳಹಣ್ಣು ಮಾಡಿ ಕೂತಿದ್ದ ಖಾದ್ರಿಬ್ಯಾರಿಯವರ ಎದೆಯೊಳಗೆ ನಿರಾಸೆಯ ಕಗ್ಗತ್ತಲೆಯೇ ಕವಿದಂತಾಯ್ತು!

ಬಚ್ಚಲಮನೆಗೆ ಹಾಗೆ ನುಗ್ಗಿ ಬಂದ ಉಮ್ಮಕ್ಕೆಯವರು ಎಂದಿನಂತೆ ನೇರವಾಗಿ ಬಂದು, ಹಂಡೆಯ ಮರದ ಮುಚ್ಚಳ ಸರಿಸಿ ಸಾವಧಾನದಿಂದ ಬಿಸಿನೀರಿಗೆ ಬಲಗೈಯ ಬೆರಳುಗಳಷ್ಟು ಸೋಕಿಸಿದವರೆ,

'ಎಲ್ಲಾ ನನ ಕರ್ಮವೇ... ಅಲ್ಲಾ ಸ್ಯಾಬರೆ, ನಿಮ್ಗೆ ಎಷ್ಟೊಂತ ಹೇಳುದು ಮಾರಾಯ್ರೇ! ಇದು ಮಗು–ಬಾಣಂತಿ ಮೀಯುವ ನೀರಾ ಅಥವ ಹೆಣ ಮೀಯಿಸುವ ನೀರಾ...? ಒಲೆಬಾಯಿಗೆ ಕಸಕಡ್ಡಿ ತಳ್ಳುವುದಕ್ಕೆ ನಿಮ್ಗೆ ಒಂದು ತಲೆಬುಡ ಯಾವ್ದೂ ಇಲ್ಲಾಂತ ಕಾಣಿಸುತ್ತೆ...?'

ಸ್ಯಾಬರಿಗೆ ನಯವಾಗಿ ಗದರುತ್ತಲೇ ಉಮ್ಮಕ್ಕೆಯವರು ಉರಿವ ಒಲೆಗಂಟಲತ್ತ ತಿರುಗಬೇಕೆನ್ನುವಷ್ಟರಲ್ಲಿ ಖಾದ್ರಿಬ್ಯಾರಿಯವರು ಒಲೆಗೆದುರಾಗಿ ಕೂತವರು ಕೂತಲ್ಲಿಂದ ತಟ್ಟನೆ ಎದ್ದುನಿಂತರು. 'ಒಮ್ಮೆ ನೀವು ಅಡಿ ಸರಿಸಿ ನೋಡುವಾ...' ಎಂದು ಹೇಳುತ್ತಲೇ ಉಮ್ಮಕ್ಕೆಯವರು ತಮ್ಮ ಎರಡೂ ಕೈಗಳಿಂದ, ಒಲೆಗಂಟಲೊಳಗೆ ಭಾರಿ ಸಂಭ್ರಮದಿಂದ ಉರಿಯುತ್ತಿದ್ದ ತೆಂಗಿನ ಕೊತ್ತಳಿಗೆಗಳನ್ನು ಬಲವಾಗಿ ಹೊರಗೆಳೆದು ಹಾಕಿ, ಅವೆಲ್ಲವನ್ನು ಹೊಸಕಿ ಹಾಕಿದೊಡನೆ ತಟ್ಟನೆ ಎದ್ದ ಹೊಗೆರಂಪಕ್ಕೆ ಖಾದ್ರಿಬ್ಯಾರಿಯವರು ಅಂಗಳದ ಪಾಲಾದರು.

'ಓಯ್ ಮಾರಾಯ್ತಿಯೆ... ಒಮ್ಮೆ ಆ ಮಗುವನ್ನು ಮೀಯ್ಸುದಕ್ಕೆ ತಗೊಂಬಾರೆ... ಈ ಸ್ಯಾಬರು ಬಾಣಂತಿ–ಮಗುಗೆ ನೀರು ಕಾಯ್ಸಿದ್ದಲ್ಲ..., ನನ್ನ ಹೆಣ ಮೀಯ್ಸುದಕ್ಕೆ

ನೀರು ಕಾಸಿದಂತಿದೆ...' ಎಂದು ಗಟ್ಟಿಯಾಗಿ ಒದರುತ್ತಲೇ ತನ್ನ ಬಾಣಂತಿ ಮಗಳು ಸುಮತಿಗಾಗಿ ಘೀಳಿಟ್ಟರು.

ಹೊಗೆ ಘಾಟಿನ ಏಟನ್ನಾದರೂ ಸಹಿಸಿಕೊಳ್ಳಬಲ್ಲೆ – ಆದರೆ ಈ ಶೆಡ್ತಿಯವರ ಮಾತಿನ ಏಟನ್ನು ಸಹಿಸಿಕೊಳ್ಳಲಾರೆ ಎಂಬ ನಿಷ್ಠುರ ಭಾವವನ್ನು ಹೊತ್ತು ಖಾದ್ರಿಬ್ಯಾರಿಯವರು ಅಂಗಳವಿಳಿದವರು ಅಲ್ಲೆ ಹೊರ ಪಾಗಾರಕ್ಕೆ ಒರಗಿಸಿಟ್ಟ ತನ್ನ ತಲೆಗೊರಬನ್ನು ತಲೆಗೇರಿಸಿಕೊಂಡು ಮನೆ ತಡಮೆ ದಾಟಬೇಕೆನ್ನುವಷ್ಟರಲ್ಲಿ, ಉಮ್ಮಕ್ಕೆಯವರಿಂದ 'ಈ ನೀರು ಹೆಣ ಮೀಯ್ಸುದಕ್ಕಾ...' ಎಂಬ ಮಾತಿನೇಟಿಗೆ ಒಂದರೆಗಳಿಗೆ ತತ್ತರಿಸಿದಂತಾಗಿ ದುಃಖದಿಂದ ಅಧೀರ ಹೃದಯ ಹೊತ್ತು ಮನೆ ತಡಮೆ ದಾಟಿದರು.

ಉಮ್ಮಕ್ಕೆಯವರು ಹಂಡೆಯ ಕುದಿನೀರಿಗೆ ಮೂರು ಕೊಡ ತಣ್ಣೀರು ಬೆರಸುವಷ್ಟರಲ್ಲಿ ಮಗುವನ್ನು ಎತ್ತಿಕೊಂಡು ಬಂದ ಮಗಳು ಸುಮತಿ "ಅಲ್ಲಮ್ಮ ಆ ಮುದಿಸ್ಯಾಬರು ಈ ಕಿರಿ ಕಿರಿ ಮಳೆಗೆ ಮುಂಜಾನೆಗೇ ಎದ್ದು ಬಂದು ಇಷ್ಟು ಬೆಂದರ್ ಕಾಯ್ಸಿದ್ದೇ ಹೆಚ್ಚು! ಏನೋ ಆ ಮುದಿವಾತದ ಜೀವ ನಾಕು ಚೊಂಬು ಬಿಸಿನೀರಿಗಾಗಿ ಇನ್ನಿಲ್ಲದಂತೆ ಜೀವಬಿಡುತ್ತೆ. ಅವ್ರೇನು ನಮ್ಮಿಂದ ಉಣ್ಣುವ ಅನ್ನ ಕೇಳ್ತಾರಾ ಅಥವಾ ಉಡುವ ಬಟ್ಟೆ ಕೇಳ್ತಾರಾ? ಬರೀ ಹೊಯ್ದುಕೊಳ್ಳಲು ಒಂದಷ್ಟು ಬಿಸಿನೀರು ಬಯಸ್ತಿದ್ದಾರೆ ಅಷ್ಟೆ. ಅದುನ್ನೂ ಅವರೇನು ನಮ್ಮಿಂದ ಪುಕ್ಕಟೆಯಾಗಿ ಅವರಾಗಿಯೇ ಬೇಡಿದ್ದಾರಾ...? ನಮ್ಗೆ ಬಾಣಂತಿ ನೀರು ಕಾಯ್ಸಿಕೊಡಿ... ನಮ್ಮ ಬಾಣಂತಿ ಮಿಂದಾದ ಮೇಲೆ ನೀವೂ ಒಂದು ಗಡದ್ದಾಗಿ ಮಿಂದು ಬಿಡಿ...' ಎಂದು ಅಪ್ಪ ಅವರಿಗೆ ಹೇಳಿ ಒಪ್ಪಿಸಿದ್ದಲ್ವಾ?

ಮಗಳ ಮಾತಿನ ಸರಣಿಗೆ ಉಮ್ಮಕ್ಕೆಯವರ ವಿಕ್ಷಿಪ್ತ ಅರಿವು ತಿಳಿಯಾಗತೊಡಗಿತ್ತು. ಮಗು ಮೀಯಿಸುವ ನೀರನ್ನು ಹದಗೊಳಿಸುತ್ತಿದ್ದ ಅವರು ಮಗಳಾಡಿದ ಮಾತುಗಳನ್ನು ಅತ್ಯಂತ ಪರಿತಾಪದಲ್ಲೇ ಮನನ ಮಾಡಿಕೊಳ್ಳುತ್ತಿದ್ದಂತೆ ಅವರಿಗೆ ತಮ್ಮ ಮಾತಿನ ಬಗ್ಗೆ, ಮನದ ಭಾವದ ಬಗ್ಗೆ ಪಶ್ಚಾತ್ತಾಪ ಹುಟ್ಟದಿರಲಿಲ್ಲ. ಅವರಿಗೂ ಖಾದ್ರಿಬ್ಯಾರಿಯವರೆಂದರೆ ಉದಾಸೀನವಿಲ್ಲ–ನಿರ್ಲಕ್ಷ್ಯವಿಲ್ಲ; ಉಡಾಪೆಯ ಭಾವವೂ ಇಲ್ಲ. ಈ ಮಾನ ತೆಗೆವ ಮಳೆಗಾಲದಲ್ಲಿ 'ಅನಪತ್ಯ'ಕ್ಕೆ ಅಂತ ಇಟ್ಟಿದ್ದ ಸೌದೆ–ಸೊಪ್ಪುಗಳೆಲ್ಲವನ್ನು ಖಾದ್ರಿಬ್ಯಾರಿಯವರು ಏನೂ ಪಿಕೀರಿಲ್ಲದಂತೆ ಈ ಬಚ್ಚಲ ಒಲೆಗಂಟಲೆಂಬ ಯಜ್ಞಕುಂಡಕ್ಕೆ ಎಸೆದರೆ ಆ ನಂತರ ಈ ಮಳೆಗೆ ಬಾಣಂತಿ–ಮಗುವನ್ನು ಮೀಯಿಸುವ ಕತೆ ಹೇಗೆ – ಎಂಬ ಆತಂಕದಿಂದಲೇ ದಿನನಿತ್ಯವೂ ಅವರು 'ಬಚ್ಚಲ ಯಜ್ಞಕುಂಡದಿಂದ' ಹೊಗೆ ಎದ್ದಾಕ್ಷಣ 'ಉಗುರುಬಿಸಿನೀರು ಸಾಕು ಸ್ಯಾಬರೇ...' ಎಂಬ ಎಚ್ಚರಿಕೆ ಗಂಟೆಯನ್ನು ಅಬ್ಬರದ ಧ್ವನಿಯಲ್ಲಿ ಮೊಳಗಿಸುತ್ತಿದ್ದರಷ್ಟೆ.

ಖಾದ್ರಿಬ್ಯಾರಿಯವರಿಗೂ ಶೆಟ್ಟರ ಪತ್ನಿ ಉಮ್ಮಕ್ಕೆಯವರ ಅಂತರಂಗ ಏನೆಂಬುದು ತಿಳಿಯದ್ದೇನಲ್ಲ. ಉಮ್ಮಕ್ಕೆಯವರು ಮೈಪಾಡಿ ಗುತ್ತಿನ ಸುಸಂಸ್ಕೃತ ಮನೆತನದ

ಮಗಳಾಗಿದ್ದು, ಆಕೆಯಲ್ಲಿರುವ ಸ್ತ್ರೀ ಸಹಜವಾದ ಔದಾರ್ಯ, ನಯವಿನಯ, ಕಷ್ಟಸಹಿಷ್ಣುತೆ, ಮನುಷ್ಯತ್ವ ಎಲ್ಲವೂ ಆಕೆಗೆ ತಾಯಿ ಮಾಣ್ಯಕ್ಕೆ ಶೆಡ್ತಿಯವರಿಂದಲೇ ಬಂದಿರುವಂತಹದ್ದು – ಎಂಬ ಮಾತನ್ನು ಅದೆಷ್ಟು ಬಾರಿ ಅವರು ವೆಂಕಪ್ಪಶೆಟ್ಟರಲ್ಲಿ ಹೇಳಿಲ್ಲ. ಇದುವರೆಗೆ ಅದೆಷ್ಟು ಬಾರಿ ಅವರು ಉಮ್ಮಕ್ಕೆಯವರ ಕೈಯಿಂದಲೇ ಹೀಗೆ ಸುರಿವ ಮಳೆಯ ಕಾರಣದಿಂದಾಗಿ ಖಾದ್ರಿಬ್ಯಾರಿಯವರು ಉಮ್ಮತ್ತೆಯವರ ನಡೆ–ನುಡಿ–ವ್ಯವಹಾರಗಳ ಬಗ್ಗೆ ಸಾಂದರ್ಭಿಕವಾಗಿ ವ್ಯತಿರಿಕ್ತವಾದ ತೀರ್ಪನ್ನೇ ನೀಡುವಂತಾಗಿದೆ. ಮನುಷ್ಯ ಬೆಳೆದ ಹಾಗೆ ಆತನ ಮನಸ್ಸು ಮಾತ್ರ ಸಂಕುಚಿತವಾಗತೊಡಗುತ್ತದೆ, ಮುರುಟುತ್ತದೆ ಎಂದು ಹಿರಿಯರು ಹೇಳುವ ಮಾತು ನಿಜವೋ ಏನೋ ಎಂದು ಒಂದರಗಳಿಗೆ ಖಾದ್ರಿಬ್ಯಾರಿಯವರಿಗೆ ಆ ಸಂದರ್ಭದಲ್ಲಿ ಅನಿಸದೇನೂ ಇರಲಿಲ್ಲ.

ಇದೀಗ ಖಾದ್ರಿಬ್ಯಾರಿಯವರು ಉಮ್ಮಕ್ಕೆಯವರ ಬಗ್ಗೆನೇ ಯೋಚಿಸುತ್ತ, ಅದರ ಜೊತೆ ಜೊತೆಗೆ ಈ ತನ್ನ ವಾತದ ಮೈಗೆ ಎಂದು ನಾಕು ಗೆರಟೆ ಬಿಸಿನೀರು ಬಿದ್ದೀತೋ... ಅದು ಹೇಗೆ ಎಲ್ಲಿ ಎಂಬ ಹಂಬಲ – ಯೋಚನೆಯಲ್ಲಿ ಭಾರವಾದ ಹೆಜ್ಜೆಗಳನ್ನಿಡುತ್ತಲೇ ಕಟ್ಟಹುಣಿಯ ನೀರತೋಡಿನ ಬಳಿ ಬರುವಾಗ ಭರದಿಂದ ಹರಿಯುವ ತೋಡಿನ ನೀರು ಕೂಡಾ ಅವರನ್ನು ಹಾಗೂ ಅವರಾಸೆಯನ್ನು ಕಂಡು ಗಹಗಹಿಸಿ ನಕ್ಕಂತಾಯಿತು. ಖಾದ್ರಿಬ್ಯಾರಿಯವರು ತಮ್ಮ ಬಿಸಿನೀರಿನ ಆಸೆಯನ್ನಲ್ಲೇ ಮುಗುಟಿಸಿಕೊಂಡು ತೋಡು ದಾಟಿದರು.

ತೋಡು ದಾಟಿದವರೇನು ಅವರೊಳಗಿನ ಯೋಚನೆ ಮಾತ್ರ ಅವರ ತಲೆಯಿಂದ ದಾಟಿ ಹೋಗಲಿಲ್ಲ. ಉಮ್ಮಕ್ಕೆಯವರು ಅಂದಿದ್ದ ನಿಷ್ಠುರದ ಮಾತುಗಳು ಅವರೆದೆಯೊಳಗೆ ಹುದುಗಿ ಕೂತು ಒದ್ದೆ ಬಟ್ಟೆ ಹಿಂಡಿದಂತೆ ಹಿಂಡತೊಡಗಿದ್ದವು. ಖಾದ್ರಿಬ್ಯಾರಿಯವರು ಅದೇ ಯೋಚನೆಯ ಸುಳಿಯಲ್ಲಿ ಸಿಲುಕಿ ತೀರಾ ಖಿನ್ನರಾಗಿ ದಾರಿ ಸವೆಸತೊಡಗಿದರು. "ತಾನೇನು ಆ ಮನೆಯಲ್ಲಿ ಬಿಸಿನೀರು ಮೀಯಬೇಕು ಎಂಬ ಆಸೆಯನ್ನು ಹೊದ್ದುಕೊಂಡು ನಾನಾಗಿಯೇ ಮೇಲೆಬಿದ್ದು 'ಬಾಣಂತಿ ನೀರು ಕಾಯಿಸಿಕೊಡುತ್ತೇನೆ' ಎಂದು ಕೇಳಿಕೊಂಡು ಹೋಗಿದ್ದೇನೆಯೇ? ಈ ಶೆಡ್ತಿ ಯಾಕಾಗಿ ಈ ರೀತಿ ದಿನಾ ನನ್ನ ಮಏಲೆ ಹರಿಹಾಯ್ತಾರೋ...' ಎಂಬ ಪ್ರಶ್ನೆಯು ಅವರ ಆತ್ಮಗೌರವದ ಪ್ರಶ್ನೆಯಾಗಿ ಅವರನ್ನು ಇನ್ನಿಲ್ಲದಂತೆ ಚುಚ್ಚತೊಡಗಿತ್ತು.

ಉಮ್ಮಕ್ಕೆಯವರು ಆಸ್ತಿ–ಅಂತಸ್ತು–ಸಾಮಾಜಿಕ ಸ್ಥಾನಮಾನದಲ್ಲಿ ಖಾದ್ರಿಬ್ಯಾರಿಯವರಿಗಿಂತ ಮೇಲಿದ್ದರೂ, ಆತ್ಮಗೌರವ, ಮಾನವತೆ ಶ್ರಮಸಂಸ್ಕೃತಿ, ಕಷ್ಟಸಹಿಷ್ಣುತೆ, ನಿಸ್ವಾರ್ಥತೆಯಲ್ಲಿ ಇಬ್ಬರೂ ಸಮಾನರೆ. ವಯಸ್ಸಲ್ಲಂತೂ ಖಾದ್ರಿಬ್ಯಾರಿಯವರು ಉಮ್ಮಕ್ಕೆಯವರ ತಂದೆ ಕರಿಯಶೆಟ್ಟರಿಗೆ ಸಮಾನರು. ಖಾದ್ರಿಬ್ಯಾರಿಯವರಿಗೆ ಮೈರ್ಯಾಡಿಗುತ್ತಿನ ಕರಿಯಶೆಟ್ಟರಲ್ಲಿ ಅದೆಷ್ಟು ಗೌರವ, ವಿಶ್ವಾಸ,

ಸಲಿಗೆ, ಅಭಿಮಾನ ಇದೆಯೋ ಅಷ್ಟೇ ಅಥವಾ ಅದಕ್ಕಿಂತ ಒಂದು ಮುಷ್ಟಿ ಜಾಸ್ತಿಯೇ ಪ್ರೀತಿ–ಅಭಿಮಾನ ಗೌರವ ಈ ವೆಂಕಪ್ಪಶೆಟ್ಟರ ಕುಟುಂಬದ ಮೇಲಿದೆ. ಮೊನ್ನೆ ತನ್ನ ಮೊಮ್ಮಗಳ ಪ್ರಾಯದವಳಾದ ಸುಮತಿಯ ಬಾಣಂತನಕ್ಕೆ 'ಬಾಣಂತಿ ಮದ್ದು' ತಯಾರಿಸಲು ಊರಿದು ಹುಡುಕಿ ಓಲೆಬೆಲ್ಲ ತಲಾಶ್ ಮಾಡಿ ತಂದು ಕೊಟ್ಟವರಾರು? ಇದೇ ಖಾದ್ರಿ ಬ್ಯಾರಿಯವರು, ಊರೆಲ್ಲಾ ಹುಡುಕಿದರೂ, ನಾಲ್ಕು ಕಾಸು ಜಾಸ್ತಿಯೇ ಕೊಡುತ್ತೇನೆಂದರೂ ವೆಂಕಪ್ಪಶೆಟ್ಟರಿಗೆ ದೊರಕದ 'ಓಲೆಬೆಲ್ಲ' ಸುಂದರ ಪೂಜಾರಿ ಮನೆಯಲ್ಲಿ ಖಾದ್ರಿಬ್ಯಾರಿಯವರಿಗೆ ದೊರಕಿತ್ತು. ತಾನೇ ದುಡ್ಡುಕೊಟ್ಟು ತಂದು 'ಅವಳು ನನ್ನ ಮೊಮ್ಮಗಳು ಖೈರುವಿನ ಸಮಾನ...' ಎಂದನ್ನುತ್ತ ಓಲೆಬೆಲ್ಲದ ಹಣವನ್ನು ಶೆಟ್ಟರು ಜುಲುಮೆ ಮಾಡಿಕೊಟ್ಟರೂ ಅವರು ಸುತರಾಂ ಮುಟ್ಟಿರಲಿಲ್ಲ.

ಮೊನ್ನೆಯ ಭೇಷ ತಿಂಗಳ ಶುರುವಿರಬೇಕು. ಖಾದ್ರಿಬ್ಯಾರಿಯವರು ಮುಂಜಾನೆಯ ನವಾಜು ಮುಗಿಸಿ ಬಂದು, ಚಾಯುಬ್ಬಬ್ಯಾರಿಯು ಗೂಡಂಗಡಿಯು ಹೋರಜಗುಲಿಯಲ್ಲಿರುವ ಬೆಂಚಿನಮೇಲೆ ಕುಳಿತು ಅರೆಗಳಿಗೆ ಕಳೆದಿದೆಯಷ್ಟೆ. ಅದೇಗಳಿಗೆಗೆ ತಮ್ಮ ಬಯಲು ಗದ್ದೆಗಳ ವಿಚಾರಣೆಗೆಂದು ಪಡ್ಲಾಗೆ ಹೋರಟಿದ್ದಿ ವೆಂಕಪ್ಪಶೆಟ್ಟರಿಗೆ ಖಾದ್ರಿಬ್ಯಾರಿಯವರ ಹಸಿರು ಹಮಾಲು ಕಣ್ಣಿಗೆ ಬಿದ್ದಿದೆ! ತಮ್ಮ ಅಂತರಂಗದ ಅಹವಾಲನ್ನು ಖಾದ್ರಿಬ್ಯಾರಿಯವರ ಮುಂದೆ ಬಿಡಿಸಿಟ್ಟರೆ ತನ್ನ ಕೆಲಸ ಹಣ್ಣಾಗಬಹುದು ಅಥವಾ ಒಂದು ಒಳ್ಳೆಯ ಸಲಹೆಯಾದರೂ ಸಿಗಬಹುದು ಎಂಬ ದೂರದಾಸೆಯಿಂದ ಶೆಟ್ಟರು ಹತ್ತಿರ ಬಂದವರೇ 'ಸ್ಯಾಬೆರೇ ನಾನೀಗ ಒಂದು ದೊಡ್ಡ ಮುಷ್ಕಿಲಲ್ಲಿ ಸಿಕ್ಕಿಹಾಕಿಕೊಂಡಿದ್ದೇನಲ್ಲವಾ...? ನಮ್ಮ ಸುಮತಿಯ ಹೆರಿಗೆಯ ದಿನ ಹತ್ತಿರ ಬಂದಾಗಿದೆ. ಬಾಣಂತಿ ಸಾಕುದಕ್ಕೆ ನಮ್ಮವಳೇ ಇದ್ದಾಳೆ. ಹೆರಿಗೆ ಮಾಡಿಸುವ ದೇಯಿ ಪದೆತಿಗೆ, ಹೆರಿಗೆಯ ಹಿಂದೆ ಮುಂದಿನ ದಿನಗಳಲ್ಲಿ ನಮ್ಮಲ್ಲೇ ಇರಬೇಕೆಂದು ಹೇಳಿಯೂ ಆಗಿದೆ. ಆದರೆ ಈ ಒಂದು ಮಳೆ ಶುರುವಾದರೆ... ಬಾಣಂತಿ ನೀರು ಕಾಯಿಸುದಕ್ಕೆ ಈಗ ಯಾವ ನರಿನಾಯಿಯೂ ಒಪ್ಪುತ್ತಿಲ್ಲ ಮಾರಾಯ್ರೆ...! ನಮ್ಮ ಬಿಡಿ ಒಕ್ಕಲು – ಪುಡಿ ಒಕ್ಕಲು ಮಕ್ಕಳನ್ನೆಲ್ಲ ಕೇಳಿಯಾಯ್ತು – ಈಗ ನಾನವರ ಕೈಕಾಲು ಹಿಡಿದು ಬೇಡುವುದೊಂದು ಬಾಕಿ ಇದೆ ಅಷ್ಟೆ. ನಿಮ್ಮ ಗೊತ್ತಲ್ಲಿ ಯಾರಾದ್ರೂ ಇದ್ರೆ ಹೇಳಿ ಸ್ಯಾಬರೆ...'

'... ನನ್ನ ಗೊತ್ತಲ್ಲಿ ಯಾರಿದ್ದಾರೆ ಶೆಟ್ರೇ...! ನನ್ನದೀಗ ಊರ ದೂರಾಯ್ತು. ಕಾಡು ಹತ್ತಿರವಾಯ್ತು ಎಂಬಂಥ ಕತೆ... ಅಲ್ಲಾ... ನಿಮ್ಗೆ ಸಿಗದಿದ್ರೆ ನಾನೇ ಬಂದು ಬಾಣಂತಿ ನೀರು ಬಿಸಿಮಾಡಿ ಕೊಡ್ತೇನ್... ಆಗ್ಬಹುದಾ ಅಂತಾ ನಿಮ್ಮ ಯಜಮಾನ್ತಿಯಲ್ಲೊಮ್ಮೆ ಕೇಳಿ ನೋಡಿ ಶೆಟ್ರೇ.'

"ಅವಳಲ್ಲೆಂಥದ್ದು ಕೇಳುದು...? ಕೋಳಿಯಲ್ಲೇ ಕೇಳಿ ಮಸಾಲೆ ಅರಿ ಎಂದು ಹೇಳಿದ ಹಾಗಾಯ್ತು ನಿಮ್ಮ ಪಂಚಾತಿಕೆ. ಅಲ್ಲಾ ಸ್ಯಾಬರೆ ನೀವು ನಮ್ಮಲ್ಲಿಗೆ ಸುಮ್ಮನೆ

ಬಂದು ನೀರು ಕಾಯಿಸುದು ಬೇಡಾ..., ನಿಮಗೆ ಬಾಣಂತಿ ನೀರು ಮುಗಿದ ಮೇಲೆ 'ಇಂತಿಷ್ಟು' ಅಂತಾ ನಾನು ಕೊಟ್ಟೇ ಕೊಡುವುದು ಸೈ. ಅದೂ ಅಲ್ಲದೆ ನಿಮ್ಗೆ ಬಿಸಿನೀರು ಅಂದ್ರೆ ಎಷ್ಟು ಜೀವ ಅಂತಾ ನನಗೆ ಗೊತ್ತಿಲ್ವಾ..., ನೀವು ದಿನಾ ಬಾಣಂತಿ ಮಿಂದಾದ ಮೇಲೆ ಅದೇ ನೀರಲ್ಲಿ ನೀವೂ ಒಂದು ಗಡದ್ದ್ ಮಿಂದು ಬಿಡಿ. ನಿಮ್ಮ ವಾತದ ಮೈಗೆ ಅದೇ ಒಂದು ದೊಡ್ಡ ಮದ್ದು... ಆಗದಾ."

ಶೆಟ್ಟರಿಂದ 'ಮೀಯುವ ಮಾತು' ಬಂದೊಡನೆ ಖಾದ್ರಿಬ್ಯಾರಿಯವರು ಹಿಂದು ಮುಂದು ನೋಡದೆ 'ಆ ಮಗು ಸುಮತಿ ಬೇರೆ ಅಲ್ಲ... ನಮ್ಮ ಮೊಮ್ಮಗಳು ಖೈರುನ್ನೀಸಾ ಬೇರೆ ಅಲ್ಲ..., ನೀವೊಮ್ಮೆ ಸುಮ್ಮನಿದ್ದು ಬಿಡಿ ಶೆಟ್ರೇ..., ಎಂತಹ ಊರು ತೆಗೆವ ಮಳೇ ಬಂದರೂ ಬಾಣಂತಿಗೆ ನೀರು ಕಾಯಿಸುವ ಜವಾಬ್ದಾರಿ ನಂಗೆ ಬಿಡಿ, ಶೆಟ್ಟರು ನಿರಾಳರಾದರು.

ವೆಂಕಪ್ಪಶೆಟ್ಟರಿಗೆ ಖಾದ್ರಿಬ್ಯಾರಿಯವರ ಮಾತಿನ ಬಗ್ಗೆ ಇರುವ ವಿಶ್ವಾಸ ಈಗಿನದ್ದಲ್ಲ. ಸ್ಯಾಬರು ಎಂದೂ ಕೊಟ್ಟ ಮಾತಿಗೆ ತಪ್ಪಿದ ಮನುಷ್ಯನೇ ಅಲ್ಲ. ಕೃತಜ್ಞಭಾವದಿಂದ ಶೆಟ್ಟರು ಖಾದ್ರಿಬ್ಯಾರಿಯವರ ಕೈಗಳನ್ನು ಕಣ್ಣಿಗೊತ್ತಿ 'ತನ್ನ ಕೆಲಸ ಫೈಸಲ್ ಆಯಿತು' ಎಂಬ ಭಾವ ಹೊತ್ತು ಪಡುವಣದ ಗದ್ದೆಗಳತ್ತ ನಡೆದಿದ್ದರು.

ಕೊಟ್ಟ ಮಾತಿನಂತೆ ಖಾದ್ರಿಬ್ಯಾರಿಯವರು ವೆಂಕಪ್ಪಶೆಟ್ಟರ ಮನೆಯ ಮಗು–ಬಾಣಂತಿಗೆ ಬಾಣಂತಿನೀರು ಕಾಯಿಸಲಾರಂಭಿಸಿ ಅಂದಿಗೆ ನಲವತ್ತನೇ ದಿನ. ಇಷ್ಟು ದಿನಗಳಲ್ಲಿ ನೀರು ಕಾಯಿಸಲಾರಂಭಿಸಿದ ಖಾದ್ರಿಬ್ಯಾರಿಯವರು ಮಗು–ಬಾಣಂತಿ ಮಿಂದಾದ ನಂತರ ತಮ್ಮ ವಾತ ಹಿಡಿದ ಕೈ–ಕಾಲ ಗಂಟುಗಳಿಗೆ ಕೇವಲ ಏಳೆಂಟು ಬಾರಿ ಬಿಸಿನೀರ ಅಭ್ಯಂಜನ ಮಾಡಿಸಿದ್ದಿರಬಹುದು. ಆದರೆ ಇಡೀ ದೇಹಕ್ಕೆ ಬಿಸಿನೀರು ಎರೆದುಕೊಳ್ಳುವ ಯೋಗವೆಂದೂ ಅವರಿಗೆ ಶೆಟ್ಟರ ಆ ಬಚ್ಚಲು ಮನೆಯಲ್ಲಿ ಇದುವರೆಗೂ ಲಭ್ಯವಾಗಿಲ್ಲ. ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರಿಗೆ ಕೊಟ್ಟ ಬಾಯ್ಮಾತಿನಂತೆ, ಇಂದಿನವರೆಗೆ ಅವರಿಗೆ ನಲವತ್ತು ದಿನಗಳ ಬಿಸಿನೀರು ಮೀಯುವ ಸುಖ ದೊರಕಬೇಕಿತ್ತು.

ಆದರೆ ಶೆಟ್ಟರು ಸ್ಯಾಬರಿಗೆ ಕೊಟ್ಟ ವಾಗ್ದಾನವನ್ನು ಈಡೇರಿಸಿಕೊಳ್ಳಲು ಶೆಟ್ಟರ ಪತ್ನಿ ಉಮ್ಮಕ್ಕೆಯವರು ಅವಕಾಶ ಕೊಟ್ಟರೆ ತಾನೆ! ಖಾದ್ರಿಬ್ಯಾರಿಯವರನ್ನು ಇಲ್ಲಿ ಬಚ್ಚಲು ಮನೆಯಲ್ಲಿ ಮೀಯಲು ಬಿಡಬಾರದು ಎಂಬ 'ಹಠದ ಬಾವ' ಮಾತ್ರ ಉಮ್ಮಕ್ಕೆಯವರಲ್ಲಿ ಖಂಡಿತಾ ಇಲ್ಲ. ಈ ಮಳೆಗಾಲದಲ್ಲಿ... ಮಳೆಗಾಲದ ಅನಪತ್ಯಕ್ಕೆಂದೇ ಇಟ್ಟಿದ್ದ ಸೌದೆಗಳನ್ನೆಲ್ಲ ಈಗಲೇ ಒಟ್ಟಿ ಬಿಸಿನೀರು ಕಾಯಿಸಿದರೆ ನಾಳೆಗೇನು ಎಂಬ ಕಾಳಜಿ – ಆತಂಕದಲ್ಲಿ ಬೇಯುತ್ತಿದ್ದ ಉಮ್ಮಕ್ಕೆಯವರಿಗೆ, ತನ್ನ ಗಂಡ ಖಾದ್ರಿಬ್ಯಾರಿಯವರ ಜತೆ ಮಾಡಿಕೊಂಡಿರುವ 'ಮೀಯುವ ಒಪ್ಪಂದ' ಒಂಥರದಲ್ಲಿ ಅಸಮಾಧಾನವನ್ನು ಮಾತ್ರ ತಂದಿದೆ. ಆದರೆ ಆಕೆ ಈ ರೀತಿ ಅಸಮಾಧಾನಪಡುವ ತಪ್ಪು ಎನ್ನುವ

ಹಾಗೂ ಇಲ್ಲ. ಎಂತಹ ತಾಯಿಯೂ ಮೊದಲು ತೋರುವ ಕಾಳಜಿ, ಪ್ರೀತಿ ತನ್ನ ಸ್ವಂತ ಬಳ್ಳಿಗೆ ತಾನೇ. ನಂತರವಷ್ಟೆ ಸುತ್ತಲ ಬಳ್ಳಿ–ಜೀವಗಳಿಗೆ. 'ಇಂಥಾ ಪೋಕಾಲದ ಮಳೆಯಲ್ಲಿ... ಇಷ್ಟೊಂದು ಸೌದೆ–ತರಗಲೆಯ ಸಮಸ್ಯೆ ಇರುವಾಗ, ನಮ್ಮ ಮಗು–ಬಾಣಂತಿಗೆ ನೀರು ಕಾಯಿಸುದೇ ಕಷ್ಟ. ಬೇಕಾದರೆ ಒಂದ್ನಾಕು ಕಾಸು ಜಾಸ್ತಿಯೇ ಹೋಗಲಿ ಒಂದು ಆಳನ್ನು ಇಟ್ಟು ಬಾಣಂತಿಗೆ ನೀರು ಕಾಯಿಸುವ ವ್ಯವಸ್ಥೆ ಮಾಡ್ತಿದ್ರೆ ಆಗ್ತಿರ್ಲಿಲ್ವಾ...? ದುಡ್ಡು ಕೊಟ್ರೂ ಒಣಸೌದೆ ಸಿಗದ ಈ ಥಂಡಿ ಕಾಲದಲ್ಲಿ... ಇವ್ರು ಹೋಗಿ ಹೋಗಿ... ಆ ಕಣ್ಣಲ್ಲಿ ಮಾತ್ರವೇ ಜೀವ ಇಟ್ಟುಕೊಂಡಿರುವ, ಬಿಸಿನೀರಿಗೆ ಜೀವ ಬಿಡುವ ಆ ಮುದಿಸ್ಯಾಬರಿಗೆ ಹೇಳುದಾ...? ಈ ಸ್ಯಾಬ್ರಾದ್ರು ಬಯಸುದೇನು! ಕಾಸೂ ಅಲ್ಲ ಕಾಣಿಯೂ ಅಲ್ಲ..., ಮೀಯುದಕ್ಕೆ ಬಾಣಂತಿ ಬಿಸಿ ನೀರು! ಇದೆಂಥಾ ಪೋಕಾಲದ ಪಾಯಿಂಟಪ್ಪ?'

ಗಂಡ ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರ ಜತೆಗೆ 'ಬಿಸಿನೀರ ಒಪ್ಪಂದ' ಮಾಡಿಕೊಂಡು, ಬಂದಾಗಿನಿಂದಲೂ ಉಮ್ಮಕ್ಕೆಯವರಿಗೆ ಜೀವದಲ್ಲಿ ಸಹನೆಯೆಂಬುದಿಲ್ಲ. ಈ ಬಗ್ಗೆ 'ಗಂಡನ ಜತೆ ಹಲವು ಬಾರಿ ವಾದಿಸಿಯೂ ಆಗಿದೆ.'

'ಬಚ್ಚಲು ಮನೆಯಲ್ಲಿ ಬಾಣಂತಿ–ಮಗುವುಗೆ ನೀರು ಹಾಕುವಾಗ ಈ ಸ್ಯಾಬರದ್ದೇನು ಹೊಸ ಪಂಚಾತಿಕೆ! ಇವರಿಗೆ ಬಿಸಿನೀರು ಮೀಯುವ ಆಸೆ ನೀಗಿಸಿಕೊಳ್ಳಲು ಸಿಕ್ಕಿದ್ದು ನಮ್ಮ ಹಿತ್ಲೇನು? ಅವರ ಸೊಸೆ ನಫೀಸಮ್ಮನಿಗೇನು ದಾಡಿ, ದಿನಾ ಮಾವನಿಗೊಂದು ಗುರ್ಕ ಬಿಸಿನೀರು ಕಾಯಿಸಿ ಕೊಡುವುದಕ್ಕೆ...? ಈ ಮಳೆಗಾಲದಲ್ಲಿ ದುಡ್ಡು ಕೊಟ್ರೆ ಒಣಗಿದ ಉರುವಲು ಸಿಗುವುದಾದರೆ ಆ ಸ್ಯಾಬರಿಗೆ ಒಂದು ಹಂಡೆ ಯಾಕೆ, ಎರಡು ಹಂಡೆ ನೀರು ಬಿಸಿ ಮಾಡಿ ಮೀಯಿಸುವ... ಆಗದಾ? ಉಮ್ಮಕ್ಕೆಯವರು ಶೆಟ್ಟರ ಜತೆ ಹೀಗೆ ವಾದದ ಮಾಲೆ ಹಿಡಿದಾಗಲೆಲ್ಲಾ, ಶೆಟ್ಟರನ್ನುತ್ತಿದ್ದ ಸಮಾಧಾ,ನ ಸಂಯಮದ ಮಾತನ್ನು ಶೆಡ್ತಿಯವರು ಕಿವಿಯ ಹಾಗೂ ಸೇರಿಸಿಕೊಳ್ಳುತ್ತಿರಲಿಲ್ಲ.

ವೆಂಕಪ್ಪಶೆಟ್ಟರು ಅತ್ಯಂತ ತಾಳ್ಮೆಯಿಂದ ತಮ್ಮ ಮಡದಿಗೆ ಹೇಳುವಷ್ಟು ಹೇಳಿ ನೋಡಿದರು. ..... ವಾದ ಬಿಗಿಯಾಗತೊಡಗಿದಾಗ ಶೆಟ್ಟರು "ಏಯ್ ಬಿಕನಾಸಿ, ಈ ಮಳೆಯ ವಾತಕ್ಕೆ ಮಣ್ಣಿಂಗಿ ಹೋದ ನಿನ್ನಪ್ಪ ಬಂದು 'ಬಾಣಂತಿನೀರು ಬಿಸಿಮಾಡ್ತಾನೇನೆ' ಆ ನಿನ್ನ ಒಕ್ಕಲ ಮಕ್ಕಳು ನೋಡಿದ್ರೆ ನಿನ್ನ ಹಿತ್ಲ ಕಡೆ ತಲೆ ಹಾಕಿ ಮಲಗುವುದಿಲ್ಲ. ಅವುಗಳಿಗೆ ಬಂದಿರುವ ದಪ್ಪ ಬೆರ್ಬಿ ಇಳಿಸ್ಬೇಕಾದ್ರೆ ಆ ಚಾವಡಿಯೊಳಗಿನ ಭೂತ ಪಂಜುರ್ಲಿಯೆ ಒರಬೇಕು ಅಷ್ಟೆ. ಇಂತಹ ಇಕ್ಕಟ್ಟಿನ ಜಂಬರದಲ್ಲಿ ಬಿದ್ದು ನಾನು ಒದ್ದಾಡ್ತಿದ್ರೆ... ನನ್ನನ್ನು ಆದರಿಸಿ ಹಿಡಿದವರೇ ಖಾದ್ರಿಬ್ಯಾರಿಯವರು. ಯಾವುದೇ ವಾತ ಹಿಡಿದ ಜೀವಕ್ಕೆ 'ಬಿಸಿನೀರೆಂದ್ರೆ ಪ್ರಾಣ' ಅಂತಾ ನನಗೊತ್ತಿಲ್ವಾ? 'ಎರಡೊತ್ತು ಉಟ ಇರದಿದ್ರೂ ದೊಡ್ಡದಲ್ಲ. ಒಂದ್ಹೊತ್ತು ಮೀಯುದ್ದಕ್ಕೆ ಬಿಸಿನೀರು ಮಾಡಿ ಕೊಡಮ್ಮ' ಎಂದು ಇವರು ಸೊಸೆಗೆ ಎಷ್ಟು ದೊಗ್ಗಲು ಸಲಾಂ ಹಾಕಿದ್ರೂ... ಆಕೆ ಬಿಸಿನೀರ ಹನಿ

ಸೋಕಿಸ್ತಿಲ್ಲ ಎಂದು ಸ್ಯಾಬರು ಎಂದೋ ಹೇಳಿದ್ದು ನನಗೆ ನೆನಪಲ್ಲಿದ್ದುದರಿಂದಲೇ ನಾನು ಅವರನ್ನು ಒತ್ತಾಯದಿಂದ ಈ 'ಬಿಸಿನೀರ ಒಪ್ಪಂದ'ಕ್ಕೆ ಒಪ್ಪಿಸಿದ್ದು. ಅವ್ರು ಬಾಣಂತಿ ಏಳುವವರೆಗೆ ಮಾತ್ರ ತಮ್ಮ ಬಚ್ಚಲ ಮನೆಯಲ್ಲಿ ಮೀಯುವುದಲ್ಲ..., ಬಾಣಂತಿ ಎದ್ದ ನಂತರವೂ ಇಲ್ಲೇ ಬಿಸಿನೀರು ಕಾಸಿಕೊಂಡು ಮೀಯುತ್ತಾರೆ..., ಈಗೇನಂತೆ ನಿನ್ನ ಮಸಾಲತ್ತು" ಎಂದು ಕಣ್ಣಲ್ಲೇ ಕೆಂಡ ಕಾರಿಸುತ್ತ ಹೆಂಡತಿಯ ಬಾಯ್ಮುಚ್ಚಿಸಿದ್ದರು.

ಆ ಕ್ಷಣಕ್ಕೆ ಉಮ್ಮಕ್ಕೆಯವರ ಬಾಯೇನೋ ಮುಚ್ಚಿರಬಹುದು. ಆದರೆ ಖಾದ್ರಿಬ್ಯಾರಿಯವರು ಎಂದು ಶೆಟ್ಟರ ಮನೆಯ ಬಚ್ಚಲುಮನೆಯಲ್ಲಿ ಉರಿ ಹಾಕತೊಡಗಿದರೋ ಅಂದನಿಂದಲೇ ಉಮ್ಮಕ್ಕೆಯವರು, ಸ್ಯಾಬರ ಒಳಜೀವಕ್ಕೆ ಕಿರಿಕಿರಿ ಹುಟ್ಟಿಸುವಂತೆಯೂ, ಆತ್ಮಗೌರವಕ್ಕೆ ಧಕ್ಕೆಯಾಗುವಂತೆಯೂ ವರ್ತಿಸತೊಡಗಿದ್ದರು. ಖಾದ್ರಿಬ್ಯಾರಿಯವರು ತಮ್ಮ ಕಣ್ಣುಗಳನ್ನು ಕೇಪಳಹಣ್ಣು ಮಾಡಿಕೊಂಡು ಹೊಗೆಘಾಟಿನೊಂದಿಗೆ ಗುದ್ದಾಡುತ್ತ ದಂಡೆ ನೀರನ್ನು ಬಿಸಿ ಮಾಡಿ ಇಟ್ಟಾಕ್ಷಣ ಮಗುವಿನೊಂದಿಗೆ ನುಗ್ಗಿ ಬರುತ್ತಿದ್ದ ಉಮ್ಮಕ್ಕೆಯವರು ತಕ್ಷಣ ಮಗು-ಬಾಣಂತಿಯನ್ನು ಮೀಯಿಸುವ ಏರ್ಪಾಟು ಮಾಡಿ ಬರೀ ಮೂರ್ನಾಕು ಗೆರಟೆ ನೀರನ್ನಷ್ಟೆ ಹಂಡೆಯಲ್ಲಿ ಉಳಿಸಿ ಮಿಕ್ಕೆಲ್ಲವನ್ನು ಮಗು-ಬಾಣಂತಿಗೆ ಎರೆದುಬಿಡುತ್ತಿದ್ದರು. ಇಷ್ಟಕ್ಕೂ ಸಮಾಧಾನವಿಲ್ಲವೆಂಬಂತೆ ಒಲೆಗಂಟಲಿಗೆ ಮತ್ತೆ ಆ ಕ್ಷಣದಲ್ಲಿ ಉರಿ ಹಾಕಬೇಕೆಂದೆ ಭೂತ ಪಂಜುರ್ಲಿಯೇ ಮಾಯ ತೋರಬೇಕು ಅಷ್ಟೆ. ಖಾದ್ರಿಬ್ಯಾರಿಯವರಿಗೆ ಉಮ್ಮಕ್ಕೆಯವರ ಆ ಕ್ಷಣದ ವರ್ತನೆ ಬಗ್ಗೆ ಯೋಚಿಸಲು ಏನೂ ತೋಡದಂತಾಗಿ ತಕ್ಷಣ ನಿಡುಸುಯ್ಲೊಂದನ್ನು ಬಿಡುತ್ತಾ ಮೌನವಾಗಿ ಎದ್ದು ಹೊರಡುತ್ತಿದ್ದರು.

ಇತ್ತಿತ್ಲಾಗೆ, ಕೆಲವು ದಿನಗಳಿಂದ ಸ್ಯಾಬರು ಒಲೆಗಂಟಲೆದುರು ಕೂತಾಗಲೆಲ್ಲ ಉಮ್ಮಕ್ಕೆಯವರು ಪಡಸಾಲೆಯಿಂದಲೇ – 'ಒಲೆಗಂಟಲಿಗೆ ನಾಲ್ಕು ಬಾಯಿ ಸೌದೆ ತುರುಕಿದರೆ ಸಾಕು ........ ಉರಿ ನಿಲ್ಸಿ... ಉಗುರು ಬಿಸಿ ಸಾಕು..., ಮೀಯಿಲಿಕ್ಕಿರುವುದು ಮಗು-ಬಾಣಂತಿ ಅಷ್ಟೆ... ಎಂದು ಏರುದನಿಯಿಂದ ಹೇಳುವಾಗಲೆಲ್ಲ ಖಾದ್ರಿಬ್ಯಾರಿಯವರ ಜೀವ ಹಿಡಿ ಜೀವವಾಗುತ್ತಿತ್ತು. ಅವರ ಎದೆಯೊಳಗೆ ನಿರಾಶೆಯ ಕಗ್ಗತ್ತಲೇ ಕವಿಯುತ್ತಿತ್ತು. ಕಣ್ಣೂ ಹನಿಗಣ್ಣಾಗುತ್ತಿತ್ತು.

ನನಗೆ ಈ ಅಂಗಳದ ಬಿಸಿನೀರೂ ಬೇಡ... ಸುಡುನೀರೂ ಬೇಡಾ... ಎಂದು ಅವರಿಗೆ ಅನೇಕ ಬಾರಿ ಅನಿಸಿದ್ದರೂ, ತನ್ನ ಮೊಮ್ಮಗಳ ಸಮಾನಳಾದ, ಅದರಲ್ಲೂ ತನ್ನ ಬಗ್ಗೆ ಜೀವವನ್ನೇ ಇಟ್ಟುಕೊಂಡಿರುವ ಆ ಬಾಣಂತಿ, ತಾನು ಇದ್ದಕ್ಕಿದ್ದಂತೆ ನೀರು ಕಾಯಿಸುವ ಕೆಲಸವನಲ್ಲೇ ಬಿಟ್ಟರೆ ಎಷ್ಟು ನೊಂದುಕೊಂಡಾಳೋ ಎಂಬ ಹಿಂಜರಿಕೆಯಿಂದಲೇ ಅವರು ಇಂದಿನವರೆಗೂ ಆ ಕಾಯಕವನ್ನು ಅಷ್ಟೇ

ಮುತುವರ್ಜಿಯಿಂದ ಮುಂದುವರಿಸಿದ್ದಾರೆ. ಆದರೆ ಅವರು ಆ ಬಚ್ಚಲು ಮನೆಯಲ್ಲಿ ಇದುವರೆಗೂ ಒಂದು ಬಾರಿಯಾದರೂ ಮಿಂದಿಲ್ಲ.

ಖಾದ್ರಿಬ್ಯಾರಿಯವರಿಗೇನು ಆ ಅಂಗಳ–ಆ ಮನೆ ಮಂದಿ ನಿನ್ನೆ ಮೊನ್ನೆಯ ಪರಿಚಯವೇನಲ್ಲ. ವೆಂಕಪ್ಪಶೆಟ್ರ ಅಪ್ಪ ಕುಡುಪ್ಪ ಶೆಟ್ರ ಕಾಲದಿಂದಲೂ ಅವರು ಆ ಅಂಗಳದಲ್ಲೇ ಓಡಾಡಿ ಈಗ ಮುಪ್ಪು ಕಂಡವರು. ಹುಡುಗು ಪ್ರಾಯದಲ್ಲಿ ಅಪ್ಪನ ಜತೆ ಸೇರಿ ಮಣಿಸರ–ಮೆಣಸಿನ ವ್ಯಾಪಾರಕ್ಕಾಗಿ ಬಡಗುದಿಕ್ಕಿನ ಗಟ್ಟವನ್ನೇರಿದ ಖಾದ್ರಿಸ್ಯಾಬರು, ಕ್ರಮೇಣ ಅಲ್ಲಿನ ಗೌಡ್ತಿಯರ ಮಾತಿನ ಕಾಟ ತಾಳಲಾರದೆ, ಏಳೆಂಟು ವರುಷಗಳಲ್ಲೆ ಅಲ್ಲಿನ ವ್ಯಾಪಾರ ವಹಿವಾಟುಗಳನ್ನು ಕೈದು ಮಾಡಿ, ಅಪ್ಪನ ಜತೆಗೂಡಿ ಕನ್ನಡ ಜಿಲ್ಲೆಯಲ್ಲೇ ವ್ಯಾಪರಕ್ಕೆ ಅಡಿಗಲ್ಲಿಟ್ಟಿದ್ದರು.

ಖಾದ್ರಿಸ್ಯಾಬರು ಎಂದೂ ಒಂದೇ ವ್ಯಾಪಾರಕ್ಕೆ ಜೋತುಬಿದ್ದವರಲ್ಲ. ಆರಂಭದಲ್ಲಿ ಮಣಿಸರಕಿನ ವ್ಯಾಪಾರದ ಜತೆ ನಾಲ್ಕು ಊರು ಸುತ್ತುತ್ತ ಎಮ್ಮೆ, ಹಸು, ಕೋಣಗಳ ದಲ್ಲಾಳಿ ಕೆಲಸಕ್ಕೆ ಕೈಹಾಕಿದ ಖಾದ್ರಿಬ್ಯಾರಿಯವರು ಮನೆಯಲ್ಲಿ ಸಂತಾನ ಭಾಗ್ಯ ಹೆಚ್ಚಿದಂತೆಲ್ಲ ತಮ್ಮ ಜಾಣ್ಮೆ, ಚಾಕಚಕ್ಯತೆ, ದೂರಾಲೋಚನೆಯನ್ನು ಮುಂದಿಟ್ಟುಕೊಂಡು ಋತುಗಳಿಗನುಗುಣವಾಗಿ ತಮ್ಮ ವ್ಯಾಪಾರದ ಕ್ಷೇತ್ರವನ್ನು ವಿಸ್ತರಿಸುತ್ತಿದ್ದುದು ಅವರ ವ್ಯವಹಾರ ಜ್ಞಾನ, ಅವರ ಬದುಕುವ ದಾರಿಯನ್ನು ಅರಸುವ ಕೌಶಲ್ಯಕ್ಕೊಂದು ಮಾದರಿಯಾಗ್ತು.

ಪಗ್ಗು–ಭೇಷ ತಿಂಗಳು ಬಂತೆಂದರೆ ಸಾಕು–ದಲ್ಲಾಳಿ ಕೆಲಸದ ಜತೆಗೆ ಮುಂದೆ ದಿಗಿಣ ತೆಗೆದು ಬರಲಿರುವ ಕಾರ್ತೆಲ್ ತಿಂಗಳ ಮಳೆರಾಯನಿಗೆ ಇರಲಿ ತನ್ನತ್ತೊಂದು 'ಛತ್ರಿಸೇವೆ' ಎಂಬಂತೆ ಖಾದ್ರಿಬ್ಯಾರಿಯವರು ಹೆಗಲ ಮೇಲೊಂದು ಸುತ್ತೆ–ಕತ್ರಿ–ಮೊಳೆ–ಕಡ್ಡಿಗಳಿರುವ ಬಟ್ಟೆ ಚೀಲ ನೇತುಹಾಕಿಕೊಂಡು ಊರು ಸುತ್ತಲು ಹೊರಟರೆಂದರೆ – ಊರವರ ಮೂಲೆ ಸೇರಿದ ಹಾಳುಮೂಳು ಬಣ್ಣಗೇಡಿ ಕೊಡೆಗಳೆಲ್ಲ ಸ್ಯಾಬರಿಗೆ ಸಲಾಮು ಹೊಡೆಯತೊಡಗುತ್ತವೆ. ಮತ್ತೆ ಆ ಕೊಡೆ ರಿಪೇರಿ ಕೆಲಸ ಕೈದಾಗುವುದು ಮುಂದೆ ಶ್ರಾವಣಮಾಸ ಬಂದ ನಂತರವಷ್ಟೆ. ಅಷ್ಟರಲ್ಲಿ ಕನ್ಯಾ ತಿಂಗಳು ಎದುರು ಬಂದರೆ ಪುನಃ ಶುರು – ಕತ್ರಿ – ಸಾಣೆ, ಕಮ್ಮಾರಿಕೆಯ ಕೆಲಸ. ಕೊಟ್ಟು – ಪಿಕಾಸಿ – ಕತ್ತಿಗಳ ಬಾಯಿಗಳಿಗೆ ಹೊಡೆದು ಬಡಿದು ಜಳಪಿಸುವ ಕೆಲಸನೆಲ್ಲ ಮುಗಿದೊಡನೆ, ಪೆರಾರ್ದೆ ತಿಂಗಳಲ್ಲಿ ಗಾಡಿ ಎತ್ತುಗಳಿಗೆ ಲಾಳ ಹೊಡೆಯುವ ಕೆಲಸ, ಜತೆಗೆ ತಾಮ್ರ – ಹಿತ್ತಾಳೆ ಪಾತ್ರೆಗಳಿಗೆ ಕಲಾಯಿ ಹಚ್ಚುವ ಕೆಲಸವೂ ಮಾಮೂಲು.

ಇವೆಲ್ಲವೂ ಮುಗಿಯುವ ಹೊತ್ತಿಗೆ ವಸಂತಕಾಲ ಆಡಿಯಿಟ್ಟರೆ ಮತ್ತೆ ಖಾದ್ರಿಬ್ಯಾರಿಯವರ ಅಂಡಿಗೆ ಪುರುಸೊತ್ತಿಲ್ಲದ ಕಾಲ. ಕಾಲಿಗೊಂದು ಚರ್ಮದ ಮೆಟ್ಟು ಮೆಟ್ಟಿಕೊಂಡು ವಸಂತಕಾಲದ ಪ್ರಕೃತಿ ವ್ಯಾಪಾರದ ಜತೆಗೆ ಇವರ ವ್ಯಾಪಾರ

ಶುರುವಾಗುತ್ತದೆ. ಊರಿಡೀ ಸಾಲುಮರ, ಉಳ್ಳವರ ತೋಪು–ಹಿತ್ತಲಲ್ಲಿರುವ ಹೂ–ಹಣ್ಣು ಹೊತ್ತಿರುವ ಬಸುರಿ ಮರಗಳನ್ನು ದಿಟ್ಟಿಸುವುದು; ಈ ಬಾರಿ ಈ ಮರದಲ್ಲಿ ಕಾಯಿಯೆಷ್ಟು ಹಿಡಿಯಬಹುದು, ಎಷ್ಟಕ್ಕೆ ವಹಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಅವರೊಳಗೆ ಆರಂಭಗೊಳ್ಳುತ್ತದೆ. ಊರಲ್ಲಿರುವ ಮಾವು–ಹಲಸು–ಗೇರು–ಹುಣಿಸೆ–ಬುಗುರಿ ಮರಗಳನ್ನು ವಹಿಸಿಕೊಂಡ ನಂತರ ಮುಂದೆ ಗ್ರೀಷ್ಮ ಋತು ಬರುವವರೆಗೆ ಇದೇ ಕಾಯಕದಲ್ಲಿ ಸ್ಯಾಬರು ಹಣ್ಣಾಗುತ್ತಾರೆ.

ಹಣ್ಣು ಮಾಗುವ ಕಾಲ ಮುಗಿದ ನಂತರದ ಕೆಲಸನೆಂದರೆ ಸುಗ್ಗಿ ಕಾಲದ ದವಸ–ಧಾನ್ಯಗಳನ್ನು ಗೇಣಿಮಕ್ಕಳಿಂದ ಕೊಂಡು, ಕೊಳಕೆಯ ಬೆಳೆಯನ್ನೂ ಧಣಿಗಳಿಂದ ಖರೀದಿಸಿಕೊಂಡು ಅದನ್ನು ಲಾಭ ಬರುವ ಋತುಮಾನದಲ್ಲಿ ಮಾರಿ ಒಂದಷ್ಟು ಲಾಭ ಗಿಟ್ಟಿಸಿಕೊಳ್ಳುವುದು.

ಗ್ರೀಷ್ಮಕಾಲದ ನಂತರದ ವರ್ಷಋತುವಿನಲ್ಲಿ ಖಾದ್ರಿಬ್ಯಾರಿಯವರಿಗೆ ಸ್ವಲ್ಪ ಪುರುಸೊತ್ತು ಸಿಗುವುದಿದೆ. ಆದರೆ ಪುರುಸೊತ್ತು ಸಿಗುವುದು ಅವರ ಕಾಲುಗಳಿಗೆ ವಿನಃ ಅವರ ದುಡಿಮೆಗಲ್ಲ, ವಹಿವಾಟಿಗಲ್ಲ. ಹೊರಗಡೆ ಆ ಪರಿಯಲ್ಲಿ ಮಳೆ ಸುರಿಯುತ್ತಿರಬೇಕಾದರೆ ಖಾದ್ರಿಬ್ಯಾರಿಯವರು ಜಗಲಿಯ ಮೂಲೆಯಲ್ಲಿ ಕುಳಿತು ಹೊಲಿಗೆ ರಾಟೆ ತಿರುಗಿಸತೊಡಗುತ್ತಾರೆ. ಖಾದ್ರಿಬ್ಯಾರಿಯವರು ಅಪ್ಪನಿಂದಲೇ ಈ ದರ್ಜಿ ಕೆಲಸವನ್ನು ಕಲಿತವರು. ಅಲ್ಲಾನ ಪಾದ ಸೇರುವ ಜಾತಿ ಬಾಂಧವರಿಗೆ ಕಫನ್ ಹೊಲಿಯುವ ಕೆಲಸವನ್ನು ಆ ಊರಲ್ಲಿ ನಿವಹಿಸಿದವರು – ಖಾದ್ರಿಬ್ಯಾರಿಯವರ ಅಪ್ಪ ಮೂಸೆಬ್ಯಾರಿಯವರು. ಕಫನ್ ಹೊಲಿಯುವ ಕೆಲಸಕ್ಕೆಂದೇ ಆರಂಭದಲ್ಲಿ ರಾಟೆ ತಿರುಗುವ ಕೆಲಸ ಆರಂಭಿಸಿದ ಖಾದ್ರಿಬ್ಯಾರಿಯವರು ನಿಧಾನಕ್ಕೆ ತಮ್ಮ ಮಡದಿ, ಮಕ್ಕಳಿಗೆ ಲಂಗ, ರವಿಕೆ, ಗವನನ್ನೂ ಹೊಲಿಯತೊಡಗಿದ್ದರು. ಮಡದಿ ಮೈಮೂನಮ್ಮನವರಿಗೆ ಖಾದ್ರಿಬ್ಯಾರಿಯುವರು ಕುಪ್ಪಸ ಹೊಲೀತಾರೆಂದು ಸುದ್ದಿಯಾದೊಡನೆ ಸುತ್ತಮುತ್ತಲ ಮನೆಯವರೂ ಅವರನ್ನು ಲಂಗ–ರವಿಕೆ–ಗವನಿಗಾಗಿ ಆಶ್ರಯಿಸಿದ್ದರು. ಆದರೆ ಎಲ್ಲಾ ಕಾಯಕದಲ್ಲೂ ಯಶಸ್ವಿ ಪಟ್ಟ ಪಡೆದುಕೊಂಡ ಖಾದ್ರಿಬ್ಯಾರಿಯವರಿಗೆ ಈ ದರ್ಜಿ ಕಾಯಕದಲ್ಲಿ ಮಾತ್ರ 'ಯಶಸ್ವಿದರ್ಜಿ' ಪಟ್ಟವನ್ನು ಪಡೆದುಕೊಳ್ಳಲಾಗಲಿಲ್ಲ. ಅವರು ಹೊಲಿದ ಲಂಗ–ರವಿಕೆಗಳ ಬಗ್ಗೆ ಊರಿನ ಪುರುಷ ಸಂಕುಲದಿಂದ ಹಲವಾರು ಅಪಸ್ವರಗಳು ಎದ್ದು ಅವು ಊರಿಡೀ ವ್ಯಂಗ್ಯ–ಕುಹಕ–ಲೇವಡಿ–ಹಾಸ್ಯಗಳ ಮೂಲಕ ತೇಲಾಡಿದ್ದವು.

'ಇವ ಹೆಣಕ್ಕೆ ಮಾತ್ರ ಲಂಗ–ಗವನನ್ನು ಹೊಲಿಲಿಕ್ಕೆ ಲಾಯಕ್ಕು... ಜೀವ ಇರುವವರಿಗಲ್ಲ' ಎಂದು ಕೈನಾಲು ಮನೆಯ ಹರಿಯಪ್ಪನೆಂದರೆ,

'ಇವ್ರು ಹೊಲಿದ ರವಿಕೆಯಲ್ಲಿ, ಹೆಣ್ಮಕ್ಕಳ ದುಂಡೆದೆ ಮೈದಾನದಷ್ಟೇ ಸಪಾಟಾಗಿ ಕಾಣಿಸುತ್ತೆ' ಎಂದು ಊರುಮನೆ ರಂಗಪ್ಪ ಗಾಣಿಗ ಊರಿಡೀ ಹೇಳಿಕೊಂಡು ಬಂದಿದ್ದ.

'ಈ ಖಾದ್ರಿಬ್ಯಾರಿಯವರು ಹೊಲಿದ ಗವನು ಹಾಕಿದ್ರೆ ಫೇಟ್ ಹೆಣವೇ ಗೋರಿಯಿಂದ ಎದ್ದು ಬಂದಂತೆ ಕಾಣಿಸುತ್ತೆ ಮಾರಾಯ್ರೆ' ಎಂದು ಬೆಸ್ತರ ಕೇರಿಯ ವಾಸು ಸಾಲ್ಯಾನ್ ಕೂಡ ಅಂದಿದ್ದನಂತೆ.

ಹೀಗೆ ಊರಮಂದಿಯ ಹತ್ತು ಹಲವು ಬಗೆಯ ವ್ಯಂಗ್ಯ ಕುಹಕ ಸಿಟ್ಟಿನ ಮಾತುಗಳನ್ನು ನಗು ಮುಖದಿಂದ ಕೇಳಿಸಿಕೊಳ್ಳುತ್ತಲೇ ಖಾದ್ರಿಬ್ಯಾರಿಯವರು, ಕಫನ್ ಹೊಲಿಯುವ ಕಾಯಕವನ್ನು ಮಾತ್ರ ನಿರಾಂತಕವಾಗಿ ಮುಂದುವರಿಸಿಕೊಂಡು ಬಂದು ತನ್ನ ಮೂವತ್ತರ ಹರೆಯವನ್ನು ಇದೀಗ ಎಂಬತ್ತೆರಡಕ್ಕೇರಿಸಿಕೊಂಡು, ಆರು ಮಂದಿ ಹೆಣ್ಣುಮಕ್ಕಳು ಒಬ್ಬ ಗಂಡುಮಗ ಇದ್ದೂ ಈ ವಯಸ್ಸಿನಲ್ಲಿ ಪಡಬಾರದ ಪಾಡು ಪಡುತ್ತಾ ಸೊಸೆಯ ದೌಲತ್ತಿನಡಿ ಸಂಪೂರ್ಣ ಹಣ್ಣಾಗಿ ನಲುಗುತ್ತಿದ್ದಾರೆ.

'ಕೈಯ ಕಾಸೂ ಹೋಯಿತು, ಮೈಯ ಮಾಂಸವೂ ಹೋಯಿತು' ಎಂಬಂಥ ಸ್ಥಿತಿಯಲ್ಲಿರುವ ಖಾದ್ರಿಬ್ಯಾರಿಯವರ ಈ ಕಫನ್ ಹೊಲಿಯುವ ಕಾಯಕವನ್ನು ಇದೀಗ ಅವರ ಏಕೈಕ ಗಂಡು ಸಂತಾನವಾಗಿರುವ ಹುಸೇನಬ್ಬ ಮುಂದುವರಿಸುತ್ತಿದ್ದಾನೆ. ಎಲ್ಲ ಹೆಣ್ಣುಮಕ್ಕಳ ಹಿಂದೆ ಹುಟ್ಟಿದ ಮಗ ಹುಸೇನಬ್ಬನೆಂದರೆ ಖಾದ್ರಿಬ್ಯಾರಿ ಮೈಮೂನಮ್ಮನವರಿಗೆ ತುಂಬು ಜೀವ. ಆತನಿಗೊಂದು ಸಂಗಾತಿಯಾಗಿ ಎಂದು ಮೈಮೂನಮ್ಮನವರು ಮಾಪ್ಳ ಕಡಪುವಿನ ಬಾವುಬ್ಯಾರಿಯ ಮಗಳು ನಫೀಸಮ್ಮಳನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡರೋ ಅಂದಿನಿಂದಲೇ ಅವರಿಬ್ಬರಿಗೂ ಮಗನ ಮೇಲಿನ ಮಮಕಾಲ ಕುಂದತೊಡಗಿತ್ತು. ನಫೀಸಮ್ಮ ಗಂಡನನ್ನು ಸಂಪೂರ್ಣವಾಗಿ ತನ್ನ ಸೆರಗಿನ ತುದಿಗೆ ಗಂಟು ಹಾಕಿಕೊಂಡ ನಂತರ ಮಗನ ವರ್ತನೆಯಲ್ಲಾದ ಬದಲಾವಣೆ ಕಂಡು ಮೈಮೂನಮ್ಮನವರನ್ನು ಕಾಡಿದ್ದು 'ತನ್ನ ಗಂಡನ ಮುಂದಿನ ಪಾಡೇನು' ಎಂಬ ಚಿಂತೆ.

ಹುಸೇನಬ್ಬ ಬದುಕುವ ದಾರಿ ಹಿಡಿಯಲು, ಅಪ್ಪ ಸವೆಸಿದ ದಾರಿಯಲ್ಲೇ ಸಾಗಿಬಂದನಾದರೂ, ತಾನು ಸಾಗಿಬಂದ ದಾರಿಯಲ್ಲಿರುವ ಏರು, ತಗ್ಗುಗಳಲ್ಲೆಲ್ಲ ಸಾವಧಾನದಿಂದ ತಗ್ಗಿ-ಬಗ್ಗಿ ಏರಿ ನಡೆಯಬೇಕೆಂಬ ವ್ಯತ್ಯಾಸದರಿವಿಲ್ಲದೆ ತಿಳಿಗೇಡಿಯಾಗಿ ಊರಲ್ಲಿ ಅಪ್ಪ ಪಡೆದ ಹೆಸರನ್ನು ಆತನಿಂದ ಉಳಿಸಿಕೊಳ್ಳಲಾಗಲಿಲ್ಲ. ಸಿಗಿಯುವುದೊಂದೇ ಗರಗಸದ ನಿಯಮ-ಎಂಬಂತೆ ಅಪ್ಪನ ಮೈಯಲ್ಲಿ ತಾಕತ್ತು ಇರುವವರೆಗೂ ಅವರನ್ನು ಮುಂದಿಟ್ಟುಕೊಂಡು ತನ್ನ ಬದುಕುವ ದಾರಿಯನ್ನು ಸುಗಮ ಮಾಡಿಕೊಂಡಿದ್ದನಾತ. ಖಾದ್ರಿಬ್ಯಾರಿಯವರೂ ತಮ್ಮ ಮೈಯಲ್ಲಿ ಬಿಸಿರಕ್ತದ ವಹಿವಾಟು ತಣ್ಣಗಾಗುವುದರೊಳಗೆ ತನ್ನೆಲ್ಲ ಹೆಣ್ಣುಮಕ್ಕಳ ಮದುವೆ-ಬಾಣಂತನವನ್ನು ಮುಗಿಸಿ, ಮಗನಿಗೆ ಬದುಕುವ ದಾರಿಗಳನ್ನು ಅತ್ಯಂತ ಸ್ಪಷ್ಟವಾಗಿ ಪರಿಚಯಿಸಿಬಿಟ್ಟು, ದಮ್ಮುರೋಗದಿಂದ ನರಳುತ್ತಿದ್ದ ಮೈಮೂನಮ್ಮನವರ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡುಬಿಟ್ಟಿದ್ದರು.

ತನ್ನ ನಂತರ ಗಂಡನಿಗೆ ದಿಕ್ಕ್ಯಾರು? ಎಂಬ ಚಿಂತೆಯಲ್ಲೇ ಹೂ ಮನಸ್ಸಿನ ಮೈಮೂನಮ್ಮನವರು ತಮ್ಮ ದಮ್ಮುರೋಗವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಹಾಸಿಗೆ ಹಿಡಿದಾಗ, ಅವರ ಸೇವೆ ಮಾಡುವ ಸಂಪೂರ್ಣ ಜವಾಬ್ದಾರಿ ಖಾದ್ರಿಬ್ಯಾರಿಗಳದ್ದಾಗಿತ್ತು. ಈ ದಮ್ಮುರೋಗದಿಂದ ತನಗಿನ್ನು ಉಳಿಗಾಲವಿಲ್ಲವೆಂಬುದು ಮೈಮೂನಮ್ಮನವರಿಗೆ ಖಾತ್ರಿಯಾದೊಡನೆ ಮಗ–ಸೊಸೆಯನ್ನು ಎದುರಿಗಿರಿಸಿಕೊಂಡು ಈ ದೇವರಂತಹ ಮನುಷ್ಯನನ್ನು ಕಾಲ ಕಸ ಮಾಡದೆ, ಹೂ–ಚೆಂಡನ್ನು ರಕ್ಷಿಸುವಷ್ಟು ಮೃದುವಾಗಿ ರಕ್ಷಿಸಬೇಕೆಂದು ಸೊಸೆಯ ಕೈಗಳನ್ನು ತನ್ನ ಕಣ್ಣಿಗೊತ್ತಿಕೊಂಡು ಬೇಡಿಕೊಂಡಿದ್ದರು. ಹಾಗೆ ಬೇಡಿದ ಮರುದಿನವೇ ಮೈಮೂನಮ್ಮ, ಖಾದ್ರಿಬ್ಯಾರಿಯವರನ್ನು ಈ ಜಗತ್ತಲ್ಲಿ ಏಕಾಂಗಿಯಾಗಿರಿಸಿ ಅಲ್ಲಾನ ಪಾದ ಸೇರಿದ್ದರು.

ಇಂದಿಗೆ ಮೈಮೂನಮ್ಮ, ಖಾದ್ರಿಬ್ಯಾರಿಯವರನ್ನು ತೊರೆದು ಹತ್ತು ವರುಷಗಳೇ ಸಂದಿದೆ. ಹೆಂಡತಿಯ ಕಾಲಾನಂತರ ಖಾದ್ರಿಬ್ಯಾರಿಯವರಿಗೆ ಈ ಜಗತ್ತಿನ ಏನೂ ಯಾವುದೂ ಬೇಡವಾಯ್ತು. ಸೊಸೆಯ ದೌಲತ್ತು ಏರಿದಂತೆಲ್ಲ ಅಪ್ಪನನ್ನು ಆಗಾಗ್ಗೆ ವಿಚಾರಿಸಲು ಮನೆಗೆ ಬರುತ್ತಿದ್ದ ಹೆಣ್ಣು ಮಕ್ಕಳೂ ಬರುವುದನ್ನು ಕೈದು ಮಾಡಿಬಿಟ್ಟರು. ಇದರಿಂದಾಗಿ ಖಾದ್ರಿಬ್ಯಾರಿಯವರು ಇನ್ನಷ್ಟು ಒಂಟಿಯಾದರು. ಮಗ ಹುಸೇನಬ್ಬನಂತೂ ಮಡದಿ ನಫೀಸಳಿಗೆ ಹೆದರಿ ಅಪ್ಪನನ್ನು ಸಂಪೂರ್ಣ ಮರೆತೇ ಬಿಟ್ಟವನಂತೆ ಮುಖತಪ್ಪಿಸಿ ಓಡಾಡತೊಡಗಿದ್ದ. ಎಳೆ ಮನಸ್ಸಿನ ಮೊಮ್ಮಕ್ಕಳೇನಾದರೂ ಖಾದ್ರಿಬ್ಯಾರಿಯವರಿಗೆ ಒಗ್ಗಿಹೋಗದಿರುತ್ತಿದ್ದರೆ ಅವರ ಸ್ಥಿತಿ ವೈರಿಗೂ ಬೇಡವಾಗಿರುತ್ತಿತ್ತು. ಹುಸೇನಬ್ಬನ ಇಬ್ಬರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳಿಗಂತೂ ಅಜ್ಜನೆಂದರೆ ಜೀವ. ಆದರೇನು ಅವಿನ್ನೂ ರೆಕ್ಕೆ ಬಲಿತವು ಅಲ್ಲ. ಅಜ್ಜನ ಬೇಕು ಬೇಡಗಳನ್ನು ಪೂರೈಸಲು. ಅಜ್ಜನ ಪರವಾಗಿ ಅಮ್ಮನ ಜತೆ ವಾದಿಸುವಷ್ಟು ಅವುಗಳ ಕೊರಳು ಬಲಿತಿರುವುದೇ ಖಾದ್ರಿಬ್ಯಾರಿಯವರಿಗೆ ಇನ್ನಿಲ್ಲದ ಸಂಕಟವನ್ನು ತಂದೊಡ್ಡಿದಂತಾಗಿದೆ. 'ಮಕ್ಕಳ ತಲೆಕೆಡಿಸಿದ್ದಾರೆ' ಎಂಬ ಆರೋಪ ನಫೀಸಮ್ಮನ ಕಡೆಯಿಂದ ತೇಳಿಬಂದು ಖಾದ್ರಿಬ್ಯಾರಿಯವರ ರುಮಾಲೇರಿ ಕುಳಿತ ನಂತರ ಖಾದ್ರಿಬ್ಯಾರಿಯವರು ಮೊಮ್ಮಕ್ಕಳಿಂದಲೂ ದೂರವಿರಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವು ಬಿಡಬೇಕಲ್ಲ.

ಹೀಗೆ ಮುಪ್ಪಿನಲ್ಲಿ ಖಾದ್ರಿಬ್ಯಾರಿಯವರು ಒಂಟಿಬಾಳ್ವೆ ನಡೆಸುತ್ತಿರುವಾಗ, ಜತೆಗೊಂದು ಸಂಗಾತಿ ಇರಲೆಂದು ದೇವರು ಅವರ ಜೀವದೊಳಗೊಂದು ವಾತರೋಗವನ್ನು ಹೊಗಿಸಿ ಬಿಟ್ಟಿದ್ದರಿಂದ ಅವರ ಸ್ಥಿತಿ ಮತ್ತಷ್ಟು ವಿಷಮಗೊಂಡಿತ್ತು. ದಿನನಿತ್ಯ ಮುಂಜಾನೆಯ ನಮಾಜಿಗೆಂದು ಎದ್ದು ನಿಲ್ಲಬೇಕಾದರೆ ಆ ವಾತರೋಗ ಕೊಡುವ ಕಾಟ–ನೋವನ್ನು ಖಾದ್ರಿಬ್ಯಾರಿಯವರು ಚಾಪೆ ತುಂಬ ಕಣ್ಣೀರು ಇಳಿಸುವ ಮೂಲಕವೇ ಶಮನಗೊಳಿಸಲು ಪ್ರಯತ್ನಿಸುತ್ತಾರೆ. ಅಮ್ಮನ ಕಣ್ತಪ್ಪಿಸಿ ಮೊಮ್ಮಕ್ಕಳೇನಾದರೂ ಕೈ–ಕಾಲ್ಗಳ ಗಂಟು ನೀವಿದರೆ ಅವರು ಕೂತಲ್ಲಿಂದ ಎದ್ದು ನಿಂತಾರು ಅಷ್ಟೆ.

ಈ ವಾತಕ್ಕೆ ಬಿಸಿನೀರೇ ದಿವ್ಯ ಔಷಧಿ ಎಂಬುದನ್ನು ಬಲ್ಲ ಖಾದ್ರಿಬ್ಯಾರಿಯವರು ಮೊಮ್ಮಕ್ಕಳ ಮೂಲಕ ಸೊಸೆಗೆ ಈಗಾಗಲೇ ಒಂದು ಸಂದೇಶವನ್ನು ರವಾನಿಸಿದ್ದರು. 'ಅಜ್ಜನಿಗೆ ಬೆಳಗ್ಗಿನ ತಿಂಡಿ ಬೇಡವಂತೆ. ಅವರ ಬದಲಿಗೆ ಅವರಿಗೆ ಮೀಯಲು ಒಂದಷ್ಟು ಬಿಸಿನೀರು ಕೊಡಬೇಕಂತೆ' ಎಂಬ ಮಕ್ಕಳ ಮಾತಿನ ಓಲೆಗೆ ನಫೀಸಮ್ಮ ರವಾನಿಸಿದ ಮರು ಓಲೆ ಹೀಗಿತ್ತು: 'ಅಡುಗೆಮನೆಗೆ ಉರಿ ಹಚ್ಚುದಕ್ಕೇ ಮನೆಯ ರೀಪು–ಪಕ್ಕಾಸುಗಳನ್ನು ಕೀಳಬೇಕೆಂದಿದ್ದೇನೆ. ಇನ್ನು ಅವರನ್ನು ಮೀಯಿಸಲು ಒಂದು ಕಾಡು ಬೆಳೆಸಿ ನಂತರ ಮೀಯಿಸಿ ಬಿಡುವ... ಆಗದಾ?'

ಸೊಸೆಯ ಮಾತಿನಿಂದ ಖಾದ್ರಿಬ್ಯಾರಿಯವರು ಸಂಪೂರ್ಣ ಕುಂದಿಹೋಗಿದ್ದರು. 'ಇಳಿವಯಸ್ಸಲ್ಲಿ ಹಿಡಿದ ವಾತ... ಮುದಿಮರಕ್ಕೆ ಹಿಡಿದ ಗೆದ್ದಲು – ಹಿಡಿದ ಜೀವವನ್ನು ಬಿಡುವುದು ಸತ್ತನಂತರವಷ್ಟೆ' ಎಂಬ ಗಾದೆಯಿದೆಯಲ್ಲ ಹಾಗೆ ನನ್ನ ಕತೆ ಎಂದು ಖಾದ್ರಿಬ್ಯಾರಿಯವರು ಹನಿಗಣ್ಣಾಗಿ ಆಪ್ತರಾಗಿ ಹೇಳಿಕೊಂಡಾಗಲೆಲ್ಲ ಎಲ್ಲರೂ ಆ ಮುದಿಜೀವಕ್ಕೆ ಮರುಗುವವರೇ ವಿನಾ ಯಾರಿಂದಲೂ ಆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿರಲಿಲ್ಲ.

ಹಾಗೆ ಬಿಸಿನೀರಿನ ಆಸೆಯೊಂದನ್ನು ತನ್ನ ವಾತರೋಗದಂತೆಯೇ ಗಟ್ಟಿಯಾಗಿ ತಬ್ಬಿಕೊಂಡ ಖಾದ್ರಿಬ್ಯಾರಿಯವರು ಈ ಮನೆಯಲ್ಲಿ, ಸೊಸೆಯ ದರ್ಬಾರಿನಲ್ಲಿ ಅದೆಂದೂ ನೆರವೇರದು ಎಂದು ಅರಿತವರೇ ಊರಲ್ಲಿರುವ ತಮ್ಮ ನಂಬಿಗಸ್ಥ ಕುಟುಂಬದ 'ದೊಡ್ಡತಲೆ'ಗಳನ್ನು ಕಂಡಾಗಲೆಲ್ಲ ತಮ್ಮ ಆಸೆಯನ್ನು ಅವರೊಂದಿಗೆ ನಿವೇದಿಸಿಕೊಂಡದ್ದಿದೆ.

ಆ ಮುದಿಜೀವದೊಳಗೆ ನಡೆಯುತ್ತಿರುವ ಸರ್ವ ಮನೋವ್ಯಾಪಾರಗಳ ಬಗ್ಗೆ ಅರಿವಿದ್ದ ಊರಿನ ಹಲವು ಸಹೃದಯಿ ಯಜಮಾನರು, ಖಾದ್ರಿಬ್ಯಾರಿಯವರ ಆ ಒಂದು ಪುಟ್ಟ ಆಸೆಗೆ ಮಮ್ಮಲ ಮರುಗಿ ಅವರ ಆಸೆಯನ್ನು ಹಲವು ಬಾರಿ ಈಡೇರಿಸಿಕೊಳ್ಳಲು ತಾವು ಅನುವು ಮಾಡಿಕೊಟ್ಟದ್ದಿದೆ. ಆದರೆ ಅವೆಲ್ಲವೂ ಬೇಸಿಗೆಯ ವಹಿವಾಟಿನ ಕಾಲದಲ್ಲಿ ಮಾತ್ರ. ಆದರೆ ಈ ಹಡಬೆಗುಟ್ಟಿದ ಮಳೆಗಾಲ ಕಾಲಿಟ್ಟಿತೆಂದರೆ ಎಲ್ಲರ ಮನಸ್ಸೂ–ಕೈಯೂ ಈ ವಿಚಾರದಲ್ಲಿ ಸ್ವಲ್ಪ ಹಿಂಜರಿಯುವುದು ಸಾಮಾನ್ಯವೇ. ಎಲ್ಲರಿಗೂ ಆ ಕಾಲದಲ್ಲಿ ಉರುವಲಿನದೇ ಬಹುದೊಡ್ಡ ಕಾಟ. ಜಾರಿಗೆಬೆಟ್ಟಿನ ಮುದರ ಪೂಜಾರಿ, ಮಖರ್ಪಾಡಿಗುತ್ತಿನ ಅಂತಪ್ಪ ಶೆಟ್ಟರು, ಓಂತಿಬೆಟ್ಟಿನ ವಾಮಯ್ಯ ಮೂಲ್ಯ, ಮ್ಯೊಲಿಬೆಟ್ಟಿನ ಸೂರಪ್ಪ ಮ್ಯೊಲಿ ಎಲ್ಲರೂ ಮಾಯಿ ಸುಗ್ಗಿ ಕಾಲದಲ್ಲಿ ಈ ವಯೋವೃದ್ಧ ಖಾದ್ರಿಬ್ಯಾರಿಯವರಿಗೆ ತಮ್ಮ ತಮ್ಮ ಬಚ್ಚಲುಮನೆಯಲ್ಲಿ ಯಥೇಚ್ಛವಾಗಿ ಬಿಸಿನೀರು ಮೀಯುವ ಅವಕಾಶ ಮಾಡಿಕೊಟ್ಟಿದ್ದಾರೆ.

ಇಂತಹ ಒಂದು ಮಳೆಗಾಲದಲ್ಲೇ, ಖಾದ್ರಿಬ್ಯಾರಿಯವರ ಬಿಸಿನೀರ ಆಸೆಯನ್ನು ಬಹಳಷ್ಟು ಬಾರಿ ಕೇಳಿದ್ದ ವೆಂಕಪ್ಪಶೆಟ್ಟರು – ಒಂದು ಅಂಕದ ಹುಂಜದಿಂದ ನಾಕು

ಅಂಕದ ಹುಂಜಗಳನ್ನು ಪಡೆವಂತಹ ಜಾಣ್ಮೆ ಉಳ್ಳವರು, ಈ ಮಳೆಗಾಲದ ಆರ್ಭಟಕ್ಕೆ ತಮ್ಮ ಮಗಳಿಗೆ ಬಾಣಂತಿನೀರು ಕಾಯಿಸುವುದಕ್ಕೆ ಯಾವ ಹುಳವೂ ಇತ್ತ ತಲೆಹಾಕದು ಎಂದು ಬಲ್ಲವರೇ, ತಮ್ಮ ಮನಸ್ಸಿನ ಲೆಕ್ಕಾಚಾರವನ್ನು ಖಾದ್ರಿಬ್ಯಾರಿಯವರ ಮುಂದೆ ತೆರೆದಿಟ್ಟು, ಸ್ಯಾಬರಿಗೆ ಒಂದು ರೀತಿಯಲ್ಲಿ ಬಿಸಿನೀರಿನ ಆಮಿಷವನ್ನು ಪರೋಕ್ಷವಾಗಿ ಒಡ್ಡಿಯೇ ತಮ್ಮ ಜವಾಬ್ದಾರಿಯನ್ನು ಹಗುರ ಮಾಡಿಕೊಂಡಿದ್ದರು.

ಇದೀಗ ಖಾದ್ರಿಬ್ಯಾರಿಯವರು ವೆಂಕಪ್ಪಶೆಟ್ಟರ ಅಂಗಳದಲ್ಲಿ ತನ್ನ ಆತ್ಮಗೌರವಕ್ಕಾದ ಪುಟ್ಟ ಏಟನ್ನು ಶಮನ ಮಾಡಿಕೊಳ್ಳಲು ನಿರ್ಧರಿಸಿಯೇ ತಮ್ಮ ಮನೆಯಂಗಳ ಹೊಕ್ಕವರು ನೇರ ಮೊಮ್ಮಕ್ಕಳ ಜತೆ ಮಾತುಕತೆಗಿಳಿದುಬಿಟ್ಟಿದ್ದರು. ಹಿರಿಮೊಮ್ಮಗಳು ಜೋಹರಾ ಅಕ್ಕಿ ಪುಂಡಿ ಜತೆ ಬೂತಾಯಿ ಮೀನಿನ ಸಾರನ್ನು ತಂದಿಟ್ಟವಳೇ ಎಂದಿನಂತೆ ನಿಡಿದಾಗಿ ಕಾಲು ಚಾಚಿ ಕೂತ ಅಜ್ಜನ ಕೈಕಾಲನ್ನು ನೀವತೊಡಗಿದಾಗ, ಖಾದ್ರಿಬ್ಯಾರಿಯವರ ಕಣ್ಣುಗಳಲ್ಲಿ ಹನಿದುಂಬಿ ಮಂಜಾಗತೊಡಗಿತ್ತು. ಹಾಗೆ ಒಂದೋ ಎರಡೋ ಅಕ್ಕಿಪುಂಡಿ ತಿಂದಿದ್ದಾರಷ್ಟೇ– ಸ್ಯಾಬರಿಗೆ ಇದ್ದಕ್ಕಿದ್ದಂತೆ ಒಂದೇ ಒಂದು ತೇಗು ಬಂದಂತಾಗಿ ತಲೆ ಗಿರಗಿರನೆ ಸುತ್ತತೊಡಗಿತ್ತು. ಬಾಯಲ್ಲಿದ್ದ ಪುಂಡಿ ಇರುವ ಹಾಗೆಯೇ ಅಜ್ಜಯ್ಯ ಮೊಮ್ಮಗಳು ಜೋಹರನ ತೊಡೆಗೆ ತಲೆ ಒರಗಿಸಿ ಮಲಗಿಯೇ ಬಿಟ್ಟರು. ಜೋಹರ ಏನು ಎತ್ತ ಎಂದು ತಿಳಿಯದೆ ಅಜ್ಜನನ್ನು ಸಂತೈಸುತ್ತ ಅಮ್ಮನನ್ನು ಕೂಗುವಷ್ಟರಲ್ಲಿ ಖಾದ್ರಿಬ್ಯಾರಿಯವರು ತಾನು ಮಡದಿ ಮೈಮೂನಮ್ಮನವರ ಮಡಿಲಿಗೆ ತಲೆಯಿಡಲು ಹೊರಟನೆಂಬಂತೆ ಅಲ್ಲಾನ ಪಾದ ಸೇರಿಯಾಗಿತ್ತು!

'ಇದು ಎಂತಹ ಸಾವು' ಹೂವೆತ್ತಿದಷ್ಟು ಮೌನ, ಹಗುರ!' 'ಲಕ್ಷದಲ್ಲೊಬ್ಬರಿಗೆ ಇಂಥ ಸಾವು ಮಾರಾಯ್ರೆ!' 'ನಾಕು ಮಂದಿಗೆ ಬೇಕಾಗಿ ಬದುಕಿದ ಜೀವಕ್ಕೆ ಇಂಥ ಸಾವಲ್ಲದೆ, ಅಲ್ಲಾಹು ಬೇರೆಂಥ ಸಾವು ಕರುಣಿಸುತ್ತಾನೆ!' 'ಒಟ್ಟಿನಲ್ಲಿ ಇವ್ರು ಪುಣ್ಯಾತ್ಮರಪ್ಪ – ನಮಗೂ ಹೀಗೆಯೇ ಸದ್ದಿಲ್ಲದ ಸಾವು ಬರಲಿ' ಎಂದು ಜಾತಿಭೇದವಿಲ್ಲದೆ ಎಲ್ಲರೂ ಹನಿಗಣ್ಣಾಗಿಯೇ ಬಂದು ಖಾದ್ರಿಬ್ಯಾರಿಯವರಿಗೆ ಅಂತಿಮ ನಮನ ಸಲ್ಲಿಸತೊಡಗಿದ್ದರು.

ಖಾದ್ರಿಬ್ಯಾರಿಯವರ ಈ ಸಾವಿನ ಸುದ್ದಿ ಊರಿನ ಎಲ್ಲ ಮನೆಗೂ ತಕ್ಷಣ ಹರಡಿದ್ದರೂ ವೆಂಕಪ್ಪಶೆಟ್ಟರ ಹೊಸ್ತಿಲು ತಲುಪಿದ್ದು ತುಂಬ ತಡವಾಗಿಯೇ. ಆ ದಿನ ಅಲ್ಲಿ ಬಾಣಂತಿ ಎದ್ದುದರಿಂದ ಶೆಟ್ಟರು ತಮ್ಮ ಎತ್ತಿನ ಗಾಡಿಯಲ್ಲಿ ಪತ್ನಿ ಸಮೇತರಾಗಿ ಮಗು ಮತ್ತು ಬಾಣಂತಿಗೆ ದೇವರ ನೀರು ಹನಿಸಲು ಊರಿನ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ತೆರಳಿದ್ದರಿಂದ ಆ ಸಾವಿನ ಸುದ್ದಿ ಅವರಿಗೆ ಆ ಕ್ಷಣ ತಲುಪಿರಲಿಲ್ಲ. ದೇವಸ್ಥಾನದಿಂದ ಹಿಂದಿರುಗುವಾಗ ಒಕ್ಕಲ ಮಕ್ಕಳಿಂದ ವಿಷಯ ತಿಳಿದೊಡನೆ ವೆಂಕಪ್ಪಶೆಟ್ಟರೊಬ್ಬರಿಗೆ ಮಾತ್ರವಲ್ಲ ಬಾಣಂತಿಮಗಳು ಸುಮತಿ ಮತ್ತು ಮಡದಿ ಉಮ್ಮಕ್ಕೆಯವರ ಅಂತರಂಗದ ವ್ಯಾಪಾರಗಳೆಲ್ಲ ಒಂದರೆಗಳಿಗೆ ನಿಂತಂತಾಗಿ ಎಲ್ಲರೂ ಮಾತಿನಿಂದ ಮೌನಕ್ಕೆ ಧುಮುಕಿದ್ದರು. ಸುಮತಿಗಂತೂ, ಖಾದ್ರಿಬ್ಯಾರಿಯವರು ಆ ಮುಪ್ಪಿನಲ್ಲೂ ಪುಟ್ಟ

ಮಗುವಿನಂಥ ನಿಷ್ಕಳಂಕ ಮನಸ್ಸನ್ನಿಟ್ಟುಕೊಂಡು ತನ್ನತ್ತ ತೋರುತ್ತಿದ್ದ ಕಾಳಜಿ–ಪ್ರೀತಿ ಎಲ್ಲವೂ ಧುತ್ತನೆ ಎದುರಿಗೆ ಬಂದಂತಾಗಿ ಆ ಕ್ಷಣದಲ್ಲಂತೂ ಆಕೆಗೆ ಈ ಪ್ರಪಂಚದ ಪ್ರೀತಿಯನ್ನೆಲ್ಲ ಕಳೆದುಕೊಂಡ ಅನುಭವವಾಯ್ತು!

ಖಾದ್ರುಬ್ಯಾರಿಯವರ ಸಾವಿನ ಸುದ್ದಿ ಕೇಳಿಸಿಕೊಳ್ಳುವುದಕ್ಕೆ ಮುಂಚೆಯೇ ಉಮ್ಮಕ್ಕೆಯವರ ಒಳಮನಸ್ಸಿನಲ್ಲಿ ಪೂರ್ವಾಹ್ನದ ಘಟನೆಯೇ ಸುತ್ತತೊಡಗಿದ್ದರಿಂದ, ಇದೀಗ ಬಂದ ಸಾವಿನ ಸುದ್ದಿ ಅವರನ್ನು ಇನ್ನಷ್ಟು ಶೋಕಪ್ರೇರಿತರನ್ನಾಗಿ ಮಾಡಿತ್ತು. 'ತನ್ನ ಮನಸ್ಸು ಯಾಕಾಗಿ ಅದು ಈ ರೀತಿ ಸಂಕುಚಿತವಾಯಿತು, ಯಾಕಾಗಿ ಆಗಾಗ್ಗೆ ಕರಟುತ್ತದೆ – ಮುರುಟುತ್ತದೆ' ಎಂದ ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾ ತನ್ನ ಅಪ್ಪನೆಂದ ಮಾತುಗಳನ್ನು ಆಕೆ ನೆನಪಿಸಿಕೊಂಡರು. 'ನಮ್ಮ ವಯಸ್ಸು ಹೆಚ್ಚಿದಂತೆಲ್ಲ ನಮ್ಮ ಮನಸ್ಸೂ ಬೆಳೆಯಬೇಕು – ಬುದ್ಧಿಯೂ ಬೆಳೆಯಬೇಕು – ಭಾವವೂ ಬೆಳೆಯಬೇಕು, ಆದರೆ ನಮ್ಮೊಳಗಿನ ಗುಣ – ಸ್ವಭಾವ ಎಳಸಾಗಿಯೇ ಉಳಿಯಬೇಕು' ಎಂದು, ತಮ್ಮ ಅಪ್ಪ ಹೇಳಿದ್ದನ್ನು ಮೆಲುಕು ಹಾಕುತ್ತಲೇ ಅವರು ಅಪ್ಪನ ಸಮಾನರಾದ ಖಾದ್ರಿಬ್ಯಾರಿಯವರಿಗಾಗಿ ಒಂದಷ್ಟು ಕಣ್ಣೀರ ಮುತ್ತು ಉರುಳಿಸುವಷ್ಟರಲ್ಲಿ ವೆಂಕಪ್ಪಶೆಟ್ಟರು, ಖಾದ್ರಿಬ್ಯಾರಿಯವರ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಲು ದುಃಖತಪ್ತರಾಗಿಯೇ ಅವರ ಹಿತ್ತಲತ್ತ ಹೆಜ್ಜೆ ಹಾಕಿದ್ದರು.

ಆಗಲೇ ಖಾದ್ರಿಬ್ಯಾರಿಯವರ ಅಂಗಳದಲ್ಲಿ ಜಾತಿಭೇದವಿಲ್ಲದೆ ಎಲ್ಲರೂ ನೆರೆದಿದ್ದರು. ಶವಸಂಸ್ಕಾರದ ಸಿದ್ಧತೆ ನಡೆದಿತ್ತು. ಹೆಣಕ್ಕೆ ಹೊದಿಸುವ ಕಫನ್ ಕೂಡಾ ಸಿದ್ಧವಾಗಿ ಕೂತಿತ್ತು. ಹೆಣ ಮೀಯಿಸಲು ಬಿಸಿನೀರಿಗೂ ತಯಾರಿ ನಡೆದಿತ್ತು. ಅಂದಿನ ಬಿಸಿನೀರು ಕಾಯಿಸುವ ಜವಾಬ್ದಾರಿ ಖಾದ್ರಿಬ್ಯಾರಿಯವರ ಮೊಮ್ಮಕ್ಕಳ ಮೇಲಿತ್ತು. ಕಳೆದ ಮೂರು ದಿನಗಳಿಂದ ಬಾನು ಬಿರಿದಂತೆ ಆ ಪರಿ ಸುರಿಯುತ್ತಿದ್ದ ಮಳೆಯ ರಂಪಾಟಕ್ಕೆ... ಅದರ ಥಂಡಿಗೆ ಯಾವ ಸೀಮೆಯ ತೆಂಗಿನಮಡಲು, ಸೌದೆ ಕೊತ್ತಳಿಗೆಗಳು ಆ ಸಾವಿನ ಮನೆಗೆ ನೀರು ಕಾಯಿಸಲು ಮುಂದೆ ಬಂದಾವು! ಸೊಸೆ ನಫೀಸಮ್ಮ ಮಳೆಗಾಲಕ್ಕೆಂದು ಕೂಡಿಟ್ಟಿದ್ದ ಸೊಪ್ಪು – ಸೌದೆ – ಮಡಲುಗಲೆಲ್ಲವೂ ಮಳೆಯ ಸೀರಣಿಗೆ ಹನಿದು ಕೂತು... ಇದೀಗ ಆಕೆಯ ಮಕ್ಕಳ ಸಹನೆಯ ಕಟ್ಟೆಯನ್ನು ಸಂಪೂರ್ಣವಾಗಿ ಒಡೆಯುವ ಹುನ್ನಾರದಲ್ಲಿದ್ದವು. ಹಸಿ ಕಟ್ಟಿಗೆಗಳು ನೀರ ಹಂಡೆಯ ಸುತ್ತ ಹೊಗೆ ಎಬ್ಬಿಸುತ್ತಿದ್ದವೆ ವಿನಾ ಹಂಡೆಯನ್ನು ಬಿಸಿ ಮಾಡಲು ಸುತರಾಂ ಒಪ್ಪುತ್ತಿರಲಿಲ್ಲ. ಮೊಮ್ಮಕ್ಕಳು ಈ ದರ್ವೇಸಿ ಕಟ್ಟಿಗೆಗಳ ಮೊಂಡಾಟಕ್ಕೆ ಬೇಸತ್ತು ಅತ್ತರೋ ಏನೋ ಎಂಬಂತೆ ಅವರು ಮೂಗು–ಕಣ್ಣುಗಳಿಂದ ಆ ಪರಿ ನೀರಿಳಿಸಿಕೊಂಡು ಸೌದೆ ತುಂಡುಗಳ ಜತೆ ಸೆಣಸಾಡುತ್ತಿರುವುದನ್ನು ಕಂಡ ಶೆಟ್ಟರಿಗೆ ತಟ್ಟನೆ ನೆನಪಾಗಿದ್ದು – ತಮ್ಮ ಬಚ್ಚಲುಮನೆ, ಸೌದೆರಾಶಿ ಮತ್ತು ಬಾಣಂತಿ ನೀರಿನ ಹಂಡೆ. ಹಾಗೆ ಒಂದೆರಡು ಗಳಿಗೆ ಕೈಕಟ್ಟಿಕೊಂಡು ಹನಿಗಣ್ಣಾಗಿಯೇ ನಿಂತು ಆ ನೀರು ಕಾಯಿಸುತ್ತಿದ್ದ

ದೃಶ್ಯವನ್ನು ದಿಟ್ಟಿಸುತ್ತಿದ್ದ ವೆಂಕಪ್ಪಶೆಟ್ಟರಿಗೆ ಇದ್ದಕ್ಕಿದ್ದಂತೆ ಏನನ್ನಿಸಿತೋ ಏನೋ! ತಟ್ಟನೊಂದು ಹೊಳೆದಂತಾಗಿ ನೇರ ತಮ್ಮ ಬಚ್ಚಲು ಮನೆ ಹೊಕ್ಕು ಬಾಣಂತಿ ಮೀಯಿಸುವುದಕ್ಕೆಂದೇ ಬೆಚ್ಚಗೆ ಒತ್ತಿಟ್ಟಿದ್ದ ಕಟ್ಟಿಗೆ – ಕೊತ್ತಳಿಗೆಗಳ ರಾಶಿಯನ್ನೇ ಉರುಳಿಸಿ ಬಿಟ್ಟು ಆರು ಮಾರು ಉದ್ದದ ಹುರಿಹಗ್ಗಕ್ಕಾಗಿ ಕಣ್ಣಾಡಿಸಿದ್ದರು. ಹುರಿಹಗ್ಗ ಕಣ್ಣ ಸೀಮೆಗೆ ಸೋಕಿದ್ದೇ ತಡ, ತಾನೇ ಒಂದಷ್ಟು ಕಟ್ಟುಮಸ್ತಾದ ಕಟ್ಟಿಗೆಗಳನ್ನು ಒಟ್ಟು ಸೇರಿಸಿ ಕಟ್ಟು ಬಿಗಿದು ಹೊತ್ತು ನಡೆದಿದ್ದರು ನೇರ ಸಾವಿನ ಮನೆಯತ್ತ, ಮಳೆ ಯಾಕೋ ಸೂರ್ಯದೇವರಂತೆ ಅಮ್ಮನ ಹಾಲು ಕುಡಿಯಲು ಹೋಗಿತ್ತೇ ಏನೋ? ಕಳೆದ ಒಂದೆರೆಡು ತಾಸುಗಳಿಂದ ತಾನುಂಟು – ಬಾನುಂಟು ಎಂದು ತಣ್ಣಗಾಗಿದ್ದ ಮಳೆರಾಯನನ್ನು ಕಂಡು ಸಾವಿನ ಮನೆಯವರು ಎಷ್ಟು ಸಮಾಧಾನಪಟ್ಟುಕೊಂಡರೋ ಅಷ್ಟೇ ಸಮಾಧಾನದ ಭಾವ ಕಟ್ಟಿಗೆ ಹೊತ್ತಿದ್ದ ಶೆಟ್ಟರಲ್ಲೂ ಮೂಡಿತ್ತು.

ಹಾಗೆ ಕಟ್ಟಿಗೆಯನ್ನು ಹೊತ್ತು ಬಂದ ಶೆಟ್ಟರು ನೇರವಾಗಿ ಸಾವಿನ ನೀರು ಕಾಯಿಸುತ್ತಿದ್ದ ಖಾದ್ರಿಬ್ಯಾರಿಯವರ ಮೊಮ್ಮಕ್ಕಳ ಬಳಿಗೆ ಬಂದವರೆ ನೀರು ಕಾಯಿಸುತ್ತಿದ್ದ ಆ ಮಕ್ಕಳನ್ನೆಲ್ಲಾ ಎಬ್ಬಿಸಿ ಆ ಕೆಲಸಕ್ಕೆ ತಮ್ಮನ್ನೇ ಒಪ್ಪಿಸಿಕೊಂಡು ಬಿಟ್ಟಿದ್ದರು. ಶವಸಂಸ್ಕಾರಕ್ಕೆ ನೆರೆದವರೆಲ್ಲರು ..... ಜತೆಗೆ ಸಹಕರಿಸಿದ್ದರಿಂದ ಕೊನೆಗೂ ಒಲೆಗಂಟಲಲ್ಲಿ ಉರಿ ಎದ್ದು ಬಿಸಿನೀರು ಸಿದ್ಧವಾಯಿತು.

ಇನ್ನೇನು ಹೆಣ ಮೀಯಿಸುವಲ್ಲಿಗೆ ಹೆಣವನ್ನು ತರಬೇಕು; ಅಂಗಳದಲ್ಲಿ ನಿಂತಿದ್ದ ಶೋಕತಪ್ತ ....ಯ ತಲೆಗಳೆಲ್ಲ ಖಾದ್ರಿಬ್ಯಾರಿಯವರಿಗಾಗಿ ಮೌನವಾಗಿಯೇ ಕಣ್ಣೀರ ತರ್ಪಣವನ್ನು ಅರ್ಪಿಸಿಬಿಟ್ಟು ಕೈಮುಗಿದು ತಮ್ಮ ತಮ್ಮ ಮನೆಯ ದಾರಿ ಹಿಡಿಯುವಷ್ಟರಲ್ಲಿ ಉಮ್ಮಕ್ಕೆಯವರು ಆಗ ತಾನೆ ಸಾವಿನ ಮನೆಯ ಅಂಗಳವನ್ನು ಹೊಕ್ಕುಬಿಟ್ಟಿದ್ದರು. ಆಗಷ್ಟೇ ಹೆಣಕ್ಕೆ ಮರೆಯಲ್ಲಿ ಬಿಸಿನೀರ ಸ್ನಾನ ನಡೆಯುತ್ತಿತ್ತು. ಹನಿಗಣ್ಣಾಗಿ ಆ ದೃಶ್ಯವನ್ನು ದಿಟ್ಟಿಸಿದ ಉಮ್ಮಕ್ಕೆಯವರು ಮುಂಜಾನೆ ಗಂಡನೆಂದಿದ್ದ ಮಾತನ್ನು ಮತ್ತೊಮ್ಮೆ ಚಿತ್ತದಿಂದ ಮೇಲಕ್ಕೆತ್ತಿ ತಂದರು : "ಆನೆ ಹೋದ ದಾರಿಯಲ್ಲಿ ಆಡು ಹೋದೀತು... ಮಾರಾಯ್ತಿ, ಆದರೆ ಆಡು ಹೋದ ದಾರಿಯಲ್ಲಿ ಆನೆಯೆಂದೂ ಸಾಗದು." ಉಮ್ಮಕ್ಕೆಯವರ ಕಣ್ಣಾಗಲಿಗಳಿಂದ ನೀರ ಮುತ್ತಿನ ಮಾಲೆಮಾಲೆಯೇ ಉರುಳಿತು.

❑

# ೩.೩ ಪೆಲೆ – ಸಾಕರ್ ಆಗಸದ ಧ್ರುವತಾರೆ

**– ಡಾ. ಕೆ. ಪುಟ್ಟಸ್ವಾಮಿ**

ಏಷ್ಯಾದ ಮೂಲೆ ಮೂಲೆಯಿಂದ ಹಿಡಿದು ಆಫ್ರಿಕಾದವರೆಗೂ ಈತನ ಹೆಸರು ಕೇಳದವರಿಲ್ಲ. ಯೂರೋಪು, ಅಮೆರಿಕಾ ರಾಷ್ಟ್ರಗಳ ರಾಜಧಾನಿಯಲ್ಲೆಲ್ಲಾ ಈತನ ಹೆಸರೇ ರೋಮಾಂಚನ. ಯಾವುದೇ ರಾಷ್ಟ್ರದಲ್ಲಿ, ಯಾವುದೇ ಕಾಲದಲ್ಲಿ ಈತ ಫುಟ್‌ಬಾಲ್ ಮೈದಾನದಲ್ಲಿ ಓಡಾಡಿರುವಷ್ಟು ಬೇರಾರೂ ಓಡಾಡಿಲ್ಲ. ಈತನನ್ನು ನೋಡಿರುವಷ್ಟು ಜನ ಬೇರೊಬ್ಬ ಆಟಗಾರನನ್ನು ನೋಡಿಲ್ಲ. ಇತಿಹಾಸದಲ್ಲಿ ಕ್ಯಾಮೆರಾ ಕಣ್ಣು ಈತನ ಮೇಲೆ ದಾಳಿ ಮಾಡಿರುವಷ್ಟು ಬೇರೊಬ್ಬ ರಾಜಕಾರಣಿ ಅಥವಾ ಚಲನಚಿತ್ರ ನಟರ ಮೇಲೆ ಮಾಡಿಲ್ಲ.

ಈತ ಪ್ರಪಂಚದ ಬಹುತೇಕ ರಾಷ್ಟ್ರಗಳನ್ನು ಸಂದರ್ಶಿಸಿದ್ದಾನೆ. ಹತ್ತು ರಾಜರನ್ನು, ಐವತ್ತು ಚಕ್ರವರ್ತಿಯರನ್ನು, ಎಪ್ಪತ್ತು ರಾಷ್ಟ್ರಾಧ್ಯಕ್ಷರನ್ನು, ಇಬ್ಬರು ಪೋಪ್ ಗುರುಗಳನ್ನು ಭೇಟಿಮಾಡಿದ್ದಾನೆ. ಈತ ಪಡೆದಿರುವ ಗೌರವ ಪೌರತ್ವದ ಸಂಖ್ಯೆಯನ್ನು ಪ್ರಪಂಚದ ಬೇರೊಬ್ಬ ವ್ಯಕ್ತಿ ಪಡೆದಿರುವ ದಾಖಲೆ ಇದುವರೆವಿಗೂ ಇಲ್ಲ.

ಇಷ್ಟೇ ಅಲ್ಲ;

ಈತನ ಜತೆ ಮಾತನಾಡಿ ಫೋಟೋ ತೆಗೆಸಿಕೊಳ್ಳಲು ಇರಾನ್ ಚಕ್ರವರ್ತಿಯಾಗಿದ್ದ ಷಾ ದೊರೆ ಅಂತರ‍್ರಾಷ್ಟ್ರೀಯ ವಿಮಾನ ನಿಲ್ದಾಣವೊಂದರಲ್ಲಿ ಮೂರು ಗಂಟೆಯವರೆಗೆ ತಾಳ್ಮೆಯಿಂದ ಕಾಯ್ದಿದ್ದಾನೆ. ಈತ ಹಾಂಗ್‌ಕಾಂಗ್‌ನಲ್ಲಿದ್ದಾನೆಂದು ಕೇಳಿದ ತಕ್ಷಣ ಗಡಿಕಾಯುತ್ತಿದ್ದ ಚೀನಾ ಸೈನಿಕರು ತಮ್ಮ ಕೆಲಸವನ್ನು ಬಿಟ್ಟು ಹಾಂಗ್‌ಕಾಂಗ್‌ಗೆ ಬಂದು ದರ್ಶನ ಪಡೆದುಹೋಗಿದ್ದಾರೆ.

ಕೊಲಂಬಿಯಾದಲ್ಲಿ ನಡೆಯುತ್ತಿದ್ದ ಪಂದ್ಯವೊಂದರಲ್ಲಿ ರೆಫರಿಯ ತೀರ್ಪೊಂದನ್ನು ಪ್ರಶ್ನಿಸಿದ 'ಅಪರಾಧ'ಕ್ಕಾಗಿ ಈತನನ್ನು ಮೈದಾನದಿಂದ ಹೊರಕ್ಕೆ ಕಳುಹಿಸಲಾಯಿತು. ಆಗ ಪ್ರೇಕ್ಷಕರು ಮೈದಾನದೊಳಕ್ಕೆ ನುಗ್ಗಿ ದಾಂಧಲೆ ಎಬ್ಬಿಸಿದಾಗ ಆತನನ್ನು ಮತ್ತೆ

ಆಟದ ಬಯಲಿನೊಳಕ್ಕೆ ಕರೆಸಿ, ಪ್ರೇಕ್ಷಕರನ್ನು ಸಮಾಧಾನಪಡಿಸಬೇಕಾಯಿತು. ಅಂತರ್ರಾಷ್ಟ್ರೀಯ ಫುಟ್‌ಬಾಲ್ ಕೂಟವೊಂದರಲ್ಲಿ ಪ್ರೇಕ್ಷಕರು ಇಂಥ ಭಾವಾವೇಶದಿಂದ ವರ್ತಿಸಿದ ದಾಖಲೆ ಮತ್ತು ರೆಫರಿಯ ತೀರ್ಪನ್ನು ಬದಲಿಸಿದ ಪ್ರಕರಣ ಇತಿಹಾಸದಲ್ಲೆಲ್ಲೂ ಕಂಡುಬರದು.

ಸಮೂಹ ಮಾಧ್ಯಮಗಳ ವಿಷಯದಲ್ಲೂ ಅಷ್ಟೆ. ಈತನ ಸಂದರ್ಶನ ನಡೆದಷ್ಟು ಈವರೆಗೆ ಬೇರಾವ ವ್ಯಕ್ತಿಯದೂ ನಡೆದಿಲ್ಲ. ತಿನ್ನಲು ಗತಿಯಿಲ್ಲದೇ ಇದ್ದ ಈತ ಆಟದಲ್ಲಿ ಗಳಿಸಿದ ಸಂಪತ್ತು ಲೆಕ್ಕಕ್ಕೇ ಸಿಗದು. ಯಾವ ಆಟಗಾರನೂ ಇವನಷ್ಟು ಸುಂದರಾಂಗನಲ್ಲ ಎಂಬುದು 'ಸ್ಪೋರ್ಟ್ಸ್ ಇಲ್ಲಸ್ಟ್ರೇಟೆಡ್ ಮ್ಯಾಗಜೀನ್" ಪತ್ರಿಕೆಯ ಅಭಿಪ್ರಾಯ. ಸುಮಾರು ತೊಂಬತ್ತು ರಾಷ್ಟ್ರಗಳ ಅರವತ್ತು ಭಾಷೆಗಳಲ್ಲಿ ಈತನ ಹಿರಿಮೆ ಸಾರುವ ಕವನಗಳು ಪ್ರಕಟವಾಗಿವೆ. ತಮ್ಮ ದೇಶವಾದ ಬ್ರೆಜಿಲ್‌ನಲ್ಲಿ ಈತ ಆಟಗಾರನಷ್ಟೇ ಅಲ್ಲ; ದೂರದರ್ಶನ ಮತ್ತು ಸಿನಿಮಾ ನಟ, ಉತ್ತಮ ಕವಿ ಮತ್ತು ಶ್ರೇಷ್ಠ ಸಂಗೀತಗಾರ.

ಹುಡುಗನಾಗಿದ್ದಾಗ ಪ್ರಾಥಮಿಕ ಶಿಕ್ಷಣದಿಂದಲೂ ವಂಚಿತನಾದ ಈತ ಪ್ರಸಿದ್ಧಿಯ ತುಟ್ಟತುದಿಗೇರಿದ ಮೇಲೆ ಸ್ವಪ್ರಯತ್ನದಿಂದ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದ ಸಾಹಸಿ. ಸ್ವಸಾಮರ್ಥ್ಯದಿಂದ ಸ್ಪ್ಯಾನಿಷ್, ಫ್ರೆಂಚ್, ಇಟಾಲಿಯನ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿತವನು.

ಈತನ ಆಟದ ಸಾಮರ್ಥ್ಯವನ್ನು ಕಂಡು, ಅವನ ದೇಹ ಮತ್ತು ಮಾನಸಿಕ ಶಕ್ತಿಯನ್ನು ಪರೀಕ್ಷಿಸಿದ ವೈದ್ಯರು ಮತ್ತು ತಜ್ಞರ ತಂಡವೊಂದು ನೀಡಿದ ಅಂತಿಮ ತೀರ್ಪು–ಆತ ಸಾಕರ್ ಅಲ್ಲದೆ, ಸಂಗೀತ, ಸಾಹಿತ್ಯ, ವಿಜ್ಞಾನ... ಯಾವುದೇ ಕ್ಷೇತ್ರಕ್ಕೆ ಹೋಗಿದ್ದರೂ ಜೀನಿಯಸ್ ಆಗುತ್ತಿದ್ದ!!!

ಫುಟ್‌ಬಾಲ್ ಅಥವಾ ಸಾಕರ್ ಪ್ರಪಂಚದ ಸರ್ವಶ್ರೇಷ್ಠ ತಂಡದ ಆಟ. ಪ್ರತಿಯೊಂದು ರಾಷ್ಟ್ರದ ಕನಸೂ ವಿಶ್ವಕಪ್ ಕಿರೀಟ ಧರಿಸಬೇಕು ಎಂಬುದು. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಪ್ರತಿಷ್ಠಿತ ಸ್ಪರ್ಧೆಗೆ ಅರ್ಹತೆ ಪಡೆಯಲು ಸುಮಾರು ಇನ್ನೂರು ರಾಷ್ಟ್ರಗಳು ಬೆವರು ಸುರಿಸುತ್ತವೆ. ಅಂತಿಮವಾಗಿ ಹದಿನಾರು ತಂಡಗಳು (ಈಗ ಮೂವತ್ತೆರಡು) ವಿಶ್ವಕಪ್ ಫೈನಲ್ ಪಂದ್ಯಗಳ ಹಣಾಹಣಿಗೆ ಸಿದ್ಧವಾಗುತ್ತವೆ. ಇಂಥ ಪ್ರತಿಷ್ಠೆಯ ಮುಖಾಮುಖಿಯಲ್ಲಿ ವಿಶ್ವಕಪ್ ಕಿರೀಟ ಧರಿಸುವ ತಂಡ ನಿಜಕ್ಕೂ ಧನ್ಯ; ಪೂರ್ಣ ಅರ್ಥದಲ್ಲಿ.

ವಿಶ್ವಕಿರೀಟಕ್ಕಾಗಿ ತನ್ನ ನಿವೃತ್ತಿಯಾಗುವವರೆಗೆ ನಡೆದ ಸೆಣಸಾಟದಲ್ಲಿ ಈತ ಪ್ರತಿನಿಧಿಸಿದ್ದ ಬ್ರೆಜಿಲ್ ಮೂರು ಬಾರಿ ವಿಶ್ವಕಪ್ ಗೆದ್ದಿದೆ. ಈತ ಮೂರನೇ ಬಾರಿ ಕಪ್ ಗೆದ್ದಾಗ ಅದುವರೆವಿಗೂ ನಡೆದಿದ್ದ ವಿಶ್ವಕಪ್ ಪಂದ್ಯಗಳು ಕೇವಲ ಒಂಭತ್ತು.

ನಾಲ್ಕು ಬಾರಿ ವಿಶ್ವಕಪ್ ಫೈನಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಅಪೂರ್ವ ದಾಖಲೆ ಈತನದು.

ಪೆಲೆ ಎಂಬ ಸರ್ವಶ್ರೇಷ್ಠ ಆಟಗಾರನ ಬಗೆಗಿನ ಕೆಲವು ಆಸಕ್ತಿದಾಯಕ ಮಾಹಿತಿಗಳಿವು.

ಆದರೆ ಬಡತನವನ್ನೇ ಉಂಡು ಬೆಳೆದು, ಪ್ರಪಂಚದ ಬಹುತೇಕ ಜನ ಅನಾದಾರಣೆಗೆ ಗುರಿಯಾದ ಕಪ್ಪುಬಣ್ಣವನ್ನು ಹೊತ್ತು ನಾಚಿಕೆಯಿಂದ ಅಂತರ್ಮುಖಿಯಾಗಿ ಬೆಳೆದ ಒಬ್ಬ ಹುಡುಗ ಇಷ್ಟು ಪ್ರಸಿದ್ಧಿ ಪಡೆದದ್ದಾದರೂ ಹೇಗೆ?

ಸುಮಾರು ಎರಡು ದಶಕಗಳ ಕಾಲ ತನ್ನ ಪ್ರಸಿದ್ಧಿಯನ್ನು ಏರಿಸಿಕೊಂಡು ಹೋದ ಈತನ ಪ್ರತಿಭೆ ಅರಳಿದ್ದಾದರೂ ಹೇಗೆ? ಈತನಲ್ಲಿ ಅಡಗಿದ್ದ ಅದ್ಭುತ ಚೈತನ್ಯ ಆಕಸ್ಮಿಕವೇ? ಹುಟ್ಟೇ ಶಾಪವಾಗಿ, ಉಸಿರಾಡುವುದೇ ದುಸ್ತರವಾಗಿ ಆಕಾಶವನ್ನು ಹೊದ್ದು ತಣ್ಣನೆಯ ನೆಲದಮೇಲೆ ಬದುಕಿ ಬಾಳಿದ ಈ ಬಾಲಕ ಧೂಮಕೇತುವಿನಂತೆ ಮೇಲೆ ಏರಿ ಆದರೆ ಪತನಗೊಳ್ಳದೆ ತಾರೆಯಾಗಿ ಹೊಳೆಹೊಳೆಯುತ್ತಾ ನಿಂತಿದ್ದಾದರೂ ಹೇಗೆ?

ಪೆಲೆಯ ಜೀವನ ಕಳೆದ ಶತಮಾನದ ಅದ್ಭುತಗಳಲ್ಲೊಂದು. ಹಸಿವಿನ ಗರ್ಭವನ್ನು ಸೀಳಿ ಉಸಿರಾಡಿದ ಚೈತನ್ಯವದು. ಕೀಳರಿಮೆಯನ್ನು ತೊಡೆಯಲು ಕ್ರೀಡೆಗಿಂತಲೂ ಬೇರೊಂದು ಮಾರ್ಗವಿಲ್ಲ ಎಂಬುದು ಕರಿಯರ ತರ್ಕ. ಈ ಹಸಿವಿನ ಒಡಲಿನಿಂದ ಹೊರಬರಲು ಈ ಕರಿಯ ಪೆಲೆ ಆಟವನ್ನು ರೂಢಿಸಿಕೊಂಡ.

ಬ್ರೆಜಿಲ್ ರಾಷ್ಟ್ರದ ಮಿನಾಸ್ ಗೆರಿಯಾಸ್ ಪ್ರಾಂತ್ಯದಲ್ಲಿ ಟ್ರಿಸ್ ಕಾರ್ಕೋನಿಯಸ್ ಒಂದು ಪುಟ್ಟ ಹಳ್ಳಿ. ಅಲ್ಲಿ ಚಿಂದಿಯುಟ್ಟು ನಾಚಿಕೊಂಡ ಹೆಣ್ಣಂತೆ, ಕುಟ್ಟೆ ಹಿಡಿದ ಮರಮುಟ್ಟು, ಬಿರುಕುಬಿಟ್ಟ ಇಟ್ಟಿಗೆ ಮತ್ತು ತತಾನು ತೂತಾಗಿದ್ದ ಹಂದಿಗೂಡಿನಂಥ ಮನೆ.

೨೩ ಅಕ್ಟೋಬರ್ ೧೯೪೦.

ಅಂದು ಪ್ರಕೃತಿ ಎಂದಿನಂತೆ ನೀರವವಾಗಿತ್ತು. ಇತಿಹಾಸ ಪುರುಷನೊಬ್ಬ ಹುಟ್ಟುವ ಬಗ್ಗೆ ಪ್ರಕೃತಿ ಯಾವ ಮುನ್ಸೂಚನೆಯನ್ನೂ ಕೊಡಲಿಲ್ಲ. ಆ ಹಂದಿಗೂಡಿನ ಮನೆಯಲ್ಲಿ ಜೋವೋ ರಾವೋಸ್ ಡೋ ನಸಿಮೆಂಟೋ ಮತ್ತು ಡೋನಾ ಸೆಲೆಸ್ಟೀ ಎಂಬ ದಂಪತಿಗಳಿಗೆ ಮಗುವೊಂದು ಜನನವಾಯಿತು. ಅದು ತಂದೆ ತಾಯಿಗಳಷ್ಟೇ ಕಪ್ಪಗಿತ್ತು!

ಈ ಗುಂಗುರು ಕೂದಲಿನ ಕಪ್ಪು ಬಣ್ಣದ ಕರಿ ಕಣ್ಣುಗಳ ಮಗುವಿಗೆ ಪೋರ್ಚುಗೀಸರು ಸಾಮಾನ್ಯವಾಗಿ ಇಡುವಂತೆಯೇ ಏಡ್ಸನ್ ಅರಂಟಿಸ್ ಡೋ ನಸಿಮೆಂಟೋ ಎಂದು ಉದ್ದನೆಯ ಹೆಸರನ್ನು ಇಟ್ಟರು. ಉದ್ದ ಹೆಸರಿದ್ದರೂ ಅಲ್ಲಿ ನಿತ್ಯ ವ್ಯವಹಾರಕ್ಕೊಂದು ಚಿಕ್ಕ ಹೆಸರು ಚಾಲ್ತಿಯಲ್ಲಿರುತ್ತದೆ. ಈ ಮಗುವನ್ನು ಮುದ್ದಿನಿಂದ ಆತನನ್ನು ಡಿಕೋ ಎಂದು ಕರೆಯುತ್ತಿದ್ದರು.

ತಂದೆ ಜೋವೋ ರಾವೋಸ್ ಡೋ ನಸಿಮೆಂಟೋನ ಸಂಕ್ಷಿಪ್ತ ಹೆಸರು ಡೋಡಿನ್ಯೋ. ಆತ ಟ್ರಿಸ್ ಕಾರ್ಕೋಸ್‌ನ ಸಣ್ಣಕ್ಲಬ್‌ನ ವೃತ್ತಿಪರ ಫುಟ್‌ಬಾಲ್ ಆಟಗಾರ. ಆತ ಕೂಡ ಪ್ರತಿಭಾವಂತ ಆಟಗಾರನಾದರೂ ಅದೃಷ್ಟವಿರಲಿಲ್ಲ. ಅಲ್ಲಿಂದ ಬರುವ ಚಿಲ್ಲರೆ ಹಣದಲ್ಲಿ ಸೋದರ ಮಾವ ಜೋ ತರುವ ಕೂಲಿಯಲ್ಲಿ ಸಂಸಾರ ಸಾಗಬೇಕು. ಡೋಡಿನ್ಯೋಗೆ ಫುಟ್‌ಬಾಲ್ ಬಿಟ್ಟರೆ ಬೇರಾವ ಕೆಲಸವೂ ಗೊತ್ತಿರಲಿಲ್ಲ. ಆಟದಿಂದ ಹೊಟ್ಟೆ ತುಂಬದು ಎಂದು ಗೊತ್ತಿದ್ದರೂ ಆತ ಅದನ್ನು ಬಿಡದ ಹಠವಾದಿ. ಈ ಆಟವನ್ನು ಬಿಟ್ಟು ಲಕ್ಷಣವಾಗಿ ಬೇರೊಂದು ಉದ್ಯೋಗವನ್ನು ಹಿಡಿಯುವಂತೆ ಹೆಂಡತಿ ಸೆಲಿಸ್ಟೀ ಪೀಡಿಸುತ್ತಲೇ ಇದ್ದಳು. ಫುಟ್‌ಬಾಲ್ ಹೆಸರೆತ್ತಿದರೆ ಆಕೆಯ ಕಿವಿಗೆ ಕಾದ ಸೀಸ ಹುಯ್ದಂತಾಗುತ್ತಿತ್ತು.

೧೯೪೨ರಲ್ಲಿ ದೊಡ್ಡ ಕ್ಲಬ್ ಒಂದರಲ್ಲಿ ಆಡುವಂತೆ ಡೋಡಿನ್ಯೋಗೆ ಕರೆಬಂತು. ಗಳಿಕೆ ಜಾಸ್ತಿಯಾಗಬಹುದೆಂದು ಸಂಸಾರದಲ್ಲಿ ನಿರೀಕ್ಷೆ. ಆದರೆ ದುರಾದೃಷ್ಟ ಬೆನ್ನು ಹತ್ತಿತ್ತು. ಆಡಿದ ಮೊದಲ ಪಂದ್ಯದಲ್ಲೇ ಡೋಡಿನ್ಯೋ ಮಂಡಿ ಮುರಿದುಕೊಂಡ. ಸಂಪತ್ತು ಗಳಿಸಲು ಹೋದ ಗಂಡ ಕುಂಟುತ್ತಾ ವಾಪಸ್ಸು ಬಂದಾಗ ಸೆಲಿಸ್ಟೀಗೆ ಅವನ ಇನ್ನೊಂದು ಕಾಲು ಮುರಿಯುವಷ್ಟು ಕೋಪ ಬಂತು.

"ಮೊದಲಾದರೂ ಎರಡು ಒಳ್ಳೆಯ ಕಾಲುಗಳಿದ್ದವು. ಈಗ ಅದನ್ನೂ ಊನ ಮಾಡಿಕೊಂಡೆ. ಈ ಫುಟ್‌ಬಾಲ್ ಹುಚ್ಚು ಬಿಟ್ಟು ಲಕ್ಷಣವಾಗಿ ಒಂದು ಕೆಲಸವನ್ನು ಹುಡುಕು"–ಸೆಲೆಸ್ಟೀ ಕಿವಿಮಾತು ಹೇಳಿದಳು.

ಆದರೆ ಊದಿದ ಮಂಡಿಗೆ ತಣ್ಣೀರು ಬಟ್ಟೆ ಕಟ್ಟಿ ಹುಟ್ಟೂರಿನ ಕ್ಲಬ್‌ನಲ್ಲೇ ಡೋಡಿನ್ಯೋ ಆಟ ಮುಂದುವರೆಸಿದ.

೧೯೪೪ರಲ್ಲಿ ಸಮೀಪದ ಬಾರೂ ಪಟ್ಟಣದ ಕ್ಲಬ್ ಆಡುವಂತೆ ಡೋಡಿನ್ಯೋಗೆ ಕರೆ ನೀಡಿತು. ಜತೆಗೆ ನೌಕರಿಯೊಂದನ್ನು ನೀಡುವುದಾಗಿ ಕ್ಲಬ್‌ನಿಂದ ಭರವಸೆ. ಈ ಬಾರಿ ಸ್ವಲ್ಪಮಟ್ಟಿಗೆ ಸೆಲೆಸ್ಟೀಗೆ ಸಮಾಧಾನ.

ನಾಲ್ಕು ವರ್ಷದ ಡಿಕೋ ತಂದೆ ತಾಯಿಯೊಡನೆ ಹುಟ್ಟೂರು ಬಿಟ್ಟು ಬಾರೂ ಪಟ್ಟಣಕ್ಕೆ ಪ್ರಯಾಣ ಬೆಳೆಸಿದ. ಇಷ್ಟೊತ್ತಿಗಾಗಲೇ ತುತ್ತಿನ ತಟ್ಟೆಯಲ್ಲಿ ಪಾಲು ಬೇಡಲು ಡಿಕೋಗೆ ತಮ್ಮ ತಂಗಿಯರು ಹುಟ್ಟಿಕೊಂಡಿದ್ದರು.

ರೈಲಿನ ಕಿಟಕಿಯಲ್ಲಿ ಮುಖ ಹುದುಗಿಸಿ ಬಾಲಕ ಪ್ರಕೃತಿಯನ್ನು ನೋಡುತ್ತಾ ಹೊರಟ. ರೈಲು ನಿಧಾನವಾಗಿ ಬೆಟ್ಟಗುಡ್ಡಗಳಲ್ಲಿ ಅಂಕುಡೊಂಕಾಗಿ ಚಲಿಸುತ್ತಿತ್ತು. ಬಾನೆತ್ತರಕ್ಕೆ ನಿಂತ ಗುಡ್ಡಗಳು, ನಿಬಿಡವಾಗಿ ಬೆಳೆದು ನಿಂತ ವನಶ್ರೇಣಿ. ಕಡಿಮೆ ಜಾಗದಲ್ಲಿ ಬದುಕುಳಿಯಲು ಹೋರಾಟ ನಡೆಸುತ್ತಿದ್ದ ಮರಗಳ ಗಿಡಕಾಂಡಗಳನ್ನು ಡಿಕೋ ಕಣ್ಣಿನಲ್ಲಿ ತುಂಬಿಕೊಂಡ. ಪುಟ್ಟ ಬಾಲಕನ ಮನದಲ್ಲಿ ಯಾವುದೋ ಆಸೆಯ ಕಿಡಿಗಳು ಸಿಡಿದ ಅನುಭವ. ಯಾವುದೋ ಮರ್ಮವನ್ನು ಅರಿತ ಭಾವ.

ಬಾರೂನ ಕ್ಲಬ್ ಡೋಡಿನ್ಯೋನನ್ನು ಆಟಗಾರ ಎಂದು ನೇಮಿಸಿಕೊಂಡಿತು. ಆದರೆ ನೀಡಿದ್ದ ಭರವಸೆ ಮೇರೆಗೆ ನೌಕರಿ ನೀಡಲಿಲ್ಲ. ಈಗ ಹುಟ್ಟಿದೂರಿಗೂ ಹೋಗದಂಥ ಪರಿಸ್ಥಿತಿ. ಸೆಲಿಸ್ಟೀ ಸಿಡಿಮಿಡಿ ಮತ್ತಷ್ಟು ಹೆಚ್ಚಾಯಿತು.

ಬಡತನ ಒಂದು ಶಾಪ. ಅದು ಮನುಷ್ಯನ ಸಹನೆಯನ್ನು ಪರೀಕ್ಷೆಗೆ ಒಡ್ಡುತ್ತದೆ. ಮಾನಸಿಕವಾಗಿ ಕುಗ್ಗಿಸುತ್ತದೆ. ಜೀವನೋತ್ಸಾಹವನ್ನು ತಗ್ಗಿಸುತ್ತದೆ. ನಿಧಾನವಾಗಿ ತಣ್ಣಗೆ ಸ್ವಲ್ಪಸ್ವಲ್ಪವೇ ಮನುಷ್ಯನ ಆತ್ಮಗೌರವವನ್ನು ಕೊಲ್ಲುತ್ತಾ ಹೋಗುತ್ತದೆ. ಭಯವನ್ನು ತುಂಬುತ್ತದೆ. ಇದು ಅನಿವಾರ್ಯವಾಗಿ ಉಸಿರು ಉಳಿಸಿಕೊಂಡು ಬದುಕಲೇಬೇಕಾದ ಭಯಂಕರವಾದ ಭಯ.

ಬಾರೂವಿನ ಮನೆ ಹಿಂದಿನದಕ್ಕಿಂತ ಅಧ್ವಾನವಾಗಿತ್ತು. ಛಾವಣಿ ಜರಡಿಯಂತಿತ್ತು. ರಂಧ್ರದಿಂದಲೇ ನೇಯ್ದಂತೆ ಕಾಣುತ್ತಿತ್ತು. ಹಗಲಿನಲ್ಲಿ ಬಿಸಿಲು ಕೋಲುಗಳು ಇತ್ತಿಂದತ್ತ ಹಾಯುತ್ತಿದ್ದವು. ರಾತ್ರಿಯಲ್ಲಿ ನಕ್ಷತ್ರಗಳ ಸುಖ ಬೆಳಕು ಇಡೀ ಮನೆಯನ್ನು ತೋಯಿಸಿಬಿಡುತ್ತಿತ್ತು. ಚಳಿಗಾಲದಲ್ಲಿ ಥಂಡಿ ಗಾಳಿ ದಾಳಿಯಿಡುತ್ತಿತ್ತು. ಮಳೆಗಾಲದಲ್ಲಿ ಛಾವಣಿ ಮಳೆ ನೀರನ್ನು ಜರಡಿ ಹಿಡಿಯುತ್ತಿತ್ತು. ಆದರೆ ಸ್ಥಿರವಾಗಿ ಮಳೆ ನೀರು ಒಂದೇ ಕಡೆ ಬೀಳುತ್ತಿರಲಿಲ್ಲ. ಬದಲಾಗಿ ಅಲ್ಲಾಡಿಸಿದ ಜರಡಿಯಂತೆ ನೀರು ಎಲ್ಲಿ ಬೀಳುತ್ತದೆ ಎಂಬುದೇ ಗೊತ್ತಾಗುತ್ತಿರಲಿಲ್ಲ. ಇಂಥ ಸಮಯದಲ್ಲಿ ಒಣಗಿದ ಸೌದೆ ಕಾಪಾಡಲು, ಹೊದಿಕೆಯನ್ನು ನೆನೆಯದಂತೆ ಮಾಡಲು ನಿಸರ್ಗದ ಜತೆ ಡೋಡಿನ್ಯೋ ಕುಟುಂಬ ಸಮರ ಹೂಡಬೇಕಿತ್ತು.

ಇಂಥ ಕರುಳಿರಿಯುವ ಬಡತನವೇ ಡೋಡಿನ್ಯೋ ಕುಟುಂಬದ ಸಂಗಾತಿಯಾಗಿತ್ತು. ಇಂಥ ಬಡತನದಲ್ಲೂ ಆ ಕುಟುಂಬ ಛಿದ್ರವಾಗದೇ ಉಳಿದಿದ್ದು ಅಲ್ಲಿ ಇದ್ದ ಪ್ರೀತಿ ವಾತ್ಸಲ್ಯಗಳಿಂದ ಮಾತ್ರ. ಜತೆಗೆ ಡೋನಾ ಸೆಲೆಸ್ಟೀಯ ಅದ್ಭುತ ಗುಣವೂ ಇದಕ್ಕೆ ಪೂರಕವಾಗಿತ್ತು. ಅವಳು ಪಾಲಿಸುತ್ತಿದ್ದ ನಿಯಮಗಳೆಲ್ಲಾ ಕಠಿಣ. ನಸಿಮೆಂಟೋ ಕುಟುಂಬದಲ್ಲಿ ಹುಟ್ಟು ದಾರಿದ್ರ್ಯ ನಿಜ. ಆದರೆ ಸೆಲೆಸ್ಟೀಯ ಪ್ರಕಾರ ದಾರಿದ್ರ್ಯ ಶಾಪವಲ್ಲ. ಅದನ್ನು ಅನುಭವಿಸುವುದು ಒಂದು ತಪಸ್ಸು. ಯಾರೂ ಹಸಿವಿಗಾಗಿ ಕದಿಯಬಾರದು. ಮೋಸ ಮಾಡಬಾರದು. ಭಿಕ್ಷೆ ಬೇಡಬಾರದು. ಕಾರಣವಿಲ್ಲದೆ ಇತರರನ್ನು ಹಳಿಯಬಾರದು. ದೇವರಲ್ಲಿ ನಂಬಿಕೆ ಇಡಬೇಕು. ತಂದೆ ತಾಯಿಗಳನ್ನು ಗೌರವದಿಂದ ನೋಡಬೇಕು. ಈ ನಿಯಮಗಳನ್ನು ಮಕ್ಕಳು ಮುರಿದರೆ ಕಿವಿ ಕಿತ್ತು ಹೋಗುವಷ್ಟು ನುಲುಚಿ ಧಿಮ್ಮೆನ್ನುವಂತೆ ತಲೆಗೆ ಗುದ್ದುತ್ತಿದ್ದಳು. ಡಿಕೋಗೆ ನಿಜವಾದ ಕ್ರೀಡಾಮನೋಭಾವ ಅರಳಿದ್ದು ಮನೆಯಲ್ಲೇ ಇರಬೇಕು.

ತಂದೆ ತಾಯಿ ಆತ್ಮಗೌರವವನ್ನು ಬಿಟ್ಟುಕೊಡದೆ ಅಲ್ಪ ಆದಾಯದಲ್ಲೇ ಸಂಸಾರ ತೂಗಿಸುತ್ತಿದ್ದರೆ ಡಿಕೋ ನೆರೆಹೊರೆಯ ಮಕ್ಕಳೊಡನೆ ಹಿತ್ತಲಿನಲ್ಲಿ ಆಟವಾಡಿ

ಕಾಲಕಳೆಯುತ್ತಿದ್ದ. ಹಿತ್ತಲಿನ ಮಾವಿನ ಮರಕ್ಕೆ ಹಗ್ಗಕಟ್ಟಿ ಸರ್ಕಸ್ ಮಾಡುತ್ತಿದ್ದ. ಸೆಲೆಸ್ಟೀ ಒಂದು ದಿನ ಇದನ್ನು ಕಂಡಮೇಲೆ ಡಿಕೋ ತಲೆಗೆ ಗುದ್ದಿ ಅಂಥ ಆಟವಾಡಬಾರದೆಂದು ಷರತ್ತು ಹಾಕಿದಳು. ಸೆಲೆಸ್ಟೀ ವಾಕ್ಯ ಎಂದರೆ ಲಕ್ಷ್ಮಣರೇಖೆ!

ಹೀಗೆ ಹಿತ್ತಲಿನಲ್ಲಿ ಮಕ್ಕಳಾಟದ ಸರ್ಕಸ್ ಆಡಲು ನಿಷೇಧ ಹೇರಿದ ಮೇಲೆ ಕೇರಿಯ ಬಾಲಕರೆಲ್ಲ ದೊಡ್ಡವರಾಟ ಆಡಲು ನಿರ್ಧರಿಸಿದರು.

ಬ್ರೆಜಿಲ್‌ನಲ್ಲಿ ಒಂದು ಮಾತಿದೆ. ಅಲ್ಲಿ ಮಕ್ಕಳು ಎದ್ದು ನಿಲ್ಲುವುದನ್ನು ಕಲಿತ ತಕ್ಷಣ ಒದೆಯುವುದನ್ನು ಅಭ್ಯಾಸ ಮಾಡುತ್ತಾರೆ. ನಡೆಯುವ ಅಭ್ಯಾಸ ಅನಂತರ ಬರುತ್ತದೆ. ಹಾಗೆಯೇ ಬ್ರೆಜಿಲ್ ಮಕ್ಕಳಿಗೆ ಇನ್ನೊಂದು ಉಪದೇಶವೂ ಇದೆ. ಯಾವುದಾದರೂ ವಸ್ತು ಚಲಿಸುತ್ತಿದ್ದರೆ ಒದೆಯಿರಿ. ಚಲಿಸದೇ ಬಿದ್ದಿರುವ ವಸ್ತುವನ್ನೂ ಒದೆಯಿರಿ. ಒದೆಯಲು ಸಾಧ್ಯವಾಗದ ವಸ್ತುವಿದ್ದರೆ ಅದರ ಬದಲು ಇನ್ನೊಂದು ವಸ್ತುವನ್ನು ತಂದು ಒದೆಯಿರಿ. ಇದು ಬ್ರೆಜಿಲ್ ಜನರ ಮನೋಧರ್ಮ, ಅವರ ಹುಟ್ಟು ಗುಣ, ಸಹಜವರ್ತನೆ.

ಅಂತೆಯೇ ದೊಡ್ಡವರಾಟ ಎಂದರೆ ಸಾಕರ್. ಆದರೆ ಡಿಕೋ ತಾಯಿಗೆ ಸಾಕರ್ ಎಂದರೆ ಮೈಯೆಲ್ಲಾ ಬೆಂಕಿಯಾಗುತ್ತಿತ್ತು. ಆಕೆಯ ದೃಷ್ಟಿಯಲ್ಲಿ ಫುಟ್‌ಬಾಲ್ ಆಡುವುದೂ ಬ್ಯಾಂಕ್ ದರೋಡೆ ಮಾಡುವುದು, ಎರಡೂ ಒಂದೇ! ಮಧ್ಯಮವರ್ಗದ ಗೃಹಿಣಿಯಂತೆ ತನ್ನ ಮಗ ಲಾಯರ್ರೋ ಡಾಕ್ಟರ್ರೋ ಆಗಬೇಕೆಂಬ ಅದಮ್ಯ ಆಸೆ. ಕಾಲು ಮುರಿದುಕೊಳ್ಳುವ ಅಪ್ಪನ ಆಟಕ್ಕೆ ಮಗನೂ ಕಾಲು ಹಾಕಿದರೆ ಕಾಲು ಮುರಿಯದೇ ಬಿಟ್ಟಾಳೆಯೆ?

ಡಿಕೋ ಬುದ್ಧಿವಂತ. ತಾನೆಂದೂ ಫುಟ್‌ಬಾಲ್ ಆಟಗಾರ ಆಗುವುದಿಲ್ಲ ಎಂದು ತಾಯಿಯ ಮುಂದೆ ಶಪಥ ಮಾಡಿದ. ಆದರೆ ನೆರೆಯ ಮಕ್ಕಳೊಡನೆ ಸುಮ್ಮನೆ ಆಡುತ್ತೇನೆಂದು ಸಮಾಧಾನ ಮಾಡಿದ.

ಈ ದೊಡ್ಡವರಾಟಕ್ಕೆ ಚೆಂಡು ಕೊಳ್ಳಲು ಈ ಮಕ್ಕಳಿಗೆ ಹಣವಿಲ್ಲ? ಆದರೆ ಉಪಾಯಗಳಿಗೆ ಕೊರತೆಯೇ? ಮಕ್ಕಳೆಲ್ಲಾ ಸೇರಿ ಹಳೆಯದಾದ ದೊಡ್ಡ ಕಾಲುಚೀಲ ತಂದು ಚಿಂದಿ ಬಟ್ಟೆಗಳನ್ನು ತುರುಕಿ ಚಂಡಿನಾಕಾರಕ್ಕೆ ತಂದರು. ಒದೆಯಲೊಂದು ವಸ್ತು ಸಿಕ್ಕಿದರೆ ಸಾಕಲ್ಲವೇ?

ಡಿಕೋ ಆಯ್ದುಕೊಂಡ ಮೈದಾನ ಅವರ ಮನೆಯ ಮುಂದಿನ ಬೀದಿ. ಬೀದಿಯ ಎರಡು ತುದಿಗಳೇ ಗೋಲುಪೆಟ್ಟಿಗೆ. ಬಟ್ಟೆಯ ಚೆಂಡನ್ನು ಒದ್ದು ಚಲಿಸುವಂತೆ ಮಾಡಿದಾಗ ಡಿಕೋನ ಎದೆಯಲ್ಲಿ ಸುಖದ ಹಕ್ಕಿಗಳು 'ಚೀ...ಪೀ' ಎಂದು ಹಾರುತ್ತಿದ್ದವು. ಹೀಗೆ ಫುಟ್‌ಬಾಲ್‌ಗೆ ಪದಾರ್ಪಣೆ.

* * *

ಡಿಕೋಗೆ ಈಗ ಏಳು ವರ್ಷ. ಕುಟುಂಬ ಪಾಲನೆಮಾಡುವ ವಯಸ್ಸು. ಈ ಹಸುಳೆ ಈಗ ಬೂಟ್‌ಪಾಲಿಷ್ ಕಾಯಕಕ್ಕೆ ಕೈಹಚ್ಚಿತು. ಮನೆ ಮನೆ ಬಾಗಿಲು ಬಡಿದು ಸಂಸಾರಸ್ಥರ ಮನ ಒಲಿಸಿದ ಡಿಕೋ ರೈಲ್ವೇ ನಿಲ್ದಾಣದಲ್ಲಿ ಇಲ್ಲವೇ ಆಟದ ಮೈದಾನದಲ್ಲಿ ಪ್ರೇಕ್ಷಕರ ಕಾಲಡಿಯಲ್ಲಿ ಕುಳಿತು, ತನ್ನ ಪೆಟ್ಟಿಗೆಯನ್ನು ಹರಡಿ ಹೊಳಪು ಬರುವಂತೆ ಬೂಟುಗಳನ್ನು ತಿಕ್ಕಿದ. ಪ್ರತಿ ಶನಿವಾರ ತಂದೆಯಾಡುತ್ತಿದ್ದ ಆಟ ನೋಡಲು ಕ್ರೀಡಾಂಗಣಕ್ಕೆ ಹೋಗುತ್ತಿದ್ದ. ಆಟ ನೋಡುವುದರ ಜೊತೆಗೆ ಅಲ್ಲಿಯ ಪ್ರೇಕ್ಷಕರ ಬೂಟುಗಳನ್ನು ಥಳ ಥಳ ಹೊಳೆಯುವಂತೆ ಪಾಲಿಷ್ ಹಾಕುತ್ತಿದ್ದ. ಈ ಮಾರ್ಗದಲ್ಲಿ ತರಬೇತಿ ನೀಡಿದವಳು ಸೆಲೆಸ್ಟೀಯೇ! ತನ್ನ ಮಕ್ಕಳು ಶ್ರಮದಿಂದಲೇ ಸಂಪಾದನೆ ಮಾಡಲಿ ಎಂದೇ ಆಕೆ ಆಶಿಸುತ್ತಿದ್ದಳು. ಬೂಟ್ ಪಾಲಿಷ್ ಕೆಲಸ ಇಲ್ಲದಿದ್ದಾಗ ಸಮೀಪದ ವಿಮಾನ ಕ್ಲಬ್ ಬಳಿಯ ಮೈದಾನದಲ್ಲಿ ಡಿಕೋ ಫುಟ್‌ಬಾಲ್ ಆಡುತ್ತಿದ್ದ. ಡಿಕೋಗೆ ಈಗ ಎಂಟು ವರ್ಷ.

ಬಾರೂ ಕ್ಲಬ್ ಡೋಡಿನ್ಯೋಗೆ ಸರ್ಕಾರಿ ನೌಕರಿಯೊಂದನ್ನು ನೀಡಿತು. ತಾನು ನೀಡಿದ್ದ ಆಶ್ವಾಸನೆಯನ್ನು ನಾಲ್ಕು ವರ್ಷಗಳ ನಂತರ ಅದು ಈಡೇರಿಸಿತು. ಈಗ ಸ್ಥಳೀಯ ಆಸ್ಪತ್ರೆಯಲ್ಲಿ ಅವನಿಗೆ ಕೆಲಸ. ಅದು ನೆಲ ಗುಡಿಸುವುದರಿಂದ ಹಿಡಿದು ರೋಗಿಗಳ ಕಕ್ಕಸ್ಸು ಬಾಚುವವರೆಗೆ ವಿಸ್ತರಿಸಿತ್ತು. ಜತೆಗೆ ಕಾಫಿ ತಯಾರಿಸುವುದು, ಸಾಮಾನು ಇಳಿಸುವುದು, ಎತ್ತುವುದು ಹೀಗೆ ಹೇಳಿದ ಕೆಲಸವನ್ನೆಲ್ಲಾ ಮಾಡಬೇಕು. ಕೆಲಸ ಎಷ್ಟೇ ಕನಿಷ್ಠವಾಗಿದ್ದರೂ ಮನೆಯಲ್ಲಿ ನೆಮ್ಮದಿ ನೆಲೆಸಿತು. ಡಿಕೋ ಈಗ ಸಂಜೆ ಆಡಲು ಹೋಗುತ್ತಿರಲಿಲ್ಲ. ಬದಲು ಆಸ್ಪತ್ರೆಗೆ ಹೋಗಿ ತಂದೆಗೆ ನೆರವಾಗುತ್ತಿದ್ದ. ಅಲ್ಲಿ ಬಿಡುವಾದಾಗ ತಂದೆ ತನ್ನ ಫುಟ್‌ಬಾಲ್ ಅನುಭವಗಳ ಗಂಟನ್ನು ಬಿಚ್ಚಿಡುತ್ತಿದ್ದ.

ಒಂದು ಸಂಜೆ;

ಆಸ್ಪತ್ರೆಯಲ್ಲಿ ಕೆಲಸವೇನೂ ಇರಲಿಲ್ಲ. ಆಗತಾನೆ ಗುಡಿಸಿದ ನೆಲದಲ್ಲಿ ಬಲ್ಬಿನ ಮಂದಪ್ರಕಾಶ ಪ್ರತಿಫಲಿಸುತ್ತಿತ್ತು. ಆಸ್ಪತ್ರೆಯ ತುಂಬ ಗರ್ಭಕಟ್ಟಿದ ಮೌನ. ಕಾರ್ಬಾಲಿಕ್ ವಾಸನೆ. ಹೊರಗೆ ನೀರವ ಕತ್ತಲು. ಡೋಡಿನ್ಯೋ ಮಗನನ್ನು ಹತ್ತಿರ ಕುಳ್ಳಿರಿಸಿಕೊಂಡ. ಅವನ ಮುಗ್ಧ ಕಣ್ಣುಗಳನ್ನೇ ನೋಡುತ್ತಾ ಪ್ರಶ್ನಿಸಿದ.

"ಡಿಕೋ, ದೊಡ್ಡವನಾದ ಮೇಲೆ ಏನು ಮಾಡುತ್ತೀ?" ಎಂದು ಕೇಳಿದ.

ಡಿಕೋಗೆ ವಿಮಾನ ಕ್ಲಬ್ ನೆನಪಾಯಿತು. ಆಟದ ಮೈದಾನದಿಂದ ಅವುಗಳ ಹಾರಾಟವನ್ನು ಕತ್ತೆತ್ತಿ ದಿಟ್ಟಿಸಿ ನೋಡುತ್ತಿದ್ದ. ಅವುಗಳಲ್ಲಿ ಕುಳಿತು ಪ್ರಪಂಚದ ಉದ್ದ ಅಗಲವನ್ನು ಅಳೆಯುವ, ತನ್ನ ತಂದೆ, ತಾಯಿ, ತಂಗಿ, ತಮ್ಮಂದಿರನ್ನು ಕುಳ್ಳಿರಿಸಿ ನಭೋಮಂಡಲವನ್ನು ಸುತ್ತಿಸುವ, ನಕ್ಷತ್ರಗಳನ್ನು ಕೀಳುವ ಕನಸು ಕಂಡಿದ್ದ.

"ನಾನು ಪೈಲಟ್ ಆಗಬೇಕೆಂದಿದ್ದೇನೆ" ಎಂದ. ಡೋಡಿನ್ಯೋಗೆ ಅಚ್ಚರಿ ಆಗಲಿಲ್ಲ.

"ಸರಿ ಪೈಲಟ್ ಆಗಲು ನೀನೇನು ಕಲಿಯಬೇಕೆಂದು ಗೊತ್ತೇ?"

"ಗೊತ್ತಿಲ್ಲದೇ ಏನು? ವಿಮಾನ ಬಿಡುವುದನ್ನು ಕಲಿಯಬೇಕು" ಮುಗ್ಧನಾಗಿ ಹೇಳಿದ. "ಹಾಗಲ್ಲ ಪೈಲಟ್ ಆಗಬೇಕಾದರೆ ಮೊದಲು ನಕಾಶೆ ಓದುವುದನ್ನು ಕಲಿಯಬೇಕು. ವಿಮಾನವನ್ನು ಹೇಗೆ ಎಲ್ಲಿ ಇಳಿಸಬೇಕು. ತಿರುಗಿಸಬೇಕು ಎಂದು ತಿಳಿಯಲು ಗಣಿತ, ವಿಜ್ಞಾನ ಕಲಿಯಬೇಕು ಅದಕ್ಕಾಗಿ ಶಾಲೆಗೆ ಹೋಗಬೇಕು" ಎಂದ.

"ಹಾಗಾದರೆ ಬೂಟ್‌ಪಾಲಿಷ್, ಫುಟ್‌ಬಾಲ್..."

"ಶಾಲೆಯ ಜತೆಯಲ್ಲೇ ಈ ಕೆಲಸಗಳಿಗೂ ಸಮಯ ಹೊಂದಿಸಿಕೊಳ್ಳುವ ಸಾಮರ್ಥ್ಯ ನಿನಗಿದೆ".

* * *

ಬ್ರೆಜಿಲ್‌ನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ನಾಲ್ಕು ವರ್ಷ. ಡಿಕೋ ಶಾಲೆಗೆ ಸೇರಿದಾಗ ನಕಾಶೆ ಓದುವುದನ್ನು ಗಣಿತ ಸೂತ್ರಗಳನ್ನು ಮೊದಲು ಕಲಿಯಬೇಕೆಂದು ನಿರ್ಧರಿಸಿದ್ದ. ಅದಕ್ಕೂ ಮೊದಲು ಅಕ್ಷರ, ವ್ಯಾಕರಣ, ಸಂಖ್ಯೆ, ಮಗ್ಗಿ ಕಲಿಯಬೇಕೆಂದು ಆತನಿಗೆ ತಿಳಿದಿರಲಿಲ್ಲ. ಅದನ್ನು ಕಲಿಯುವುದು ಕಾಲಹರಣ ಎಂದು ಭಾವಿಸಿದ್ದ. ಜತೆಗೆ ಜೈಲಿನಲ್ಲಿ ಕೈದಿಗಳ ಮೇಲ್ವಿಚಾರಕಿಯಾಗಿರಬೇಕಿದ್ದ ಆತನ ಶಿಕ್ಷಕಿ ಶಿಸ್ತು ಮುರಿದವರಿಗೆ ಅಂಥ ಉಗ್ರ ಶಿಕ್ಷೆ ನೀಡುತ್ತಿದ್ದದ್ದು ವ್ಯಾಸಂಗ ಡಿಕೋನಲ್ಲಿ ಉತ್ಸಾಹ ಹುಟ್ಟಿಸಲಿಲ್ಲ..

ಇದೇ ವೇಳೆ ಡಿಕೋನ ಗೆಳೆಯರು ತಮ್ಮ ಕಾಲನಿಯಲ್ಲಿ ಒಂದು ನಿಜವಾದ ಫುಟ್‌ಬಾಲ್ ತಂಡ "ಸೆವೆನ್ ಸೆಪ್ಟಂಬರ್" ಕ್ಲಬ್ ಕಟ್ಟಿದರು. ಚೆಂಡುಕೊಳ್ಳಲು ಅವರು ಕಡಲೆಕಾಯಿ ಕದ್ದು ಮಾರಿ ಹಣ ಕೂಡಿಸಿದರು. ಈ ಕ್ಲಬ್ಬನ್ನು ಬೂಟಿಲ್ಲದ ಕ್ಲಬ್ ಎಂದೂ ಕರೆಯುತ್ತಿದ್ದರು. ಏಕೆಂದರೆ ಚೆಂಡು ಕೊಳ್ಳಲೇ ಹಣವಿಲ್ಲದ ಅವರಿಗೆ ಬೂಟು ಕೊಳ್ಳಲು ಹಣವೆಲ್ಲಿಂದ ಬರಬೇಕು? ಜತೆಗೆ ಬಡವರ ಕಾಲಿನ ಸೈಜಿಗೆ ಬೂಟು ಸಿಗುವುದೂ ದುಸ್ತರ! ಆದರೆ ಈ ಬೂಟಿಲ್ಲದ ತಂಡ ಎಷ್ಟು ಬಲಿಷ್ಠವಾಗಿತ್ತೆಂದರೆ ಸುತ್ತಮುತ್ತಲಿನ ಪ್ರಸಿದ್ಧ ಕ್ಲಬ್‌ಗಳನ್ನೂ ಬಗ್ಗು ಬಡಿಯುತ್ತಿತ್ತು.

ನಾಲ್ಕು ವರ್ಷದ ಪ್ರಾಥಮಿಕ ಶಿಕ್ಷಣ ಮುಗಿಸಲು ಡಿಕೋಗೆ ಆರು ವರ್ಷ ಬೇಕಾಯಿತು. ವಿದ್ಯೆ ತಲೆಗೆ ಹತ್ತುವುದಿಲ್ಲವೆಂದು ಗೊತ್ತಾಯಿತು. ವಿಮಾನ ಹಾರಿಸುವ ಕನಸು ಎಂದೋ ಮಾಯವಾಗಿತ್ತು. ಈಗ ಡಿಕೋನ ಕನಸು ಒಂದೇ; ಫುಟ್‌ಬಾಲ್ ಆಟಗಾರನಾಗುವುದು. ಸೆಲೆಸ್ಟೀಯ ಕಟುಟೀಕೆಯ ನಡುವೆಯೂ ಆಟವನ್ನು ಮುಂದುವರಿಸಿದ. ಕೇವಲ ಹನ್ನೆರಡನೆಯ ವರ್ಷಕ್ಕೆ ಅವನ ಹೆಸರು ಬಾರೂ ಪಟ್ಟಣದ ಸುತ್ತಮುತ್ತ ಮನೆ ಮಾತಾಗಿತ್ತು. ಅವನು ಮೈದಾನಕ್ಕೆ ಬಂದನೆಂದರೆ 'ಪೆಲೆ, ಪೆಲೆ' ಎಂದು ಜನ ಲಯಬದ್ಧವಾಗಿ ಕೂಗುತ್ತಿದ್ದರು.

ಆದರೆ 'ಪೆಲೆ' ಎಂಬ ಶಬ್ದಕ್ಕೆ ಏನರ್ಥ? ಏಕೆ ಜನ ಹಾಗೆ ಕರೆದರು ಎಂಬುದು ಪೆಲೆಗೂ ಗೊತ್ತಿಲ್ಲ; ಯಾರಿಗೂ ತಿಳಿದಿಲ್ಲ. ಬ್ರೆಜಿಲ್‌ನಲ್ಲಿ ಹೆಸರುಗಳು ತುಂಬಾ ಅಗ್ಗ.

ಅದಕ್ಕೇ ಐದಾರು ಪದಗಳಿಗೆ ಕಮ್ಮಿ ಯಾರೂ ಹೆಸರಿಟ್ಟುಕೊಳ್ಳುವುದಿಲ್ಲ. ಪೆಲೆಯ ನಿಜವಾದ ಹೆಸರು ಈ ಹಿಂದೆ ಹೇಳಿದಂತೆ ಎಡ್ಸನ್ ಅರೆಂಟೆಸ್ ಡೋ ನಸಿಮೆಂಟೋ ಎಂದು. ಆದರೂ ಬೂಟಿಲ್ಲದ ಟೀಂನಲ್ಲಿ ಆಟವಾಡುವಾಗ ಜನರೆಲ್ಲಾ ಹುಚ್ಚೆದ್ದು 'ಪೆಲೆ ಪೆಲೆ' ಎನ್ನುತ್ತಲೇ ಇದ್ದರು. 'ಪೆಲೆ' ಎನ್ನುವುದಕ್ಕೆ ಆತನ ಮಾತೃಭಾಷೆ ಪೋರ್ತುಗೀಸ್‌ನಲ್ಲೂ ಅರ್ಥವಿಲ್ಲ. ಪೆಲೆ ಬೆಳೆದು ದೊಡ್ಡವನಾದ ಮೇಲೆ, ಅನೇಕಬಾರಿ ಈ ಹೆಸರು ಹೇಗೆ ಹುಟ್ಟಿತೆಂದು ಬಾರೂ ಪಟ್ಟಣದಲ್ಲಿ ವಿಚಾರಿಸಿದ್ದಾನೆ. ಆ ಹೆಸರು ಒಂದು ದಿನ ಇದ್ದಕ್ಕಿದಂತೆ ಹುಟ್ಟಿ ಅವನಿಗೆ ಅಂಟಿಕೊಂಡಿತು ಎಂಬ ವಿಚಾರ ಬಿಟ್ಟರೆ ಬೇರೆ ಮಾಹಿತಿ ಸಿಕ್ಕಿಲ್ಲ. ಕೆಲವರ ಪ್ರಕಾರ ಆತ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಚೆಂಡಿಗೆ ಕೈ ತಗುಲಿದರೆ ಜನ 'ಪೆ..ಲೆ' ಎಂದು ಕೂಗುತ್ತಿದ್ದರು. ಪೆಲೆ ಎಂದರೆ ಪಾದ ಎಂದೂ ಅರ್ಥ ಬರುತ್ತದಂತೆ. ಆದರೆ ಆ ಅರ್ಥಕ್ಕೂ ಪೆಲೆ ಎಂದು ಮನುಷ್ಯನನ್ನು ಸಂಬೋಧಿಸುವುದಕ್ಕೂ ಎಲ್ಲಗೆಲ್ಲಿಯ ಸಂಬಂಧವೋ ತಿಳಿಯದು. ಆದರೆ ಈ ಅಡ್ಡಹೆಸರಿನ ಬಗ್ಗೆ ಪೆಲೆಗೆ ಅಸಹನೆಯಿತ್ತು. ಶಾಲೆಯಲ್ಲಿ ಯಾರಾದರೂ 'ಪೆಲೆ' ಎಂದು ಕರೆದರೆ ಕಾಲುಕರೆದು ಜಗಳಕ್ಕೆ ಹೋಗುತ್ತಿದ್ದ. ಮೊದಲು ಅಸಹನೆ ವ್ಯಕ್ತಪಡಿಸುತ್ತಿದ್ದ ಡಿಕೋ ಕಡೆಗೆ ಪ್ರೇಕ್ಷಕರ ಈ ಪ್ರೀತಿಯ ಹೆಸರನ್ನು ಅಂಗೀಕರಿಸಬೇಕಾಯಿತು. ಕೊನೆಗೆ ಪ್ರಪಂಚದಾದ್ಯಂತ ಈ ಹೆಸರಿನಿಂದಲೇ ಖ್ಯಾತನಾದದ್ದು ವಿಚಿತ್ರ!

ಏನೇ ಆಗಲಿ ಒಳ್ಳೆಯ ಹೆಸರು ಮನುಷ್ಯನಿಗೆ ಅನ್ವರ್ಥವಾಗದಿರಬಹುದು. ಆದರೆ ಅರ್ಥಪೂರ್ಣ ಮನುಷ್ಯ ಹೆಸರಿಗೊಂದು ಮೌಲ್ಯ ನೀಡಬಲ್ಲ. ಈಗ 'ಪೆಲೆ' ಎಂದರೆ ಕೌಶಲ್ಯ ಹಾಗೂ ಪರಿಪೂರ್ಣ ಸಾಕರ್ ಆಟದ ಸಂಕೇತ. (ಕೆಲವರು ಪೀಲೆ ಎಂದೂ ಉಚ್ಚರಿಸುತ್ತಾರೆ.)

ಪೆಲೆ ಬಾರೂ ಪಟ್ಟಣದ ಸುತ್ತಮುತ್ತ ಜನಜನಿತವಾಗಿದ್ದರೂ ಬಡತನ ಕಳೆಯಲಿಲ್ಲ. ಬೂಟ್‌ಪಾಲಿಷ್ ಮಾಡುವುದರ ಜತೆಗೆ ರೈಲ್ವೆ ನಿಲ್ದಾಣದಲ್ಲಿ ಈಗ ಬೇಯಿಸಿದ ಮಾಂಸದ ಚೂರುಗಳನ್ನು ಮಾರಿ ಆತ ಹಣ ಸಂಪಾದಿಸುತ್ತಿದ್ದ. ಇದೇ ವೇಳೆಗೆ ಬಾರೂ ಪಟ್ಟಣದ ಮೇಯರ್ ಸ್ಥಳೀಯ ಕ್ಲಬ್‌ಗಳ ನಡುವೆ ಪಂದ್ಯವೇರ್ಪಡಿಸಿದ್ದ. ಪೆಲೆಯ ತಂಡ ಮಿಕ್ಕೆಲ್ಲ ತಂಡಗಳನ್ನು ಬಗ್ಗುಬಡಿದು ಟ್ರೋಫಿ ಗೆದ್ದುಕೊಂಡಿತು.

ಅಂದು ವಿಜಯೋತ್ಸವ. ಹುಚ್ಚೆದ್ದು ಜನ ಪೆಲೆಯನ್ನು ಎತ್ತಿ ಕುಣಿದರು. ಗಳಿಸಿದ ಹಣವನ್ನು ತಂದು ತಾಯಿಯ ಮುಂದೆ ಹಿಡಿದ. ತಾಯಿ ನಕ್ಕಳಷ್ಟೆ !! ಪೆಲೆ ಅಲ್ಲಿಂದ ಪೂರ್ಣಾವಧಿ ಸಾಕರ್‌ಗೆ ಪದಾರ್ಪಣೆಮಾಡಿದ.

ಪೆಲೆ ಹದಿಮೂರು ವರ್ಷದವನಾಗಿದ್ದಾಗ ಬಾರೂನ ಪ್ರಸಿದ್ಧ ಬಾಕ್ಟಿನೋ ಕ್ಲಬ್‌ಗೆ ಸೇರ್ಪಡೆಯಾದ. ಬ್ರೆಜಿಲಿನ ಸಾಕರ್ ಇತಿಹಾಸದಲ್ಲಿ ಸುಪ್ರಸಿದ್ಧ ಹೆಸರು ವಾಲ್ಟೆಮರ್ ಡೀ ಬ್ರಿಟೋ. ಈತ ಪೆಲೆ ತಂಡಕ್ಕೆ ಕೋಚ್ ಆಗಿ ಬಂದ. ಈ ಗುರು ತನ್ನ ಪ್ರತಿಭೆಯನ್ನೆಲ್ಲಾ

ಅವನಿಗೆ ಧಾರೆ ಎರೆದ. ಪೆಲೆಯ ಪ್ರಸಿದ್ಧ ಕಿಕ್ 'ಬೈಸಿಲ್ಲೆಟಾ' ಅಥವಾ ಬೈಸಿಕಲ್ ಕಿಕ್ ಕಲಿಸಿದವನೂ ಈತನೇ. ಸುಮಾರು ದಿನಗಳಾದ ಮೇಲೆ ಬ್ರಿಟೋ ಮತ್ತೊಂದು ಪಟ್ಟಣಕ್ಕೆ ಹೊರಟು ಹೋದ. ಅಷ್ಟೊತ್ತಿಗೆ ಪೆಲೆ ಸುತ್ತಮುತ್ತ ಮತ್ತಷ್ಟು ಜನಪ್ರಿಯನಾಗಿಬಿಟ್ಟಿದ್ದ.

ಪೆಲೆಗೆ ಹದಿನೈದು ವರ್ಷವಾದಾಗ ಬ್ರಿಟೋ ಮತ್ತೆ ಬಾರೂಗೆ ಬಂದ. ರಿಯೋ ಡಿ ಜೆನೈರೋ ಪಟ್ಟಣದ ಸುಪ್ರಸಿದ್ಧ ಕ್ಲಬ್ ಸ್ಯಾಂಟೋಸ್. ಈ ಕ್ಲಬ್‌ಗೆ ಪ್ರಪಂಚದ ಬಹುತೇಕ ಶ್ರೇಷ್ಠ ಆಟಗಾರರನ್ನು ತಯಾರು ಮಾಡಿದ ಹೆಗ್ಗಳಿಕೆಯಿದೆ. ಅಲ್ಲಿಗೆ ಪೆಲೆಯನ್ನು–ತಾಯಿಯ ವಿರೋಧದ ನಡುವೆಯೂ ಬ್ರಿಟೋ ಕರೆದೊಯ್ದ.

ಇಲ್ಲಿಂದ ಪೆಲೆಯ ಆಟದ ಜೀವನ ಊರ್ಧ್ವಮುಖವಾಗಿ ಏರತೊಡಗಿತು.

ಆದರೆ ಪೆಲೆ ಎಷ್ಟು ಪ್ರತಿಭಾವಂತ ಆಟಗಾರನೋ ಅಂತರಾಳದಲ್ಲಿ ಅಷ್ಟೇ ಹುಂಬ. ತಾಯಿಯ ಪ್ರಭಾವದಿಂದ ಆತ ಬಿಡಿಸಿಕೊಳ್ಳಲು ಬಹಳ ಹೆಣಗಾಡಿದ. ಅನೇಕ ಬಾರಿ ಸ್ಯಾಂಟೋಸ್ ಕ್ಲಬ್ ಬಿಟ್ಟು ಬಾರೂಗೆ ವಾಪಸ್ಸು ಬರಲು ಹವಣಿಸಿದ. ಆದರೆ ಅಲ್ಲಿನ ವಾಚ್‌ಮನ್ ಅವನನ್ನು ಸಂತೈಸಿ ಆಟದ ಕಡೆ ಅವನ ಗುರಿಯನ್ನು ತಿರುಗಿಸಿದ.

ಸ್ಯಾಂಟೋಸ್‌ಗೆ ಸೇರಿದ ಎರಡೇ ವರ್ಷಗಳಲ್ಲಿ ಪೆಲೆ ಅದ್ಭುತ ಆಟಗಾರನಾದ. ತನ್ನ ಹದಿನೇಳನೇ ವರ್ಷಕ್ಕೆ ವಿಶ್ವಕಪ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಆಯ್ಕೆಯಾದ ಎಂದರೆ ಅವನ ಪ್ರತಿಭೆ ಊಹೆಗೆ ಬಿಟ್ಟಿದ್ದು.

ಜೂನ್ ೧೯೫೮; ಸ್ವೀಡನ್‌ನ ನ್ಯಾ ಉಲ್ಲೇವಿ ಕ್ರೀಡಾಂಗಣ; ವಿಶ್ವಕಪ್ ಫೈನಲ್ ಪಂದ್ಯ ಆರಂಭ. ಬ್ರೆಜಿಲ್‌ನ ಮೊದಲ ಪಂದ್ಯ ಬಲಿಷ್ಠ ರಷ್ಯಾ ತಂಡದ ವಿರುದ್ಧ. ಬ್ರೆಜಿಲ್ ತಂಡ ಮೈದಾನಕ್ಕೆ ಬಂದಾಗ ಹದಿನೇಳು ವರ್ಷದ ಹುಡುಗನನ್ನು ಕಂಡು ಪ್ರೇಕ್ಷಕರು ದಂಗಾದರು. ಇದೇನು ವಿಶ್ವಕಪ್ ಪಂದ್ಯವನ್ನು ಮಕ್ಕಳಾಟ ಎಂದು ಭಾವಿಸಿ ಇಂಥ ಹಸುಳೆಯನ್ನು ಬ್ರೆಜಿಲ್ ಕರೆ ತಂದಿತೋ ಎಂದು ಮರುಗಿದರು ಜನ. ಆದರೆ ಆಟ ಪ್ರಾರಂಭವಾದ ನಂತರ ಆ "ಹಸುಳೆ" ತನ್ನ ಚಿಗರೆ ಓಟದಿಂದ ಎಲ್ಲರನ್ನೂ ದಂಗು ಬಡಿಸಿಬಿಟ್ಟ. ಆಟ ಮುಗಿವ ವೇಳೆಗೆ ಪ್ರೇಕ್ಷಕರ ಕಣ್ಮಣಿಯಾಗಿಬಿಟ್ಟ. ಬ್ರೆಜಿಲ್ ಆ ಬಾರಿ ವಿಶ್ವಕಪ್ ಗೆದ್ದಾಗ ಪೆಲೆ ಏಳು ಪಂದ್ಯಗಳಲ್ಲಿ ಹತ್ತು ಗೋಲು ಬಾರಿಸಿಬಿಟ್ಟಿದ್ದ. ಪ್ರಸಿದ್ಧ ತಂಡವಾದ ಫ್ರಾನ್ಸ್ ಮೇಲೆ ಮೂರು ಗೋಲು ಹೊಡೆದು ತನ್ನ ಕೌಶಲ್ಯವನ್ನು ಪ್ರದರ್ಶಿಸಿದ್ದ. ಫಯನಲ್ ಪಂದ್ಯದಲ್ಲಿ ಅಮೋಘವಾದ ಗೋಲು ತಂದಿತ್ತಾಗ ಪಂದ್ಯ ಮುಗಿದ ನಂತರ ಎದುರಾಳಿ ಸ್ವೀಡನ್ ತಂಡದ ಆಟಗಾರ ಸಿಗ್ವಾರ್ಡ್ ಪಾರ್ಲಿಂಗ್ "ಪೆಲೇ ಐದನೇ ಗೋಲು ಹೊಡೆದಾಗ ಅದನ್ನು ಕಂಡು ಚಪ್ಪಾಳೆ ತಟ್ಟಿ ಅಭಿನಂದಿಸುವ ಬಯಕೆ ಬಂತು. ಸಂಯಮ ತಂದುಕೊಂಡು ಹಾಗೆ ಮಾಡಲಾಗಲಿಲ್ಲ" ಎಂದು ಮೆಚ್ಚುಗೆ ಸೂಚಿಸಿದ. ಪೆಲೆಯ ಈ ಅಮೋಘ ಸಾಕರ್ ಪ್ರತಿಭೆಯನ್ನು ಮಾನ್ಯ

ಮಾಡಲು ಹದಿನಾರುವರ್ಷ ಒಂಬತ್ತು ತಿಂಗಳು ವಯಸ್ಸಿನ ಆಟಗಾರನನ್ನು ಬ್ರೆಜಿಲ್ ಸರ್ಕಾರವು 'ದೇಶದ ಸಂಪತ್ತು' (ನ್ಯಾಷನಲ್ ಟ್ರೆಷರ್) ಎಂದು ಘೋಷಿಸಿತು.

ಅನಂತರ ೧೯೬೨ರಲ್ಲಿ ವಿಶ್ವಕಪ್ ನಡೆಯುವ ವೇಳೆಗೆ ಪೆಲೆ ವಿಶ್ವದ ನೆಚ್ಚಿನ ಆಟಗಾರನಾಗಿದ್ದ. ಇಡೀ ಟೂರ್ನಿಯಲ್ಲಿ ಎದುರಾಳಿಗಳು ಅವನನ್ನು ಕಟ್ಟಿಹಾಕಿದ್ದರಿಂದ ಗೋಲು ಹೊಡೆದದ್ದು ಕಡಿಮೆ. ಆದರೆ ಬ್ರೆಜಿಲ್ ಆಟಗಾರರು ಎದುರಾಳಿಗಳ ತಂತ್ರವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡು ಎರಡನೇ ಬಾರಿಗೆ ಸತತವಾಗಿ ಚಾಂಪಿಯನ್ ಆದರು .

ಆದರೆ ೧೯೬೬ರಲ್ಲಿ ಬ್ರೆಜಿಲ್ ತಂಡದ ಆಟ ತೀರಾ ನಿರಾಶಾದಾಯಕವಾಗಿತ್ತು. ಜತೆಗೆ ಪೆಲೆಗೆ ಕಾಲು ಉಳುಕಿ ಆತ ಆಟವಾಡಲೇ ಇಲ್ಲ. ಆಡಿದ ಒಂದೆರಡು ಪಂದ್ಯಗಳಲ್ಲಿ ಪೆಲೆಯನ್ನು ಕ್ರೀಡಾಸಾಮರ್ಥ್ಯದಿಂದ ಎದುರಿಸುವ ಬದಲು ಜೆಕೋಸ್ಲಾವಾಕಿಯ ತಂಡ ಅವನನ್ನು ಒದೆದು ಕಾಲು ಮುರಿಯಿತು.

೧೯೬೬ರ ನಂತರ ಊರಿಗೆ ಬಂದಾಗ ಇನ್ನು ಮುಂದೆ ಸಾಕರ್ ಆಡುವುದೇ ಬೇಡವೆಂದು ಪೆಲೆ ನಿರ್ಧರಿಸಿದ್ದ. ಕ್ರೀಡಾಮನೋಭಾವ ಇಲ್ಲದ ಆಟಗಾರರ ಎದುರು ಕಾಲು ಮುರಿದುಕೊಂಡು ನರಳುವ ಬದಲು ಗಳಿಸಿದ ಹಣದಲ್ಲಿ ಸುಮ್ಮನಿರುವುದೇ ಮೇಲು ಎಂದು ಭಾವಿಸಿದ್ದ. ಆತನ ಕಣ್ಣೆದುರು ಆತನಿಗಿಂತ ಪ್ರತಿಭಾಶಾಲಿಯಾದ ಆಟಗಾರರು ಗಾಯಗೊಂಡು ಹೇಳಹೆಸರಿಲ್ಲದೆ ಮರೆಯಾದನ್ನು ಪೆಲೆ ಕಂಡಿದ್ದ. ಎದುರಾಳಿಗಳ ಮೇಲೆ ಎಂದೂ ಏರಿಹೋಗದ ಆತ ಇತರರು ಒದೆಯುವುದನ್ನು ಸಹಿಸಿಕೊಂಡಿರುತ್ತಿದ್ದ. ಆದರೆ ೧೯೬೯ರಲ್ಲಿ ಬ್ರೆಜಿಲ್‌ನಿಂದ ಮುಂದಿನ ವಿಶ್ವಕಪ್‌ನಲ್ಲಿ ಆಡಲು ಕರೆ ಬಂತು. ಅನೇಕ ಅಂಶಗಳು ಪೆಲೆಯ ಮೇಲೆ ಒತ್ತಡ ತಂದವು. ಈ ಬಾರಿ ಗೆದ್ದರೆ ಮೂರು ಬಾರಿ ಚಾಂಪಿಯನ್ ಆದ ಕಾರಣಕ್ಕಾಗಿ ವಿಶ್ವಕಪ್ ಜೂಲಿಯಸ್ ರಿಮೆಟ್ ಟ್ರೋಫಿ ಶಾಶ್ವತವಾಗಿ ಬ್ರೆಜಿಲ್‌ನಲ್ಲಿ ಉಳಿಯುತ್ತಿತ್ತು. ಪೆಲೆ ತನ್ನ ಹಿಂದಿನ ನಿರ್ಧಾರವನ್ನು ಬದಲಿಸಿ ಆಡಲು ಒಪ್ಪಿಕೊಂಡ.

೧೯೭೦ರ ಮೆಕ್ಸಿಕೋ ವಿಶ್ವಕಪ್ ಪೆಲೆಯ ಪಾಲಿಗೆ ಮಾತ್ರವಲ್ಲ ಇಡೀ ಸಾಕರ್ ಇತಿಹಾಸದಲ್ಲಿಯೇ ಸ್ಮರಣೀಯ ಟೂರ್ನಿ ಎನಿಸಿತು.

ಪೆಲೆ ಫೈನಲ್ ಪಂದ್ಯದಲ್ಲಿ ಇಟಲಿ ಮೇಲೆ ಗೋಲು ಬಾರಿಸಿ ವಿಜಯ ತಂದಿತ್ತ. ಹುಚ್ಚೆದ್ದ ಪ್ರೇಕ್ಷಕರು ಅವನ ಮೈಮೇಲಿನ ಒಂದಿಂಚು ಬಟ್ಟೆಯನ್ನು ಬಿಡದೆ ಹರಿದು ಸ್ಮರಣಿಕೆಯಂತೆ ಇಟ್ಟುಕೊಂಡರು. ಈ ವೇಳೆಗಾಗಲೇ ಒಂದು ಸಾವಿರಕ್ಕೂ ಮಿಕ್ಕಿ ಗೋಲು ಗಳಿಸಿದ್ದ ಆತ ಅಜರಾಮರನಾದ. ಮುಂದೆ, ೧೯೭೬ರಲ್ಲಿ ಪ್ರಥಮ ದರ್ಜೆ ಆಟದಿಂದ ನಿವೃತ್ತನಾದ.

ಇಲ್ಲಿ ಪೆಲೆ ಆಟದ ವೈವಿಧ್ಯ, ಚಾಕಚಕ್ಯತೆ ಎಷ್ಟು ಮುಖ್ಯವೋ ಆತ ನಡೆದು ಬಂದ ದಾರಿ ಸಹ ಅಷ್ಟೇ ಅತ್ಯಮೂಲ್ಯ. ಆತ್ಮಗೌರವವನ್ನು ಕಾಪಾಡಿಕೊಂಡು ಬದುಕಿ

ಯಶಸ್ಸಿನ ಉತ್ತುಂಗಕ್ಕೇರಿದ ಪೆಲೆಯ ಸಾಹಸಗಾಥೆ ನಿಜಕ್ಕೂ ರೋಮಾಂಚನ ಹುಟ್ಟಿಸುತ್ತದೆ. ಆತನ ಆಟದ ಕೌಶಲ್ಯ ಅಸಾಧಾರಣ. ಚೆಂಡಿನ ಮೇಲಿನ ನಿಯಂತ್ರಣ, ಎದುರಾಳಿಗಳನ್ನು ವಂಚಿಸುವ, ಅಡೆ ತಡೆಯನ್ನು ಭೇದಿಸುವ ತಂತ್ರದಲ್ಲಿ ಆತನನ್ನು ಮೀರಿಸುವವರಿರಲಿಲ್ಲ. ಚಿಗರೆಯಂತೆ ಓಡಬಲ್ಲ. ತಟ್ಟನೆ ನಿಲ್ಲಬಲ್ಲ, ಅವನ ಚಲನೆಯಗತಿಯನ್ನು ಅರ್ಥಮಾಡಿಕೊಳ್ಳುವುದು ಎದುರಾಳಿಗಳಿಗೆ ಕಷ್ಟವಿತ್ತು. ಆತ ತನ್ನ ಕಾಲದ ವಿಶ್ವದ ಅತ್ಯುತ್ತಮ ಕ್ರೀಡಾಪಟುವಾಗಿದ್ದ. ಸಾಕರ್ ಮೈದಾನದಲ್ಲಿ ಓಡಿದಷ್ಟೇ ವೇಗವಾಗಿ ಒಲಿಂಪಿಕ್ ಆಟೋಟಗಳಲ್ಲಿ ಓಡಿದ್ದರೆ ನೂರು ಮೀಟರ್ ಸ್ಪರ್ಧೆಯಲ್ಲಿ ಮೊದಲಿಗನಾಗಿರುತ್ತಿದ್ದ. ಆತ ಚೆಂಡನ್ನು ನಿಯಂತ್ರಿಸಿ ಗೋಲುಪೆಟ್ಟಿಗೆ ಆವರಣಕ್ಕೆ ನುಗ್ಗಿ ಗೋಲು ಗಳಿಸುವಷ್ಟೇ ಸುಲಭವಾಗಿ ಹೊರ ಆವರಣದಿಂದ ಚೆಂಡನ್ನು ಕಳುಹಿಸುತ್ತಿದ್ದ. ಕರಾರುವಾಕ್ಕಾಗಿ ಮತ್ತು ಬಲವಾಗಿ ಚೆಂಡನ್ನು ಒದೆಯುವಷ್ಟೇ ಸಾಮರ್ಥ್ಯ ಎದರಾಳಿಗಳ ಚಲನೆಯನ್ನು ಊಹಿಸಿ ಚೆಂಡು ಕಸಿಯುವಲ್ಲೂ ಇತ್ತು. ನರ್ತಕಿಯೊಬ್ಬಳ ಲಾಸ್ಯವನ್ನು ನೆನಪಿಸುವಂತೆ ಬಾಗಿ, ಬಳುಕಿ, ಎಗರಿ ಚೆಂಡಿನ ಜೊತೆ ಆಟವಾಡುವ ಸೊಗಸನ್ನು ನೋಡಿಯೇ ಪ್ರೇಕ್ಷಕರು ಹುಚ್ಚೆದ್ದು ಕುಣಿಯುತ್ತಿದ್ದರು. ಆಟದ ಮಯದಾನವನ್ನು ನರತ್ಯ ವೇದಿಕೆಯಗಿ ಅಥವಾ ಸಂಗೀತ ಕಚೇರಿಯಾಗಿ ಕಣ್ಣು–ಕಿವಿಗೆ ಮುದ ನೀಡಬಲ್ಲ ಪರಿಪೂರ್ಣ ಆಟಗಾರ ಅವನು. ಗಾಳಿಯಲ್ಲಿ ಮೇಲಕ್ಕೆ ಹಾರಿ ನೆಲಕ್ಕೆ ಸಮಾನಾಂತರಾಗಿ ದೇಹವನ್ನು ಚಾಚಿ, ತಲೆಯನ್ನು ಭೂಮಿಯ ಕಡೆ ತಿರುಗಿಸಿ ಕಾನ್ನು ಮೇಲೆ ತಂದು ಚೆಂಡನ್ನು ಹಿಮ್ಮುಖವಾಗಿ ಒದ್ದು ಗೋಲುಗಳಿಸುವ ಬೈಸೆಲ್ಲೆಟಾ ಕಿಕ್ ನೋಡಲು ಜನ ಹರಕೆ ಹೊರುತ್ತಿದ್ದರು. ಅಪಾಯಕಾರಿಯಾದ ಕಿಕ್ ಅನ್ನು ಸಲೀಸಾಗಿ ನಿರ್ವಹಿಸುತ್ತಿದ್ದ ಅವನ ಪ್ರತಿಭೆಗೆ ಮಾರುಹೋಗದವರಿರಲಿಲ್ಲ. ಆತನ ಸಾವಿರ ಚಿಲ್ಲರೆ ಗೋಲುಗಳೂ ಅಷ್ಟೇ ಸುಂದರವಾದ ಚೇತೋಹಾರಿ ಕತೆಗಳನ್ನು ಹೇಳುತ್ತವೆ. ಆತನ ಕೀರ್ತಿಗೊಂದು ನಿದರ್ಶನ ಇಲ್ಲಿದೆ. ವೃತ್ತಿಪರ ಆಟಗಾರನಾಗಿ ಹೇರಳ ಹಣ ಸಂಪಾದಿಸಿದ ಪೆಲೆ ಪ್ರತಿನಿಧಿಸುತ್ತಿದ್ದ ಸ್ಯಾಂಟೋಸ್ ಕ್ಲಬ್ ೧೯೬೭ರಲ್ಲಿ ನೈಜೀರಿಯಾ ದೇಶಕ್ಕೆ ತೆರಳಿತ್ತು. ಅಲ್ಲಿ ಅಂತರ್ಯುದ್ಧ ನಡೆಯುತ್ತಿದ್ದ ಸಮಯ. ಪೆಲೆಯ ಆಟ ನೋಡಲು ಅನುಕುಲವಾಗುವಂತೆ ಎರಡು ದಿನಗಳ ಕದನ ವಿರಾಮ ಘೋಷಣೆ ಜಾರಿಯಾಯಿತು! ಪೆಲೆಯ ಪ್ರತಿಭೆಯನ್ನು ಹೇಳುತ್ತಾ ಹೋದರೆ ಅದೊಂದು ದೊಡ್ಡ ಹೊತ್ತಿಗೆಯಾಗುತ್ತದೆ.

ಪೆಲೆಯ ವೈಯಕ್ತಿಕ ಬದುಕು ಸಹ ಅಷ್ಟೇ ಅನುಕರ್ಣೀಯುವಾದದ್ದು. ಯುವಸಮೂಹದ ರೋಲ್ ಮಾಡೆಲ್ ಆತ. ಅಪಾರವಾದ ಕೀರ್ತಿ, ಹೇರಳ ಹಣ ಸಂಪಾದಿಸಿದರೂ ದುಶ್ಚಟಗಳಿಗೆ ಬಲಿಯಾಗದ, ಯುವಕರಿಗೆ ಆದರ್ಶಪ್ರಾಯನಾದ ಆಟಗಾರ. ೧೯೭೭ರಲ್ಲಿ ವೃತ್ತಿಪರ ಆಟಕ್ಕೆ ವಿದಾಯ ಹೇಳಿದ ಪೆಲೆ ನಂತರ ಸಾಕರ್ ಜನಪ್ರಿಯಗೊಳಿಸಲು ವಿಶ್ವ ಸಂಚಾರ ಮಾಡಿದ ಶಾಂತಿದೂತ. ಆತನನ್ನು ಹುಡುಕಿಬಂದ

ಅಂತರಾಷ್ಟ್ರೀಯ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. ಫ್ರಾನ್ಸ್‌ನ ಲಾ'ಎಕ್ವಿಪ್ ಕ್ರೀಡಾ ಪತ್ರಿಕೆಯು ಮತ್ತು ೧೯೯೭ ರಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಆತನನ್ನು ೨೦ನೇ ಶತಮಾನದ ಮಹಾನ್ ಕ್ರೀಡಾಪಟು ಎಂದು ಘೋಷಿಸಿದವು. ಅಂತಾರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ೨೦೦೦ನೇ ಇಸವಿಯಲ್ಲಿ ಪೆಲೆ ಮತ್ತು ಅರ್ಜೆಂಟೀನಾದ ಡೀಗೋ ಮ್ಯಾರಡೋನಾ ಅವರನ್ನು 'ಶತಮಾನದ ಫಿಫಾ ಆಟಗಾರರು' ಎಂದು ಗೌರವಿಸಿತು. ೨೦೧೪ರಲ್ಲಿ ಬ್ರೆಜಿಲ್‌ನ ಸ್ಯಾಂಟೋಸ್‌ನಲ್ಲಿ 'ಪೆಲೆ ಮ್ಯೂಸಿಯಂ' ಉದ್ಘಾಟನೆಯಾಯಿತು.

ಪೆಲೆ ಎಂದರೆ ಈಗಲೂ ನೆನಪಿಗೆ ಬರುವುದು ಗುಂಗುರು ಕೂದಲಿನ ಹುಡುಗ. ಬೂಟ್‌ಪಾಲಿಷ್ ಮಾಡಿ ಹಣಗಳಿಸುತ್ತಿದ್ದ, ಆತ್ಮಸ್ಥೈರ್ಯ ತುಂಬಿದ್ದ ಸ್ವಾಭಿಮಾನಿ ಹುಡುಗ. ತೂತುಬಿದ್ದ ಛಾವಣಿಯ ಮನೆಯಲ್ಲಿ ಮಲಗಿ ಕಣ್ಣು ತುಂಬ ನಕ್ಷತ್ರಗಳನ್ನು ತುಂಬಿಕೊಂಡ ಹುಡುಗ. ಆಸ್ಪತ್ರೆಯಲ್ಲಿ ಕುಳಿತು ತನ್ನ ತಂದೆಯ ಜತೆ ವಿಮಾನ ಹಾರಿಸುವ ಆಸೆ ವ್ಯಕ್ತಪಡಿಸಿದ ಮುಗ್ಧಹುಡುಗ. ಹದಿನೇಳನೇ ವಯಸ್ಸಿಗೆ ವಿಶ್ವಕಪ್ ರೋಮಾಂಚನವನ್ನು ಪಡೆದ ಹಸುಳೆ. ಇದಾದ ಮೇಲೆ ಆತ ಕಲಾತ್ಮಕ ಆಟದ ಮೂಲಕ ಗೋಲು ಗಳಿಸುತ್ತಾ ದಾಖಲೆ ನಿರ್ಮಿಸುತ್ತಾ, ಸುಪ್ರಸಿದ್ಧ ಆಟಗಾರನಾಗಿ ಸೃಷ್ಟಿಸಿದ ಸಾವಿರಾರು ರೋಮಾಂಚಕ ಕ್ಷಣಗಳು!!

❑

**ಓದು ಪಠ್ಯ :**

## ಕರಡಿಯ ಕುಣಿತ

– ದ.ರಾ. ಬೇಂದ್ರೆ

ಕಬ್ಬಿಣ ಕೈ ಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ಯಾಂವ ಬಂದಾನ ।
ಗುಣು ಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ ।

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ?
'ಧಣಿಯರ ಮನಿ ಮಉಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು' ಅಂದಾನ

ತ್ರೇತಾಯುಗದ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕಿನ ಕಂಡಾನ
ಜಾಂಬುನದಿ ದಂಡೆಯ ಜಂಬು ನೇರಳೆ ಹಣ್ಣು
ಕೃತಯುಗದ ಕೊನೆಗಿಂವಾ ಉಂಡಾನ

ಬಂದಾರೆ ಬರ್ರೆವ್ವ ಕಂದನ ತರೆವ್ವ
ಅಂಜೀಕಿ ಗಿಂಜೀಕಿ ಕೊಂದಾನ
ರೋಮ ರೋಮಗಳಲ್ಲಿ ಭೀಮರಕ್ಷೆಯ ಬಲ
ಕೊರಳಾಗ ಕಟ್ಟಿರಿ ಬಂದಾನ

‘ಕುಣಿಯಲೆ ಮಗನ’ ನೀ ಅನ್ನೊದೊಂದೇ ತಡ
ತನ್ನನ ತಾನನ ತಂದಾನ
ಮುದ್ದು ಕೂಸಿನ ಹಾಗೆ ಮುಸು ಮುಸು ಮಾಡುತ್ತ
ಕುಣಿದಾನ ಕುಣಿತವ ಛಂದಾನ

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು
ನಡೆದಾನ ಪಡೆದಾನ ಬಂದಾನ
‘ಕುಣಿಸುವವರ ಹೊಟ್ಟೆ ತಣ್ಣಗಾಗಲಿ’ ಎಂದು
ಮುಗಿಲಿಗೆ ಕೈ ಮುಗಿದು ನಿಂದಾನ

ಮನಬಲ್ಲ ಮಾನವ ಕುಣಿದಾನ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದಾನ
ಕರಡಿಯ ಹೆಸರೇಲೆ ಚರಿತಾರ್ಥನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ

ಈ ಮನುಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ
ಕರಡೀ ಕುಣಿತಕ್ಕಿಂತ ನರರ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ

❑

# ೪. ಸಂಕೀರ್ಣ

**ಆಶಯ :**

## ಪೆರಿಯಾರ್ – ಸಮಾಜ ವಿಜ್ಞಾನಿಯ ಮಾತುಗಳು

– ತಮಿಳು ಮೂಲ : **ಡಾ. ಎನ್. ವೇಲುಸಾಮಿ**

ಕನ್ನಡಕ್ಕೆ : **ಡಾ. ಶ್ರೀಕೃಷ್ಣಭಟ್ ಅರ್ತಿಕಜೆ**

ಸತ್ಯವನ್ನು ಕಂಡ ಮಹಾಜ್ಞಾನಿಗಳು ಹಂತ ಹಂತವಾಗಿ ಎದುರಿಸಿದ ಪರೀಕ್ಷೆಗಳ, ತೊಂದರೆಗಳ ಕುರಿತು ಚರಿತ್ರೆಯಲ್ಲಿ ದಾಖಲಾಗಿದ್ದರೂ ಯಾವ ಮಹಾವ್ಯಕ್ತಿಯೂ ಆ ತೊಂದರೆಗಳನ್ನು ತಾನು ಸತ್ಯವನ್ನು ಹೇಳಿದುದಕ್ಕೆ ವಿರುದ್ಧವಾದ ಎಚ್ಚರಿಕೆಯೆಂದು ಪರಿಗಣಿಸಿ ಭಯದಿಂದ ಹಿಮ್ಮೆಟ್ಟಲಿಲ್ಲ. ಅಂತಹ ಧೀರರ ಪರಂಪರೆಯಲ್ಲಿ ಬಂದವರು ಪೆರಿಯಾರ್.

ವೈಜ್ಞಾನಿಕ ತಿಳುವಳಿಕೆಯು ಜನರಲ್ಲಿ ಒಗ್ಗಟ್ಟನ್ನುಂಟು ಮಾಡಲು ಪ್ರಯತ್ನಿಸುವುದು. ಆದರೆ ಧಾರ್ಮಿಕ ಜ್ಞಾನವು ಜನರನ್ನು ಪರಸ್ಪರ ಪ್ರತ್ಯೇಕಿಸುತ್ತದೆ ಎಂಬುದಾಗಿ ಹೇಳಿದ ಭಾರತದ ಗುರುದೇವ ಕವಿ ರವೀಂದ್ರನಾಥ ಠಾಕೂರರ ಹೇಳಿಕೆಯನ್ನೇ ದೇಶದ ಮೂಲೆಮೂಲೆಗೆ ಹೋಗಿ ಪ್ರತಿಧ್ವನಿಸುವಂತೆ ಮಾಡಿದವರು ಪೆರಿಯಾರ್.

❑

# ೪.೧ ಕೋಕಾ ಕೋಲಾ

**– ಅಶೀಶ್ ನಂದಿ**
ಕನ್ನಡಕ್ಕೆ : **ನಯನಾ ಕಾಶ್ಯಪ್**

ಕೋಕಾ ಕೋಲಾ ಫಿಲಾಸಫಿಯ ಮೊದಲ ಸೂತ್ರ ಏನೆಂದರೆ – ಮತ್ತೊಂದು ಕೋಲಾ ಮಾತ್ರವೇ ಕೋಕಾಕೋಲಾಕ್ಕೆ ಬದಲಿಯಾಗಬಲ್ಲದು. ಅದು, ಆರೋಗ್ಯದ ಬಗ್ಗೆ ಕಾಳಜಿ ಸೂಚಿಸುವ 'ಡಯೆಟ್ ಕೋಲಾ' ಆದೀತು, ಅಥವಾ ಮತ್ತಷ್ಟು ಸೂಕ್ಷ್ಮ ಸ್ವಾಧಾನುಭೂತಿ ಸೂಚಿಸುವ 'ಪೆಪ್ಸಿ ಕೋಲಾ'ವೂ ಆದೀತು – ಒಟ್ಟಿನಲ್ಲಿ, ಯಾವುದಾದರೊಂದು ಕೋಲಾವೇ ಕೋಕಾಕೋಲಾಕ್ಕೆ ಬದಲಿಯಾಗಬಹುದು – ಅಷ್ಟೆ. ಒಮ್ಮೆ ಕೋಲಾ ಪ್ರಪಂಚಕ್ಕೆ ತೆರೆದುಕೊಂಡ ಯಾವುದೇ ಸಮುದಾಯದ ಬದುಕು, ಬಳಿಕ, ಕೋಲಾದ ಯಾವುದಾದರೊಂದು ರೂಪದ ಹಂಗಿಲ್ಲದೆ ತನ್ನನ್ನು ತಾನು ನಿರೂಪಿಸಿಕೊಳ್ಳುವುದು ಅಸಂಭವವಾಗಿ ಬಿಡುತ್ತದೆ. ಅಂಥ ಸಮುದಾಯದೊಳಗೆ ದೈನಂದಿನ ಅಗತ್ಯಗಳ ಹರಹು ದಿನೇ ದಿನೇ ವಿಸ್ತರಿಸಿಕೊಳ್ಳುತ್ತ ಹೋಗುವುದರಿಂದ, ಅದಕ್ಕೆ ಕೋಲಾ ಪಾನೀಯಗಳ ಪರಿಚಯವಾಗುವ ಮುನ್ನಿನ ಜೀವನ ಕ್ರಮಕ್ಕೆ ಮರುಳುವುದು ಮುಂದೆಂದೂ ಅಸಾಧ್ಯವಾಗಿ ಬಿಡುತ್ತದೆ. ಕೋಕಾಕೋಲಕ್ಕೆ ಸಂಬಂಧಿಸಿದ ಬೇರೆಲ್ಲ ವಿಚಾರಗಳ ಬಗ್ಗೆ ಬೇಕಿದ್ದರೆ ರಾಜಿ ಮಾಡಿಕೊಳ್ಳಬಹುದು, ಆದರೆ ಇನ್ನೊಂದಕ್ಕೆ ಅವಕಾಶವನ್ನೇ ಒದಗಿಸುವ ಆದರೆ ಸ್ವಾಮ್ಯತೆಯ ಬಗ್ಗೆ ಯಾವುದೇ ಚೌಕಾಸಿ ಸಾಧ್ಯವಿಲ್ಲ. ಚಹಾ, ಕಾಫಿ, ಬಿಯರ್, ವೈನ್, ಜ್ಯೂಸ್ ಅಥವಾ ನೀರು – ಇವು ಯಾವುವೂ ಎಂದಿಗೂ ಕೋಲಾಕ್ಕೆ ಪರ್ಯಾಯವಾಗಲಾರವು. ಆದ್ದರಿಂದಲೇ ಜಾಗತಿಕ ಮಟ್ಟದಲ್ಲಿ ಕೋಲಾಕೋಲಾದ ಪ್ರಮುಖ ಪ್ರತಿಸ್ಪರ್ಧಿಯೆಂದರೆ ಅದೇ ಸ್ವರೂಪವುಳ್ಳ ಪೆಪ್ಸಿಕೋಲಾ ಒಂದೆ.

ನನ್ನ ಬುದ್ಧಿವಂತ ಗೆಳೆಯರಲ್ಲಿ ಹಲವರು – ಮುಖ್ಯವಾಗಿ ದಕ್ಷಿಣ ಏಷ್ಯನ್ನರು, ಉತ್ತರ ಮತ್ತು ದಕ್ಷಿಣ ಅಮೇರಿಕನ್ನರು – 'ಕೋಕಾಕೋಲಾ ಸಂಸ್ಕೃತಿ' ಎಂಬ ಮಾತನ್ನು ತಾತ್ಸಾರದಿಂದ ಕರೆಯುತ್ತಾರೆ; ಮತ್ತು ಅದರಿಂದ ತಾವು ಮುಕ್ತರಾಗಿದ್ದೇವೆಂದೂ

ಹೇಳಿಕೊಳ್ಳುತ್ತಾರೆ. ಅವರ್ಯಾರೂ ಕೋಕಾಕೋಲಾ ಕುಡಿಯುವುದಿಲ್ಲ; ಅದರ ರುಚಿ ಕೂಡಾ ಅವರಿಗೆ ಹಿಡಿಸುವುದಿಲ್ಲ. ಅವರಲ್ಲಿ ಕೆಲವರು ತಮ್ಮ ಮಕ್ಕಳನ್ನೂ ಅದರಿಂದ ದೂರವಿರುವಂತೆ ಒತ್ತಾಯಿಸಿದ್ದಾರೆ. ಜಾಗತಿಕ ಸಮೂಹ ಸಂಸ್ಕೃತಿಯನ್ನು ತಾವು ವಿರೋಧಿಸುತ್ತಿರುವ ಬಗ್ಗೆ ಅವರು ಹೆಮ್ಮೆ ಪಡುತ್ತಾರೆ; ಮತ್ತು ಇತರರು ಮೆಕ್‌ಡೋನಾಲ್ಡ್, ವುಲವರ್ತ್ ಅಥವಾ ರೆಡ್‌ಮೀಟ್, ಮದ್ಯ ಮತ್ತು ತಂಬಾಕಿನ ಕುರಿತು ಮಾತನಾಡುವ ಧಾಟಿಯಲ್ಲೆ ಅವರು ಕೋಕಾಕೋಲಾದ ಬಗ್ಗೆ ಮಾತನಾಡುತ್ತ ತಮ್ಮ 'ವಿಭಿನ್ನತೆ'ಯನ್ನು ಗರ್ವದಿಂದ ಪ್ರದರ್ಶಿಸುತ್ತಾರೆ. ಕೋಲಾ ಪಾನೀಯಗಳ ಬಗೆಗಿನ ಅವರ ನಿಲುವು ಎರಡು ಅಂಶಗಳ ಮಿಶ್ರಣ–ಒಂದು, ತಾತ್ಸಾರ (ಕಾರಣ, ಅದು ಕೆಳದರ್ಜೆಯ ಸಂಸ್ಕೃತಿಯ ಪ್ರಮುಖ ಅಂಗವೆಂದು ಪರಿಗಣಿತವಾಗುವುದರಿಂದ) ಮತ್ತು ಇನ್ನೊಂದು, ಭಯ (ಕಾರಣ, ಕೆಫೀನ್ ಆಧಾರಿತ ಪಾನೀಯವಾದ್ದರಿಂದ, ಸ್ವಾಸ್ಥ್ಯವ್ಯಸನಗಳ ಪ್ರಕಾರ ಅದು ಆರೋಗ್ಯಕ್ಕೆ ಹಾನಿಕಾರಕ).

ಈ ಇವರ ಭಿನ್ನತೆಯು ಮೇಲೆ ತೋರುವಷ್ಟು ಭಿನ್ನವಾಗೇನೂ ಇಲ್ಲ. ತಮ್ಮ ಭಿನ್ನಾಭಿಪ್ರಾಯವನ್ನು ಇವರು ಹೆಮ್ಮೆಯಿಂದ ತೋರ್ಪಡಿಸಿಕೊಳ್ಳುವುದೂ ಮತ್ತು ಈ ಬಗೆಯ ಇವರ ನಿಲುವು ಕೇವಲ ಕೋಲಾ ಪಾನೀಯಗಳಿಗೆ ಮಾತ್ರ ಸೀಮಿತವಾಗುವುದು ಹಾಗೂ ನಿಷ್ಪ್ರಯೋಜಕ ಬಳಕೆಯಲ್ಲಿರುವ ಇತರ ವಸ್ತುಗಳಿಗೆ ಅನ್ವಯವಾಗದಿರುವುದು – ಇವೇ ಕೋಕಾ ಕೋಲಾವು ಹೇಗೆ ಒಂದು ಜಗತ್‌ದೃಷ್ಟಿಯಾಗಿ, ಬದುಕಿನ ಫಿಲಾಸಫಿಯಾಗಿ ಬಿಡುವುದರಲ್ಲಿ ಯಶಸ್ವಿಯಾಗಿದೆ ಎಂಬುದನ್ನು ತೋರಿಸುತ್ತದೆ. ಜತೆಗೆ, ಇದು ಯಾವುದೇ ಬಗೆಯ ಪರ್ಯಾಯಕ್ಕೂ–ಮತ್ತು ಕೆಲವೊಮ್ಮೆ ಭಿನ್ನತೆಗೂ ಕೂಡ– ಯಥೇಚ್ಛ ಆಸ್ಪದ ನೀಡುವಂತಹ ಜೀವನಕ್ರಮವೂ ಆಗಿದೆಯೆಂಬುದನ್ನು ಕಾಣಿಸಿಕೊಡುತ್ತದೆ ! ೧೯೭೭–೭೯ರ ನಡುವೆ, ಆಗ ಇಂಡಿಯಾದ ರಾಷ್ಟ್ರಾಡಳಿತದ ಮುಂಚೂಣಿಯಲ್ಲಿದ್ದ ಜನತಾ ಪಕ್ಷ ಅವಧಿಯಲ್ಲಿ, ಈ ವಸ್ತುಸ್ಥಿತಿಯು ಮರೆತುಹೋಗಿ, ಅಂದಿನ ಕೈಗಾರಿಕಾ ಮಂತ್ರಿಗಳಾಗಿದ್ದ ಜಾರ್ಜ್ ಫರ್ನಾಂಡಿಸ್ ಅವರು ಕೋಕಾಕೋಲಾ ಕಾರ್ಪೋರೇಷನನ್ನು ದೇಶದಿಂದ ಹೊರಗಟ್ಟಿದರು. ಮತ್ತು ಆ ಮೂಲಕ ತಾನು ಇಂಡಿಯಾದ ಸ್ವಾವಲಂಬನೆಯ ಚಳುವಳಿಗೆ ಅಪಾರ ಸೇವೆ ಸಲ್ಲಿಸಿದೆನೆಂದೂ ಹಾಗೂ ತನ್ನ ಸಮಾಜವಾದ ಮತ್ತು ಗಾಂಧೀವಾದಗಳಿಗೆ ಬದ್ಧನಾದಂತಾಯಿತು ಎಂದೂ ಅವರಂದುಕೊಂಡಿದ್ದರು. ಆದರೆ, ನಿಜವಾಗಿಯೂ ನೋಡಿದರೆ, ತನಗರಿವಿಲ್ಲದೆಯೇ ಅವರು ಕೋಕಾಕೋಲಾ ಫಿಲಾಸಫೀಯ ಸ್ಥಿರ ಚೌಕಟ್ಟಿಗೆ ಬದ್ಧರಾಗಿಯೇ ನಡೆದುಕೊಂಡಿದ್ದರು. ಆದ್ದರಿಂದ ಆಗ, ಕೋಕಾಕೋಲಾಕ್ಕೆ ಪರ್ಯಾಯವಾಗಿ ಇಂಡಿಯನ್ ಕಾರ್ಪೋರೇಷನ್‌ನ್ನೊಂದು ತಯಾರಿಸುವ 'ಕ್ಯಾಂಪಾ ಕೋಲಾ' ಬಂತು; ಹಾಗೂ ಮತ್ತೊಂದು ಬಹುರಾಷ್ಟ್ರೀಯ ಕಂಪೆನಿಯ 'ಥಮ್ಸ್ ಅಪ್' ಬಂತು; ಈಗ, ಒಂದು ದಶಕಕ್ಕೂ ಹೆಚ್ಚು ಕಾಲದ ಬಳಿಕ, ಫರ್ನಾಂಡಿಸ್‌ರಂಥವರೊಂದಿಗೆ ಸೇಡು

ತೀರಿಸಿಕೊಳ್ಳುವಂತೆ ಕೋಕಾಕೋಲಾವು ಇಂಡಿಯಾದ ಮಾರುಕಟ್ಟೆಯನ್ನು ಜಯಭೇರಿಯಿಂದ ಮರುಪ್ರವೇಶಿಸಿದೆ. ಅಲ್ಲದೆ, ಅದೇ ವಿಜಯೋತ್ಸಾಹದಿಂದ ಪೆಪ್ಸಿಕೋಲಾದೊಂದಿಗೆ ಸ್ಪರ್ಧಿಸುತ್ತ, ಮುಂಬರುವ ದಿನಗಳಲ್ಲಿ ಇಂಡಿಯಾ ಮಾತೆಯ ಮೋಕ್ಷ ಮಾರ್ಗವೆಂದು ಬಿಂಬಿತವಾಗುವ ಮಾರುಕಟ್ಟೆಯ ಸ್ಪರ್ಧೆಗೆ ಮೂಲಮಾತೃಕೆಯನ್ನೂ ಒದಗಿಸುತ್ತಿದೆ.

ಕೋಕಾಕೋಲಾದ ರಹಸ್ಯವು ನಮ್ಮ ಕಾಲದ ನಿಗೂಢತೆಯ ಒಂದು ಮಾದರಿ ಆ ಕಂಪೆನಿಯು ಬಚ್ಚಿಟ್ಟುಕೊಂಡಿರುವ ಆ ರಹಸ್ಯವು ಇತರೆಲ್ಲ ಕೋಲಾ ಪಾನೀಯಗಳ ಉತ್ಪಾದಕರ ಅಮಿತ ಕುತೂಹಲಕ್ಕೆ ಕಾರಣವಾಗಿರುವಂಥದೂ ಆಗಿದೆ. ಸ್ವಾದವನ್ನೇ ಆಧರಿಸಿ ಹೇಳುವುದಾದರೆ, ಜಗತ್ತಿನ ಇನ್ನೂ ಹಲವು ಕಂಪನಿಗಳು ಕೋಕಾ ಕೋಲಾದ ಗುಪ್ತ ಫಾರ್ಮುಲಾದ ಸಮೀಪಕ್ಕೆ ಬಂದಿವೆ. ಇವರ ಕೆಲವು ಕಂಪೆನಿಗಳು ಆ ಫಾಮುಲಾದ ಸನಿಹಕ್ಕೇ ತಲುಪಿಯೂ ಆ ಫಾರ್ಮುಲಾವನ್ನು ನಕಲು ಮಾಡದೆಯೇ ಉಳಿದಿವೆ. ಆ ಮೂಲಕ, ಮಾರುಕಟ್ಟೆಯಲ್ಲಿ ಕೋಕಾಕೋಲಾ ಕೂಡಾ ಗಳಿಸಲಾಗದಂತಹ ವಿಶಿಷ್ಟ ಸ್ಥಾನವನ್ನು ಸ್ಥಾಪಿಸಿಕೊಳ್ಳುವ ಬಯಕೆ ಅವುಗಳದ್ದು, ಈ ಪ್ರತಿಸ್ಪಧಿಗಳ ಯಶಸ್ಸು, ಕೆಲವೊಮ್ಮೆ ಗಮನಾರ್ಹವಾದದ್ದೇ. ಆದರೆ ಅದರಿಂದ ಮೂಲಫಾರ್ಮುಲಾದ ನಿಗೂಡತೆಯೇನೂ ತಗ್ಗುವುದಿಲ್ಲ. ಕಾರಣ, ಅದನ್ನಿನ್ನೂ ಭೇದಿಸಲಾಗಿಲ್ಲ, ಮತ್ತು ಅದರ ಗುಣಮಟ್ಟವನ್ನು ಸಹ ಇನ್ನೂ ತಲುಪಲು ಸಾಧ್ಯವಾಗಿಲ್ಲ. ಇಂಥ ಸಂದರ್ಭಗಳಲ್ಲಿ ಸ್ಥಳೀಯ, ಪ್ರಾದೇಶಿಕ, ಅಥವಾ ರಾಷ್ಟ್ರೀಯ ಸ್ವಾದ ವ್ಯತ್ಯಾಸಗಳ ಕುರಿತು ವಾದಿಸುವುದೇ ವ್ಯರ್ಥ. ಇಂಡಿಯನ್ ಬಳಕೆದಾರರನ್ನು ಗಮನದಲ್ಲಿಟ್ಟುಕೊಂಡು ಹೊರತಂದ ದಾಲ್ಚಿನ್ನಿ ಮತ್ತು ಏಲಕ್ಕಿ ಘಮದ ಇಂಡಿಯನ್ ಕೋಲಾ ಪಾನೀಯಗಳು ಗ್ರಾಹಕರನ್ನು ದೀರ್ಘಕಾಲ ಆಕರ್ಷಿಸುವುದರಲ್ಲಿ ಹೇಗೆ ವಿಫಲವಾದವೋ ಹಾಗೆಯೇ, ಅಂಥ ವಾದಗಳೂ ಸೋಲುತ್ತವೆ. ಕೋಕಾಕೋಲಾ ಫಿಲಾಸಫಿಯಲ್ಲಿ ವಿವಿಧ ಸಮಾಜ, ವಿಭಿನ್ನ ಪ್ರದೇಶಗಳ ಜನಪ್ರಿಯ ಸಂಸ್ಕೃತಿಗಳಿಗೆ ಯಾವುದೇ ಸ್ಥಾನವಿಲ್ಲ. ಆ ಕುರಿತು ಅದು ತಲೆಕೆಡಿಸಿಕೊಳ್ಳುವುದೇ ಇಲ್ಲ. ಅದರ ಶಕ್ತಿ ಏನಿದ್ದರೂ ಅದು ಜಾಗತಿಕ ಸಮೂಹದ ಬಳಕೆ ಸಂಸ್ಕೃತಿಯನ್ನಾಧರಿಸಿದ್ದು; ಆದ್ದರಿಂದ, ಸ್ಥಳೀಯ ಸಂಸ್ಕೃತಿಯಿಂದಾಗಲೀ ಅಲ್ಲಲ್ಲಿಯ ಆರ್ಥಿಕ ಚಟುವಟಿಕೆಗಳ ಮಟ್ಟದಿಂದಾಗಲೀ ಅಥವಾ ಸ್ಥಳೀಯ ರಾಜಕೀಯ ಆದ್ಯತೆಗಳ ಪ್ರಭಾವಕ್ಕಾಗಲಿ ಅದು ಪಕ್ಕಾಗದು. ಕೋಕಾಕೋಲಾದ ಪರಕೀಯತೆಯನ್ನು ಕುರಿತು ಸ್ಥಳೀಯ ಸಂಸ್ಕೃತಿಗಳು ವಿರೋಧ ವ್ಯಕ್ತಪಡಿಸಬಹುದು; ಅದರ ಉತ್ಪಾದನೆಯನ್ನು ನಿಭಾಯಿಸುವುದೂ ಆಮದುಮಾಡಿಕೊಳ್ಳುವುದೂ ನಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಮಿರಿದ್ದಾಗಿರಬಹುದು; ಮತ್ತು ಸಾಂಕೇತಿಕವಾದ ಕೆಲವು ಕಾರಣಗಳಿಗಾಗಿ ಕೋಲಾಪ್ರೇಮಿಗಳಿಂದ ಸಮಾಜವನ್ನು ಮುಕ್ತವಾಗಿಸಲು ರಾಜಕಾರಣಿಗಳನ್ನು ಪ್ರಯತ್ನಿಸಲೂಬಹುದು–ಆದರೆ, ಇಂಥ ಯಾವುದೇ ಬಾಹ್ಯ ನಿರ್ಬಂಧಗಳು

ಮಾಯವಾದ ತಕ್ಷಣ ಕೋಕಾಕೋಲಾ ಮೇಲಿನ ಮೋಹ, ಆತ್ಮೀಯತೆಗಳು ಮತ್ತೆ ತನ್ನ ಶುದ್ಧರೂಪದ ಯಥಾಸ್ಥಿತಿಗೆ ಮರಳುತ್ತದೆ.

ಇದು ಎಲ್ಲರಿಗೂ ಗೊತ್ತಿದೆಯಾದರೂ ಇದನ್ನು ಒಪ್ಪುವವರು ಕೆಲವರು ಮಾತ್ರ. ಇಂಡಿಯಾ ದೇಶವು ಕೋಕಾಕೋಲಾವನ್ನು ಹೊರಹಾಕಿದ್ದ, ಈಗ, ಇತರ ಅಂತರಾಷ್ಟ್ರೀಯ ಶಕ್ತಿಗಳೊಂದಿಗೆ ಸ್ಪರ್ಧಿಸುತ್ತ ಇಂಡಿಯನ್ನರ ಮನವೊಲಿಸಿಕೊಳ್ಳಬೇಕಿದ್ದ 'ಏರ್ ಇಂಡಿಯಾ'ವು ಪರಿಸ್ಥಿತಿಯನ್ನು ಸುಸ್ಪಷ್ಟವಾಗಿ ಅರ್ಥಮಾಡಿಕೊಂಡಿತು. ನಮ್ಮ ಸರ್ಕಾರದ ಸ್ವಾವಲಂಬನೆಯ ಧೋರಣೆಯಾಗಲಿ, ಮೂಲಸೌಕರ್ಯ ಅಭಿವೃದ್ಧಿ ಕುರಿತ ಘೋಷಣೆಗಳಾಗಲೀ, ಅದರ ಕೈಗಾರಿಕಾ ಕಾರ್ಯನೀತಿಯಾಗಿ ಏರ್ ಇಂಡಿಯಾವನ್ನು ಕಿಂಚಿತ್ತೂ ಪ್ರಭಾವಿಸಲಿಲ್ಲ. ಹಾಗಾಗಿ ಅದು ಯಾವತ್ತೂ ತನ್ನ ಪ್ರಯಾಣಿಕರಿಗೆ ಕೋಲಾದ ಭಾರತೀಯ ಅವತರಣಿಕೆಗಳನ್ನು ನೀಡಲೂ ಇಲ್ಲ ಮತ್ತು ಅದಕ್ಕೆ ಫರ್ನಾಂಡಿಸ್ ಕೂಡಾ ಆಕ್ಷೇಪಿಸಲಿಲ್ಲ.

ಮನುಷ್ಯನ ಅಸ್ತಿತ್ವದ ಆಳದಲ್ಲಿರುವ ಯಾವುದೋ ಒಂದನ್ನು ಕೋಕಾಕೋಲಾ ಮುಟ್ಟುತ್ತದೆ. ಪಾಪ್ ಸಂಗೀತ, ನೀಲಿ ಜೀನ್ಸ್, ಹ್ಯಾಮ್‌ಬರ್ಗರ್ಸ್ ಮೊದಲಾಗಿ, ಪ್ರಸ್ತುತ ಪ್ರಭಾವಶಾಲಿಯಾಗಿರುವ, ಜಾಗತಿಕ ಸಮೂಹ ಸಂಸ್ಕೃತಿಯ ಇತರ ಅಂಶಗಳಂತೆಯೇ, ಕೋಕಾಕೋಲಾ ಕೂಡ, ಆಧುನಿಕ ಪ್ರಪಂಚದಲ್ಲಿ ಮನುಷ್ಯರು ಕಳೆದುಕೊಂಡಿರಬಹುದಾದ ಸರಳ, ಮುಗ್ಧ ಸಂತೋಷವೊಂದನ್ನು ತನ್ನ ಬಳಕೆದಾರರಿಗೆ ಕಾಣಿಸಿಕೊಡುತ್ತದೆ. ಅಂಥ ಸಂತೋಷಗಳು ಆಧುನಿಕತೆಯ ಆಯ್ದು ಕೆಲವು ವಸ್ತು-ಸಾಮಗ್ರಿಗಳಲ್ಲಿ ಸಾಂಕೇತಿಕವಾಗಿ ಜೀವಂತವಾಗಿರುತ್ತದೆ. ಆದರೆ, ಕೋಕಾಕೋಲಾವು ಒಂದು ವಿಚಾರದಲ್ಲಿ ಜಾಗತಿಕ ಸಮೂಹಸಂಸ್ಕೃತಿಯ ಇನ್ನಿತರ ವಸ್ತುಸಾಮಗ್ರಿಗಳಿಗಿಂತಲೂ ಹೆಚ್ಚು ಶಕ್ತವಾದ ಒಂದು ಸಂಕೇತವಾಗಿದೆ- ಅದು, ಸಂಪೂರ್ಣ ನಿರುಪಯುಕ್ತವಾಗಿದ್ದರೂ ಕೂಡ ಬಳಕೆಗೆ ಉಪಯುಕ್ತವೆನಿಸಿಕೊಂಡಿದೆ; ಯಾಕೆಂದರೆ, ಅದರ ಮೂಲಕ, ಯಾವುದೇ ವಿರೋಧವನ್ನೂ ಲೆಕ್ಕಿಸದೆ, ಒಂದು ನಿರ್ದಿಷ್ಟ ಜೀವನ ಶೈಲಿಯನ್ನು ಅನುಸರಿಸುವ ಪ್ರವೃತ್ತಿಯನ್ನು ಅದು ಸಂಕೇತಿಸಿಕೊಡುತ್ತದೆ. ಈಯೆಲ್ಲ ಕಾರಣಗಳಿಂದ ಕೋಕಾಕೋಲಾವನ್ನು ತ್ಯಜಿಸುವುದು ಕಷ್ಟಕರ ಅಷ್ಟೇ ಅಲ್ಲ, ಅದರ ಚಟವು ಮರುಕಳಿಸಿದ ಬಳಿಕೆ, ಕೋಲಾಪ್ರೇಮಿಯು ಅದರ ದುರಭಿಮಾನಿಯಾಗಿ ಬಿಡುತ್ತಾನೆ. ಅತಿಯಾದ ಧೂಮಪಾನಿಯು ಆ ಚಟವನ್ನು ಬಿಟ್ಟ ಮೇಲೆ ಧುಮಪಾನ ವಿರೋಧಿ ಹೋರಾಟಗಾರ ಆಗುವಂತೆಯೇ, ತಾತ್ವಿಕ ಕಾರಣಗಳಿಗಾಗಿ ಕೋಕಾ ಕೋಲವನ್ನು ತಿರಸ್ಕರಿಸುವವರು ಅಥವಾ ಕೋಲಾ ಸಂಸ್ಕೃತಿಯ ವಿರುದ್ಧ ಕೆಂಡ ಕಾರುವವವರು ಕೂಡ, ತಮ್ಮದೇ ಅಸ್ತಿತ್ವದ ಒಂದು ಅಂಶದ ವಿರುದ್ಧ ಹೋರಾಡಬೇಕಾಗುತ್ತದೆ.

ಕೋಕಾಕೋಲಾ ಎಂಬುದು ನಿಶ್ಚಿತವಾಗಿಯೂ ಮಾರುಕಟ್ಟೆಯ ಪರಮಸಂಕೇತ, ಮಾರುಕಟ್ಟೆಯಿಲ್ಲದ ಕೋಲಾ ಸೇವನೆ ಸಾಧ್ಯವಿಲ್ಲ. ಮಾರುಕಟ್ಟೆಗೆ ಹೋಗದೆಯೇ ಕಿತ್ತಳೆ ರಸವನ್ನೋ ಚಹಾವನ್ನೋ ಬಿಯರ್‌ನ್ನೋ ಕುಡಿಯಬಹುದು. ನೀವೇ ಕಿತ್ತಳೆ ಬೆಳೆದು ಅದರ ಜೂಸನ್ನು ಮನೆಯಲ್ಲೆ ತಯಾರಿಸಿ ಕುಡಿಯಬಹುದಷ್ಟೇ? ಅಂತೆಯೇ, ಚಹಾ ಬೆಳೆಯಲು ಅಗತ್ಯ ಎತ್ತರದ ಸೂಕ್ತ ಭೂಪ್ರದೇಶದಲ್ಲಿ ನೀವು ಇರುವಿರಾದರೆ ನೀವೇ ಚಹಾ ಬೆಳೆದು ಕುಡಿಯಬಹುದು; ನಿಮ್ಮದೇ ಮದ್ಯ ತಯಾರಿಸುವಷ್ಟು ತಾಳ್ಮೆಯಿದ್ದರೆ ಅದನ್ನೂ ಮಾಡುವುದು ಸಾಧ್ಯ. ಆದರೆ ಕೋಲಾದ ವಿಷಯದಲ್ಲಿ ಇದ್ಯಾವುದೂ ಸಾಧ್ಯವಿಲ್ಲ. ಪ್ರಪಂಚದ ಯಾವುದೇ ಪ್ರದೇಶದಲ್ಲೂ, ಯಾವುದೇ ಎತ್ತರದಲ್ಲೂ ನಿಮ್ಮದೇ ಕೋಲಾ ಬೆಳೆದು ಬಳಸಲು ಸಾಧ್ಯವಿಲ್ಲ. ಅದು ಒಂದಲ್ಲೊಂದು ಸಿದ್ಧ ರೂಪದಲ್ಲೇ ಬರಬೇಕು; ಯಾರಾದರೂ ಅದನ್ನು ಮಾರುವ ಹಕ್ಕು ಪಡೆದಿರಬೇಕು ಮತ್ತು ಕೋಕಾಕೋಲಾ ಪ್ರಪಂಚಕ್ಕೆ ಪ್ರವೇಶಾಧಿಕಾರ ಬೇಕಾದವರು ಜಾಗತಿಕ ಮಾರುಕಟ್ಟೆಯ ಭಾಗವಾಗಿರಬೇಕು.

ಕೋಕಾ ಕೋಲಾ ಫಿಲಾಸಫಿಯು ಕೇವಲ ಕೋಕಾಕೋಲಾಕ್ಕೆ ಅಥವಾ ಇನ್ಯಾವದೆ ಕೋಲಾಗಳಿಗೆ ಸೀಮಿತವಾದುದಲ್ಲ– ಎಂಬುದನ್ನ ಪ್ರತ್ಯೇಕ ಹೇಳಬೇಕಾಗಿಲ್ಲ. ಬದುಕಿನ ಇತರ ಕ್ಷೇತ್ರಗಳಿಗೂ ಅದು ವಿಸ್ತರಿಸಿಕೊಂಡಿದೆ; ಬದುಕಿನ ಎಲ್ಲ ಕ್ಷೇತ್ರಗಳಿಗೂ ಅದು ವ್ಯಾಪಿಸಬೇಕು ಎಂಬುದು ಅದರ ಪ್ರತಿಪಾದಕರ ಬಯಕೆ. ಅದಕ್ಕಾಗಿ ಅವರು ಬಹಳ ಕಷ್ಟವನ್ನೇನೂ ಪಡಬೇಕಾಗಿಲ್ಲ. ಆ ಕೋಲಾತತ್ವದ ಒಂದು ಫೇಜಸ್ಯೈಟ್ (ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ದೇಹದಲ್ಲಿ ನಾಶಗೊಳಿಸುವ ರಕ್ತಕಣ) ಇದ್ದಂತೆ; ಅದು ತನ್ನ ಮಗ್ಗುಲಲ್ಲಿರುವ ಇನ್ನಿತರ ಎಲ್ಲ ಫಿಲಾಸಫಿಗಳನ್ನೂ ಕಬಳಿಸುತ್ತದೆ ಅಥವಾ ಆ ಫಿಲಾಸಫಿಗಳೆಲ್ಲವೂ ತಂತಮ್ಮ ಮಂಡಲಗಳಲ್ಲಿ ಇದ್ದುಕೊಂಡೇ ಕೇವಲ ಅಲಂಕಾರಿಕ ವಿರೋಧಿಗಳಾಗುವಂತೆ ಕೋಲಾವು ಮಾಡುತ್ತದೆ.

ಈಗ, ಇಡಿಯ ಜಗತ್ತಿನಲ್ಲೇ ಉದಾರವಾದಿ ಪ್ರಜಾಸತ್ತಾತ್ಮಕ ರಾಜಕಾರಣವು ಬದಲಾಗುತ್ತಿರುವ ರೀತಿಯನ್ನು ನೋಡಿದರೆ ಇದಕ್ಕೆ ಅತ್ಯುತ್ತಮ ಉದಾಹರಣೆ ಸಿಗುತ್ತದೆ. ಇವತ್ತಿನ ಪ್ರಜಾಪ್ರಭುತ್ವಗಳಲ್ಲಿ, ರಾಜಕಾರಣವು ಚುನಾವಣೆಗಳಿಂದ ಬೇರ್ಪಡುತ್ತಿದೆ– ಇವತ್ತು ಚುನಾವಣೆಯೆಂದರೆ ಮೊದಲು ಮಾಧ್ಯಮಗಳ ತಂತ್ರ, ಆಮೇಲೆ ವಿರಾಟ್ ರಾಜಕೀಯ ಸಂಸ್ಥೆಗಳ ಮಾಧ್ಯಮ ಸಮರ; ಜಾಹೀರಾತು, ಮಾಧ್ಯಮ ಚತುರರ ದಂಡು ಮತ್ತು ಜನಸಂಪರ್ಕ ಸಲಹೆಗಾರರ ಹಿಡಿತದಲ್ಲಿ ಇಂದು ಚುನಾವಣೆಗಳು ನಡೆಯುತ್ತವೆ. ಒಬ್ಬರಿಗೊಬ್ಬರು ಪರ್ಯಾಯವಾಗಿರುವಂತೆ ತೋರುವ, ಆದರೆ ಒಬ್ಬರು ಇನ್ನೊಬ್ಬರ ನ್ಯೂನತೆಯಿಂದ ಇರುವ 'ಇಮೇಜು'ಗಳನ್ನು ಇಂದು ಮತದಾರರ ಆಯ್ಕೆಗೆ ಬಿಡಲಾಗುತ್ತದೆ. ಮತದಾರರ ರಾಜಕೀಯ ಅಗತ್ಯಗಳನ್ನು ಮಾಧ್ಯಮ ನಿಪುಣರು ಬುದ್ಧಿವಂತಿಕೆಯಿಂದ ನಿಭಾಯಿಸುತ್ತಾರೆ ಎಂದು ಅಭ್ಯರ್ಥಿಗಳ ನಂಬಿಕೆ. ಇನ್ನು, ಮಾಧ್ಯಮ

ನಿರ್ವಹಣಾ ನಿಪುಣರ ಪ್ರಕಾರ ಎಲ್ಲ ಅಭ್ಯರ್ಥಿಗಳೂ ಒಂದೇ; ಅವರಲ್ಲಿ ಪ್ರತಿಯೊಬ್ಬರೂ ಅಷ್ಟಿಷ್ಟು ತಿದ್ದುಪಡಿ ಮಾಡಿಟ್ಟ ಒಂದೇ ವ್ಯಕ್ತಿಯ ವಿಭಿನ್ನ ಆವೃತ್ತಿಗಳ ಹಾಗೆ ಅಂದರೆ, ವ್ಯತ್ಯಾಸವಿರುವುದು ಅವರ ಸಾರ್ವಜನಿಕ ಇಮೇಜುಗಳಲ್ಲಿ ಮಾತ್ರ. ಹೀಗೆ, ಅಭ್ಯರ್ಥಿಗಳಿಗೆ ಮತ್ತು ಮಾಧ್ಯಮನಿರ್ವಾಹಕರಿಬ್ಬರಿಗೂ ಇಂದು ರಾಜಕೀಯ ಪೈಪೋಟಿಯು ಕುಸ್ತಿಪಂದ್ಯವೊಂದರ ಮಾದರಿಯದಲ್ಲ. ಬದಲು ಅದು ಜಾಹೀರಾತು ಸಮರದ ಬಗೆಯದು; ಬಳಕೆದಾರನಲ್ಲಿ ಕೃತಕ ಅಗತ್ಯಗಳನ್ನು ಮೂಡಿಸಿ, ಅಂಥ ದಿನಬಳಕೆ ಸಾಮಾನುಗಳೆಲ್ಲ ಬದುಕಿಗೆ ಬಲು ಅವಶ್ಯ ಎಂಬಂತೆ ಬಿಂಬಿಸುತ್ತ ಜನಪ್ರಿಯ ಬ್ರಾಂಡುಗಳ ನಡುವೆ ನಡೆಯುವ ಆ ಜಾಹೀರಾತು ಸಮರವೇ ಇಂದು ರಾಜಕೀಯ ಕದನಕ್ಕೆ ಮಾದರಿ. ಅಧಿಕ ಮಾರುಕಟ್ಟೆ ಪಾಲಿಗಾಗಿ ಕೋಕಾಕೋಲಾ ಮತ್ತು ಪೆಪ್ಸಿ ಕೋಲಾ ನಡುವೆ ನಡೆಯುವ ಹಣಾಹಣೆಯಿಂದ ಎರವಲು ಪಡೆದ ಯುಕ್ತಿ ಇದು.

ಇಲ್ಲಿ ಗ್ರಾಹಕರಿಗೆ–ಮತಗಾರರೆಂಬುದು ಅವರಿಗೆ ಇನ್ನೊಂದು ಹೆಸರು–ನಿಂತು ಯೋಚಿಸುವ ವ್ಯವಧಾನವನ್ನಾಗಲೀ ಅಥವಾ ತಮ್ಮ ಭಾಗ್ಯವನ್ನು ತಾವೇ ನಿರ್ಧರಿಸಿಕೊಳ್ಳುವ ಸಾಧ್ಯತೆಯ ಸಮಕ್ಷಮ ನಿಲ್ಲುವ ಅವಕಾಶವನ್ನಾಗಲೀ ಕೊಡುವುದಿಲ್ಲ. ಇಂಥ ಆಯ್ಕೆಯ ಆಟವು ಗ್ರಾಹಕರ ಪಾಲಿಗೆ ಯಾವತ್ತೂ ಮುಗಿಯದೆ ಅಥವಾ ಬದಲಾಗದೆ ಮುಂದುವರೆಯುತ್ತಲೇ ಇರುವಂತೆ ಕೋಕಾಕೋಲಾ ಫಿಲಾಸಫಿಯು ಒತ್ತಾಯ ಹೇರುತ್ತದೆ. ಗ್ರಾಹಕರು ತಮ್ಮ ಆಟ ಆಡುತ್ತಲೇ ಹೋಗಬೇಕು; ಯಾಕೆಂದರೆ, ಅವರು ತಮ್ಮ ಆಯ್ಕೆ ಬದಲಾಯಿತೆಂಬ ಕಾರಣದಿಂದಲೋ ಅಥವಾ ಆಟವೇ ತಮಗೆ ಅಪ್ರಸ್ತುತವೆಂಬ ಕಾರಣದಿಂದಲೋ, ಆಟ ಬಿಟ್ಟು ಹೊರ ನಡೆಯುವುದು ಸರಿಯಲ್ಲ, ಅದು ಆಟದಲ್ಲಿ ಸೋಲುವುದಕ್ಕಿಂತ ಕೆಟ್ಟುದು – ಎಂಬೊಂದು ಭಾವನೆಯನ್ನು ಕೋಕಾಕೋಲಾ ಫಿಲಾಸಫಿಯು ಒತ್ತಾಯಪೂರ್ವಕ ನಿರ್ಮಿಸುತ್ತದೆ.

ಈ ಕೋಕಾಕೋಲಾ ಫಿಲಾಸಫಿಯು ನಮ್ಮ ಕಾಲದ ಸ್ವರೂಪ ನಿರ್ದೇಶಕ ಗುಣವುಳ್ಳ ಒಂದು ಸಾಮಾಜಿಕ ದರ್ಶನವಾಗಿದೆ. ಕೋಕಾಕೋಲಾ ಸಂಸ್ಕೃತಿಯೆಂಬುದು ಇನ್ನಿತರ 'ಉನ್ನತ' ಸಂಸ್ಕೃತಿಗಳನ್ನು ಬಾಗಿಸಿ ಪರಾಭವಗೊಳಿಸುತ್ತದೆಯೆಂದು ನಾಜೂಕಾಗಿ ಮಾತನಾಡುವವರಿಗೆ ಅದರ ನಿಜರೂಪದ ಕುರಿತು, ಆಕರ್ಷಣೆಯ ಕುರಿತು ಏನೇನೂ ತಿಳಿದಿಲ್ಲ. ಕೋಕಾಕೋಲಾವು ಮಾರುಕಟ್ಟೆ ಮತ್ತು ಜಾಹೀರಾತು ನಿಯಮಗಳಿಗೆ ಬೇಕಾದಾಗ ಸಂತೋಷದಿಂದ ಅಂಥ ಔನ್ನತ್ಯವನ್ನು ತನಗೆ ತಾನೇ ದಯಪಾಲಿಸಿಕೊಳ್ಳುತ್ತದೆ; ಅಥವಾ ತನ್ನ ಆಟದಲ್ಲಿ ತನ್ನನ್ನೇ ಸೋಲಿಸುವಂತೆ ಆಕರ್ಷಕವಾಗಿ ಸವಾಲೇನಿದೆ ಅದು–ಕೋಕಾಕೋಲಾದ ಮಾದರಿಯದು. ಹಾಗೂ, ಅದನ್ನು ಯಥಾವತ್ತಾಗಿ ಅನುಸರಿಸಲು ತೊಡಗಿರುವ ಜಪಾನ್‌ನ್ನು ನಾವು ಜಾಗತಿಕ ಅರ್ಥವ್ಯವಸ್ಥೆಯ ಪೆಪ್ಸಿಕೋಲಾ ಎಂದೂ ಕರೆದುಕೊಳ್ಳಬಹುದು; ಚೀನಾ ಕೂಡಾ ಭವಿಷ್ಯದಲ್ಲಿ ಹಾಗೇ ಆಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಬೆನ್ನಟ್ಟಿಹೊರಟಿದೆ. ಈ

ಕೋಲಾ ಆಟದಲ್ಲಿ ಮನದಟ್ಟಾಗಿರುವ ಒಂದು ತಥ್ಯ ಇದು – ನೀವು ಕೋಕಾಕೋಲಾವನ್ನು ಸೋಲಿಸಲು ಬಯಸುತ್ತೀರಾದರೆ, ಮೊದಲು ಅದರ ಆಟದಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಳ್ಳಬೇಕು. ಮತ್ತು, ಆಟ ನಡೆಯುವ ಸ್ಥಳವು ಟಿವಿಯಲ್ಲೆಂಬುದನ್ನೂ ಹಾಗೂ ಅದು ನಮ್ಮ ಡ್ರಾಯಿಂಗ್ ರೂಮುಗಳಲ್ಲಿಯೂ ನಮ್ಮ ಹೃದಯಗಳಲ್ಲಿಯೂ ನಡೆಯುವ ಸಮರವೆಂಬುದನ್ನೂ ಅರಿತುಕೊಂಡಿರಬೇಕು. ಈ ಆಟದಿಂದ ಕಲಿಯಬಹುದಾದ ಇನ್ನೂ ಒಂದು ನೀತಿ ಇದೆ ಅದನ್ನು ತಮ್ಮ ಆರ್ಥಿಕ ವ್ಯವಸ್ಥೆ ಕುಸಿಯುವ ಮುನ್ನಾ ದಿನಗಳಲ್ಲಿ ಪೂರ್ವ ಏಷಿಯಾದ ಐದು ಪುಟ್ಟ ಆರ್ಥಿಕ ಡ್ರಾಗನ್ ದೇಶಗಳು ಪ್ರಯೋಗಿಸುವ ಪ್ರಯತ್ನ ನಡೆಸಿದವು. ಆ ನೀತಿ ಯಾವುದೆಂದರೆ– ಕೋಕಾಕೋಲಾಕ್ಕೆ 'ಸೋಲು' ಕಾಣಿಸಬೇಕಿದ್ದರೆ, ಕೋಕಾ ಕೋಲಾದ ನೆಲದಲ್ಲೆ ನಿಂತು ಅದರೊಂದಿಗೆ ಹೋರಾಡಲಿಕ್ಕೆ ಅಗತ್ಯವಾಗುವ ಕಾಠಿಣ್ಯವನ್ನು ನಮ್ಮೊಳಗೆ ನಾವು ಪುನರ್ರೂಪಿಸಿಕೊಳ್ಳಬೇಕು.

೧೯೮೦ರ ದಶಕದಲ್ಲಿ, ಮೊದಲು ಸಮಾಜ ವಿಜ್ಞಾನಿಯಾಗಿದ್ದು ಅನಂತರ ರಾಜಕಾರಣಿಯಾದ ರಷ್ಯಾದ ಯೆವ್‌ಜೆನಿ ಪ್ರಿಮಕೋವ್ ಒಂದು ಸಂಗತಿಯ ಬಗ್ಗೆ ಅಚ್ಚರಿಪಟ್ಟಿದ್ದ ಆಗ, ಡಸ್ಸೆಲ್ ಡೋರ್ಫ್ ಎಂಬೊಂದು ಊರಿನಲ್ಲಿ, ಅಲ್ಲಿನ ಉಕ್ಕಿನ ಕಾರ್ಖಾನೆಗಿಂತ ಹೆಚ್ಚು ಮಂದಿಯನ್ನು ಮೆಕ್‌ಡೊನಾಲ್ಡ್ ಸಂಸ್ಥೆಯು ನೌಕರಿಯಲ್ಲಿಟ್ಟುಕೊಂಡಿತ್ತು; ಪ್ರಖ್ಯಾತ ಕಂಪೆನಿ ಕ್ರಪ್ಸ್‌ಗಿಂತ ಕೋಕಾಕೋಲಾ ಕಂಪೆನಿಯೇ ಅಧಿಕ ತೆರಿಗೆಯನ್ನು ಕೊಡುತ್ತಿತ್ತು. ಹಳೆಯ ನಂಬಿಕೆಗಳ ಆ ಮಾರ್ಕ್ಸಿಸ್ಟ್ ಪಂಡಿತನಿಗೆ– ಸಮೂಹ ಸಂಸ್ಕೃತಿಯೆಂಬುದು ಬುದ್ಧಿವಂತ ರಾಜಕಾರಣವಷ್ಟೇ ಅಲ್ಲ, ತರ್ಕಬದ್ಧ ಅರ್ಥಶಾಸ್ತ್ರವೂ ಹೌದು–ಎಂಬ ವಿಚಾರ ಅರ್ಥವಾಗದೆ ಉಳಿದಿತ್ತು. ಅಷ್ಟೇ ಅಲ್ಲ, ಅಂಥ ಸಮೂಹ ಸಂಸ್ಕೃತಿಯನ್ನು ಪ್ರತಿಭಟಿಸಿದರೆ ಸ್ವಾಸ್ಥ್ಯ ಮತ್ತು ವೈಚಾರಿಕತೆಯನ್ನು ಮೂದಲಿಸಿದಂತೆ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಕೂಡಾ ಆತ ವಿಫಲನಾಗಿದ್ದ. ಅಂಥ ಪ್ರತಿಭಟನೆಯ ಸುಖವನ್ನು ಅನುಭವಿಸಬೇಕಾದರೆ ನಾವು ಏಕಕಾಲಕ್ಕೆ ಬೃಹತ್ ಗ್ರಾಹಕ ಪ್ರಪಂಚವನ್ನೂ, ವೈಚಾರಿಕತೆಯ ಪ್ರಪಂಚಗಳನ್ನೂ ಎದುರು ಹಾಕಿಕೊಳ್ಳಬೇಕಾಗುತ್ತದೆ.

ಬಹಳ ವರ್ಷಗಳ ಹಿಂದೆ, ಕೋಕಾಕೋಲಾವು ಒಂದು ವೈಜ್ಞಾನಿಕ ಸಾಂಸ್ಕೃತಿಕ ಆವಿಷ್ಕಾರವಾಗಿ ತನ್ನ ಪಯಣವನ್ನು ಆರಂಭಿಸಿದಾಗ ಅದರೊಳಗೆ ಕೊಕೇನ್ ಅಂಶವಿದೆಯೆಂಬ ಆಪಾದನೆಯಿತ್ತು. ಇದು ನಿಜ ಹೌದಾಗಿದ್ದ ಪಕ್ಷದಲ್ಲಿ, ಇದನ್ನು ಕಾರ್ಪೋರೇಟ್ ದುರಾಸೆಯ, ನೀತಿಗೇಡಿತನದ ಅತ್ಯುತ್ತಮ ಉದಾಹರಣೆಯಾಗಿ ಓದಲು ಕೆಲವರು ಇಚ್ಛಿಸಬಹುದು. ಕೋಕಾಕೋಲಾ ಕಾರ್ಪೋರೇಷನ್ ತನ್ನ ಗ್ರಾಹಕರ ಕುರಿತು ಎಷ್ಟು ನಿಷ್ಕಾಳಜಿಹೊಂದಿತ್ತು ಎಂಬುದಕ್ಕೆ ಇದು ಪುರಾವೆಯಾಗಿಯೂ ಕಾಣಬಹುದು. ಆದರೆ, ನಾನದನ್ನು ಬೇರೆ ರೀತಿಯಾಗಿ ಓದಲು ಬಯಸುತ್ತೇನೆ–

ಜಾಗತಿಕ ಸಂಸ್ಕೃತಿಯೊಳಗೆ ತಾನು ಹರಿಯಬಿಟ್ಟ ತನ್ನದೇ ಉತ್ಪಾದನೆಯೊಂದರ ಕುರಿತು ಸ್ವತಃ ಆ ಕೋಕಾಕೋಲಾ ಕಾರ್ಪೋರೇಷನ್ ಎಷ್ಟು ಕಡಿಮೆ ತಿಳಿದುಕೊಂಡಿತ್ತು ಎಂಬುದಕ್ಕೆ ಈ ವಿಷಯವು ನನಗೆ ಸಾಕ್ಷಿಯಾಗಿ ಕಾಣುತ್ತದೆ. ಹತ್ತೊಂಬತ್ತನೇ ಶತಮಾನದ ಬಂಡವಾಳಶಾಹಿಯ ಸಿದ್ಧಾಂತಗಳಿಗನುಗುಣವಾಗಿ ಸಾಗಿದ್ದ ಆಗಿನ ಆ ಕೋಕಾಕೋಲಾ ಕಾರ್ಪೋರೇಷನ್, ಗ್ರಾಹಕ ವೃಂದವು ತನ್ನ ಕೈತಪ್ಪಿಬಾರದೆಂಬ ಆಶಯದಿಂದಲೂ ಹಾಗೂ ತನ್ನ ಉತ್ಪಾದನೆಗಿರುವ ಬೇಡಿಕೆಯನ್ನು ಬಿಗಿಗೊಳಿಸುವ ಸಲುವಾಗಿಯೂ ಗ್ರಾಹಕರನ್ನು ಚಟಕ್ಕೆ ಬೀಳಿಸುವ ವಸ್ತುವೊಂದನ್ನು ಮಾರತೊಡಗಿತ್ತು. ಅರ್ಥಾತ್, ತಾನು ಒಂದು ವಿಶ್ವದೃಷ್ಟಿಯನ್ನು ಮತ್ತು ಒಂದು ಜೀವನ ಶೈಲಿಯನ್ನೂ ಪ್ರಪ್ರಥಮವಾಗಿ ಮಾರತೊಡಗಿದ್ದೇನೆ – ಎಂಬ ಅರಿವು ಆಗಿನ ಆ ಕೋಕಾಕೋಲಾ ಕಾರ್ಪೋರೇಷನ್‌ಗಿರಲಿಲ್ಲ. ಅಂದರೆ, ಅಕ್ರಮ ಸಾರಾಯಿ ಮಾರುವವರೋ ಅಥವಾ ಮಾದಕ ವಸ್ತು ಮಾರಾಟಗಾರರೋ ಮಾಡುವ ಹಾಗೆ, ಗ್ರಾಹಕರನ್ನು ಯಾವುದೇ ಭೌತಿಕ ಮತ್ತು ವಸ್ತುವಿನ ಚಟಕ್ಕೆ ಸಿಲುಕಿಸದೆಯೇ, ಅವರನ್ನು ಒಂದು ಸಾಂಸ್ಕೃತಿಕ ಚಟಕ್ಕೆ ಕೆಡಹುವ ಹೊಸ ಪೇಯವೊಂದನ್ನು ತಾನು ತಯಾರಿಸುತ್ತಿದ್ದೇನೆ ಎಂಬುದು ಆಗ ಕೋಕಾಕೋಲಾಕ್ಕೆ ತಿಳಿದಿರಲಿಲ್ಲ.

ಇವತ್ತು ದಕ್ಷಿಣ ಭೂಗೋಲದಲ್ಲಿ, ನಗರವಾಸಿಗಳನ್ನೂ ಸಮೂಹ ಮಾಧ್ಯಮಗಳಿಗೆ ತೆರೆದುಕೊಂಡವರನ್ನೂ ಆಧುನೀಕರಣಗೊಳ್ಳುತ್ತಿರುವರನ್ನೂ ಆವರಿಸಿಕೊಳ್ಳುತ್ತಿರುವ ಸಮೂಹ ಸಂಸ್ಕೃತಿಯಲ್ಲಿ ಕೋಕಾಕೋಲಾ ಎಂಬುದು ಜ್ಞಾನೋತ್ಪತ್ತಿಯ ಮೀಮಾಂಸೆಗೆ ಸಂಬಂಧಿಸಿದ ಒಂದು ವಿಚಾರವೇ ಹೊರತು ಸಿದ್ಧಜ್ಞಾನವಲ್ಲ. ಅದೊಂದು ಚಿಂತನಾಕ್ರಮವೇ ಹೊರತು ಸಿದ್ಧಚಿಂತೆಯಲ್ಲ, ಅಥವಾ ಅದೊಂದು ಕನಸು ಕಾಣುವ ಕ್ರಮವೂ ಇದ್ದೀತು; ಆದರೆ, ಪ್ರಾಯಶಃ ಅದು ಇತರ ಬಗೆಯ ಕನಸುಗಳನ್ನೆಲ್ಲ ಪಲ್ಲಟಗೊಳಿಸುವ ಬಗೆಯದು.

❑

# ೪.೨ ರೇಡಿಯಂ ಮಹಾಮಾತೆ – ಮೇರಿಕ್ಯೂರಿ

– ಡಾ. ನೇಮಿಚಂದ್ರ

ನಾವು ಬದುಕಿನಲ್ಲಿ ಆಯ್ದುಕೊಳ್ಳುವ ಮಾದರಿಗಳು ನಮ್ಮ ಬದುಕಿನ ಮೇಲೆ ಎಷ್ಟೊಂದು ಪ್ರಭಾವ ಬೀರಬಲ್ಲವು ಎಂದು ಯೋಚಿಸುವಾಗ, ಅಚ್ಚರಿಯಾಗುತ್ತದೆ. ನಾನು ಹತ್ತನೇ ತರಗತಿಯಲ್ಲಿದ್ದ ಸಮಯದಲ್ಲಿ ನಮ್ಮ ತಂದೆಯವರ ಪುಸ್ತಕಗಳ ಸಂಗ್ರಹದಲ್ಲಿ ನನಗೆ ಮೇರಿ ಕ್ಯೂರಿಯನ್ನು ಕುರಿತು ಒಂದು ಪುಟ್ಟ ಪುಸ್ತಕ ಸಿಕ್ಕಿತ್ತು. ಆಕೆಯ ಅಸಾಧಾರಣ ಬದುಕು ಆ ಎಳೆಯ ವಯಸ್ಸಿನಲ್ಲಿ ಎಲ್ಲಿಲ್ಲದ ಪ್ರಭಾವ ಬೀರಿತು. ನಾನು ವಿಜ್ಞಾನ–ತಂತ್ರಜ್ಞಾನ ರಂಗವನ್ನು ಆಯ್ದುಕೊಳ್ಳುವಲ್ಲಿ, ಅತಿ ಸೂಕ್ಷ್ಮವಾಗಿ ಸುಪ್ತ ಪ್ರಜ್ಞೆಯಲ್ಲೆಲ್ಲೋ ಮೇರಿ ಕ್ಯೂರಿಯ ಬದುಕು ಪ್ರೇರೇಪಿಸಿತ್ತು.

ವಿಜ್ಞಾನ ರಂಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಮೊದಲ ಮಹಿಳೆ ಮೇರಿ ಕ್ಯೂರಿ. ಇಂದಿನವರೆಗೂ ವಿಜ್ಞಾನದ ಬೇರೆ ಬೇರೆ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಕೈಕ ವಿಜ್ಞಾನಿ, ಮೇರಿ ಕ್ಯೂರಿ. ೧೯೦೩ರಲ್ಲಿ ಮೇರಿಗೆ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಲಭಿಸಿತು. ೧೯೧೧ರಲ್ಲಿ ರಸಾಯನಶಾಸ್ತ್ರದ ನೊಬೆಲ್ ಪಾರಿತೋಷಕ ಲಭಿಸಿತು.

* * *

ಮೇರಿ ಕ್ಯೂರಿ ದಿನಾಂಕ ೭ ನವೆಂಬರ್ ೧೮೬೭ರಂದು ಜನಿಸಿದಳು. ರಷಿಯಾದ ಚಕ್ರವರ್ತಿಯ ಆಳ್ವಿಕೆಯಲ್ಲಿ ಪರತಂತ್ರವಾದ ಪೋಲೆಂಡಿನಲ್ಲಿ ಹುಟ್ಟಿದಾಕೆ. ಎಳೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ನಾಲ್ಕು ಮಕ್ಕಳಲ್ಲಿ ಕಡೆಯವಳು ಮೇರಿ. ತಾಯಿಯಿಲ್ಲದ ತಬ್ಬಲಿ ಮಕ್ಕಳನ್ನು ಬೆಳೆಸಿದ ತಂದೆ, ಗಂಡು–ಹೆಣ್ಣು ಭೇದ ಮಾಡದೆ ತನ್ನ ನಾಲ್ಕೂ ಮಕ್ಕಳನ್ನು ಕೂರಿಸಿಕೊಂಡು ಉತ್ತಮ ಸಾಹಿತ್ಯವನ್ನು ಓದಿ ಹೇಳಿದ, ಭೌತಶಾಸ್ತ್ರ, ರಸಾಯನಶಾಸ್ತ್ರಗಳನ್ನು ಅವರಿಗೆ ಪರಿಚಯಿಸಿದ. ತನ್ನ ಕಾಲದ ಹೆಣ್ಣು ಮಕ್ಕಳಿಗೆ ದಕ್ಕಿರದ ಅಪರೂಪದ ಬೌದ್ಧಿಕ ಪರಿಸರ ಮೇರಿಯ ಪಾಲಿಗೆ ದಕ್ಕಿದ್ದು ಆಕೆಯ ಬದುಕಿಗೆ ಭದ್ರ ಬುನಾದಿ ಹಾಕಿತು.

ಮೇರಿ ಚಿನ್ನದ ಪದಕವನ್ನು ಪಡೆದು ಶಾಲೆ ಮುಗಿಸಿದಳು. ಆದರೆ ಬಡತನದ ಬಗಲಿನಲ್ಲೇ ಬೆಳೆದ ಮೇರಿಗೆ ಉನ್ನತ ವ್ಯಾಸಂಗ ಸುಲಭಕ್ಕೆ ಕೈಗೆಟಕುವಂತಿರಲಿಲ್ಲ. ಪರತಂತ್ರ ಪೋಲೆಂಡಿನ ವಿಶ್ವವಿದ್ಯಾಲಯದಲ್ಲಿ ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋಗಬೇಕಿತ್ತು. ಬಡತನದಿಂದಾಗಿ ಈ ಪ್ರತಿಭಾವಂತ ಮಕ್ಕಳಿಗೆ ವಿದೇಶಕ್ಕೆ ಹೋಗುವುದು ಅಷ್ಟು ಸುಲಭವಿರಲಿಲ್ಲ. ಮೇರಿ ಪರರ ಮನೆಯಲ್ಲಿ ದುಡಿದು, ಅಕ್ಕನನ್ನು ಪ್ಯಾರೀಸಿಗೆ ಕಳುಹಿಸಿದಳು. ಅಕ್ಕ ಕೊನೆಯ ವರ್ಷದಲ್ಲಿದ್ದಾಗ, ಮೇರಿ ಪ್ಯಾರಿಸಿಗೆ ಬಂದು, ಸೋರ್ಬನ್ ವಿಶ್ವವಿದ್ಯಾಲಯದಲ್ಲಿ ಗಣಿತ ಮತ್ತು ಭೌತಶಾಸ್ತ್ರ ಎರಡರಲ್ಲೂ ಸ್ನಾತ್ತಕೋತ್ತರ ಪದವಿಯನ್ನು ಪಡೆದಳು.

ಇದೇ ಸಮಯದಲ್ಲಿ ಮೇರಿಗೆ, ಮೇಧಾವಿ ವಿಜ್ಞಾನಿ ಪಿಯರ್ ಕ್ಯೂರಿಯ ಪರಿಚಯವಾಯಿತು. ಮೊದಲ ಭೆಟ್ಟಿಯಲ್ಲೇ ಸರಳ ಸ್ವಭಾವದ ಸಹಜ ವಿಜ್ಞಾನಿ ಮೇರಿ, ಪಿಯರ್‌ನನ್ನು ಆಕರ್ಷಿಸಿದ್ದಳು. ವಿಜ್ಞಾನದ ಹಸಿವಿನ ಈ ಇಬ್ಬರ ನಡುವೆ ಸ್ನೇಹ ಗಾಢವಾಯಿತು. ೧೮೯೫ರಲ್ಲಿ ಯಾವುದೇ ಅಂಧ ಶ್ರದ್ಧೆಯಲ್ಲಿ, ಮತಾಚರಣೆಯಲ್ಲಿ, ಸಂಪ್ರದಾಯದಲ್ಲಿ ನಂಬಿಕೆ ಇರಿಸದ ಈ ಇಬ್ಬರು ವಿಜ್ಞಾನಿಗಳು, ಬೆರಳಿಗೊಂದು ಉಂಗುರ ತೊಡಿಸದೆಯೇ ವಿವಾಹವಾದರು.

೧೮೯೭ರಲ್ಲಿ ಫೆಲೋಷಿಫ್ ಪರೀಕ್ಷೆಯಲ್ಲಿ ಮೇರಿ ಮೊದಲನೆಯವಳಾಗಿ ಉತ್ತೀರ್ಣಳಾದಳು. ಉಕ್ಕಿನ ಆಯಸ್ಕಾಂತ ಗುಣಗಳನ್ನು ಕುರಿತು ಆಕೆಯ ಸಂಶೋಧನೆ ನಡೆದಿತ್ತು. ೧೮೯೭ರಲ್ಲಿ ಮೊದಲ ಮಗಳು ಐರೀನ್ ಹುಟ್ಟಿದಳು. ಐರೀನ್ ಹುಟ್ಟಿದ ಮೂರು ತಿಂಗಳಲ್ಲೇ ತನ್ನ ಸಂಶೋಧನೆಯ ಫಲಿತಾಂಶಗಳನ್ನು ಮೇರಿ ಪ್ರಕಟಿಸಿದಳು.

ಇದೀಗ ಮೇರಿ ತನ್ನ ಡಾಕ್ಟರಲ್ ಥೀಸೀಸ್‌ಗೊಂದು ವಿಷಯುವನ್ನು ಆರಿಸಿಕೊಳ್ಳಬೇಕಿತ್ತು. ಹೊಸದೇನನ್ನೋ ಹುಡುಕಿ ಹೊರಟ ಅವಳನ್ನು ಹೆನ್ರಿ ಬೆಕೆರಲ್‌ನ ಇತ್ತೀಚಿನ ಪ್ರಯೋಗಗಳು ಆಕರ್ಷಿಸಿದವು. ಕ್ಷ–ಕಿರಣಗಳನ್ನು ವಿಜ್ಞಾನಿ ರಾಂಟ್ಜೆನ್ ಕಂಡು ಹಿಡಿದ ಮೇಲೆ ಹೆನ್ರಿ ಪೊಯಿನ್ಕೇರ್ ಕ್ಷ–ಕಿರಣಗಳಂಥಾ ಕಿರಣಗಳನ್ನು ಸ್ಫುರಣ ಗುಣವುಳ್ಳ ವಸ್ತುಗಳು, ಬೆಳಕಿನ ಪ್ರಭಾವದಲ್ಲಿ ಚಿಮ್ಮುತ್ತವೆಯೆಂದು ಪ್ರತಿಪಾದಿಸಿದ. ಈ ಸಮಸ್ಯೆಯಿಂದ ಆಕರ್ಷಿತನಾದ ಹೆನ್ರಿ ಬೆಕರೆಲ್ ಯುರೇನಿಯಂ ಲವಣಗಳನ್ನು ಪರೀಕ್ಷಿಸಿದ. ಬೆಳಕಿಗೆ ಒಡ್ಡದೆಯೇ, ಯುರೇನಿಯಂ ಲವಣಗಳು ಕೆಲವು ಅಗೋಚರ ಕಿರಣಗಳನ್ನು ಚಿಮ್ಮುತ್ತಿದ್ದವು. ಬೆಕರೆಲ್‌ನ ಈ ಸಂಶೋಧನೆ ಮೇರಿಯನ್ನು ಆಕರ್ಷಿಸಿತು. ಆದರೆ ಈ ಕಿರಣಗಳ ಗುಣ ಸ್ವಭಾವ, ಅವುಗಳ ಮೂಲವೊಂದೂ ತಿಳಿದಿರಲಿಲ್ಲ. ಸತತವಾಗಿ ಅದೃಶ್ಯ ಕಿರಣಗಳನ್ನು ಹೊರಚಿಮ್ಮುವ ಶಕ್ತಿ ಯುರೇನಿಯಂಗೆ ಬಂದದ್ದಾದರೂ ಎಲ್ಲಿಂದ ಎಂದು ಅಚ್ಚರಿಗೊಂಡ ಮೇರಿ, ತನ್ನ ಡಾಕ್ಟರ್ ಡಿಗ್ರಿಗೆ ಇದೇ ವಿಷಯವನ್ನು ಆರಿಸಿಕೊಂಡಳು. ಆ ಸಮಯಕ್ಕಿನ್ನೂ ಯಾವ ವಿಜ್ಞಾನಿಯೂ ಯುರೇನಿಯಂ ಕಿರಣಗಳ ಮೂಲ ಅಧ್ಯಯನಕ್ಕಿಳಿದಿರಲಿಲ್ಲ. ಆ ವಿಷಯವನ್ನು ಕುರಿತು ಪರಾಮರ್ಶಿಸಲು ಯಾವುದೇ ಮಾಹಿತಿ ಇರಲಿಲ್ಲ.

ತನ್ನ ಸಂಶೋಧನೆ ಆರಂಭಿಸಿದ ಮೇರಿಗೆ, ಯುರೇನಿಯಂ ಒಂದೇ ಇಂಥಾ ಕಿರಣಗಳನ್ನು ಚಿಮ್ಮುತ್ತದೆಯೇ, ಇಲ್ಲ ಬೇರೆ ವಸ್ತುಗಳಲ್ಲೂ ಈ ವಿಕಿರಣ ಶಕ್ತಿ ಇದೆಯೆ ಎಂಬ ಪ್ರಶ್ನೆ ಕಾಡಿತು. ತಿಳಿದ ಎಲ್ಲಾ ರಾಸಾಯನಿಕ ವಸ್ತುಗಳನ್ನು ಪರೀಕ್ಷಿಸಿದಳು. ಥೋರಿಯಂನಲ್ಲೂ ಇಂತಹ ವಿಕಿರಣ ಶಕ್ತಿ ಇರುವುದನ್ನು ಗುರುತಿಸಿದಳು. ಈ ವಿಶಿಷ್ಟ ಗುಣವನ್ನು ಮೇರಿ 'ವಿಕಿರಣಶೀಲತೆ' ಎಂದು ಕರೆದಳು. ಮೇರಿ ಥೋರಿಯಂ ಮತ್ತು ಯುರೇನಿಯಂ ಮೂಲಧಾತುಗಳಿದ್ದ 'ಪಿಚ್ ಬ್ಲೆಂಡ್' ಎಂಬ ಅದುರನ್ನು ಪರಿಶೀಲಿಸಿದಾಗ, ಆ ಅದುರಿನಲ್ಲಿರುವ ಯುರೇನಿಯಂ ಮತ್ತು ಥೋರಿಯಂನ ಪ್ರಮಾಣಕ್ಕೆ ಹೋಲಿಸಿದರೆ, ಆ ಅದುರಿನಿಂದ ಹೊರಚಿಮ್ಮುವ ವಿಕಿರಣತೆ ಅತ್ಯಧಿಕವಾಗಿರುವುದು ಕಂಡು ಬಂದಿತು. ಹಾಗಾದರೆ ಈ ಅಧಿಕ ಪ್ರಮಾಣದ ವಿಕಿರಣ ಎಲ್ಲಿಂದ ಬಂತು ಎಂದು ಯೋಚಿಸಿ ಹೊರಟ ಮೇರಿಗೆ, ಆ ಖನಿಜದಲ್ಲಿ ಅಡಗಿರಬಹುದಾದ ಸಣ್ಣ ಪ್ರಮಾಣದ ಮತ್ಯಾವುದೋ ಒಂದು ಅತ್ಯಂತ ಶಕ್ತಿಶಾಲಿ ವಿಕಿರಣಶೀಲ ವಸ್ತುವಿನ ಕಲ್ಪನೆ ಮೂಡಿತು. ಈ ಹೊಸ ಮೂಲಧಾತುವಿನ ಅದ್ಭುತ ಸಾಧ್ಯತೆಯನ್ನು ಮೇರಿ ಪ್ರಕಟಿಸಿದಳು. ಪತ್ನಿಯ ವೇಗದ ಸಂಶೋಧನೆಯನ್ನು ನಿಕಟವಾಗಿ ಗಮನಿಸಿದ್ದ ಪಿಯರ್ ಕ್ಯೂರಿ, ಆಕೆಯ ಸಂಶೋಧನೆಯ ಮಹತ್ವವನ್ನು ಅರಿತು, ತನ್ನ ಸ್ವಂತ ಸಂಶೋಧನೆಯನ್ನು ಬದಿಗಿಟ್ಟು, ಮೇರಿಯ ಮೂಲಧಾತುವಿನ ಹುಡುಕಾಟಕ್ಕೆ ಜೊತೆಯಾದ.

ಕ್ಯೂರಿ ದಂಪತಿಗಳು ಪಿಚ್ ಬ್ಲೆಂಡ್‌ನಲ್ಲಿ ಹೊಸ ಮೂಲಧಾತುವಿನ ಇರುವಿಕೆಯನ್ನು ಹುಡುಕಿ ಹೊರಟರು. ಆದರೆ ಪಿಚ್ ಬ್ಲೆಂಡ್‌ನ ಸಂಯೋಜನೆಯನ್ನು ಬಹಳಷ್ಟು ನಿಖರವಾಗಿ ವಿಜ್ಞಾನಿಗಳು ತಿಳಿದಿದ್ದರು. ಅವರ ಸೂಕ್ಷ್ಮ ದೃಷ್ಟಿಗೆ ಬಾರದಂತಿರಬೇಕಾದರೆ ಈ ಹೊಸ ಮೂಲಧಾತು ಅತ್ಯಂತ ಸಣ್ಣ ಪ್ರಮಾಣದಲ್ಲಿರಬೇಕೆಂದು ಅನುಮಾನಿಸಿದರು. ಎಷ್ಟೇ ನಿರಾಶಾದಾಯಕವಾಗಿ ಊಹಿಸಿದರೂ, ಈ ಹೊಸ ಮೂಲಧಾತು ಶೇಕಡಾ ಒಂದಂಶವಾದರೂ ಇರಲಾರದೆ ಎಂದು ಹುಡುಕಿ ಹೊರಟ ಈ ದಂಪತಿಗಳಿಗೆ, ತಾವು ಹುಡುಕುತ್ತಿರುವ ಮೂಲಧಾತು ನೂರರಲ್ಲಿ ಒಂದು ಭಾಗವಾಗಿಲ್ಲ, ಹತ್ತು ಲಕ್ಷದಲ್ಲಿ ಒಂದು ಭಾಗವಾಗಿದೆ ಎಂದು ಆಗ ತಿಳಿದಿರಲಿಲ್ಲ!

ಮೆಲ್ಲನೆ ಅವರ ಶ್ರಮ ಫಲ ಕೊಡತೊಡಗಿತು. ಜುಲೈ ೧೮೯೮ರ ಹೊತ್ತಿಗೆ ಪಿಚ್ ಬ್ಲೆಂಡ್‌ನಲ್ಲಿ ಒಂದಲ್ಲ, ಎರಡು ಹೊಸ ಮೂಲಧಾತುಗಳ ಇರುವು ಕಂಡು ಬಂದಿತು. ಅದರಲ್ಲೊಂದರ ಇರುವನ್ನು ಅವರ ಪ್ರಯೋಗಗಳು ನಿಖರವಾಗಿ ತೋರಿದವು. ಮೇರಿ ಈ ಮೂಲಧಾತುವನ್ನು ಪ್ರಪಂಚದ ಭೂಪಟದಿಂದ ಅಳಿಸಿ ಹೋಗಿದ್ದ ತನ್ನ ತಾಯ್ನಾಡು ಪೋಲೆಂಡಿನ ನೆನಪಿಗೆ 'ಪೊಲೋನಿಯಂ' ಎಂದು ಕರೆದಳು. ಡಿಸೆಂಬರ್ ೧೮೯೮, ಮೇರಿ ಮತ್ತು ಪಿಯರ್ ಪಿಚ್ ಬ್ಲೆಂಡ್‌ನಲ್ಲಿದ್ದ ಎರಡನೆಯ

ಮೂಲಧಾತುವಿನ ಇರುವನ್ನೂ ಪ್ರಕಟಿಸಿದರು. ಈ ಹೊಸ ಮೂಲಧಾತುವನ್ನು 'ರೇಡಿಯಂ' ಎಂದು ಕರೆದರು.

ರೇಡಿಯಂನ ಇರುವಿಕೆಯನ್ನು ವಿಜ್ಞಾನಿಗಳು ಸುಲಭವಾಗಿ ಒಪ್ಪಿಕೊಳ್ಳುವಂತಿರಲಿಲ್ಲ. ರೇಡಿಯಂ ಗುಣ ಸ್ವಭಾವ ಶತಮಾನಗಳಿಂದ ನಂಬಿ ಬಂದ ವಿಜ್ಞಾನದ ಮೂಲತತ್ತ್ವಗಳಿಗೆ ವ್ಯತಿರಿಕ್ತವಾಗಿತ್ತು. ಇದುವರೆಗೂ ಶುದ್ಧ ರೂಪದಲ್ಲಿ ರೇಡಿಯಂನನ್ನು ಕಂಡವರಿರಲಿಲ್ಲ. ನಂಬದ ವಿಜ್ಞಾನಿಗಳಿಗೆ ಮೂಲಧಾತುವಿನ ಅಸ್ತಿತ್ವವನ್ನು ತಿಳಿಸಲು ರೇಡಿಯಂನನ್ನು ಶುದ್ಧರೂಪದಲ್ಲಿ ಬೇರ್ಪಡಿಸಬೇಕಿತ್ತು.

ಈಗ ಆರಂಭವಾಯಿತು ವಿಜ್ಞಾನದ ಚರಿತ್ರೆಯಲ್ಲಿಯೇ ಕಡು ಕಷ್ಟದ ಶೋಧನೆ. ಅವರ ಈ ಮಹತ್ವದ ಸಂಶೋಧನೆಗೆ ಅವರಿಗಾವ ವ್ಯವಸ್ಥಿತ ಪ್ರಯೋಗಶಾಲೆಯೂ ಕಾದಿರಲಿಲ್ಲ. ಯಾರ ಧನ ಸಹಾಯವೂ ಇರಲಿಲ್ಲ. ಕೊನೆಗೆ ಅವರ ಚಾರಿತ್ರಿಕ ಶೋಧನೆಗೆ ದೊರೆತದ್ದು, ಭೌತಶಾಸ್ತ್ರದ ಶಾಲೆಯ ಆವರಣದಲ್ಲಿದ್ದ ಒಂದು ಪಾಳು ಬಿದ್ದ ಮುರುಕಲು ಮರದ ಕೊಟ್ಟಿಗೆ. ಮುಗಿಲಿಗೆ ಬಾಯ್ಬಿಟ್ಟ ಸೂರು, ಮಳೆ, ಬಿಸಿಲು, ಹಿಮಕ್ಕೆಲ್ಲಕ್ಕೂ ದಾರಿಯಾಗಿತ್ತು. ಒಂದು ಕಾಲಕ್ಕೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೆಣ ಕೊಯ್ಯುವ ಕೊಠಡಿಯಾಗಿದ್ದ ಸ್ಥಳ. ಅನಾನುಕೂಲಗಳನ್ನು ಎಣಿಸುತ್ತಾ ಕೂರದೆ, ಕ್ಯೂರಿ ದಂಪತಿಗಳು ತಮ್ಮ ಸಂಶೋಧನೆಯ ಆಳಕ್ಕೆ ಧುಮುಕಿದರು.

ರೇಡಿಯಂನನ್ನು ಬೇರ್ಪಡಿಸಲು ಅತ್ಯಧಿಕ ಪ್ರಮಾಣದಲ್ಲಿ ಪಿಚ್‌ಬ್ಲೆಂಡ್ ಬೇಕಿತ್ತು. ಆದರೆ ಯುರೇನಿಯಂ ಅದುರಾದ ಪಿಚ್‌ಬ್ಲೆಂಡ್ ಆಸ್ಟ್ರಿಯಾದಲ್ಲಿ ಮಾತ್ರ ದೊರೆಯುತ್ತಿದ್ದ ಬಹಳ ದುಬಾರಿಯ ವಸ್ತು. ಅದನ್ನು ಕೊಳ್ಳುವ ಚೈತನ್ಯ ಮೇರಿ, ಪಿಯರಿಯರಿಗಿರಲಿಲ್ಲ. ಈ ಅದುರಿನಲ್ಲಿ ತಾವು ಹುಡುಕುತ್ತಿರುವ ಮೂಲಧಾತುಗಳು, ಯುರೇನಿಯಂನನ್ನು ಬೇರ್ಪಡಿಸಿದ ನಂತರ ಬಿಸಾಡುವ ಅದುರಿನಲ್ಲೂ ಇರಬೇಕಲ್ಲ ಎಂದು ತರ್ಕಿಸಿದರು. ತಕ್ಷಣ ಬೋಹೆಮಿಯಾದ ಗಣಿಗೆ ಪತ್ರ ಬರೆದರು, ಯುರೇನಿಯಂನನ್ನು ತೆಗೆದೆಸೆದ ಪಿಚ್‌ಬ್ಲೆಂಡಿನ ಕೆಲವು ಟನ್ನುಗಳನ್ನು ಮಿತ ಬೆಲೆಗೆ ನೀಡುವಂತೆ ಪ್ರಾರ್ಥಿಸಿದರು. ಈ ಕಪ್ಪು ಕೊಳಕು ಕಸವನ್ನು 'ಬೇಕೆನ್ನುವ ಹುಚ್ಚರಿಗೆ' ಕೇವಲ ಸಾರಿಗೆಯ ಖರ್ಚು ಭರಿಸಲು ಹೇಳಿ ಪುಕ್ಕಟೆಯಾಗಿ ಕಳುಹಿಸಿಕೊಟ್ಟಿತ್ತು, ಬೋಹೋಮಿಯಾದ ಗಣಿ!

ದೊಡ್ಡ ಕಬ್ಬಿಣದ ಕಡಾಯಿಯಲ್ಲಿ ಟನ್‌ಗಟ್ಟಲೆ ಪಿಚ್ ಬ್ಲೆಂಡನ್ನು ಸುರಿದು ಕುದಿಸುತ್ತಾ, ಆ ಅಗಾಧ ಪ್ರಮಾಣದ ಕೊಳಕು ದ್ರವವನ್ನು ತನ್ನೆತ್ತರದ ಕಬ್ಬಿಣದ ಸಲಾಕೆಯಿಂದ ತಿರುವುತ್ತ ನಿಂತ ಮೇರಿ, ಇಡೀ ಒಂದು ಕಾರ್ಖಾನೆಯಂತೆ ಕಾಣುತ್ತಿದ್ದಳು. ಕಡೆಗೂ ಮೇರಿ ಮತ್ತು ಪಿಯರ್ ತಮ್ಮ ನಾಲ್ಕು ವರ್ಷದ ಕಡು ಪರಿಶ್ರಮದ ಕೊನೆಗೆ, ಟನ್ನುಗಟ್ಟಲೆ ಪಿಚ್ ಬ್ಲೆಂಡನ್ನು ಪರಿಷ್ಕರಿಸಿದ ಮೇಲೆ ೦.೧ ಗ್ರಾಮ್‌ನಷ್ಟು ರೇಡಿಯಂನನ್ನು ಶುದ್ಧ ರೂಪದಲ್ಲಿ ಬೇರ್ಪಡಿಸುವಲ್ಲಿ ಯಶಸ್ವಿಯಾದರು. ರೇಡಿಯಂ ವಿಜ್ಞಾನದ

ಮೂಲಭೂತ ನಂಬಿಕೆಗಳನ್ನೇ ಬದಲಿಸಿತ್ತು. ವಿಕಿರಣಶೀಲತೆಯ ಹೊಸ ಪ್ರಭೇದವೊಂದು ಹುಟ್ಟು ಪಡೆದಿತ್ತು. ರೇಡಿಯಂ ಯುರೇನಿಯಂಗಿಂತ ೨೦ ಲಕ್ಷ ಪಟ್ಟು ಹೆಚ್ಚು ಶಕ್ತಿಶಾಲಿಯಾಗಿತ್ತು. ರೇಡಿಯಂ ಕಪ್ಪು ಕಾಗದದಲ್ಲಿ ಸುತ್ತಿಟ್ಟ ಛಾಯಾ ಗ್ರಹಣ ಕಾಗದಗಳ ಮೇಲೂ ಹೆಜ್ಜೆ ಮೂಡಿಸುತ್ತಿತ್ತು. ದೂರದಿಂದಲೇ ವಿದ್ಯುನ್ಮಾಪಕ ಸಲಕರಣೆಗಳ ಮೇಲೆ ಪ್ರಭಾವ ಬೀರಬಲ್ಲದು. ಬೇರೆ ಸಂಯುಕ್ತ ಪದಾರ್ಥಗಳೊಡನೆ ಮಿಶ್ರಣಗೊಂಡಾಗ ರೇಡಿಯಂನ ಅಗೋಚರ ಕಿರಣ ಸ್ಫುರಣವಾಗುತ್ತಿತ್ತು. ಇದಕ್ಕೆ 'ಫ್ಲೋರೆಸೆನ್ಸ್' ಎನ್ನುತ್ತಾರೆ. 'ಫ್ಲೋರೆಸೆನ್ಸ್' ಎಂದರೆ ಅಗೋಚರ ನೇರಳಾತೀತ ವರ್ಣ ಕಿರಣಗಳನ್ನು ದೃಗ್ಗೋಚರ ಮಾಡುವ ಗುಣ. ರೇಡಿಯಂನ ವಿಕಿರಣ ಶಕ್ತಿ ಅಂಗಾಂಶಗಳನ್ನು ನಾಶಪಡಿಸಬಲ್ಲದು. ಇದೇ ಕಾರಣಕ್ಕೆ ಕ್ಯಾನ್ಸರಿನ ಚಿಕಿತ್ಸೆಗೆ ರೇಡಿಯಂ ಬಳಕೆಗೆ ಬಂದಿತು.

ರೇಡಿಯಂ ಅತ್ಯಧಿಕ ಉಪಯೋಗದ ವಸ್ತು. ಅತ್ಯಂತ ಕುತೂಹಲ ಕೆರಳಿಸಿದ ವಸ್ತು. ದಿನದಿನವೂ ಹೊಸ ಹೊಸ ಉಪಯೋಗಗಳು ಹೊರಬಿದ್ದು, ರೇಡಿಯಂನ ಬೇಡಿಕೆಯೇರಿ, ರೇಡಿಯಂ ಕಾರ್ಖಾನೆಯೊಂದು ಜನ್ಮ ಪಡೆಯಿತು. ರೇಡಿಯಂನ ಕಣ ಕಣಕ್ಕೆ ಚಿನ್ನದ ಬೆಲೆಯಿತ್ತು. ತಾವು ಕಂಡು ಹಿಡಿದ ರೇಡಿಯಂನನ್ನು ಪೇಟೆಂಟ್ ಮಾಡಿ ಕ್ಷಣದಲ್ಲಿ ಈ ದಂಪತಿಗಳು ಕೋಟ್ಯಾಧೀಶ್ವರರಾಗಲು ಸಾಧ್ಯವಿತ್ತು. ಆದರೆ ಮೇರಿ ಪೇಟೆಂಟ್ ಮಾಡಲು ನಿರಾಕರಿಸಿದಳು, ರೇಡಿಯಂನನ್ನು ಮಾನವ ಸೇವೆಗೆ ಅರ್ಪಿಸಿದಳು.

೧೯೦೩, ನವೆಂಬರ್ ತಿಂಗಳು ಮೇರಿ ಮತ್ತು ಪಿಯರಿಗೆ ಲಂಡನ್ನಿನ 'ರಾಯಲ್ ಸೊಸೈಟಿ' ತನ್ನ ಅತ್ಯುತ್ತಮ ಪ್ರಶಸ್ತಿ 'ಡೇವಿಪದಕ'ವನ್ನು ನೀಡಿ ಗೌರವಿಸಿತು. ಡಿಸೆಂಬರ್ ೧೯೦೩, ಮೇರಿ ಮತ್ತು ಪಿಯರಿಗೆ ಭೌತಶಾಸ್ತ್ರದ ನೊಬೆಲ್ ಪಾರಿತೋಷಕ ದೊರೆಯಿತು.

೧೯೦೪ರಲ್ಲಿ ಕ್ಯೂರಿ ದಂಪತಿಗಳಿಗೆ ಎರಡನೇ ಮಗಳು ಈವ್ ಹುಟ್ಟಿದಳು. ಕಡೆಗೂ ಫ್ರಾನ್ಸ್ ಈ ದಂಪತಿಗಳನ್ನು ಗುರುತಿಸಿ ವಿಶ್ವವಿದ್ಯಾಲಯದಲ್ಲಿ ಕೆಲಸ ನೀಡಿತು. ಆರ್ಥಿಕ ಸ್ಥಿತಿಯೂ ಸುಧಾರಿಸಿತು. ಆದರೆ ೧೯೦೬ರಲ್ಲಿ ರಸ್ತೆಯ ಅಪಘಾತದಲ್ಲಿ ಪಿಯರ್ ಮೃತನಾದ. ಮೇ ೧೯೦೬, ಸರ್ವಾನುಮತದಿಂದ ಪಿಯರಿಯ ಸ್ಥಾನವನ್ನು ಮೇರಿಗೆ ಒಪ್ಪಿಸಿದರು. ಸೋರ್ಬನ್‌ನ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಹುದ್ದೆಗೆ ಆಯ್ಕೆಯಾದ ಮೊಟ್ಟ ಮೊದಲ ಮಹಿಳೆ, ಮೇರಿ ಕ್ಯೂರಿ.

ಮೇರಿ ಕ್ಯೂರಿ ಪ್ರಾಧ್ಯಾಪಕಳಾಗಿ, ಸಂಶೋಧಕಿಯಾಗಿ, ಪ್ರಯೋಗಶಾಲೆಯ ನಿರ್ದೇಶಕಳಾಗಿ ಮತ್ತದೇ ಸಾಟಿ ಇಲ್ಲದ ತೀವ್ರತೆಯಲ್ಲಿ ದುಡಿದಳು. ಇಲ್ಲಿಯವರೆಗಿನ ರೇಡಿಯಂ ತಯಾರಿಕೆಯೆಲ್ಲ, ರೇಡಿಯಂ ಲವಣದ ರೂಪದಲ್ಲಿತ್ತು. ರೇಡಿಯಂ ಲೋಹದ ತಯಾರಿಕೆ ಅತ್ಯಂತ ಕಷ್ಟಕರ ಸಾಧನೆಯಾಗಿತ್ತು. ರೇಡಿಯಂ ಮತ್ತು ಪೊಲೋನಿಯಂ ಮೂಲಧಾತುಗಳನ್ನು ಶೋಧಿಸಿ, ರೇಡಿಯಂನನ್ನು ಬೇರ್ಪಡಿಸಿ

ಅಧ್ಯಯನ ಮಾಡಿದ ಮೇರಿ ಕ್ಯೂರಿ ರಸಾಯನಶಾಸ್ತ್ರದ ವಿಕಾಸಕ್ಕೆ ಕಾರಣಳಾದಳು. ಆಕೆಯ ಈ ಶ್ರೇಷ್ಠ ಸಂಶೋಧನೆಯನ್ನು ಗುರುತಿಸಿ, ೧೯೧೧ರಲ್ಲಿ ಮೇರಿಗೆ ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ನೀಡಲಾಯಿತು.

ಆದರೆ ದೀರ್ಘ ಕಾಲದ ವಿಕಿರಣಶೀಲ ವಸ್ತುಗಳ ಸಹವಾಸ ಮೇರಿಯ ದೇಹವನ್ನು ದುರ್ಬಲಗೊಳಿಸಿತ್ತು. ೧೯೩೪ರ ಜುಲೈ ೪ರಂದು, ತನ್ನ ೬೭ನೇ ವರ್ಷದಲ್ಲಿ ವಿಕಿರಣದಿಂದ ಬಂದ ಮಾರಕ ರೋಗವಾದ ರಕ್ತದ ಕ್ಯಾನ್ಸರಿಗೆ ಗುರಿಯಾಗಿ ಮೃತಪಟ್ಟಳು.

ಮೇರಿಯ ಮೊದಲ ಮಗಳು ಐರೀನ್ ಕ್ಯೂರಿ ಮತ್ತು ಅಳಿಯ ಫೆಡರಿಕ್ ಜೋಲಿಯೋ ಕ್ಯೂರಿ ಕೃತಕ ವಿಕಿರಣಶೀಲತೆಯನ್ನು ಕಂಡು ಹಿಡಿದು, ೧೯೩೫ರಲ್ಲಿ ನೊಬೆಲ್ ಪಾರಿತೋಷಕ ಪಡೆದರು.

* * *

ಇಸವಿ ೧೯೯೭ರಲ್ಲಿ ನಾನು ಮೇರಿ ಕ್ಯೂರಿಯ ಕರ್ಮಭೂಮಿ ಪ್ಯಾರೀಸ್ ತಲುಪಿದೆ. ಅಲ್ಲಿ ಮೇರಿ ಕ್ಯೂರಿ ರೇಡಿಯಂ ಕಂಡು ಹಿಡಿದ ಜಾಗ, ಪತಿ ಪಿಯರಿಯೊಡನೆ ದುಡಿದ ಪ್ರಯೋಗ ಶಾಲೆ, ಆಕೆ ಸ್ಥಾಪಿಸಿದ 'ರೇಡಿಯಂ ಸಂಸ್ಥೆ', ಆಕೆಯ ಚಿರಶಾಂತಿಯ ತಾಣ ಇವೆಲ್ಲವನ್ನು ಹುಡುಕಿ ಹೋಗಿದ್ದೆ. 'ಒಂದು ಕನಸಿನ ಪಯಣ' ಪುಸ್ತಕದಲ್ಲಿ ಆ ರೋಮಾಂಚನದ ಅನುಭವವನ್ನು ದಾಖಲಿಸಿದೆ. ಪಿಯರ್ ಮತ್ತು ಮೇರಿಯರ ಪ್ರಯೋಗಶಾಲೆಯ ನೋಟು ಪುಸ್ತಕದ ಹಾಳೆಗಳು ಈಗಲೂ ವಿಕಿರಣವನ್ನು ಚಿಮ್ಮುತ್ತಿರುವುದನ್ನು ಅಲ್ಲಿ ಕಂಡಿದ್ದೆ. ಮೇರಿ ಕ್ಯೂರಿಯ ಸಣ್ಣ ಕೋಣೆಯಲ್ಲಿ, ಸರಳ ಪ್ರಯೋಗಶಾಲೆಯಲ್ಲಿ ಅದೆಷ್ಟೋ ಹೊತ್ತು ಕಳೆದಿದ್ದೆ. ಮೇರಿ ಪ್ರಕೃತಿಯಲ್ಲಿದ್ದ ಅತ್ಯಂತ ಶಕ್ತಿಶಾಲಿ ವಿಕಿರಣಶೀಲ ವಸ್ತುವನ್ನು ಕಂಡು ಹಿಡಿದಳು. ಮಾನವ ಸೇವೆಗೆ ರೇಡಿಯಂನನ್ನು ಅರ್ಪಿಸಿದಳು. ಇಪ್ಪತ್ತನೇ ಶತಮಾನದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಮೇರಿಯ ಸಂಶೋಧನೆಯಿಂದ ವಿಕಾಸಗೊಂಡಿತು. ಪರಮಾಣು ರಚನೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಯಿತು. 'ಪರಮಾಣು ಯುಗ'ಕ್ಕೆ ನಾಂದಿಯಾಯಿತು.

❑

## ೪.೩ ಒಥೆಲೊ ಮತ್ತು ಅಮೃತಮತಿ

**– ಲಕ್ಷ್ಮೀಪತಿ ಕೋಲಾರ**

**ಅಮೃತಮತಿ :**

ಓ ನನ್ನ ಮೂರ್ ದೊರೆ ಒಥೆಲೊ
ಆತ್ಮವಂಚನೆ ಇನ್ನು ಸಾಧ್ಯವಿಲ್ಲ
ಪ್ರತಿ ಹುಣ್ಣಿಮೆಯನ್ನೂ ಓಯಸಿಸ್ ಹೊಳೆಗಳಾಗಿಸಿ
ನೈದಿಲೆಗಳ ನೆರಳು ಕಸಿಯಲಾಗದು
ಆಲಿಸಿಕೋ ಇನಿಯ ಇನ್ನಾದರೂ
ನನ್ನೆದೆಯೊಳಗೇ ತಿರುವಿ ನಾಟಿಕೊಂಡ
ಕಣ್ಣ ಕಡಲಾಳದ ಹವಳ ಸತ್ಯಗಳ

ತ್ರಿಕರಣಶುದ್ಧ ಪ್ರೀತಿಗೆ ಅಂದದ ವ್ಯಾಖ್ಯಾನ ನಾನು
ಹಸುರಿನ ಪೊದೆ ಮನದಲ್ಲಿ ಕೋಗಿಲೆಯಂತಿವಿತಿದ್ದೆ
ಅಷ್ಟಾವಂಕನು ರತಿದೋಮದ ಚಾಟಿ ಬೀಸಿ
ನಿಗೂಢ ಅದ್ಭುತ ಸರಸ್ಸಿನಲ್ಲಿ
ಕಾಮ ಕಲಾಪದ ಚಂಡ ಅಲೆಗಳನ್ನೆಬ್ಬಿಸಿದ
ಸೂರ್ಯನ ಹೆಜ್ಜೆ ಹೆಜ್ಜೆಗೂ
ಅವನು ಸುಲಿದ : ನನ್ನ ಸುಕುಮಾರ ಪೊರೆ
ನೈತಿಕತೆಯ ಮೆಟ್ಟಿ ನಿಂತ ಕಾಮದಾರ್ತ ಕರೆ
ಮತ್ತು ಸಮಾಜದ ಭೀತ ತೆರೆ
ಸುಲಿದೆಡೆಯ ಗುಪ್ತ ಸತ್ಯಗಳಲ್ಲಿ ನನ್ನ ಸುಖದ ಕ್ಷಣಗಳಡಗಿಸಿದ್ದ

ಆ ಒಂದೊಂದೂ ಸುಖಗಳ ನಿರಂತರ ಸ್ಫೋಟಿಸಿ
ನನ್ನ ಸೌಷ್ಟಗಳ ನಶ್ವರತೆಯನ್ನು ತೀವ್ರಗೊಳಿಸಿದ

ಆ ಅಂಥ ಚಂದ್ರನಂದನದ ಉಡಿಯ ತುಂಬಿ ಕಾಮಿಸಿದೆ,
ಅವನ ಹಾಡಿನಿನಿದಿಗೆ ಅರಳಿ ಕೆರಳಿದ್ದು
ಯಶೋಧರನ ಅಸಹಾಯಕತೆ ಮಾತ್ರ
ಅವನಂಥ ಸುಕುಮಾರ ಪುರುಷಾಕಾರದಲ್ಲೊ
ಹಿಂಸೆಯ ಹಿಟ್ಟಿನ ಹುಂಜ ಹೊಂಚಿತ್ತು
ಸುಂದರ ಮನೋನಂದನದಲ್ಲಿ ಜಾವಕ್ಕೊಮ್ಮೆ ಧಗಧಗಿಸಿ
ಫೀನಿಕ್ಸ್ ಬೆಂತರವಾಗಿ ಬೆಂಬಿದ್ದಿತ್ತು

ನಿನಗೆ ಖಂಡಿತ ಗೊತ್ತಿರಲಾರದು ಒಥೆಲೊ
ಪಶ್ಚಾತ್ತಾಪದ ಬೆಂಕಿ ಸ್ನಾನಗಳ ನಡುವೆಯೂ
ನಾನು ಬಹಿಷ್ಠೆಯಾಗುತ್ತಿದ್ದ ಬರ್ಬರ ರಹಸ್ಯ
ಆ ಅಮೃತಳ ಬೇರಿನ ಸಮೇತ ಕಿತ್ತು ಕುಣಿದ
ಮಾಟಗಾರ ಮನ್ಮಥ ಲಾಸ್ಯ
ಅಷ್ಟಾವಂತನ ಸ್ಫುರದ್ರೂಪಿ ಮನಸ್ಸು ಮಾತ್ರ ಗ್ರಹಿಸಿತ್ತು
ಹೆಣ್ಣಿನ ಭೌತ ಜೈವಿಕತೆಯ ಅನನ್ಯ ದಾಸ್ಯ

ಕುಹಕದ ಚೌಕಟ್ಟಿನಲ್ಲಿ ನನ್ನ ಎತ್ತಿ ಹಿಡಿದ ಕಾಲ
ಯಶೋಧರರ ನೆರೆತ ಸಭೆಯಲ್ಲಂದು
ಒರೆದೆದ್ದಲ್ಲ ಸತ್ಯವಾಯಿತು
ಜಗತ್ತಿಗಿಡೀ ಆಘಾತದ ಅವಕುಂತನ ತೊಡಿಸಿ
ದೀರ್ಘ ಧ್ಯಾನದ ನಿನ್ನನರಸಿ ಓಡಿಬಂದ ಘಳಿಗೆ
ಒಬ್ಬ ಒಥೆಲೊ ಮಾತ್ರ ನನ್ನ ಜರಿದ
ಸಾವಿನ ಎದುರಲ್ಲಿ ಸಾಯದಂತೆ ಇರಿದ

**ಒಥೆಲೊ :**

ಇಟಲಿಯ ಇಂದುವದನೆಯೆ
ಎನ್ನ ಕನಸುಗಾಮಿ ಸಂವೇದನೆ
ಒರೆಯೊಳಗಿನ ಖಡ್ಗಕ್ಕೆ ಕಗ್ಗಂಟ್ಟಿನ ಪದಪುಂಜ
ಸೈಂಧವ ಪ್ರೇಮದ ಆತ್ಮದಮನ
ಈಗಷ್ಟೆ ನಿಲ್ಲುತ್ತಿರುವುದರಿಂದ
ಮರೀಚಿಕೆಗಳ ಅಯ, ಘಾತಗಳ ವಿವರ ಕೊಟ್ಟು ಬಿಡುತ್ತೇನೆ

ನಿನ್ನ ಅನನ್ಯ ಅಕ್ಕರೆಗೆ ಎರವಾದ
ಈ ಖಿನ್ನನನ್ನು ಕಾಲಕೋಶದಿಂದ ಹೆಕ್ಕಿ
ಇನ್ನೊಮ್ಮೆ ತಡವಿಕೊಂಡು ಬಿಡುತ್ತೇನೆ
ನೀನು ಕೊಟ್ಟ ಅಪೂರ್ವ ಪುಲಕದ ಅವಶೇಷಗಳಿಗಾಗಿ
ಮತ್ತು ಉಳಿಸಿದ ಸತ್ಯದ ಹೂ ಹಣ್ಣುಗಳಿಗಾಗಿ
ನನ್ನಿಗೆ ಮುಖ ಕೊಟ್ಟು ಮೌನ ಮುರಿಯಬೇಕೆನಿಸುತ್ತೆ
ಹೆಣ್ಣುಗಳಲ್ಲೆಲ್ಲ ಅವಿತ ರಹಸ್ಯವೇ ಅದ್ಭುತಮತಿಯೆಂದು
ಬಿಡು, ಕಾಮದ ಊಹಾತ್ಮಕ ಆಯಾಮಗಳೆನಗೆ
ಸಲ್ಲದ ರಣರಂಗವಾಯಿತು.

ಅಷ್ಟಾವಂಕನಲ್ಲಿ ನನ್ನ ಗರ್ಭ ಚೀಲಕೆ ಕನಸು ಸುರಿದು
ಡೆಸ್ತಿಮೋನಳೆಲ್ಲಿ ಎಲೆಮೇಲ ಅಮೃತಬಿಂದುವಾಗುಳಿದಳೋ
ಸಂಕೀರ್ಣ ಕಾಮ ಸಿಡಿದು
ನಿಜ ನಿಗೂಢವಾಗಿ ನೂರ್ಮಡಿಗೊಂಡು ನಿಂತಿತ್ತು
ಅಜೇಯ ಖಡ್ಗ ಕಣ್‌ಕಟ್ಟಿನ ಕೇಳಿಯೆ ಬಗೆದು ಧೂಳಿಯೆಬ್ಬಿಸಿ
ಕೊಚ್ಚಲು ಧಾವಿಸಿದ್ದು ಸಂಕಲ್ಪದಾಚೆಗಿನ ಕ್ರೌರ್ಯವನ್ನು
ಆದರೆ ಬಲಿಯಾದದ್ದು ನನ್ನ ಅಜ್ಞಾನದ ಬೆಂತರ
ಅದು ಕೂಗಿದ್ದು ಮಾತ್ರ ಸೂರ್ಯನಿಗೂ ಈಚೆಯ ಸಂಗತಿಗಳನ್ನೇ

ಇಟಲಿಯ ಯಶೋಧರರ ಸಾವಿರ ತೀರಗಳಲ್ಲಿ
ಆಶೋತ್ತರ ಲಂಗರು ಹೂಡಿ
ಲಲಿತವಾಗಿ ತಾಂಡವದೆದೆಯಲ್ಲಿ ಗೂಡು ಕಟ್ಟಿಕೊಂಡು
ರೋಮಿನ ರಕ್ತವನ್ನಿಡೀ ಸೌಂದರ್ಯೋಪಾಸನೆಗೆ ಹೆಚ್ಚಿದ ನೀನು
ವೀಸಸ್ ಸಾಕಿದ ಅತಿ ಮುಗ್ಧ ಹಕ್ಕಿ
ಕಾಲದೀಗ ಕರೆಯುತ್ತಿದೆ ಮತ್ತೆ
ಎದ್ದು ಬಾ ಒಮ್ಮೆ ನಿನ್ನ ಗಾಢ ಮೌನ ಪ್ರಪಾತದಿಂದ
ಸಾವಿರದ ಮನೆಯ ಸಾಸಿವೆಯೇಕೆ
ಕಾಲದೊಂದಿಗೆ ಕುತೂಹಲವಾಗಿ ಸಂವಾದಿಸುವ
ನಿಷ್ಕಾಮ ಕಾಮದಂತೆ!

ಡೆಸ್ಡಿಮೋನಳು ನನಗೆ ಉಣಿಸಿದ ವಾಸ್ತವ
ನಿನಗಗೋಚರ ಭಾವ ಅಮೃತಮತಿ

ದಯಮಾಡಿ ಇನ್ನೊಮ್ಮೆ ಹುಡುಕಿಕೋ : ನಿನ್ನ ತಿಳಿ
ತಿಳಿವಾನಾಚೆಗೂ ಮಾರೀಚ ಗಾಳಿಯಲ್ಲಿ ಸುಳಿವ
ಕಣ್ಣಿಲ್ಲದ ಒಥೆಲೊ ಖಡ್ಗಗಳನ್ನು ಮತ್ತು
ಅಷ್ಟಾವಂಕನ ಗೂನು ಹುಬ್ಬದಲ್ಲಿ ತುಳುಕುತ್ತಿರುವ ಇನ್ನೆಷ್ಟು ಸತ್ಯಗಳನ್ನು.

❑

ಓದು ಪಠ್ಯ :

# ಪತ್ರಿಕೆಗಳು – ಸಾಮಾಜಿಕ ಹೊಣೆಗಾರಿಕೆ

ಡಾ. ಎಚ್. ನರಸಿಂಹಯ್ಯ

ಪತ್ರಿಕೆಗಳನ್ನು ಓದುವುದರಲ್ಲಿ ನನಗೆ ಮೊದಲಿನಿಂದಲೂ ಹೆಚ್ಚಿನ ಆಸಕ್ತಿ. ಇದು ಮೊದಲಾದದ್ದು ಸುಮಾರು ೪೪ ವರ್ಷಗಳ ಹಿಂದೆ. ಅಂದಿನಿಂದಲೂ ಪತ್ರಿಕೆಗಳನ್ನು ಓದುವುದು ನನ್ನ ಜೀವನದ ಒಂದು ಮುಖ್ಯ ಅಭ್ಯಾಸವಾಗಿದೆ. ಒಂದೇ ಪತ್ರಿಕೆಯನ್ನು ಓದುವುದರಿಂದ ಈ ಅಭ್ಯಾಸ ಮೊದಲಾಯಿತು. ಈಗ್ಗೆ ಹಲವು ವರ್ಷಗಳಿಂದ ಪ್ರತಿನಿತ್ಯ ಐದಾರು ಪತ್ರಿಕೆಗಳನ್ನು ತಪ್ಪದೆ ಓದುತ್ತಿರುತ್ತೇನೆ. ವರದಿಗಳನ್ನು ಓದಿ ಕೆಲವು ಸಲ ಸಂತೋಷಪಟ್ಟಿದ್ದೇನೆ. ತೃಪ್ತಿ ಸಮಾಧಾನಗಳಾಗಿವೆ. ಹಲವು ಸಲ ಬೇಜಾರಾಗಿದೆ. ವೃತ್ತ ಪತ್ರಿಕೆಗಳಿಂದ ಸಮಾಜ ಕಲ್ಯಾಣ ಆಗುವುದಿಲ್ಲ ಎಂಬ ಶಂಕೆಯೂ ಮೂಡಿದೆ. ಆದರೂ ಒಟ್ಟಿನಲ್ಲಿ ನಿರಾಶೆ ಹೊಂದಬೇಕಾದ ಅಗತ್ಯವಿಲ್ಲ. ಅಮೆರಿಕಾ ದೇಶದ ಪತ್ರಿಕೆಗಳಿಗೆ ಹೋಲಿಸಿದಾಗ ಹೆಚ್ಚು ನೆಮ್ಮದಿಯುಂಟಾಗುತ್ತದೆ; ನಮ್ಮ ಪತ್ರಿಕೆಗಳಿಗೆ ಒಳ್ಳೆಯ ಭವಿಷ್ಯವಿದೆ.

ಪತ್ರಿಕೆಗಳ ಪಾತ್ರ ದೇಶದ ಆಗುಹೋಗುಗಳನ್ನು ರೂಪಿಸುವಲ್ಲಿ ಅತಿಮುಖ್ಯವಾದದ್ದು. ಸಮಾಜದ ಏಳಿಗೆಗಾಗಿ ಪತ್ರಿಕೆಗಳು ನಿರ್ಭೀತವಾಗಿ ಯಾವ ದಯಾದಾಕ್ಷಿಣ್ಯವೂ ಇಲ್ಲದೆ, ಯಾರ ಹಂಗಿಗೂ ಒಳಗಾಗದೆ ದುಡಿಯುವ ಸಂಕಲ್ಪ ಮಾಡಬೇಕು. ಯಾವುದೇ ಶಕ್ತಿಯನ್ನು ಸದುಪಯೋಗಿಸಿಕೊಳ್ಳಬಹುದು. ಅದನ್ನು ದುರುಪಯೋಗಪಡಿಸಿಕೊಂಡಾಗ ಸಾಕಷ್ಟು ಕೆಡುಕುಂಟಾಗುತ್ತದೆ. ಇದು ಪತ್ರಿಕೋದ್ಯಮದಂತಹ ಶಕ್ತಿಯುತ ಮಾಧ್ಯಮಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅನ್ವಯಿಸುತ್ತದೆ.

ಪತ್ರಿಕೋದ್ಯಮ ವಾಣಿಜ್ಯೋದ್ಯಮವಾಗಬಾರದು. ಪಟ್ಟಭದ್ರ ಹಿತಗಳ, ಬಂಡವಾಳ ಶಾಹಿಗಳ ಸ್ವಾರ್ಥಕ್ಕೆ ಸಾಧನವಾಗಬಾರದು. ಪತ್ರಿಕೋದ್ಯಮ ಒಂದು ಶಿಕ್ಷಣ ಸಂಸ್ಥೆ, ಸೇವಾ ಸಂಸ್ಥೆ, ಸಾಂಪ್ರದಾಯಕ ಶಿಕ್ಷಣ ಸಂಸ್ಥೆಗಳಿಗಿಂತ ಬಲಯುತವಾದ ಹೆಚ್ಚು ಪರಿಣಾಮಕಾರಿಯಾದ ವ್ಯವಸ್ಥೆ. ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಿನ ವ್ಯಾಪ್ತಿಯನ್ನು

ಹೊಂದಿರುವ ಬಹುಉಪಯುಕ್ತವಾದ ಉದ್ಯಮ. ಪತ್ರಿಕೆಗಳನ್ನು 'ಫೋರ್ತ್ ಎಸ್ಟೇಟ್' ಎಂದು ಕರೆದಿರುವುದು ಎಲ್ಲಾ ವಿಧದಲ್ಲಿಯೂ ಸೂಕ್ತ.

ಯಾಂತ್ರಿಕವಾಗಿ ಸುದ್ದಿಯನ್ನು ಕೊಡುವುದು ಮುಖ್ಯವಲ್ಲ. ಎಂತಹ ಸುದ್ದಿಯನ್ನು ಪ್ರಕಟಿಸಬೇಕು, ಹೇಗೆ ಪ್ರಕಟಿಸಬೇಕು, ಅಕ್ಷರಗಳ ಗಾತ್ರ ಎಷ್ಟಿರಬೇಕು, ಯಾವ ಸುದ್ದಿಗೆ ಯಾವ ಸ್ಥಾನವಿರಬೇಕು, ಇವೆಲ್ಲಾ ತುಂಬಾ ಮುಖ್ಯ. Any thing out of place is dirt ಎಂಬ ಆಂಗ್ಲ ಗಾದೆಯೊಂದಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಯಾವ ಸುದ್ದಿಯೂ ಕಸ ಆಗಬಾರದು.

ಒಂದು ಪತ್ರಿಕೆಗೂ ಇನ್ನೊಂದು ಪತ್ರಿಕೆಗೂ ಯಾವುದೇ ವ್ಯತ್ಯಾಸವಿದ್ದರೂ ಎಲ್ಲ ಪತ್ರಿಕೆಗಳಿಗೂ ಹಲವು ಮೂಲಭೂತ ಧ್ಯೇಯಗಳು ಒಂದೇ ಆಗಿರಬೇಕು. ಪತ್ರಿಕೆಗಳು ರಾಷ್ಟ್ರೀಯ ಅವಶ್ಯಕತೆಗಳನ್ನೂ, ರಾಜ್ಯಾಂಗದಲ್ಲಿ ಅಡಕವಾಗಿರುವ ದೇಶದ ಸಮಾಜದ ಆಶೋತ್ತರಗಳನ್ನೂ ಕಾರ್ಯಗತ ಮಾಡಲು ಶ್ರಮಿಸಬೇಕು. ಎಲ್ಲಾ ಮಾನವೀಯ ಮೌಲ್ಯಗಳಿಗೆ ಹೃತ್ಪೂರ್ವಕವಾದ ಬೆಂಬಲ ನೀಡುವುದಲ್ಲದೆ ವೈಜ್ಞಾನಿಕ ಮನೋಭಾವಕ್ಕೆ ಸರ್ವವಿಧದಲ್ಲಿಯೂ ಪ್ರೋತ್ಸಾಹಕೊಟ್ಟು, ಶೋಷಣೆಯ ಎಲ್ಲಾ ಮಾರ್ಗಗಳನ್ನೂ ಧಿಕ್ಕರಿಸಬೇಕು.

ನಮ್ಮ ದೇಶ ಹಲವು ವಿಧಗಳಲ್ಲಿ ದೌರ್ಬಲ್ಯದ ದೇಶ. ಪ್ರಪಂಚದ ಸಮಸ್ಯೆಗಳೆಲ್ಲಾ ನಮ್ಮಲ್ಲಿಯೇ ಇದ್ದ ಹಾಗೆ ಕಾಣುತ್ತದೆ. ಜೊತೆಗೆ ಕೆಲವು ನಮ್ಮದೇ ಆದ ಅಪ್ಪಟ ಸ್ವದೇಶಿ ಸಮಸ್ಯೆಗಳು. ಅಪಾರ ಜನಸಂಖ್ಯೆ, ಕಡು ಬಡತನ, ತುಂಬಿ ತುಳುಕುವ ಮೂಢನಂಬಿಕೆ, ಭಾಷಾಂಧತೆ ಇವೆಲ್ಲಾ ದೇಶದ ಹಿತಕ್ಕೆ ಕಂಟಕ ಪ್ರಾಯವಾಗಿದೆ. ಇನ್ನು ಯಾವ ದೇಶದಲ್ಲಿಯೂ ಇಲ್ಲದ ಜಾತಿಯ ವ್ಯವಸ್ಥೆಯಂತೂ ನಮ್ಮ ಸಮಾಜಕ್ಕೆ ಒಂದು ಉಗ್ರಶಾಪವಾಗಿದೆ. ಈ ಅಮಾನುಷ ಜಾತಿ ವ್ಯವಸ್ಥೆ ಎಲ್ಲಾ ಆರ್ಥಿಕ, ಶೈಕ್ಷಣಿಕ ಸಿದ್ಧಾಂತಗಳನ್ನೂ ತಲೆಕೆಳಗಾಗಿ ಮಾಡಿದೆ. ಸಮಾಜದ ಪ್ರಗತಿಗೆ ಅತ್ಯಂತ ದೊಡ್ಡ ತೊಡಕು ಈ ಅರ್ಥಹೀನ ಸಂಪ್ರದಾಯ.

ನಮ್ಮ ದೇಶದ ಇತಿಹಾಸವೇ ಶೋಷಣೆಯ ಇತಿಹಾಸ. ಹೆಚ್ಚು ಬುದ್ಧಿವಂತ ಕಡಿಮೆ ಬುದ್ಧಿವಂತನನ್ನು ವಿವಿಧ ಮಾರ್ಗಗಳಿಂದ ಶತಮಾನಗಳಿಂದ ಶೋಷಿಸುತ್ತಿದ್ದಾನೆ. ಈ ಶೋಷಣೆಗೆ ಸಾಧನ ಆರ್ಥಿಕ ಸಿದ್ಧಾಂತಗಳು, ಸಾಮಾಜಿಕ ವ್ಯವಸ್ಥೆ, ದೇವರು, ಧರ್ಮ ಜಾತಿ, ಮೂಢನಂಬಿಕೆ, ಮೌಢ್ಯ ಇತ್ಯಾದಿ. ಈ ಶೋಷಣೆಯಿಂದ ಸಾಮಾನ್ಯ ಮನುಷ್ಯ, ದುರ್ಬಲವರ್ಗದ ಜನಗಳು ತತ್ತರಿಸಿಹೋಗಿದ್ದಾರೆ.

ಬಡತನ ಎಲ್ಲಾ ದೇಶಗಳಲ್ಲಿ ವಿವಿಧ ಪ್ರಮಾಣಗಳಲ್ಲಿದ್ದರೂ ನಮ್ಮ ದೇಶದಲ್ಲಿದ್ದಷ್ಟು ಪ್ರಪಂಚದ ಇನ್ನಾವ ದೇಶದಲ್ಲಿಯೂ ಇಲ್ಲ. ಸಾಕಷ್ಟು ಮಂದಿ ಫುಟ್‌ಪಾತ್ ಮೇಲೆ ಹುಟ್ಟುವುದು, ಬೆಳೆಯುವುದು, ಸಾಯುವುದು. ತೊಟ್ಟಿಯಿಂದ ಎಂಜಲನ್ನವನ್ನು ತಿನ್ನಲು

ಮನುಷ್ಯ ಮತ್ತು ನಾಯಿಗಳ ಪೈಪೋಟಿ ಹೃದಯ ವಿದ್ರಾವಕವಾದದ್ದು. ನಾವೆಲ್ಲಾ ನಾಚಿಕೆಯಿಂದ ತಲೆತಗ್ಗಿಸಬೇಕಾದ ಘಟನೆಗಳು. ಅವನು ಇನ್ನಷ್ಟು ದಶಕಗಳ ಕಾಲ ಫುಟ್‌ಪಾತ್ ಮೇಲೆ ವಾಸಮಾಡಬೇಕೇ? ಪುಟ್‌ಪಾತ್ ಮೇಲೆ ವಾಸಮಾಡುವುದು ಅವನ ಕರ್ಮ, ಬಂಗಲೆಯಲ್ಲಿ ಭೋಗ ಜೀವನ ನಡೆಸುವುದು ನಮ್ಮ ಧರ್ಮ ಎಂಬ ನೀಚ ಸಿದ್ಧಾಂತ ಕೊನೆಗಾಣುವುದು ಯಾವಾಗ? ಹೀಗೆ ಶತಮಾನಗಳಿಂದ ಶೋಷಣೆಗೆ ಸಿಕ್ಕಿ ಕಷ್ಟಕಾರ್ಪಣ್ಯಗಳಿಂದ ತೊಳಲಾಡುತ್ತಿರುವ ಅಸಂಖ್ಯಾತ ಜನಗಳ ಶ್ರೇಯಸ್ಸಿಗಾಗಿ ಎಲ್ಲಾ ಪತ್ರಿಕೆಗಳೂ ದುಡಿಯದಿದ್ದರೆ ಸ್ಪಷ್ಟವಾದ ಕರ್ತವ್ಯ ಲೋಪವಾಗುತ್ತದೆ.

ಈ ವಿಜ್ಞಾನದ ಯುಗದಲ್ಲಿಯೂ ದೇವರ, ಧರ್ಮದ, ಅರ್ಥವಿಲ್ಲದ ಸಂಪ್ರದಾಯಗಳ ಹೆಸರಿನಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಶೋಷಣೆ, ಮೋಸ, ವಂಚನೆ ನಡೆಯುತ್ತಿದೆ. ನಾನೇ ದೇವರು, ಸೃಷ್ಟಿಕರ್ತ ಎಂದು ಹೇಳಿಕೊಂಡು ಓಡಾಡುವರ ಸಂಖ್ಯೆ ನಮ್ಮ ದೇಶದಲ್ಲೇನೂ ಕಡಿಮೆ ಇಲ್ಲ. ಅದೇ ಧಾಟಿಯಲ್ಲಿ ಮಾತನಾಡಿ, ಜನಗಳ ಆತ್ಮವಿಶ್ವಾಸವನ್ನೂ ಕುಗ್ಗಿಸಿ, ಭಯೋತ್ಪಾದನೆ ಮಾಡಿ ಬಡವರನ್ನೂ, ಮುಗ್ಧರನ್ನೂ ತಮ್ಮ ಬಲೆಗೆ ಹಾಕಿಕೊಂಡು, ಕಪಟನಾಟಕ ನಡೆಸುತ್ತಿರುವ ಮಂದಿ ಸಾಕಷ್ಟು ಇದ್ದಾರೆ. ಇವರ ವಂಚನೆಗೆ ಬಲಿಯಾಗದ ಜನ ಬಹು ಕಡಿಮೆ. ಇಂತಹ ಅತಿಮುಖ್ಯವಾದ ವಿಷಯಗಳಲ್ಲಿ ಪತ್ರಿಕೆಗಳ ನಿಲುವೇನು? ದಿನ ಬೆಳಗಾದರೆ ಅಕ್ರಮಗಳಿಗೆ ತನಿಖೆಯಾಗಬೇಕು, ಮೋಸಗಳಿಗೆ ವಿಚಾರಣೆಯಾಗಬೇಕೆಂದು ನ್ಯಾಯವಾಗಿ ಬೊಬ್ಬಿಡುವ ಪತ್ರಿಕೆಗಳು, ಜನಗಳು ಧರ್ಮದ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಮೋಸಗಳನ್ನು ನೋಡಿ ನೋಡದವರಂತೆ ನಟಿಸಿ, ಏಕೆ ಸ್ಪಷ್ಟವಾದ ದಿಟ್ಟ ನಿಲುವನ್ನು ತೆಗೆದುಕೊಂಡಿಲ್ಲ? ಇಂತಹ ಮೋಸ ಕೃತ್ಯಗಳೆಲ್ಲಾ ಪಟ್ಟಭದ್ರಹಿತಗಳ, ಉನ್ನತ ಅಧಿಕಾರಿಗಳ, ಶಕ್ತಿಯುತವಾದ ಗುಂಪುಗಳ ಅಪವಿತ್ರ ಮೈತ್ರಿ ಕಾರಣ.

ಮೂಢನಂಬಿಕೆಗಳಿಗೆ, ಅನೂಚಾನವಾಗಿ ಬಂದ ಸಂಪ್ರದಾಯಗಳಿಗೆ, ಪವಾಡಗಳಿಗೆ ಪೆಟ್ಟು ಬಿದ್ದು ಸತ್ಯ ಹೊರಬಿದ್ದರೆ ಕೊನೆಗೆ ಇಂತಹ ಪ್ರಯೋಗಗಳಿಂದ, ಪ್ರಯತ್ನಗಳಿಂದ, ತಮ್ಮ ಮೂಲ ಹಿತಕ್ಕೆ ಕೊಡಲಿ ಏಟು ಬಿದ್ದು ಸ್ವಹಿತಕ್ಕೆ ಕುಂದುಬರಬಹುದೆಂಬ ಅಂಜಿಕೆ ಹಲವು ಪತ್ರಿಕೋದ್ಯಮಿಗಳಿಗೆ, ಆಯಕಟ್ಟಿನ ಸ್ಥಾನಗಳಲ್ಲಿರುವವರಿಗೆ.

ಎಲ್ಲ ಪತ್ರಿಕೆಗಳಿಗೂ ಪ್ರಗತಿ ವಿರೋಧೀ ಸಿದ್ಧಾಂತ (Obscurantism)ಗಳಿಗೆ ಪುಷ್ಟಿಕೊಡಬಾರದು. ಅಂಧ ವಿಶ್ವಾಸ, ಮತಶ್ರದ್ಧೆ, ಪುನರುಜ್ಜೀವನವಾದ (Revivalism)ಗಳನ್ನೂ ಉಗ್ರವಾಗಿ ಪ್ರತಿಭಟಿಸಬೇಕು. ಎಲ್ಲವನ್ನೂ ವೈಜ್ಞಾನಿಕವಾಗಿ ಪರೀಕ್ಷಿಸಿ ಒಪ್ಪಬೇಕು ಎಂಬ ಮೂಲತತ್ವವನ್ನು ಪ್ರತಿಪಾದಿಸಬೇಕು. ವಿಜ್ಞಾನದ ವಿದ್ಯಾರ್ಥಿಯಾಗಿ ವಿಜ್ಞಾನಕ್ಕೆ ಹಲವು ಇತಿ–ಮಿತಿಗಳಿವೆ ಎಂದು ನನಗೆ ಖಚಿತವಾಗಿ ತಿಳಿದಿದೆ. ಆದಾಗ್ಗೂ ವೈಜ್ಞಾನಿಕ ಮಾರ್ಗಗಳೇ ಸತ್ಯ ಶೋಷಣೆಗೆ ಎಲ್ಲಾ ಕ್ಷೇತ್ರಗಳಲ್ಲೂ ಸರ್ವೋತ್ಕೃಷ್ಟ ಸಾಧನಗಳು.

ಹಲವು ಸಲ ಸಾಕಷ್ಟು ಪತ್ರಿಕೆಗಳು ಮೂಢನಂಬಿಕೆಗಳಿಗೆ ಪ್ರೋತ್ಸಾಹ ಕೊಡುವುದು, ಪ್ರಚಾರ ಮಾಡುವುದು ದುರದೃಷ್ಟಕರ. ಯಾವುದೋ ಮೂಲೆಯಲ್ಲಿ ಅಜ್ಞಾತವಾಗಿದ್ದ ಬಾಲಕ ಸಾಯಿಕೃಷ್ಣನಿಗೆ ಇಲ್ಲದ ಸಲ್ಲದ ಊಹಾಪೋಹಗಳ ಆಧಾರದ ಮೇಲೆ ಅಸಾಧ್ಯ ಪ್ರಾಮುಖ್ಯ ಕೊಟ್ಟ ಪ್ರಯುಕ್ತ ಆ ಹುಡುಗನೂ ದೇವರಾಗಿ ನಮ್ಮ ದೇಶದ ದೇವರುಗಳ ಸಂಖ್ಯೆ ಒಂದು ಹೆಚ್ಚಾಗುತ್ತಿತ್ತೇನೋ? ಅವನ 'ಪವಾಡ' ಬಯಲಾದುದ್ದರ ಫಲವಾಗಿ ಆ ಸಂಖ್ಯೆ ಒಂದು ಕಡಿಮೆಯಾಯಿತು.

ಆಗಾಗ ಬುಡಭದ್ರವಿಲ್ಲದ ಸುದ್ದಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ, ಮೊದಲನೇ ಪುಟದಲ್ಲಿ ಸಾಕಷ್ಟು ದಪ್ಪ ಅಕ್ಷರದಲ್ಲಿ ಓದುತ್ತೇನೆ. ಬೇವಿನ ಗಿಡ ಹಸುವಿನ ಹಾಲು ಕೊಡುತ್ತದೆ, ಒಂದು ಮನೆಯಲ್ಲಿ ಭೂತಚೇಷ್ಟೆಯಾಗುತ್ತಿದೆ, ಇನ್ನೊಂದು ಮನೆಯಲ್ಲಿ ಅಗೋಚರ ಶಕ್ತಿಗಳಿಂದ ಶಿಲಾವರ್ಷವಾಗುತ್ತಿದೆ, ನಾಗರ ಷಷ್ಠಿಯ ದಿವಸ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ನಾಗರ ಹಾವು ಹೆಡೆ ಎತ್ತಿಕೊಂಡು ವಾಕಿಂಗ್ ಹೋಯಿತು, ಹನುಮಂತರಾಯನ ವಿಗ್ರಹದ ಕಣ್ಣುಗಳಿಂದ ನೀರು ಬರುತ್ತಾ ಇದೆ. ಮಂತ್ರದಿಂದ ಹಾವು ಕಡಿದಿದ್ದನ್ನೂ ಗುಣಮಾಡಬಹುದು, ಪುಟ್ಟಪರ್ತಿಯ ಒಂದು ವಿಶಿಷ್ಟವಾದ ಬೂದಿ ತಿನ್ನುವುದರಿಂದ ಎಲ್ಲಾ ಖಾಯಿಲೆಗಳು ವಾಸಿಯಾಗುತ್ತದೆ, ಶೂನ್ಯದಿಂದ ವಸ್ತುವಿನ ಸೃಷ್ಟಿ ಸಾಧ್ಯ, ಇಂತಹ ತಲೆ ಬಾಲವಿಲ್ಲದ, ಕಾಕಮ್ಮ, ಗುಬ್ಬಕ್ಕನ ಕಥೆಗಳ ಪ್ರಕಟಣೆಯಿಂದ ಅಸಂಖ್ಯಾತ ಜನರನ್ನು ತಪ್ಪು ಮಾರ್ಗಕ್ಕೆ ಎಳೆಯುವುದಷ್ಟೇ ಅಲ್ಲ, ಸಮಾಜದ ಪ್ರಗತಿಗೂ ಅಪಾರವಾದ ಹಾನಿಯುಂಟಾಗುತ್ತದೆ.

ರಾಹುಕಾಲ, ಗುಳಿಕ ಕಾಲ, ಯಮಗಂಡಕಾಲ ಇವುಗಳನ್ನು ಪತ್ರಿಕೆಗಳಲ್ಲಿ ಏಕೆ ಪ್ರಕಟಿಸುತ್ತೀರಿ? ನನ್ನ ಅಭಿಪ್ರಾಯದಲ್ಲಿ ಅವೆಲ್ಲಾ ಅರ್ಥವಿಲ್ಲದ ಮಣ್ಣಾಂಗಟ್ಟಿ ಕಾಲಂಗಳು, ನಿತ್ಯ ಭವಿಷ್ಯ, ವಾರ ಭವಿಷ್ಯ, ಮಾಸ ಭವಿಷ್ಯ ಬುಡಭದ್ರವಿಲ್ಲದ ಊಹಾಪೋಹಗಳಂತೆ. ವೈಜ್ಞಾನಿಕ ತಳಹದಿ ಇಲ್ಲದ ಜ್ಯೋತಿಷ್ಯಶಾಸ್ತ್ರಕ್ಕೆ ಏಕೆ ಪ್ರಾಧಾನ್ಯ? ಇವುಗಳ ಬಗ್ಗೆ ಸಾಕಷ್ಟು ಯೋಚನೆ, ವಿವೇಚನೆ ನಡೆದಿದೆಯೆ? ಜ್ಯೋತಿಷ್ಯಶಾಸ್ತ್ರ ವಿಜ್ಞಾನ, ವಿಜ್ಞಾನಕ್ಕಿಂತ ಮಿಗಿಲಾದದ್ದು ಎಂದು ಮನೆ ಮಾಳಿಗೆಯಿಂದ ಬೊಬ್ಬೆ ಹಾಕಿ ಜಂಬ ಕೊಚ್ಚಿಕೊಳ್ಳುವ ಬೆಂಗಳೂರಿನ ಒಬ್ಬ ಜ್ಯೋತಿಷಿ ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸಲ್ಪಡುತ್ತಿರುವ ಮಾಸಪತ್ರಿಕೆಯ ೧೯೭೭ನೆಯ ವರ್ಷದ ಭವಿಷ್ಯಕ್ಕೆ ಮೀಸಲಾದ ೧೯೭೬ನೇ ಡಿಸೆಂಬರ್ ಸಂಚಿಕೆಯಲ್ಲಿ ತುರ್ತುಪರಿಸ್ಥಿತಿ ಕೊನೆಗೊಳ್ಳುವ ವಿಷಯವಾಗಲಿ, ಚುನಾವಣೆಗಳಾಗಲಿ ಪರೋಕ್ಷವಾಗಿ ಕೂಡ ಪ್ರಸ್ತಾಪವಾಗಿಲ್ಲ. ನನ್ನ ಅಭಿಪ್ರಾಯದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದಲ್ಲಿ ಆದ ಅತ್ಯಂತ ಪ್ರಮುಖವಾದ ಘಟನೆ ಎಂದರೆ ಚುನಾವಣೆಗಳು ಮತ್ತು ಅದರಿಂದಾದ ಬದಲಾವಣೆಗಳು. ಇಂತಹ ಮಹತ್ತರವಾದ ಘಟನೆಯೇ ಈ ಶಾಸ್ತ್ರಜ್ಞರ ಲೆಕ್ಕಕ್ಕೆ ಸಿಗದೆ ಹೋದರೆ, ಇನ್ನು ಉಳಿದ ವಿಷಯಗಳಲ್ಲಿ ಇವರ ಭವಿಷ್ಯಕ್ಕೆ ಬೆಲೆಯೇನು? ಈ ಮಹನೀಯರೇ ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ ಬರೆದ ಲೇಖನದಲ್ಲಿ

ಕಾಂಗ್ರೆಸ್ ಅಲ್ಪ ಬಹುಮತದಿಂದ ಚುನಾವಣೆಯಲ್ಲಿ ಗೆಲ್ಲುವುದೆಂದು ನಿಖರವಾಗಿ ಬರೆದಿದ್ದಾರೆ. ಇಂತಹವರನ್ನೂ ನೀವು ಏಕೆ ಬಯಲಿಗೆಳೆಯುವುದಿಲ್ಲ? ಏಕೆ ಇಂತಹವರಿಗೆ ರಕ್ಷಣೆ? ಸ್ವಲ್ಪವಾದರೂ ನ್ಯಾಯವೇ ಬೇಡವೆ? ಈಗಲೂ ಅಂತಹವರಿಗೇನೇ ಪ್ರೋತ್ಸಾಹ?

ಅಂತೆಯೇ ನಮ್ಮ ದೇಶದಲ್ಲಿ ಶತಮಾನಗಳಿಂದ ಪೀಠಸ್ಥವಾಗಿರುವ ಜಾತಿವ್ಯವಸ್ಥೆ ಸಂಪೂರ್ಣವಾಗಿ ನಿರ್ನಾಮವಾಗಬೇಕು. ಕೇವಲ ಹುಟ್ಟಿನ ಆಧಾರದ ಮೇಲೆ ಜೀವನಪರ್ಯಂತ ಗುಣಾವಗುಣಗಳನ್ನೂ ನಿಷ್ಕರ್ಷಿಸುವುದು ಅಸಾಧ್ಯ; ಅನ್ಯಾಯ. ಜಾತಿ ವ್ಯವಸ್ಥೆಯ ಸೃಷ್ಟಿ ಪುಷ್ಟಿ, ಸ್ವಾರ್ಥ ಸಿದ್ಧಾಂತಗಳ ಆಧಾರದ ಮೇಲೆ. ಇವುಗಳಿಂದ ಜನರ ಆತ್ಮವಿಶ್ವಾಸಕ್ಕೂ ಮತ್ತು ಸ್ವಾಭಿಮಾನಕ್ಕೂ ಅಪಾರವಾದ ಹಾನಿಯುಂಟಾಗಿದೆ. ಎಲ್ಲಾ ವಿಧಿ ಲಿಖಿತ (Fatalistic Theory) ಎಂಬ ಸಿದ್ಧಾಂತಕ್ಕೆ ಬಹು ಜನರು ಶರಣು ಹೋಗಿದ್ದಾರೆ. ನಮ್ಮ ಭವಿಷ್ಯವನ್ನು ರೂಪಿಸುವುದು ನಮ್ಮ ಕೈಯಲ್ಲಿಯೇ ಇದೆ, ಸಮಾಜವನ್ನೂ ಬದಲಾವಣೆ ಮಾಡುವ ಶಿಲ್ಪಿಗಳು ನಾವು ಎಂದು ಆತ್ಮವಿಶ್ವಾಸ ಹುಟ್ಟಿಸುವ ಧೈರ್ಯಶಾಲೀ, ಧೀಮಂತ, ಗಂಡು ಲೇಖನಗಳ ಸಂಖ್ಯೆ ಹೆಚ್ಚಾಗಬೇಕು.

ಜಾತಿಯ ಮನೋಭಾವನೆ ಸರ್ವಾಂತರ್ಯಾಮಿ. ವಿದ್ಯಾವಂತರದಲ್ಲಿ ಈ ಭಾವನೆ ತಕ್ಕಮಟ್ಟಿಗೆ ಹೆಚ್ಚಾಗಿದೆ ಅಂದರೆ ತಪ್ಪಾಗಲಾರದು. ಜಾತಿ ವ್ಯವಸ್ಥೆ ನಿರ್ಮೂಲನ ಮಾಡಲು ಅಂತರ್ಜಾತಿಯ ವಿವಾಹ ಒಂದೇ ದಿವ್ಯೌಷಧ. ಆದುದರಿಂದ ಅಂತರ್ಜಾತೀಯ ವಿವಾಹಗಳಿಗೆ ಸರಳ ವಿವಾಹಗಳಿಗೆ ಹೆಚ್ಚಿನ ಪ್ರಾಧಾನ್ಯ ಕೊಡಬೇಕು. ಜಾತೀಯ ಸಂಸ್ಥೆಗಳಿಗೆ, ಜಾತೀಯ ರಾಜಕೀಯ ಪಕ್ಷಗಳಿಗೆ ಯಾವ ವಿಧದಲ್ಲೂ ಪ್ರೋತ್ಸಾಹ ಕೊಡಬಾರದು.

ಪತ್ರಿಕೆಗಳು ದುರ್ಬಲವರ್ಗಗಳಿಗೆ, ನತದೃಷ್ಟರಿಗೆ, ಶೋಷಣೆಗೆ ಒಳಪಟ್ಟವರಿಗೆ ಸದಾ ಬೆಂಬಲ ನೀಡಬೇಕು. ಎಲ್ಲಾ ಸಾಮಾಜಿಕ ಅನಿಷ್ಟಗಳ, ಅನ್ಯಾಯಗಳ, ಅಸಮಾನತೆಗಳ ವಿರುದ್ಧ ಹೋರಾಟಕ್ಕೆ ಮತ್ತು ಎಲ್ಲಾ ಪ್ರಗತಿಪರ ಧೋರಣೆಗಳಿಗೆ ಪ್ರತ್ಯಕ್ಷವಾಗಿ ಹೃತ್ಪೂರ್ವಕವಾಗಿ ಬೆಂಬಲ ನೀಡಬೇಕು.

ಪತ್ರಿಕೆಗಳು ಯಾವುದನ್ನೂ ಮುಚ್ಚಿಡಬಾರದು, ಯಾವುದನ್ನೂ ಉತ್ಪ್ರೇಕ್ಷೆ ಮಾಡಬಾರದು. ಎಲ್ಲ ವರದಿಗಳೂ ವಸ್ತುನಿಷ್ಠವಾಗಿರಬೇಕು. ಪ್ರತಿಯೊಂದು ವರದಿಯ ಸತ್ಯಾಸತ್ಯತೆಯನ್ನೂ ಪರೀಕ್ಷಿಸಿ ಪ್ರಕಟಿಸಬೇಕು. ವಿವೇಚನೆಯಿಲ್ಲದ ಮನಸ್ಸಿಗೆ ಬಂದ ವರದಿಯನ್ನು ಪ್ರಕಟಿಸಿದ ಮೇಲೆ ಅದಕ್ಕೆ ವಿರುದ್ಧವಾದ ಇನ್ನೊಂದು ವರದಿಯನ್ನು ಪ್ರಕಟಿಸುವುದರಿಂದ ಸಂಪೂರ್ಣವಾಗಿ ನ್ಯಾಯ ಸಲ್ಲಿಸಿದ ಹಾಗೆ ಆಗುವುದಿಲ್ಲ.

ಪತ್ರಿಕೆಗಳು ಪ್ರಸಾರವನ್ನು ಹೆಚ್ಚು ಮಾಡಿಕೊಳ್ಳುವ ಏಕೈಕ ಮನೋಭಾವದಿಂದ ಲೈಂಗಿಕ ವರದಿಗಳಿಗೆ, ಹಿಂಸಾಚಾರಕ್ಕೆ, ಉತ್ಪ್ರೇಕ್ಷೆಗಳಿಗೆ, ಸುಳ್ಳುಗಳಿಗೆ ಪ್ರಾಶಸ್ತ್ಯ ಕೊಡಬಾರದು. 'ಏನಕೇನ ಪ್ರಕಾರೇಣ' ಪತ್ರಿಕೆಗಳು ಜನಪ್ರಿಯವಾಗಬೇಕೆಂಬ

ಮನೋಭಾವನೆ ಹೋಗಬೇಕು. ಪತ್ರಿಕೆಗಳು ಜನರಿಗೆ ಬೇಕಾದ್ದನ್ನು ಕೊಡಬೇಕು ಎನ್ನುವ ವಾದ ಬಹು ಅಪಾಯಕಾರಿಯಾದುದು. ಜನಗಳಿಗೆ ಏನು ಕೊಟ್ಟರೆ ಅವರಿಗೆ ಮತ್ತು ಸಮಾಜಕ್ಕೆ ಒಳ್ಳೆಯದಾಗಬಹುದು ಎಂದು ಸುಶಿಕ್ಷಣ ದೃಷ್ಟಿಯಿಂದ ಕೆಲಸ ಮಾಡಬೇಕಾದ್ದು ಅಗತ್ಯ.

ಕಾರ್ಯನಿರತ ಪತ್ರಿಕೋದ್ಯಮಿಗಳಿಗೆ ತರಬೇತಿ ಬಹುಮುಖ್ಯ. ಹಿಂದಿನ ಕಾಲದಲ್ಲಿ ಕುಲಕಸುಬನ್ನೂ ಅಪ್ಪನೊಂದಿಗಿದ್ದುಕೊಂಡು ಮಗ ಕಲಿಯುವ ಪದ್ಧತಿ ಪತ್ರಿಕೋದ್ಯಮಿಗಳಿಗೆ ಅನ್ವಯಿಸದು. ಸುಸವ್ಯವಸ್ಥಿತವಾಗಿ ಪತ್ರಿಕೋದ್ಯಮದ ಎಲ್ಲಾ ಅಂಶಗಳನ್ನೂ ಚೆನ್ನಾಗಿ ಕಲಿತು ಕಾರ್ಯಗತ ಮಾಡಲು ಪ್ರಯತ್ನಿಸಬೇಕು.

ಪತ್ರಿಕೆ ಸಂಘ ಶಕ್ತಿಯ ಫಲ. ಇದು ಒಬ್ಬ ವ್ಯಕ್ತಿಯ ಸಾಧನೆಯಲ್ಲ. ಆದುದರಿಂದ ಮೂಲ ವಿಷಯಗಳಲ್ಲಿ ಒಂದೇ ಮನೋಧರ್ಮವಿರುವ ಒಂದು ಸುಸಂಘಟಿತ ತಂಡವಾಗಬೇಕು. ಪತ್ರಿಕೆಗಳನ್ನು ಓದಿದಾಗ ಅವುಗಳ ಯಥಾರ್ಥತೆ, ಪ್ರಗತಿ ಮನೋಭಾವ, ವಿಷಯ ಪ್ರತಿಪಾದನೆ, ಭಾಷೆ ಇವುಗಳು ಓದುಗರಿಗೆ ಸಹಜವಾದ ತೃಪ್ತಿಯನ್ನು ಕೊಡಬೇಕು. ಅಗ್ಗದ ಜನಪ್ರಿಯತೆ ಪತ್ರಿಕೆಗಳ ಉದ್ದೇಶವಾಗಬಾರದು. ಬಹು ಜನರು ಹೇಳಿದ ಮಾತ್ರಕ್ಕೆ ಯಾವುದೂ ಸತ್ಯವಾಗಬೇಕಾಗಿಲ್ಲ. ಸುಳ್ಳನ್ನೂ ನಾಲ್ಕು ಜನ ಹೇಳಿ, ದಪ್ಪಕ್ಷರದಲ್ಲಿ ನಾಲ್ಕು ಸಲ ಪ್ರಕಟವಾದರೆ ಆ ಸುದ್ದಿ ಸತ್ಯದ ತಲೆಯ ಮೇಲೆ ಹೊಡೆದ ಹಾಗೆ ಕಾಣಿಸುತ್ತದೆ. ಯೋಚನೆ ಮಾಡಲೂ ಸಹ ತಯಾರಿಲ್ಲದ ಜನಗಳು, ಯೋಚನೆ ಮಾಡುವಷ್ಟೂ ಕಾಲವಿಲ್ಲದ ಜನಗಳು, ಯಾರೋ ಹೇಳಿದ್ದನ್ನೆಲ್ಲಾ ಕೇಳುವ, ಬರೆದಿದ್ದನ್ನೆಲ್ಲಾ ನಂಬುವ ಸಂಪ್ರದಾಯವಾದಿ ಜನಗಳೇ ನಮ್ಮಲ್ಲಿ ಅಸಂಖ್ಯಾತ ಮಂದಿ ಇದ್ದಾಗ ಸುಳ್ಳು ಪ್ರಕಟಣೆಗಳಿಂದ ಎಂತಹ ಅನಾಹುತ ಆಗುವುದು ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ.

ಪತ್ರಿಕೆಗಳು ತಮ್ಮ ವಿಶ್ವಸನೀಯತೆಯನ್ನು ಹೆಚ್ಚಿಸಿಕೊಳ್ಳಬೇಕು. ಆ ಪತ್ರಿಕೆಯಲ್ಲಿ ಎಲ್ಲಾ ತರದ ವಿಷಯಗಳ ಪ್ರಕಟಣೆ, ಬುಡವಿಲ್ಲದ ಸುದ್ದಿಗೆ ಪ್ರಾಮುಖ್ಯ, ನೀತಿ, ನಿಯಮವಿಲ್ಲದ ಪತ್ರಿಕೆ, ಸ್ಥಾನದಲ್ಲಿದ್ದವರಿಗೆ ಆದ್ಯತೆ, ಅಧಿಕಾರದಲ್ಲಿ ಇದ್ದವರ ಬಾಲಬಡುಕ ಪತ್ರಿಕೆ, ಬಂಡವಾಳ ಶಾಹಿ ಪತ್ರಿಕೆ, ಇತ್ಯಾದಿ ಇತ್ಯಾದಿ ಎಂದು ಕುಖ್ಯಾತಿಯನ್ನು ಪಡೆಯಲು ಯಾವ ಪತ್ರಿಕೆಯೂ ಪ್ರಯತ್ನ ಪಡಬಾರದು.

ಪತ್ರಿಕೆಗಳಿಗೆ ಸ್ವಾತಂತ್ರ್ಯ ಇರಬೇಕು ಎನ್ನುವುದು ಎಷ್ಟರಮಟ್ಟಿಗೆ ಸತ್ಯವೋ, ಅಷ್ಟೇ ಸಂಯಮ ಮತ್ತು ಸ್ವಯಂ ಶಿಸ್ತು ಇರಬೇಕೆನ್ನುವುದೂ ಸತ್ಯ. ಚಿಕ್ಕ ಮಗುವಿಗೆ, ಸ್ಕೂಲಿನಲ್ಲಿ ಓದುವ ಮಗುವಿಗೆ ಸಹಜವಾಗಿಯೇ ಕೆಲವು ನಿರ್ಬಂಧಗಳನ್ನು ತಾಯಿ ತಂದೆಗಳು ಸದುದ್ದೇಶದಿಂದ ಹಾಕಿರುತ್ತಾರೆ. ಅವನು ದೊಡ್ಡವನಾದಹಾಗೆಲ್ಲಾ ವಿಷಯಗಳನ್ನು ಅರ್ಥಮಾಡಿಕೊಂಡು ಜವಾಬ್ದಾರಿಯಿಂದ ನಡೆದುಕೊಳ್ಳುವ ಯತ್ನಗಳು ಕಂಡಂತೆಲ್ಲಾ ಹೆಚ್ಚಿನ ಸ್ವಾತಂತ್ರ್ಯ ಅವನಿಗೆ ಕೊಡಬೇಕಾದದ್ದು ತಾಯಿ ತಂದೆಗಳ

ಕರ್ತವ್ಯ. ನಮಗೆ ಅದು ಹೇಗೆಂದರೆ ಹಾಗೆ ಓಡಾಡುವ, ವಾಹನಗಳನ್ನು ಓಡಿಸುವ ಅವಕಾಶ ಇರಬೇಕೆಂಬ ಬೇಡಿಕೆ ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಹಾಸ್ಯಾಸ್ಪದ ಸ್ವಾತಂತ್ರ್ಯದ ಹೆಸರಿನಲ್ಲಿ ಯಾವನು ಏನು ಬೇಕಾದರೂ ಮಾಡಬಹುದು ಎಂಬ ಕಲ್ಪನೆ ಬರುವಂತೆ ಮಾಡುವುದು.

ಸಂಯಮವಿಲ್ಲದ ಪತ್ರಿಕೆ ಲಂಗುಲಗಾಮಿಲ್ಲದ ಕಡಿವಾಣವಿಲ್ಲದ ಕುದುರೆಯಂತೆ. ಒಬ್ಬನಿಗೆ, ಒಂದು ಸಂಸ್ಥೆಗೆ ಎಷ್ಟು ಸ್ವಾತಂತ್ರ್ಯ ಇರಬೇಕು ಎನ್ನುವುದು ಅವನು ಅಥವಾ ಆ ಸಂಸ್ಥೆ ಎಷ್ಟು ಜವಾಬ್ದಾರಿಯಿಂದ ವರ್ತಿಸುತ್ತದೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಸ್ವಾತಂತ್ರ್ಯದ ಹೆಸರಿನಲ್ಲಿ ಬೇಜವಾಬ್ದಾರಿ ಕೆಲಸಗಳು, ಸಮಾಜಘಾತಕ ಕೃತ್ಯಗಳು, ಪ್ರಗತಿ ವಿರೋಧ ಕಾರ್ಯಗಳಿಗೆ, ಪ್ರೋತ್ಸಾಹ ಕೊಡುವುದು ಸಾಧುವಲ್ಲ. ಅಂತಹ ತಳಮಳ ಮನೋಭಾವಕ್ಕೆ ಪರೋಕ್ಷವಾಗಿ ಬೆಂಬಲ ಕೊಟ್ಟರೂ ಈ ಕ್ಲಿಷ್ಟ, ಕಲಬೆರಕೆಯ, ಪರಸ್ಪರ ಅಸಂಬದ್ಧ ಸ್ವಭಾವದ ಸಮಾಜದಲ್ಲಿ ಪುಂಡು ಪೋಕರಿಗಳಿಗೆ, ಸ್ವಾರ್ಥಿಗಳಿಗೆ ಸಮಾಜ ಘಾತಕರಿಗೆ ಒತ್ತಾಸೆ ನೀಡಿದ ಹಾಗೆ ಆಗುತ್ತದೆ. ಯಾವುದೇ ಕ್ಷೇತ್ರದಲ್ಲಿ ಕಟ್ಟುವುದು ಕಷ್ಟ, ಕೆಡವುದು ಸುಲಭ. 'ಕುಂಬಾರನಿಗೊಂದು ವರ್ಷ ದೊಣ್ಣೆಗೊಂದು ನಿಮಿಷ' ಆದುದರಿಂದ ಪತ್ರಿಕಾ ಸ್ವಾತಂತ್ರ್ಯವನ್ನೂ ತಪ್ಪಾಗಿ ಅರ್ಥಮಾಡಿಕೊಂಡು ಎಲ್ಲಾ ದುಷ್ಕೃತ್ಯಗಳಿಗೂ ಅದು ಒಂದು ಲೈಸನ್ಸ್ ಎಂದು ತಿಳಿದುಕೊಂಡರೆ ಶತಮಾನಗಳಿಂದ ಸಮಸ್ಯೆಗಳಲ್ಲಿ ಬೆಂದು ಬೆಂಡಾಗಿರುವ ಈ ದೇಶದ ಭವಿಷ್ಯ ಅಪಾಯದತ್ತ ಸಾಗುತ್ತದೆ.

ಒಂದೇ ಆಡಳಿತವರ್ಗ, ಬಂಡವಾಳ ಶಾಹಿ ಆಧಾರದ ಮೇಲೆ ಪತ್ರಿಕೆಗಳ ಮಾಲೆ (Chain of News papers)ಯನ್ನು ನಡೆಸುವುದನ್ನು ತಪ್ಪಿಸಬೇಕು. ನಮ್ಮ ರಾಷ್ಟ್ರದಲ್ಲಿ ಹಲವು ಕೇಂದ್ರಗಳಿಂದ ಒಂದೇ ವರ್ತಮಾನ ಪತ್ರಿಕೆ ಪ್ರಕಟಿಸುವ ಅವಕಾಶ ಕೊಟ್ಟಿದೆ. ಅಂತಹ ಕೇಂದ್ರೀಕರಣದಿಂದ ಸಮಾಜದ ಪ್ರಗತಿಗೆ ಧಕ್ಕೆಯಾಗುವ ಸಂಭವವಿದೆ. ಮನೆಗಳಿಗೆ, ಜಮೀನಿಗೆ, ಆಸ್ತಿಗೆ, ವರಮಾನಕ್ಕೆ, ಸಂತಾನಕ್ಕೆ ಮಿತಿ ಇರಬೇಕೆಂಬ ವಾದ ಇರುವಾಗ ಒಂದು ಸಂಸ್ಥೆ ಎಷ್ಟು ಪತ್ರಿಕೆಗಳನ್ನು ಪ್ರಕಟಿಸಬೇಕು ಅನ್ನುವುದಕ್ಕೂ ನಿಯಂತ್ರಣವಿರಬೇಕು. ಏಕಸ್ವಾಮ್ಯ ಪದ್ಧತಿಯಿಂದ ದೇಶಕ್ಕೆ ಸಮಾಜಕ್ಕೆ ಹಾನಿಯುಂಟಾಗುತ್ತದೆ. ಪತ್ರಿಕೆಗಳ ವಿಕೇಂದ್ರಿಕರಣ ಮುಖ್ಯ.

ಕಾರ್ಯನಿರತ ಪತ್ರಿಕೋದ್ಯಮಿಗಳು ಸುಸಂಘಟಿತರಾಗಿ ಯಾವ ಆಸೆ, ಆಮಿಷ, ಪ್ರಲೋಭನೆಗಳಿಗೂ ಗುರಿಯಾಗದೆ ಸಲ್ಲಬೇಕಾದ ಎಲ್ಲಾ ಬೇಡಿಕೆಗಳನ್ನೂ ಕಾರ್ಯಗತ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗದೆ ತಮಗಿಂತ ಕೆಳಗೆ ಇರುವ ನತದೃಷ್ಟದ ಕಡೆಗೂ ತಮ್ಮ ಗಮನವನ್ನು ಹಾಯಿಸಿ ಮೂಕವಾಗಿ ಶೋಷಿಸಲ್ಪಟ್ಟಿರುವ ಎಲ್ಲಾ ವರ್ಗಗಳಿಗೂ ತಮ್ಮ ಹೃತ್ಪೂರ್ವಕವಾದ ಸಹಕಾರವನ್ನು ಕೊಟ್ಟು ನ್ಯಾಯ ದೊರಕಿಸಿಕೊಡುವ ಪ್ರಯತ್ನವನ್ನು ಮಾಡಬೇಕು.

ಶತಮಾನಗಳಿಂದ ಹಲವು ಅನಿಷ್ಟಗಳಿಂದ ಕೂಡಿದ ಸಮಾಜದ ಶುದ್ಧೀಕರಣಕ್ಕೆ, ಶೋಷಣೆಯಿಲ್ಲದ, ಭಿಕ್ಷುಕರಿಲ್ಲದ, ಎಲ್ಲ ಜನರೂ ಜೀವನ ನಡೆಸಲು ಕನಿಷ್ಠ ಅವಶ್ಯಕತೆಗಳನ್ನು ಪಡೆಯುವ, ಮಾನವೀಯ ಮೌಲ್ಯಗಳಿಂದ ಕೂಡಿದ ವೈಚಾರಿಕತೆಗೆ ಅಗ್ರಸ್ಥಾನವನ್ನು ಕೊಡುವ ಸಮಾಜ ಸೃಷ್ಟಿಸಲು ಬದ್ಧವಾಗಿ ಪತ್ರಿಕೆಗಳು, ಕಾರ್ಯನಿರತ ಪತ್ರಿಕೋದ್ಯಮಿಗಳು ಹೋರಾಟ ನಡೆಸಬೇಕೆಂದು ನನ್ನ ಕಳಕಳಿಯ ಮನವಿ. ಈ ಹೋರಾಟದಲ್ಲಿ ಪಟ್ಟಭದ್ರಹಿತಗಳು, ಬಂಡವಾಳ ಶಾಹಿಗಳು, ಏಕಸ್ವಾಮ್ಯ ಸಂಸ್ಥೆಗಳು, ಶೋಷಕರು, ಅರ್ಥವಿಲ್ಲದ ಸಂಪ್ರದಾಯಿಗಳು, ಪವಾಡ ಪುರುಷರು, ಮೂಢನಂಬಿಕೆಗಳು, ಜಾತ್ಯಂಧರು, ವರ್ಗಗಳಲ್ಲಿ ನಂಬಿಕೆಯಿರುವವರು ವೈಭವ ಜೀವನ ನಡೆಸುವವರು, ಸ್ವಾರ್ಥಿಗಳು ನಾಶವಾದರೆ ಯಾರೂ ಕಣ್ಣೀರಿಡಬೇಕಾದ ಅಗತ್ಯವಿಲ್ಲ.

❑

# I Semester B.A. / B.S.W. / B.H.M. / Degree Examination - 2022

## ಮಾದರಿ ಪ್ರಶ್ನೆಪತ್ರಿಕೆ – ಕನ್ನಡ ಭಾಷೆ

## NEP Freshers Scheme

## Paper - I

ಕಾಲಾವಧಿ : ೨ ೧/೨ ಗಂಟೆಗಳು ಅಂಕಗಳು : ೬೦

**I. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** (5x2=10)

೧. ಖಾದ್ರಿ ಬ್ಯಾರಿಯವರಿಗೆ ಶೆಟ್ಟರ ಮಡದಿಯು ಆಗಮನದಿಂದ ಏಕೆ ನಿರಾಶೆಯಾಯಿತು?

೨. ಪ್ರಸಿದ್ಧ ಉರ್ದು ಲೇಖಕ ಸಾದತ್‌ಹಸನ್‌ರವರ ಮಾತುಗಳು

೩. ರಾಷ್ಟ್ರೀಯತೆ ಎಂದರೇನು?

೪. ಮೇರಿಕ್ಯೂರಿಯ ಬಾಲ್ಯ ಹೇಗಿತ್ತು?

೫. ಧರ್ಮರಾಯನನ್ನು ದುರ್ಯೋಧನ ದ್ಯೂತಕ್ಕೆ ಆಹ್ವಾನಿಸಿದ ರೀತಿ.

೬. ತೋಟದ ಆಳು ಶಿವಯ್ಯ ಗುಬ್ಬಚ್ಚಿ ಗೂಡನ್ನು ಸರಿಪಡಿಸಿದ್ದು ಏಕೆ?

೭. ಸಹಜ ಕೃಷಿಗೆ ಮೊದಲು ಪುಕುವೊಕಾ ಎಲ್ಲಿ ಕೆಲಸ ಮಾಡುತ್ತಿದ್ದ?

೮. ಕಣವಿಯವರು ಯಾವ ಯಾವ ಕವಿಗಳನ್ನು ತಮ್ಮ ಕವಿತೆಯಲ್ಲಿ ಜ್ಞಾಪಿಸಿಕೊಂಡಿದ್ದಾರೆ?

**II. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** (4x5=20)

೧. ಮೇರಿ ಕ್ಯೂರಿ ರೇಡಿಯಂನನ್ನು ಮಾನವ ಸೇವೆಗೆ ಅರ್ಪಿಸಿದ ಬಗೆ

೨. ಶಿವಯ್ಯನನ್ನು ತೋಟಕ್ಕೆ ತಂದ ಪ್ರಸಂಗ

೩. ಬಲಿದಾನ ನಾಟಕದಲ್ಲಿ ಕವಿ ಕುವೆಂಪುರವರ ಆಶಯ
೪. ಇಳೆಯಾಂಡ ಗುಡಿಮಾರನನ್ನು ಹರಿಹರ ವರ್ಣಿಸಿರುವ ರೀತಿ
೫. ಸಹಜ ಕೃಷಿಗೆ ಪುಕುವೊಕ ಮಹತ್ವ ಕೊಡಲು ಕಾರಣ.
೬. ಪೀಲೆಯ ಬಾಲ್ಯವನ್ನು ಕುರಿತು ಬರೆಯಿರಿ.

**III. ಯಾವುದಾದರೂ ೨ ಪ್ರಶ್ನೆಗಳಿಗೆ ಪುಟ ಮೀರದಂತೆ ಉತ್ತರಿಸಿ.**

(10x2=20)

೧. ಮನುಷ್ಯ ಬೆಳೆದ ಹಾಗೆ ಆತನ ಮನಸ್ಸು ಮಾತ್ರ ಸಂಕುಚಿತವಾಗತೊಡಗುತ್ತದೆ. ಈ ಮಾತನ್ನು 'ಮೀಯುವ ಆಟ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.
೨. ವಿಶ್ವಭಾರತಿಗೆ ಕನ್ನಡದಾರತಿ ಕವಿತೆಯ ಆಶಯವನ್ನು ವಿವರಿಸಿ.
೩. ಶಿವನು ಭಕ್ತನನ್ನು ಪರೀಕ್ಷಿಸಿದ ಬಗೆಯನ್ನು ಬರೆಯಿರಿ.
೪. ಒಥೆಲೋ ಮತ್ತು ಅಮೃತಮತಿ ಕಥೆಯನ್ನು ಕವಿತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

**IV. (ಓದು ಪಠ್ಯ) ಯಾವುದಾದರೂ ೨ ಪ್ರಶ್ನೆಗಳಿಗೆ ೨೦ ವಾಕ್ಯಗಳಿಗೆ ಮೀರದಂತೆ ಉತ್ತರಿಸಿ.**

(5x2=10)

೧. ರಾಷ್ಟ್ರೀಯತೆಯ ಪ್ರಮುಖ ಲಕ್ಷಣಗಳಾವುವು?
೨. ಕರಡಿಯ ಕುಣಿತ ಕವಿತೆಯ ಆಶಯವೇನು?
೩. ಸುಗ್ಗಿಯ ಬಗೆಯನ್ನು ಚಿತ್ರಿಸಿ.
೪. ಪತ್ರಿಕೆಗಳ ಬಗ್ಗೆ ಡಾ. ಎಸ್. ನರಸಿಂಹಯ್ಯನವರ ಮಾತುಗಳೇನು?

* * *